ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು

ಭಾನುವಾರ, 22 ಫೆಬ್ರವರಿ 2026

ಸಂಪುಟ 47, ಸಂಚಿಕೆ 325, ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital



ಅಜೇಯ ಭಾರತಕ್ಕೆ ದ.ಆಫ್ರಿಕಾ ಸವಾಲು

ಟಿ 20 ವಿಶ್ವಕಪ್ ಸೂಪರ್ 8 ಹಂತ

ಪಂದ್ಯ ಆರಂಭ: ಸಂಜೆ 7 ಗಂಟೆ

| ೧೧



ಭಾರತ-ಬ್ರೆಜಿಲ್ ವ್ಯಾಪಾರ ಒಪ್ಪಂದ ಮತ್ತೊಂದು ಹಂತಕ್ಕೆ

| ೦೨

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಅಶ್ವಿನಿ

ದಿನದ ಮಾತು

ಕಾಲವೇ ನಮ್ಮನ್ನು ದುಡಿಸುವ ದೈತ್ಯ. ಶಿಷ್ಯನಾದವನು ಎಂದೂ ಉಪಾಧ್ಯಾಯನಾಗಲಾರ.

▲ ಲೋಕೋಕ್ತಿ

ಮಗುವನ್ನು ಮಲಗಿಸುವುದೆಂದರೆ...

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ಆತ್ಮಾಹುತಿ ಬಾಂಬ್ ದಾಳಿಗೆ ಲಷ್ಕರೆ, ಜೈಶ್ ಸಿದ್ಧತೆ: ಶಂಕೆ

• **ಹೊಸದಿಲ್ಲಿ:** ಪಾಕ್ ಬೆಂಬಲಿತ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್ ಮತ್ತು ಜೈಶ್ ಮೊಹಮ್ಮದ್ ಉಗ್ರರು ಕಾಶಿ ವಿಶ್ವನಾಥ ದೇಗುಲ, ಅಕ್ಷರಧಾಮಸಹಿತ ದಿಲ್ಲಿ ಮತ್ತು ಉತ್ತರಪ್ರದೇಶಗಳ ಪ್ರಮುಖ ದೇಗುಲಗಳ ಮೇಲೆ ಐಇಡಿ ದಾಳಿ ಸಹಿತ ಆತ್ಮಾಹುತಿ ದಾಳಿ ನಡೆಸುವ ಸಂಭಾವ್ಯತೆ ಇದೆ. ಮಾರ್ಚ್-ಏಪ್ರಿಲ್‌ನಲ್ಲಿ ನಡೆವ, ಅಪಾರ ಭಕ್ತರು ಸೇರುವ ಹೋಳಿ, ರಾಮನವಮಿಯಂತಹ ಉತ್ಸವಗಳ ಸಂದರ್ಭದಲ್ಲೇ ಬಾಂಬ್ ದಾಳಿ ನಡೆಸುವ ಆತಂಕವಿದೆ ಎಂದು ಗುಪ್ತಚರ ಮೂಲಗಳು ಎಚ್ಚರಿಸಿವೆ.

• ಪುಟ ೨

ಎಐ ಸಭೆ:ಯುವಕಾಂಗ್ರೆಸಿಗರ ಪ್ರತಿಭಟನೆಗೆ ಕಾಂಗ್ರೆಸ್ ಮಿತ್ರಪಕ್ಷಗಳಿಂದಲೂ ಈಗ ಕಿಡಿ

• **ಹೊಸದಿಲ್ಲಿ :** ದಿಲ್ಲಿಯಲ್ಲಿ ನಡೆದ 2ನೇ ಜಾಗತಿಕ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಯುವಕಾಂಗ್ರೆಸಿಗರ ಗುಂಪು ಅರೆಬೆತ್ತಲೆ ಪ್ರತಿಭಟನೆ ನಡೆಸಿರುವುದನ್ನು ಈಗ ಕಾಂಗ್ರೆಸಿನ ಮಿತ್ರಪಕ್ಷಗಳು ಹಾಗೂ ಇತರ ಪ್ರತಿಪಕ್ಷ ನಾಯಕರು ಕೂಡ ಶನಿವಾರ ಖಂಡಿಸಿದ್ದು, ಅಂತಾರಾಷ್ಟ್ರೀಯ ವೇದಿಕೆಯೊಂದರಲ್ಲಿ ದೇಶಕ್ಕೆ ಅವಮಾನವನ್ನುಂಟು ಮಾಡುವ ಹೇಯ ಕೃತ್ಯವಿದು ಎಂದು ಈ ನಾಯಕರು ಖಂಡಿಸಿದ್ದಾರೆ. ಇದರೊಂದಿಗೆ ಮೋದಿ ದ್ವೇಷದಲ್ಲಿ ಕುರುಡಾಗಿರುವ ಕಾಂಗ್ರೆಸ್ ನಾಯಕತ್ವ ನಡೆದುಕೊಳ್ಳುತ್ತಿರುವ ರೀತಿ ಈಗ ಮಿತ್ರರಿಂದಲೂ ತರಾಟೆಗೀಡಾಗಿರುವುದು ಕಾಂಗ್ರೆಸಿಗೆ ನುಂಗಲಾರದ ತುತ್ತಾಗಿದೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಸುದ್ದಿಗಾರರ ಜೊತೆ ಮಾತನಾಡಿ," ನಮ್ಮ ನಡುವೆ ಆಂತರಿಕ ವಿವಾದ ಇರಬಹುದು.ಆದರೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಕಾಂಗ್ರೆಸ್ ಏನು ಮಾಡಿದೆಯೋ ಅದು (ಅರೆಬೆತ್ತಲೆ ಪ್ರತಿಭಟನೆ)ಸರಿಯಾದುದಲ್ಲ ". "ವಿದೇಶಿ ಪ್ರತಿನಿಧಿಗಳು ಮತ್ತು ವಿಶ್ವ ನಾಯಕರ ಎದುರಲ್ಲಿ ನಮ್ಮ ದೇಶ ತಲೆತಗ್ಗಿಸುವಂತೆ ಮಾಡುವ ಕೃತ್ಯಕ್ಕೆ ಕಾಂಗ್ರೆಸಿಗರು ಇಳಿಯಬಾರದಿತ್ತು "ಎಂದರು.

➡ ಪುಟ ೫



ರಾ.ಹೆದ್ದಾರಿಗಳಲ್ಲಿ ಜೇನು ಕಾರಿಡಾರ್

• ಪುಟ ೨

ಸುದ್ದಿ ಸಮಗ್ರ

ಜಾಗತಿಕವಾಗಿ ಶೇ.10, ಮತ್ತೆ ಶೇ.5 ಸುಂಕ ಹೇರಿಕೆ | 24ರಿಂದ ಜಾರಿ

ಸುಂಕ ಶೇ.15ಕ್ಕೇರಿಕೆ!





ಭಾರತದ ಮೇಲೇನು ಪರಿಣಾಮ?

ಅಮೆರಿಕದ ಸುಪ್ರೀಂ ತೀರ್ಪು, ಸದ್ಯ ಭಾರತೀಯ ರಫ್ತುದಾರರಿಗೆ ಶೇ.3 ಸುಂಕ ರಿಯಾಯಿತಿ ಸಿಕ್ಕಂತಾಗಿದೆ. ಹಿಂದಿನ ಶೇ.18 ಸುಂಕವು ಶೇ.15ಕ್ಕೆ ಇಳಿಕೆಯಾಗಿದೆ. ಸುಪ್ರೀಂ ಕೋರ್ಟ್ ತೀರ್ಪು ಮತ್ತು ಈ ಅನಿರೀಕ್ಷಿತ ಬೆಳವಣಿಗೆಯು ಭಾರತೀಯ ರಫ್ತುದಾರರಲ್ಲಿ ತಾತ್ಕಾಲಿಕವಾಗಿ ನಿರಾಳ ಭಾವ ಮೂಡಿಸಿದೆ. ಆದರೂ ಜಾಗತಿಕ ಮಟ್ಟದಲ್ಲಿ ಟ್ರಂಪ್ ಸುಂಕ ವ್ಯವಸ್ಥೆ ಆರ್ಥಿಕ ಅಸ್ಥಿರತೆ ಸೃಷ್ಟಿಸುವ ಆತಂಕವಿದೆ.

• **ವಾಷಿಂಗ್ಟನ್:** ಸುಪ್ರೀಂಕೋರ್ಟ್‌ನ ತೀರ್ಪಿನಿಂದ ಅವಮಾನಿತರಾದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮತ್ತೆ ಜಾಗತಿಕವಾಗಿ ಸುಂಕ ಸಮರವನ್ನೇ ಶುರು ಮಾಡಿದ್ದಾರೆ. ಶುಕ್ರವಾರ ರಾತ್ರಿ ಸುಪ್ರೀಂ ತೀರ್ಪಿನ ಬಳಿಕ ಶೇ.10 ಸುಂಕ ಘೋಷಣೆ ಮಾಡಿದ್ದ ಅವರು, ಶನಿವಾರ ರಾತ್ರಿ ಇದನ್ನು ಶೇ.15ಕ್ಕೆ ಏರಿಸಿ ಆಘಾತ ನೀಡಿದ್ದಾರೆ.

ಟ್ರಂಪ್ ಅವರ ಈ ಹೊಸ ಸುಂಕ ಫೆ.24ರಿಂದ ಜಾರಿಗೆ ಬರಲಿದ್ದು, ಭಾರತೀಯ ರಫ್ತಿನ ಮೇಲೆ ಹೇಗೆ ಪರಿಣಾಮ ಬೀರಲಿದೆ ಎಂಬ ಕುರಿತು ಅಧ್ಯಯನ ನಡೆಸುವುದಾಗಿ ಕೇಂದ್ರ ಸರ್ಕಾರ ಮೊದಲ ಪ್ರತಿಕ್ರಿಯೆ ನೀಡಿದೆ.

ಹಲವು ರಾಷ್ಟ್ರಗಳ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇರಿದ್ದ ಪ್ರತಿಸುಂಕ ಏಕಪಕ್ಷೀಯ ಮತ್ತು ಅಧ್ಯಕ್ಷ ಟ್ರಂಪ್ ಫೆಡರಲ್ ತೆರಿಗೆ ಕಾನೂನುಗಳನ್ನು ಉಲ್ಲಂಘಿಸಿರುವುದಾಗಿ ಸುಪ್ರೀಂ ಕೋರ್ಟ್ ನ್ಯಾಯಪೀಠ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿತ್ತು. ಇದರಿಂದ ಜಾಗತಿಕ ಸುಂಕ ಸಮರ ಆರಂಭಿಸಿದ್ದ ಟ್ರಂಪ್‌ಗೆ ತನ್ನ ದೇಶದ ನ್ಯಾಯಾಲಯದಲ್ಲೇ ಮುಖಭಂಗವಾಗಿದೆ.

ಮತ್ತೆ ಸುಂಕ ಏರಿಸಿದ ಟ್ರಂಪ್: ಸುಪ್ರೀಂ ಕೋರ್ಟ್‌ನ ಐತಿಹಾಸಿಕ ತೀರ್ಪು ಹಿನ್ನೆಲೆ ಶುಕ್ರವಾರ ತಡರಾತ್ರಿ ಅಧ್ಯಕ್ಷ ಟ್ರಂಪ್ ಹೊಸ ಜಾಗತಿಕ ತೆರಿಗೆ ದರಗಳನ್ನು ಘೋಷಿಸಿದ್ದಾರೆ. ತೆರಿಗೆ ಕಾಯ್ದೆ 1974ರ ಸೆಕ್ಷನ್ 122ರನ್ವಯ ಜಾಗತಿಕವಾಗಿ ಶೇ.10ರಷ್ಟು ಸುಂಕ ಹೇರುವುದಾಗಿ ಘೋಷಿಸಿದ್ದಾರೆ.

ನಾಚಿಕೆಗೇಡು ಎಂದ ಟ್ರಂಪ್: ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅಧ್ಯಕ್ಷ ಟ್ರಂಪ್, ಇದೊಂದು ಅವಮಾನಕರ ಮತ್ತು ಮುಜುಗರಕ್ಕೀಡುಮಾಡುವಂತಹ ತೀರ್ಪು ಎಂದು ಹೇಳಿಕೊಂಡಿದ್ದಾರೆ.

➡ ಪುಟ ೪

ಸುಂಕ ಅಸ್ಥಿರತೆ (2025-26)

- ಏ.2, 2025: ಭಾರತೀಯ ರಫ್ತುಗಳ ಮೇಲೆ ಶೇ.26 ಸುಂಕ ಹೇರಿದ ಅಮೆರಿಕ (ಶೇ.10 ಸುಂಕ + ಶೇ.16 ಪ್ರತಿಸುಂಕ)
- ಏ.9, 2025: ಶೇ.16 ಪ್ರತಿಸುಂಕದಲ್ಲಿ 90 ದಿನಗಳ ವಿನಾಯಿತಿ, ಮುಂದುವರಿದ ಶೇ.10 ಸುಂಕ
- ಜು.31, 2025: ಭಾರತೀಯ ಸರಕುಗಳ ಮೇಲೆ ಶೇ.25 ಹೊಸ ಸುಂಕ ಹೇರಿದ ಅಮೆರಿಕ, ಆ.7ರಿಂದ ಜಾರಿ
- ಆ.6, 2025: ರಷ್ಯಾದಿಂದ ತೈಲ ಖರೀದಿ ಹಿನ್ನೆಲೆ ಭಾರತದ ಮೇಲೆ ಶೇ.25 ದಂಡ, ಒಟ್ಟು ಸುಂಕ ಶೇ.50ಕ್ಕೆ ಏರಿಕೆ
- ಫೆ.2, 2026: ಶೇ.25 ದಂಡ ರದ್ದು, ಸುಂಕ ಶೇ.18ಕ್ಕೆ ಇಳಿಕೆ
- ಫೆ.20, 2026: ಶೇ.3 ಇಳಿಕೆ. ಈಗ ಇರುವ ಸುಂಕ ಶೇ.15 ಮಾತ್ರ

ಎಲ್ಲವೂ ಗಮನದಲ್ಲಿದೆ: ಭಾರತ ಪ್ರತಿಕ್ರಿಯೆ

ತುರ್ತು ಅಧಿಕಾರ ಬಳಸಿ ಜಾಗತಿಕವಾಗಿ ಒಟ್ಟಾರೆ ತೆರಿಗೆ ಹೇರುವ ಯಾವುದೇ ಕಾನೂನುಬದ್ಧ ಅಧಿಕಾರ ಟ್ರಂಪ್ ಆಡಳಿತಕ್ಕಿಲ್ಲ. ವಿವಿಧ ಕಾರಣ ಮುಂದಿಟ್ಟು ಟ್ರಂಪ್ ಹೇರಿದ ತೆರಿಗೆ ಅಸಾಂವಿಧಾನಿಕವೆಂಬ ಅಮೆರಿಕದ ಸುಪ್ರೀಂಕೋರ್ಟ್ ತೀರ್ಪು ಮತ್ತು ಇದಕ್ಕೆ ಟ್ರಂಪ್ ಪ್ರತಿಕ್ರಿಯೆ ಸಹಿತ ಎಲ್ಲಾ ಬೆಳವಣಿಗೆಗಳನ್ನು ತಾನು ಗಮನಿಸುತ್ತಿರುವುದಾಗಿ ಭಾರತ ಸರಕಾರ ಪ್ರತಿಕ್ರಿಯಿಸಿದೆ. ಅಮೆರಿಕ ದಲ್ಲಿನ ಪ್ರಸ್ತುತ ವಿದ್ಯಮಾನಗಳು ಸೃಜಿಸಲಿರುವ ತೊಡಕುಗಳ ಪರಾಮರ್ಶೆಯಲ್ಲಿ ತಾನು ತೊಡಗಿರುವುದಾಗಿ ಕೇಂದ್ರ ಸರಕಾರ ಹೇಳಿದೆ.

➡ ಪುಟ ೪

ಜಾಗತಿಕ ಸುಂಕ ಶೇ.15ಕ್ಕೆ ನಿಗದಿ

ಶುಕ್ರವಾರ ತಡರಾತ್ರಿ ಶೇ.10 ಜಾಗತಿಕ ಸುಂಕವನ್ನು ಘೋಷಿಸಿದ್ದ ಅಮೆರಿಕ ಅಧ್ಯಕ್ಷ ಟ್ರಂಪ್, ಶನಿವಾರ ಅದನ್ನು ಶೇ.15ಕ್ಕೆ ಹೆಚ್ಚಿಸಿದ್ದಾರೆ. ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪು ಅಮೆರಿಕ ವಿರೋಧಿ ಎಂದು ಟ್ರಂಪ್ ಕಿಡಿಕಾರಿದ್ದಾರೆ.

1000 ಮಂದಿಗೆ ಸಿಎಂರಿಂದ ನೇಮಕ ಪತ್ರ

ವೈದ್ಯ ಲೋಕದಲ್ಲಿರಲಿ ಮಾನವೀಯ ಮುಖ



• **ಬೆಂಗಳೂರು:** ವೈದ್ಯಕೀಯೇತರ ಸಿಬ್ಬಂದಿ ವೈದ್ಯರಷ್ಟೇ ಪ್ರಮುಖರು. ಆರೋಗ್ಯ ಕ್ಷೇತ್ರದ ಕೆಲಸ ಕಾರ್ಯಗಳಲ್ಲಿ ಜಾತಿ ಧರ್ಮಗಳ ಭೇದ ಮೀರಿ ಮಾನವೀಯತೆಯಿಂದ ಸೇವೆ ಸಲ್ಲಿಸುವುದು ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ವಸಂತನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದ ಅಭಯಹಸ್ತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಹಾರ ಸುರಕ್ಷತೆ, ಔಷಧ ಆಡಳಿತದ ವೃಂದಗಳ ನೇಮಕಾತಿ ಆದೇಶಗಳ ವಿತರಣೆ ಕಾರ್ಯಕ್ರಮದಲ್ಲಿ 1000 ಜನರಿಗೆ ನೇಮಕಾತಿ ಆದೇಶಗಳನ್ನು ವಿತರಿಸಿ ಮಾತನಾಡಿದ ಅವರು, ಇದು ಕೇವಲ ವೃತ್ತಿಯಲ್ಲ. ಜೀವ ಉಳಿಸುವ, ರೋಗ ತಡೆಯುವ ಸಾರ್ಥಕ ಕಾರ್ಯವನ್ನೊಳಗೊಂಡಿದೆ ಎಂದರು.

➡ ಪುಟ ೪

> **ನಮ್ಮ ಸರ್ಕಾರ 2ನೇ ಬಾರಿ ಅಧಿಕಾರಕ್ಕೆ ಬಂದ ನಂತರ ಖಾಲಿ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲಾಗುತ್ತಿದೆ. 2.5 ಲಕ್ಷಕ್ಕೂ ಹೆಚ್ಚು ಹುದ್ದೆಗಳು ವಿವಿಧ ಇಲಾಖೆಗಳಲ್ಲಿ ಖಾಲಿಯಿದ್ದು, ಹಂತ ಹಂತವಾಗಿ ಭರ್ತಿ ಮಾಡಲಾಗುವುದು.**
>
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತ್ಯೇಕ ನೇಮಕಾತಿ ಮಂಡಳಿ ಚಿಂತನೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೇಮಕಾತಿಗಳಿಗೆ ಒಂದು ಪ್ರತ್ಯೇಕ ನೇಮಕಾತಿ ಮಂಡಳಿ ರಚನೆ ಮಾಡಲು ಯೋಜಿಸಿದ್ದು, ಮುಖ್ಯಮಂತ್ರಿಗಳಿಗೆ ಈ ಕುರಿತು ಮನವಿ ಸಲ್ಲಿಸಲಾಗಿದೆ. ನಿವೃತ್ತರಾದ ತಕ್ಷಣ ನೇಮಕಾತಿ ಪ್ರಕ್ರಿಯೆ ನಡೆದರೆ ಮಾನವ ಸಂಪನ್ಮೂಲದ ಕೊರತೆ ಉಂಟಾಗುವುದಿಲ್ಲ. ಇದರಿಂದ ಆರೋಗ್ಯ ಸೇವೆಗೆ ಮಾನವ ಸಂಪನ್ಮೂಲದ ಕೊರತೆ ತಡೆಯಲು ಸಹಾಯಕವಾಗಲಿದೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ನೇಪಾಳ ದಂಗೆ ಮಾದರಿ ದೊಡ್ಡ ಷಡ್ಯಂತ್ರ: ದಿಲ್ಲಿ ಪೊಲೀಸ್

ಪ್ರತಿಭಟನೆ; ಕೈಗೆ ಜೆನ್ ಝಿ ಸ್ಫೂರ್ತಿ!

• **ಹೊಸದಿಲ್ಲಿ:** ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಯುವ ಕಾಂಗ್ರೆಸ್ (ಐವೈಸಿ) ಕಾರ್ಯಕರ್ತರ ಗುಂಪೊಂದು ನಡೆಸಿದ ಅರೆಬೆತ್ತಲೆ ಪ್ರತಿಭಟನೆ, ನೇಪಾಳ ಸರ್ಕಾರವನ್ನು ಕಿತ್ತೊಗೆದ ಜೆನ್ ಝಿ ದಂಗೆಯಿಂದ ಸ್ಫೂರ್ತಿಯಾಗಿತ್ತೆಂಬ ಆತಂಕಕಾರಿ ವಿಷಯ ಬೆಳಕಿಗೆ ಬಂದಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಇಮೇಜ್ ಹಾಳು ಮಾಡುವುದಕ್ಕಾಗಿ ಜೆನ್ ಝಿ ಮಾದರಿ ಪ್ರತಿಭಟನೆ ನಡೆಸಲು ಯುವ ಕಾಂಗ್ರೆಸ್ ಕಾರ್ಯಕರ್ತರ ಷಡ್ಯಂತ್ರ ಬಯಲಾಗಿದೆ. ನೇಪಾಳದ ಜೆನ್ ಝಿ ದಂಗೆಯಿಂದ ಸ್ಫೂರ್ತಿ ಪಡೆದು ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸಿದ್ದರೆಂದು ಪಟಿಯಾಲಾ ಹೌಸ್ ಕೋರ್ಟ್‌ಗೆ ದಿಲ್ಲಿ ಪೊಲೀಸರು ತಿಳಿಸಿದ್ದಾರೆ.

ಊಹೆಗೂ ಮೀರಿದ ಷಡ್ಯಂತ್ರ: ಜಾಗತಿಕ ನಾಯಕರು ಮತ್ತು ತಂತ್ರಜ್ಞಾನ (ಟೆಕ್) ದೈತ್ಯರು ಭಾಗಿಯಾಗಿದ್ದ ಅಂತಾರಾಷ್ಟ್ರೀಯ ಮಟ್ಟದ ಎಐ ಇಂಪ್ಯಾಕ್ಟ್ ಶೃಂಗದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆಯು ಊಹೆಗೂ ಮೀರಿದ ದೊಡ್ಡ ಷಡ್ಯಂತ್ರದ ಭಾಗವಾಗಿತ್ತೆಂದು ತಿಳಿದುಬಂದಿದೆ.

➡ ಪುಟ ೪



5 ದಿನಗಳ ಕಸ್ಟಡಿ ಸೇರಿದ ನಾಲ್ವರು

ದಿಲ್ಲಿಯ ಪಟಿಯಾಲಾ ಹೌಸ್ ನ್ಯಾಯಾಲಯವು ನಾಲ್ವರು ಪ್ರತಿಭಟನಾಕಾರರಿಗೆ ಜಾಮೀನು ನಿರಾಕರಿಸಿದ್ದು, ಆರೋಪಿಗಳನ್ನು 5 ದಿನಗಳ ಕಾಲ ದಿಲ್ಲಿ ಪೊಲೀಸರ ಕಸ್ಟಡಿಗೆ ಒಪ್ಪಿಸಿದೆ.

➡ ಪುಟ ೪

ಶುಲ್ಕ, ಪೂರ್ವಾನುಮತಿ ಕಡ್ಡಾಯ: ಮುಜರಾಯಿ ಇಲಾಖೆ

ದೇಗುಲಗಳಲ್ಲಿ ವಿಡಿಯೋ ನಿರ್ಬಂಧ

• **ಬೆಂಗಳೂರು:** ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ಸಿನಿಮಾ, ಧಾರಾವಾಹಿ, ಸಾಕ್ಷ್ಯಚಿತ್ರ, ಸುದ್ದಿ ವಾಹಿನಿಗಳು ಹೀಗೆ ಯಾವುದೇ ತರಹದ ವಿಡಿಯೋ ರೆಕಾರ್ಡಿಂಗ್ ಮಾಡಲು ನಿರ್ಬಂಧವಿದ್ದು, ವಿಡಿಯೋ ಮಾಡಲೇಬೇಕೆಂದರೆ ಮುಜರಾಯಿ ಇಲಾಖೆ ನಿಗದಿಪಡಿಸಿದ ಶುಲ್ಕ ಹಾಗೂ ಪೂರ್ವಾನುಮತಿ ಪಡೆಯುವ ನಿಯಮವು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ.

ಈ ಬಗ್ಗೆ ಮಾತನಾಡಿದ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಮುಜರಾಯಿ ಅಧೀನದ ದೇವಾಲಯಗಳಲ್ಲಿ ಯಾವುದೇ ವಾಣಿಜ್ಯ ಉದ್ದೇಶಿತ ಚಿತ್ರೀಕರಣಕ್ಕೆ ಈಗಾಗಲೇ ನಿರ್ಬಂಧವಿದ್ದು, ನಿಗದಿತ ಶುಲ್ಕ ಹಾಗೂ ಪೂರ್ವಾನುಮತಿ ಪಡೆಯುವುದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ ಎಂದರು.

ದೇವಾಲಯಗಳಲ್ಲಿ ಚಿತ್ರೀಕರಣಕ್ಕೆ ಶುಲ್ಕ ಪಡೆಯುವುದು 2012ರಿಂದಲೂ ಜಾರಿಯಲ್ಲಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಮನಬಂದಂತೆ ರೀಲ್ಸ್, ಸಿನಿಮಾ, ಧಾರಾವಾಹಿಗಳ ಚಿತ್ರೀಕರಣ ಹೆಚ್ಚುತ್ತಿದೆ.

➡ ಪುಟ ೪



ಶುಲ್ಕ ಎಷ್ಟು ನಿಗದಿ

ಬೆಂಗಳೂರು ನಗರದ ದೇವಸ್ಥಾನಗಳಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ 15 ಸಾವಿರ ರೂ. ಹಾಗೂ ಇತರೆ ಪ್ರದೇಶಗಳ ದೇವಸ್ಥಾನಗಳಲ್ಲಿ 10 ಸಾವಿರ ರೂ.ಮತ್ತು ಧಾರಾವಾಹಿ/ ಸಾಕ್ಷ್ಯಚಿತ್ರ/ ವಾಣಿಜ್ಯ ಉದ್ದೇಶಗಳ ಚಿತ್ರೀಕರಣಕ್ಕೆ ದಿನಕ್ಕೆ 5 ಸಾವಿರ ರೂ.

➡ ಪುಟ ೪

ಶಾಸಕ ಚಂದ್ರು ಲೋಕಾ ಬಲೆಗೆ

• **ಗದಗ:** ಗುತ್ತಿಗೆದಾರನಿಂದ 5 ಲಕ್ಷ ರೂ.ಲಂಚ ಪಡೆಯುತ್ತಿದ್ದ ವೇಳೆ ಶಿರಹಟ್ಟಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕರು ಶನಿವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗೆ ಸಂಬಂಧಿಸಿದಂತೆ ಡಾ.ಚಂದ್ರು ಲಮಾಣಿ ಗುತ್ತಿಗೆದಾರನ ಬಳಿ 11 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಎಂದು ತಾಲೂಕಿನ ಚಿಂಚಲಿ ಗ್ರಾಮದ ಕ್ಲಾಸ್-1ಗುತ್ತಿಗೆದಾರ ವಿಜಯ್ ಪೂಜಾರ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.



ಶನಿವಾರ ಮಧ್ಯಾಹ್ನ 2.15ರ ಸುಮಾರಿಗೆ ಲಕ್ಷ್ಮೇಶ್ವರ ಪಟ್ಟಣದ ಬಾಲಾಜಿ ಆಸ್ಪತ್ರೆಯಲ್ಲಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಮತ್ತು ಅವರ ಇಬ್ಬರು ಆಪ್ತ ಸಹಾಯಕ ಮಂಜುನಾಥ ವಾಲ್ಮೀಕಿ ಮತ್ತು ಗುರು ನಾಯಕ್ ರೂ.5 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

➡ ಪುಟ ೪



ಆಳ್ವಾಸ್ ಶಾಲೆಗೆ ವಿದ್ಯಾರ್ಥಿಸಾಗರ!

ಕನ್ನಡ ಮಾಧ್ಯಮ ಶಾಲೆಗೆ 22 ಸಾವಿರಕ್ಕೂ ಹೆಚ್ಚು ಅರ್ಜಿ, ಇಂದು ಪ್ರವೇಶ ಪರೀಕ್ಷೆ



▶ ಹರೀಶ್ ಕೆ.ಆದೂರು

• **ಮೂಡುಬಿದಿರೆ:** ಒಂದೆಡೆ ಸರಕಾರದ ಅಧೀನದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳು ಒಂದರ ಹಿಂದೆ ಒಂದರಂತೆ ಮುಚ್ಚುತ್ತಿದ್ದರೆ, ಮೂಡುಬಿದಿರೆಯಲ್ಲಿರುವ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಪ್ರಾಯೋಜಕತ್ವದ ಕನ್ನಡ ಮಾಧ್ಯಮ ಶಾಲೆಗೆ ರಾಜ್ಯದ ವಿವಿಧೆಡೆಯ ವಿದ್ಯಾರ್ಥಿಗಳು ನಾ ಮುಂದು ತಾಮುಂದು ಎಂದು ಬರುತ್ತಿದ್ದಾರೆ. ಭಾನುವಾರ (ಫೆ.22) ನಡೆಯುವ ಪ್ರವೇಶ ಪರೀಕ್ಷೆಗೆ ಆಕಾಂಕ್ಷಿಗಳಾಗಿ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಒಟ್ಟಾರೆ 22,874 ಅರ್ಜಿಗಳು ಸಲ್ಲಿಕೆಯಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಎರಡೂವರೆ ಸಾವಿರದಷ್ಟು ಹೆಚ್ಚುವರಿ ಅರ್ಜಿಗಳು ಬಂದಿವೆ.

➡ ಪುಟ ೪



ಲ್ಯಾಟಿನ್ ಅಮೆರಿಕದಲ್ಲಿ ದೊಡ್ಡ ಪಾಲುದಾರ

ಭಾರತ-ಬ್ರೆಜಿಲ್ ವ್ಯಾಪಾರ ಒಪ್ಪಂದ



ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೋ ಲುಲಾ ಡಾ ಸಿಲ್ವಾ ಶನಿವಾರ ಹೈದರಾಬಾದ್ ಹೌಸ್‌ನಲ್ಲಿ ನಿಯೋಗ ಮಟ್ಟದ ಮಾತುಕತೆ ನಡೆಸಿದ್ದಾರೆ. ಮಹತ್ವಾಕಾಂಕ್ಷೆಯ ವ್ಯಾಪಾರ ಗುರಿಗಳು, ಅತ್ಯಾಧುನಿಕ ತಂತ್ರಜ್ಞಾನ ಸಹಕಾರ ಮತ್ತು ಜಾಗತಿಕ ದಕ್ಷಿಣ ಕುರಿತ ಸಮಾನ ದೃಷ್ಟಿಕೋನಗಳು ಮಾತುಕತೆಯಲ್ಲಿ ನಿರ್ಣಾಯಕ ವಿಷಯಗಳಾಗಿದ್ದವು ಎಂದು ತಿಳಿದುಬಂದಿದೆ.

ವಾರ್ಷಿಕವಾಗಿ ದ್ವಿಪಕ್ಷೀಯ ವ್ಯಾಪಾರವನ್ನು 30 ಶತಕೋಟಿ ಡಾಲರ್ ಗಡಿ ದಾಟಿಸುವ ಬದ್ಧತೆಯನ್ನು ಪ್ರಧಾನಿ ಮೋದಿ ಸಭೆಯ ನಂತರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು. ಇದಕ್ಕೆ 2030ರ ಗಡಿ ಹಾಕಿಕೊಳ್ಳಲಾಗಿದೆ. ಬ್ರೆಜಿಲ್ ಅನ್ನು ಲ್ಯಾಟಿನ್ ಅಮೆರಿಕದಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ಪಾಲುದಾರ ಎಂದು ಪ್ರಧಾನಿ ಬಣ್ಣಿಸಿದ್ದಾರೆ.

ಎರಡು ರಾಷ್ಟ್ರಗಳ ನಡುವಿನ ವ್ಯಾಪಾರವನ್ನು ಕೇವಲ ಅಂಕಿಅಂಶಗಳಲ್ಲ-ಇದು ನಂಬಿಕೆಯ ಪ್ರತಿಬಿಂಬ ಎಂದು ವ್ಯಾಖ್ಯಾನಿಸಲಾಗಿದೆ. ಭಾರತ-ಮೆರ್ಕೋಸೂರ್ ವ್ಯಾಪಾರ ಒಪ್ಪಂದದ ವಿಸ್ತರಣೆ, ಎರಡೂ ದೇಶಗಳ ನಡುವಿನ ಆರ್ಥಿಕ ಸಹಕಾರವನ್ನು ಗಾಢವಾಗಿಸುವ ಪ್ರಮುಖ ಕಾರ್ಯವಿಧಾನವಾಗಲಿದೆ ಎಂಬುದರ ಬಗ್ಗೆ ಒಮ್ಮತ ವ್ಯಕ್ತವಾಗಿದೆ.

ತಂತ್ರಜ್ಞಾನ ಮತ್ತು ಆವಿಷ್ಕಾರ: ತಂತ್ರಜ್ಞಾನದ ವಿಷಯದಲ್ಲಿ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಕ್ಕಾಗಿ ಶ್ರೇಷ್ಠತೆಯ ಕೇಂದ್ರ ಸ್ಥಾಪಿಸುವ ಪ್ರಯತ್ನಗಳಿಗೆ ಪ್ರಧಾನಿ ಮೋದಿ ಒತ್ತು ನೀಡಿದ್ದಾರೆ. ಕೃತಕ ಬುದ್ಧಿಮತ್ತೆ, ಸೂಪರ್ ಕಂಪ್ಯೂಟರ್‌ಗಳು, ಸೆಮಿಕಂಡಕ್ಟರ್‌ಗಳು ಮತ್ತು ಬ್ಲಾಕ್‌ಚೈನ್‌ನಲ್ಲಿ ಸಹಕಾರವನ್ನು ಆದ್ಯತೆಯೆಂದು ಗುರುತಿಸಲಾಗಿದ್ದು, ತಂತ್ರಜ್ಞಾನ ಎಲ್ಲರಿಗೂ ತಲುಪಬೇಕು ಮತ್ತು ಜಾಗತಿಕ ದಕ್ಷಿಣದಾದ್ಯಂತ ಸಮಗ್ರ ಪ್ರಗತಿಗೆ ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದು ಎರಡೂ ರಾಷ್ಟ್ರಗಳು ಒಪ್ಪಿಕೊಂಡಿವೆ.

ಜಾಗತಿಕ ದಕ್ಷಿಣ ಮತ್ತು ರಾಜತಾಂತ್ರಿಕತೆ: ಭಾರತ ಮತ್ತು ಬ್ರೆಜಿಲ್‌ನ ಸಮಾನ ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಜಾಗತಿಕ ಜವಾಬ್ದಾರಿಗಳಿಗೆ ಒತ್ತು ನೀಡಲಾಯಿತು. ಭಾರತ ಮತ್ತು ಬ್ರೆಜಿಲ್ ಒಟ್ಟಾಗಿ ಕೆಲಸ ಮಾಡುವಾಗ, ಜಾಗತಿಕ ದಕ್ಷಿಣದ ಧ್ವನಿ ಬಲವಾಗುತ್ತದೆ ಮತ್ತು ಹೆಚ್ಚು ಆತ್ಮವಿಶ್ವಾಸದಿಂದ ಕೂಡಿರುತ್ತದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ವೈದ್ಯಕೀಯ ಒಪ್ಪಂದ

ಭಾರತ ಮತ್ತು ಬ್ರೆಜಿಲ್ ಶನಿವಾರ ಔಷಧೀಯ ಮತ್ತು ವೈದ್ಯಕೀಯ ಉತ್ಪನ್ನಗಳ ನಿಯಂತ್ರಣ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸಲು ತಿಳುವಳಿಕೆ ಒಪ್ಪಂದವನ್ನು (ಎಂಓಯು) ವಿನಿಮಯ ಮಾಡಿಕೊಂಡವು. ಭಾರತದ ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್ (ಸಿಡಿಎಸ್‌ಸಿಓ) ಮತ್ತು ಬ್ರೆಜಿಲಿಯನ್ ಹೆಲ್ತ್ ರೆಗ್ಯುಲೇಟರಿ ಏಜೆನ್ಸಿ (ಎ ಎನ್ ವಿಐ ಎಸ್‌ಎ) ನಡುವೆ ಈ ತಿಳುವಳಿಕೆ ಒಪ್ಪಂದವನ್ನು ವಿನಿಮಯ ಮಾಡಿಕೊಳ್ಳಲಾಗಿದ್ದು, ಇದು ಎರಡೂ ದೇಶಗಳ ನಡುವಿನ ಆಳವಾದ ನಿಯಂತ್ರಕ ಸಹಯೋಗದ ಪ್ರಮುಖ ಹೆಜ್ಜೆಯಾಗಿದೆ.

ಸೆಮಿಕಂಡಕ್ಟರ್‌ನಿಂದ ಉದ್ಯೋಗ ಸೃಷ್ಟಿ

ಹೊಸದಿಲ್ಲಿ: ಸೆಮಿಕಂಡಕ್ಟರ್ ಸೌಲಭ್ಯದ ಸ್ಥಾಪನೆಯು ಪೂರಕ ಕೈಗಾರಿಕೆಗಳನ್ನು ಆಕರ್ಷಿಸುತ್ತದೆ. ಇದು ಅಂತಿಮವಾಗಿ ಹೆಚ್ಚಿನ ಉದ್ಯೋಗ ಗಳನ್ನು ಸೃಷ್ಟಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.


ಉತ್ತರ ಪ್ರದೇಶದಲ್ಲಿ ಎಚ್‌ಸಿಎಲ್-ಫಾಕ್ಸ್‌ಕಾನ್ ಸೆಮಿಕಂಡಕ್ಟರ್ ಸೌಲಭ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಇದು ಸೆಮಿಕಂಡಕ್ಟರ್ ಚಿಪ್‌ಗಳಲ್ಲಿ ರಾಷ್ಟ್ರದ ಸ್ವಾವಲಂಬನೆಗಾಗಿ ಪ್ರಮುಖ ಮೈಲಿಗಲ್ಲು ಎಂದು ಹೇಳಿದ್ದಾರೆ. ಉತ್ತರ ಪ್ರದೇಶವು ದೇಶದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯ ಭಾಗವಾಗುತ್ತಿರುವುದಕ್ಕೆ ನಾವು ಹೆಮ್ಮೆಪಡುತ್ತೇವೆ. ಈ ಸೆಮಿಕಂಡಕ್ಟರ್ ಘಟಕವು ರಾಜ್ಯಕ್ಕೆ ಹೊಸ ಮನ್ನಣೆಯನ್ನು ನೀಡುತ್ತದೆ. ಇದಲ್ಲದೆ, ಇದು ಉದ್ಯೋಗವನ್ನು ಹೆಚ್ಚಿಸುತ್ತದೆ. ಈ ಸುಧಾರಿತ ಸೌಲಭ್ಯವು 2028ರ ವೇಳೆಗೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ರಾ.ಹೆದ್ದಾರಿಗಳಲ್ಲಿ ಜೇನು ಕಾರಿಡಾರ್

ಆಯ್ದ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ದೇಶದ ಮೊದಲ ಮೀಸಲಾದ ಬೀ ಕಾರಿಡಾರ್‌ಗಳನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ) ಘೋಷಿಸಿದೆ. ಇದರೊಂದಿಗೆ ಭಾರತದ ಹೆದ್ದಾರಿ ಜಾಲ ಜೀವವೈವಿಧ್ಯತೆಯ ಜೀವನಾಡಿಯೆನಿಸಲಿದೆ. ಸೌಂದರ್ಯ ದ್ವಿಗುಣಗೊಳ್ಳಲಿದೆ. ಈ ಯೋಜನೆ ಪರಾಗಸ್ಪರ್ಶಕಗಳನ್ನು ರಕ್ಷಿಸುವ ಮತ್ತು ಪರಿಸರ ಸಮತೋಲನವನ್ನು ಬಲಪಡಿಸುವ ಗುರಿ ಹೊಂದಿದೆ. ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಹಸಿರು ಅಭ್ಯಾಸಗಳನ್ನು ಸಂಯೋಜಿಸುವ ಈ ಪ್ರಯತ್ನ ಗಮನ ಸೆಳೆದಿದೆ.

- ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಭಾರತದ ಮೊದಲ ಬೀ ಕಾರಿಡಾರ್ ಅಭಿವೃದ್ಧಿ
- ಋತುಗಳಾದ್ಯಂತ ಅರಳುವ ಸ್ಥಳೀಯ ಹೂಬಿಡುವ ಪ್ರಭೇದಗಳ ಮೇಲೆ ಗಮನ
- 2026-27 ರಲ್ಲಿ ಸುಮಾರು 40 ಲಕ್ಷ ಮರಗಳನ್ನು ನೆಡಲಾಗುವುದು.
- ಸುಮಾರು ಶೇ.60 ತೋಪುಗಳನ್ನು ಪರಾಗಸ್ಪರ್ಶಕ ಕಾರಿಡಾರ್‌ಗಳಿಗೆ ಮೀಸಲಿಡಲಾಗಿದೆ.
- ಆರಂಭಿಕ ಹಂತದಲ್ಲಿ ಕನಿಷ್ಠ ಮೂರು ಕಾರಿಡಾರ್‌ಗಳನ್ನು ಗುರುತಿಸಲಾಗಿದೆ

ಎನ್‌ಎಚ್‌ಎಐ ಘೋಷಣೆ
ಹೆದ್ದಾರಿಗಳಲ್ಲಿ ಮಕರಂದ, ಪರಾಗಸ್ಪರ್ಶ ಖಾತರಿ



ಅಲಂಕಾರದಿಂದ ಪರಿಸರ ವಿಜ್ಞಾನದವರೆಗೆ

ಅನೇಕ ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ರಸ್ತೆಬದಿಯ ತೋಟಗಳು ಅಲಂಕಾರಿಕ ಉದ್ದೇಶ ಮಾತ್ರ ಹೊಂದಿದ್ದವು. ಹೆದ್ದಾರಿಗಳ ನೋಟವನ್ನು ಸುಂದರಗೊಳಿಸಲು ಮರಗಳ ಸಾಲನ್ನು ಬೆಳೆಸುವ ಯೋಜನೆ ಬದಲಾವಣೆ ಕಂಡಿದೆ. ಎನ್‌ಎಚ್‌ಎಐ ಈಗ ಹೂಬಿಡುವ ಮರಗಳು, ಪೊದೆಗಳು, ಗಿಡಮೂಲಿಕೆಗಳು ಮತ್ತು ಹುಲ್ಲು ಗಳನ್ನು ಒಳಗೊಂಡ ಜೇನುನೊಣ ಸ್ನೇಹಿ ಸಸ್ಯವರ್ಗವನ್ನು ಬೆಳೆಸುವ ಪ್ರಯತ್ನಕ್ಕೆ ಮುಂದಾಗಿದೆ. ಸ್ವರಾಜ್ಯಮಾರ್ಗ ಹೆದ್ದಾರಿಯ ಹಸಿರು ಬದಿಗಳನ್ನು ಅಲಂಕಾರಕ್ಕಿಂತಲೂ ಕ್ರಿಯಾತ್ಮಕ ಪರಿಸರ ವ್ಯವಸ್ಥೆ ಗಳಾಗಿ ಪರಿವರ್ತಿಸುವುದು ಇದರ ಉದ್ದೇಶವಾಗಿದೆ. ವರ್ಷವಿಡೀ ಜೇನ್ನೊಣಗಳಿಗೆ ಆಹಾರದ ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಕಾರಿಡಾರ್ ವಿನ್ಯಾಸಗೊಳಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಬೇವು, ಜಾಮುನ್, ಮಹುವಾ, ಪಲಾಶ್, ಕರಂಜ್ ಮತ್ತು ಸಿರಿಗಳಂತಹ ಸ್ಥಳೀಯ ಪ್ರಭೇದಗಳನ್ನು ತೋಟಗಾರಿಕೆಗಾಗಿ ಗುರುತಿಸಲಾಗಿದೆ. ಸ್ಥಳೀಯ ಪ್ರಭೇದಗಳ ಆಯ್ಕೆ, ಸ್ಥಳೀಯ ಪರಿಸರ ವ್ಯವಸ್ಥೆಯನ್ನು ಬೆಂಬಲಿ ಸುವ ಮತ್ತು ಹಂತಹಂತವಾಗಿ ಹೂಬಿಡುವಂತೆ ನೋಡಿಕೊಳ್ಳುವ ಉದ್ದೇಶ ಹೊಂದಲಾಗಿದೆ.

ಕೃಷಿ ಮತ್ತು ಜೀವವೈವಿಧ್ಯಕ್ಕೆ ಉತ್ತೇಜನ

ಜೇನುನೊಣಗಳಂತಹ ಪರಾಗಸ್ಪರ್ಶಕಗಳು ಬೆಳೆ ಉತ್ಪಾದನೆ ಮತ್ತು ಆಹಾರ ಭದ್ರತೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆವಾಸಸ್ಥಾನದ ನಷ್ಟ ಮತ್ತು ಪರಿಸರದ ಒತ್ತಡದಿಂದಾಗಿ ಅವುಗಳ ಕುಸಿತ ಜಾಗತಿಕ ಕಳವಳ ಹೆಚ್ಚಿಸಿದೆ. ಹೆದ್ದಾರಿಗಳ ಉದ್ದಕ್ಕೂ ವರ್ಷದುದ್ದಕ್ಕೂ ಹಸಿರು ವಾತಾವರಣವನ್ನು ಸೃಷ್ಟಿಸುವ ಮೂಲಕ, ಈ ಯೋಜನೆ, ಆವಾಸಸ್ಥಾನಗಳನ್ನು ಪುನಃಸ್ಥಾಪಿಸುವ ಮತ್ತು ಪರಾಗಸ್ಪರ್ಶ ಪ್ರಕ್ರಿಯೆಯನ್ನು ಸುಧಾರಿಸುವ ಗುರಿ ಹೊಂದಿದೆ. ಪರಾಗಸ್ಪರ್ಶಕಗಳ ಉಪಸ್ಥಿತಿಯನ್ನು ಹೆಚ್ಚಿಸುವ ಮೂಲಕ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೃಷಿ ಉತ್ಪಾದಕತೆಯನ್ನು ಬಲಪಡಿಸಲು ಕಾರಿಡಾರ್‌ಗಳು ಸಹಾಯ ಮಾಡುತ್ತವೆ. ಈ ಕ್ರಮ ಹೆದ್ದಾರಿ ನಿರ್ಮಾಣವನ್ನು ಪರಿಸರ ಸುಸ್ಥಿರತೆಯೊಂದಿಗೆ ಜೋಡಿಸುವ ವಿಶಾಲ ಪ್ರಯತ್ನಕ್ಕೆ ಮುನ್ನುಡಿಯಾಗಿದ್ದು, ಸರ್ಕಾರದ ದೂರಗಾಮಿ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ.

ಜಾಗತಿಕ ಕ್ರಮದ ಭಾಗ

ಈ ಕ್ರಮದೊಂದಿಗೆ ಭಾರತ ಜಾಗತಿಕ ಪ್ರಯತ್ನದಲ್ಲಿ ತನ್ನ ಪಾಲನ್ನು ನೀಡಲಿದೆ. 2015ರಿಂದ ಓಸ್ಲೋದ ಬೀ ಹೆದ್ದಾರಿ ಕಾರ್ಯನಿರ್ವಹಿಸುತ್ತಿದೆ. ಯುಎಸ್ ಪೊಲಿನೇಟರ್ ಹೆದ್ದಾರಿ ಕಾಯಿದೆ ಇದೇ ರೀತಿಯ ಆಲೋಚನೆಗಳನ್ನು ಮುಂದಿಟ್ಟಿದೆ. ಆದರೆ, ಇದು ತಜ್ಞರು ರೇಖೀಯ ಮೂಲಸೌಕರ್ಯ ಪರಿಸರ ಎಂದು ಕರೆಯುವ ಭಾರತದ ಮೊದಲ ಪ್ರಯತ್ನ. ರಸ್ತೆ ಜಾಲಗಳನ್ನು ಜೀವವೈವಿಧ್ಯತೆಯ ವಾಹಕಗಳಾಗಿ ಬಳಸುತ್ತಿರುವುದು ಭಾರತದಲ್ಲಿ ಇದೇ ಮೊದಲು.



ಜೇನುನೊಣಗಳಿಗೆ ಸಹಾಯ ಏಕೆ?

ಈ ಯೋಜನೆಯ ಹಿಂದೆ ಶಾಂತವಾದ ಆದರೆ ಗಂಭೀರವಾದ ಬಿಕ್ಕಟ್ಟಿದೆ. ಆವಾಸಸ್ಥಾನದ ನಷ್ಟ, ಏಕ ಪ್ರಕಾರ ಕೃಷಿಯಿಂದ ಮತ್ತು ತ್ವರಿತ ನಗರೀಕರಣದಿಂದಾಗಿ ಭಾರತ ಮತ್ತು ವಿಶ್ವದಾದ್ಯಂತ ಜೇನುನೊಣಗಳ ಸಂಖ್ಯೆ ಸ್ಥಿರವಾಗಿ ಕುಸಿಯುತ್ತಿದೆ. ಜೇನುಹುಳುಗಳು ಮತ್ತು ಇತರ ಕೀಟಗಳು 87 ಪ್ರಮುಖ ಆಹಾರ ಬೆಳೆಗಳನ್ನು ಮತ್ತು ವಿಶ್ವದ ಕೃಷಿ ಪ್ರದೇಶದ 35 ಪ್ರತಿಶತವನ್ನು ಪರಾಗಸ್ಪರ್ಶ ಮಾಡುತ್ತವೆ. ಪರಾಗಸ್ಪರ್ಶ ಕಡಿಮೆಯಾದಾಗ ಅಥವಾ ಕಣ್ಮರೆಯಾದಾಗ, ರೈತರು ಮೊದಲು ಇದರ ಪರಿಣಾಮ ಅನುಭವಿಸುತ್ತಾರೆ. ಕಡಿಮೆ ಪರಾಗಸ್ಪರ್ಶ ಎಂದರೆ ಹಣ್ಣುಗಳು, ತರಕಾರಿಗಳು ಮತ್ತು ಎಣ್ಣೆಕಾಳುಗಳ ಕಡಿಮೆ ಇಳುವರಿ, ಆಹಾರ ಭದ್ರತೆ ಮತ್ತು ಗ್ರಾಮೀಣ ಆದಾಯಗಳೆರಡರ ಮೇಲೂ ಪರಿಣಾಮ ಬೀರುತ್ತದೆ. ಭಾರತ ಜೇನು ಉತ್ಪಾದನೆಯಲ್ಲಿ ಗಮನಾರ್ಹ ದಾಪುಗಾಲು ಇಟ್ಟಿದೆ. ಜೇನು ಉತ್ಪಾದನೆ 70-75 ಸಾವಿರ ಮೆಟ್ರಿಕ್ ಟನ್‌ಗಳಿಂದ ಒಂದು ದಶಕದಲ್ಲಿ 2025ರ ವೇಳೆಗೆ ಸುಮಾರು 1.25 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಏರಿದೆ. ಆದರೆ ಜೇನುನೊಣಗಳಿಗೆ ಸೂಕ್ತ ಆಹಾರ ಇರದಿದ್ದರೆ ಆ ಬೆಳವಣಿಗೆಗೆ ಅಪಾಯವಿದೆ.

ಜಾರಿ ಮತ್ತು ಗುರಿಗಳು

ಈ ಯೋಜನೆಯನ್ನು 2026-27ರ ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದೆ. ಈ ಅವಧಿಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಉದ್ದಕ್ಕೂ ಸುಮಾರು 40 ಲಕ್ಷ ಮರಗಳನ್ನು ನೆಡಲು ಎನ್‌ಎಚ್‌ಎಐ ಯೋಜಿಸಿದೆ. ಈ ತೋಟಗಳಲ್ಲಿ ಸುಮಾರು 60 ಪ್ರತಿಶತ, ಬೀ ಕಾರಿಡಾರ್ ಯೋಜನೆಯ ಭಾಗವಾಗುವ ನಿರೀಕ್ಷೆಯಿದೆ. ಮೊದಲ ಹಂತದಲ್ಲಿ ಕನಿಷ್ಠ ಮೂರು ಪ್ರತ್ಯೇಕ ಪರಾಗಸ್ಪರ್ಶಕ ಕಾರಿಡಾರ್‌ಗಳನ್ನು ಪ್ರಸ್ತಾಪಿಸಲಾಗಿದೆ. ಕ್ಷೇತ್ರವಾರು ಘಟಕಗಳು ವಿವಿಧ ಕೃಷಿ-ಹವಾಮಾನ ವಲಯಗಳಲ್ಲಿ ಸೂಕ್ತವಾದ ಹೆದ್ದಾರಿಗಳನ್ನು ಗುರುತಿಸಲಿವೆ ಮತ್ತು ಸ್ಥಳೀಯ ಪರಿಸ್ಥಿತಿಗಳ ಆಧಾರದ ಮೇಲೆ ಪ್ರಭೇದಗಳ ಆಯ್ಕೆಯನ್ನು ಅಂತಿಮಗೊಳಿಸುತ್ತವೆ. ಅಧಿಕಾರಿಗಳು ಇದು ಹವಾಮಾನ-ಸೂಕ್ಷ್ಮ ಯೋಜನೆಯತ್ತ ಒಂದು ಹೆಜ್ಜೆ ಎಂದು ವಿವರಿಸುತ್ತಾರೆ. ಇಲ್ಲಿ ಸಾರಿಗೆ ಮೂಲಸೌಕರ್ಯ ಪರಿಸರದ ಗುರಿಗಳನ್ನೂ ಪೂರೈಸುತ್ತದೆ. ಈ ಪ್ರಯೋಗ ಯಶಸ್ವಿಯಾದರೆ, ಈ ಮಾದರಿಯನ್ನು ಮುಂಬರುವ ವರ್ಷಗಳಲ್ಲಿ ಹೆಚ್ಚಿನ ಹೆದ್ದಾರಿ ಜಾಲಗಳಲ್ಲಿ ಅಳವಡಿಸಿಕೊಳ್ಳುವ ಯೋಜನೆಯಿದೆ.

ಕಿರುಸುದ್ದಿ

ಏ.1ರಿಂದ ಹೆದ್ದಾರಿ ಪ್ಲಾಜಾ: ಡಿಜಿಟಲ್ ಪಾವತಿ ಮಾತ್ರ


ಹೊಸದಿಲ್ಲಿ : ಮುಂಬರುವ ಏ. 1 ರಿಂದ ಭಾರತೀಯ ಎನ್‌ಎಚ್‌ಎಐ ವ್ಯಾಪ್ತಿಯಲ್ಲಿರುವ ಎಲ್ಲಾ ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ನಗದು ಪಾವತಿ ವ್ಯವಸ್ಥೆಯನ್ನು ಸ್ಥಗಿತಗೊಳಿಸಲು ಚಿಂತನೆ ನಡೆದಿದೆ. ಇದಕ್ಕೆ ಬದಲಾಗಿ ಸಂಪೂರ್ಣ ಡಿಜಿಟಲ್ ರಾಷ್ಟ್ರೀಯ ಹೆದ್ದಾರಿ ಟೋಲ್ ಪರಿಸರ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಟನೆ ತಿಳಿಸಿದೆ. ಇದರಂತೆ, ವಾಹನ ಸವಾರರು ಡಿಜಿಟಲ್ ಅಥವಾ ಯುಪಿಐ ಮೋಡ್ ಮೂಲಕ ಮಾತ್ರ ಶುಲ್ಕವನ್ನು ಪಾವತಿಸಲು ಅನುಮತಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮುಂದಾಗಿದೆ.

ಮೆರಿಟೈಮ್ ಕಾನ್‌ಕ್ಲೇವ್ 2026 ಉದ್ಘಾಟನೆ

ಪಣಜಿ: ಮಾದಕವಸ್ತು ಕಳ್ಳಸಾಗಣೆ ಮತ್ತು ಅಕ್ರಮ ಮೀನುಗಾರಿಕೆ ಸೇರಿದಂತೆ ಹೆಚ್ಚುತ್ತಿರುವ ಪ್ರಾದೇಶಿಕ ಸವಾಲುಗಳನ್ನು ಎದುರಿಸಲು ಹಿಂದು ಮಹಾಸಾಗರದ 14 ರಾಷ್ಟ್ರಗಳ ಪ್ರತಿನಿಧಿಗಳನ್ನು ಒಗ್ಗೂಡಿಸುವ ಗೋವಾ ಮೆರಿಟೈಮ್ ಕಾನ್‌ಕ್ಲೇವ್ 2026 ಅನ್ನು ನೌಕಾ ಸಿಬ್ಬಂದಿ ಮುಖ್ಯಸ್ಥ ಅಡ್ಮಿರಲ್ ದಿನೇಶ್ ತ್ರಿಪಾಠಿ ಶನಿವಾರ ಉದ್ಘಾಟಿಸಿದರು. ಬಾಂಗ್ಲಾದೇಶ, ಇಂಡೋನೇಷ್ಯಾ, ಕೊಮೊರೊಸ್, ಮಲೇಷ್ಯಾ, ಕೀನ್ಯಾ, ಸಿಂಗಾಪುರ, ಮಡಗಾಸ್ಕರ್, ಥೈಲ್ಯಾಂಡ್, ಮ್ಯಾನ್ಮಾರ್, ಮಾಲ್ಡೀವ್ಸ್, ಮಾರಿಷಸ್, ಸಿಶೆಲ್ಸ್, ಶ್ರೀಲಂಕಾ ಮತ್ತು ತಾಂಜಾನಿಯಾ ಸೇರಿದಂತೆ ಹಿಂದು ಮಹಾಸಾಗರದ ದೇಶಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದಾರೆ.

ಇಸ್ರೇಲ್ ದಾಳಿಗೆ ಹಿಜ್ಬುಲ್ಲಾ ಉಗ್ರನೂ ಸೇರಿ 10 ಸಾವು

ಲೆಬನಾನ್: ಲೆಬನಾನ್ ಮೇಲೆ ಇಸ್ರೇಲ್ ಸೇನೆ ಶನಿವಾರ ನಡೆಸಿದ ವಾಯುದಾಳಿಗೆ ಹಿರಿಯ ಹಿಜ್ಬುಲ್ಲಾ ಉಗ್ರ ಕಮಾಂಡರ್ ಹುಸೈನ್ ಮೊಹಮ್ಮದ್ ಯಾಖಿ ಸಹಿತ 8 ಮಂದಿ ಉಗ್ರರು ಬಲಿಯಾಗಿದ್ದಾರೆ.



ಮೂರು ಮಕ್ಕಳು ಸೇರಿ 10 ಮಂದಿ ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ಲೆಬನಾನ್ ರಾಜಧಾನಿ ಮೇಲೆ ಇಸ್ರೇಲ್ ಸೇನೆ ನಡೆಸಿದ ವಾಯುದಾಳಿಗೆ ಹಲವು ಕಟ್ಟಡಗಳು ನೆಲಸಮಗೊಂಡಿವೆ. ರಿಯಾಕ್ ಮೇಲಿನ ದಾಳಿ ವೇಳೆ ಹಿಜ್ಬುಲ್ಲಾ ಉಗ್ರ ನಾಯಕ ಹುಸೈನ್ ಹತನಾಗಿದ್ದಾನೆ.

ಬಾಂಗ್ಲಾ ವೀಸಾ ಸೇವೆ ಪುನರಾರಂಭಿಸಿದ ತಾರಿಕ್

ಹೊಸದಿಲ್ಲಿ: ಪ್ರಮುಖ ರಾಜತಾಂತ್ರಿಕ ಬೆಳವಣಿಗೆಯೊಂದರಲ್ಲಿ, ಎರಡು ತಿಂಗಳ ನಿಷೇಧ ಕೊನೆಗೊಳಿಸಿ ಭಾರತದಲ್ಲಿನ ತನ್ನೆಲ್ಲಾ ವೀಸಾ ಸೇವೆಗಳನ್ನು ಬಾಂಗ್ಲಾದೇಶ ಪುನರಾರಂಭಿಸಿದೆ. ತಾರಿಕ್ ರೆಹಮಾನ್ ಅವರು ಅಧಿಕಾರ ಸ್ವೀಕರಿಸುತ್ತಲೇ ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ನಿಟ್ಟಿನಲ್ಲಿ ಈ ನಿಲುವು ತಳೆದಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಭಾರತ ಮತ್ತು ಬಾಂಗ್ಲಾ ನಡುವಿನ ದ್ವಿಪಕ್ಷೀಯ ಸಂಬಂಧ ಅತ್ಯಂತ ಕೆಳಮಟ್ಟವನ್ನು ತಲುಪಿತ್ತು. ಪ್ರವಾಸ, ವೈದ್ಯಕೀಯ, ವ್ಯವಹಾರ, ಉದ್ಯೋಗ ಸೇರಿ ಎಲ್ಲಾ ವಿಭಾಗಗಳ ವೀಸಾ ಸೇವೆಗಳನ್ನು ತನ್ನ ಹೊಸದಿಲ್ಲಿ, ಅಗರ್ತಲಾ ಮತ್ತು ಸಿಲಿಗುರಿ ಕಚೇರಿಗಳಲ್ಲಿ ಶುಕ್ರವಾರ ಪುನರಾರಂಭಿಸಿದೆ. ತಾರಿಕ್ ರೆಹಮಾನ್ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಮೂರು ದಿನಗಳ ನಂತರ ಬಾಂಗ್ಲಾ ಈ ನಿರ್ಧಾರ ತೆಗೆದುಕೊಂಡಿದೆ. ಡಿಸೆಂಬರ್‌ನಲ್ಲಿ ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರ ಭಾರತದಲ್ಲಿನ ತನ್ನ ವೀಸಾ ಸೇವೆಗಳನ್ನು ರದ್ದುಗೊಳಿಸಿತ್ತು. ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆಯಾಗಿದೆ. ಬಾಂಗ್ಲಾ ಹೇರಿದ್ದ ವೀಸಾ ನಿಷೇಧದಿಂದಾಗಿ ಗಡಿ ಪ್ರದೇಶದಲ್ಲಿನ ಸಾವಿರಾರು ಜನರ ಜೀವನದ ಮೇಲೆ ತುಸು ಪರಿಣಾಮ ಬೀರಿತ್ತು.

ಭಾರತದ ವೀಸಾ ಸೇವೆ ಪುನರಾರಂಭ: ಬಾಂಗ್ಲಾ ನಡೆಗೆ ಧನಾತ್ಮಕ ಪ್ರತಿಕ್ರಿಯೆ ನೀಡಿದ ಭಾರತವೂ ಬಾಂಗ್ಲಾದಲ್ಲಿನ ತನ್ನ ವೀಸಾ ಸೇವೆಗಳನ್ನು ಪುನರಾರಂಭಿಸಿದೆ. ಭಾರೀ ಬಹುಮತದೊಂದಿಗೆ ಬಿಎನ್‌ಪಿ ಗೆದ್ದಿದ್ದರಿಂದ ತಾರಿಕ್ ರೆಹಮಾನ್ ನಿರ್ಧಾರವೇ ಅಂತಿಮವಾಗಲಿದೆ.

ಮಾರ್ಚ್ ತಿಂಗಳಾಂತ್ಯಕ್ಕೆ ನಕ್ಸಲ್‌ವಾದ ಕೊನೆ: ಶಾ

ಗುವಾಹಟಿ: ಎಡಪಂಥೀಯ ಉಗ್ರವಾದವನ್ನು ಇದೇ ಮಾರ್ಚ್ 31ರೊಳಗೆ ಸಂಪೂರ್ಣವಾಗಿ ನಿರ್ಮೂಲನೆ ಮಾಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದ್ದಾರೆ. ಈ ಬೆಳವಣಿಗೆಯಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆಯ ಪಾತ್ರವನ್ನು ಅವರು ಶ್ಲಾಘಿಸಿದ್ದಾರೆ.

ಗುವಾಹಟಿಯಲ್ಲಿ ನಡೆದ ಕೇಂದ್ರ ಮೀಸಲು ಪೊಲೀಸ್ ಪಡೆಯ 87ನೇ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಶಾ, ಕಳೆದ ಮೂರು ವರ್ಷಗಳಲ್ಲಿ ಮಾವೋವಾದಿಗಳ ಹಿಡುಗನ್ನು ನಿರ್ಮೂಲನೆ ಮಾಡುವಲ್ಲಿ ಸಾಧಿಸಿದ ಪ್ರಗತಿಗಾಗಿ ಮೀಸಲು ಪಡೆಯನ್ನು ಶ್ಲಾಘಿಸಿದರು. ಸಿಆರ್‌ಪಿಎಫ್ ಮತ್ತು ಅದರ ಕೋಬ್ರಾ ಬೆಟಾಲಿಯನ್‌ಗಳ ನಿರ್ಣಾಯಕ ಪಾತ್ರದಿಂದಾಗಿ ಭಯೋತ್ಪಾದಕ ದಾಳಿಗಳನ್ನು ವಿಫಲಗೊಳಿಸಲು ಸಾಧ್ಯವಾಯಿತು. 370ನೇ ವಿಧಿಯನ್ನು ರದ್ದುಪಡಿಸಿದ ನಂತರ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡ ಕೀರ್ತಿ ಗಡಿ ಭದ್ರತಾ ಪಡೆ ಮತ್ತು ಜಮ್ಮು ಮತ್ತು ಕಾಶ್ಮೀರ ಪೊಲೀಸರೊಂದಿಗೆ ಸಿಆರ್‌ಪಿಎಫ್‌ನದ್ದಾಗಿದೆ.

ಮುಂದಿನೈದು ವರ್ಷದಲ್ಲಿ ನುಸುಳುಕೋರರ ನಿರ್ನಾಮ: ಮುಂದಿನ ಐದು ವರ್ಷಗಳಲ್ಲಿ ಅಕ್ರಮ ವಲಸಿಗರನ್ನು ಮತದಾರರ ಪಟ್ಟಿಯಿಂದ ಮಾತ್ರವಲ್ಲದೆ ದೇಶದಿಂದಲೂ ಹೊರಹಾಕಲಾಗುವುದು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ ಶಾ, ಕಾಂಗ್ರೆಸ್ ನಾಯಕ ಒಮ್ಮೆ ನುಸುಳುಕೋರರನ್ನು ತೆಗೆದುಹಾಕಲಾಗುವುದು ಎಂದು ಹೇಳಿದ್ದರು. ಆದರೆ ಅಕ್ರಮ ವಲಸಿಗರು ಅದರ ಮತಬ್ಯಾಂಕ್ ಆಗಿರುವುದರಿಂದ ಕಾಂಗ್ರೆಸ್ ಹಾಗೆ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಹಲವೆಡೆ ಬಾಂಬ್ ದಾಳಿಗೆ ಲಷ್ಕರೆ, ಜೆಇಎಂ ಸಂಚು

ಹೊಸದಿಲ್ಲಿ : ಪಾಕ್ ಬೆಂಬಲಿತ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್ ಮತ್ತು ಜೈಶ್ ಮೊಹಮ್ಮದ್ ಉಗ್ರರು ಕಾಶಿ ವಿಶ್ವನಾಥ ದೇಗುಲ, ಅಕ್ಷರಧಾಮ ಸಹಿತ ದಿಲ್ಲಿ ಮತ್ತು ಉತ್ತರಪ್ರದೇಶಗಳ ಪ್ರಮುಖ ದೇಗುಲಗಳ ಮೇಲೆ ಐಇಡಿ ದಾಳಿ ಸಹಿತ ಆತ್ಮಾಹುತಿ ದಾಳಿ ನಡೆಸುವ ಸಂಭಾವ್ಯತೆ ಇದೆ. ಮಾರ್ಚ್-ಏಪ್ರಿಲ್‌ನಲ್ಲಿ ನಡೆವ, ಅಪಾರ ಭಕ್ತಪ್ರವಾಹ ಸೇರುವ ಹೋಳಿ, ರಾಮನವಮಿಯಂತಹ ಉತ್ಸವಗಳ ಸಂದರ್ಭದಲ್ಲೇ ಬಾಂಬ್ ದಾಳಿ ನಡೆಸುವ ಆತಂಕವಿದೆ ಎಂದು ಗುಪ್ತಚರ ಮೂಲಗಳು ಎಚ್ಚರಿಸಿವೆ. ಇಸ್ಲಾಮಾಬಾದ್ ಮಸೀದಿಯಲ್ಲಿ ಈಚೆಗೆ ಸಂಭವಿಸಿದ ಸ್ಫೋಟಕ್ಕೆ ಪ್ರತೀಕಾರವಾಗಿ ಪಾತಕಿಗಳು ದಿಲ್ಲಿ, ಉ.ಪ್ರ.ದೇಗುಲಗಳ ಮೇಲೆ ದಾಳಿಗೆ ಸಂಚು ನಡೆಸಿವೆ ಎಂದು ಬೇಹುಗಾರಿಕಾ ಮೂಲಗಳು ತಿಳಿಸಿದೆ.

ಝುಲ್ಮ್ ಕಾ ಬದ್ಲಾ ಕೋಡ್ ಹೆಸರಲ್ಲಿ ಬಲು ಅಪರೂಪವೆಂಬಂತೆ ಜೆಇಎಮ್ ಮತ್ತು ಎಲ್‌ಇಟಿ ಸೆಲ್‌ಗಳು ಜಂಟಿಯಾಗಿ ದಾಳಿಗೆ ಸಜ್ಜಾಗುತ್ತಿವೆ. ರಾವಲ್ಪಿಂಡಿಯ ಹ್ಯಾಂಡ್ಲರ್‌ಗಳ ಸಹಕಾರದೊಂದಿಗೆ ದಾಳಿ ನಡೆಯಲಿದ್ದು, ಜೈಶ್‌ನ ಮಸೂದ್ ಅಜರ್ ಮತ್ತು ಲಷ್ಕರ್ ಸಂಸ್ಥಾಪಕ ಹಫೀಜ್ ಸಯೀದ್‌ನ ಸಹಚರರು ಈ ದಾಳಿಯ ಪ್ರಮುಖ ಸೂತ್ರಧಾರರು ಎಂದು ಬೇಹುಗಾರಿಕಾ ಮೂಲಗಳು ತಿಳಿಸಿವೆ. ಸಾಂಸ್ಕೃತಿಕ ಮಹತ್ವವನ್ನು ಗಮನಿಸಿಕೊಂಡು ದಿಲ್ಲಿ ಮತ್ತು ಉತ್ತರಪ್ರದೇಶದ ದೇವಾಲಯಗಳನ್ನು ಐಇಡಿ ದಾಳಿಗೆ ಪಾತಕಿಗಳು ಟಾರ್ಗೆಟ್ ಮಾಡಿಕೊಂಡಿದ್ದಾರೆ. ಅಕ್ಷರಧಾಮ, ಕಾಶಿ ವಿಶ್ವನಾಥ ದೇವಾಲಯ ಜತೆ ಉಗ್ರರು ಪಟ್ಟಿ ಮಾಡಿರುವ ಇತರ ಕ್ಷೇತ್ರಗಳ ಯಾದಿಯಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರ ಕೂಡ ಒಳಗೊಂಡಿದೆ.

ಗಯಾನಾ ಉಪರಾಷ್ಟ್ರಪತಿ ಅಯೋಧ್ಯೆ ಭೇಟಿ



ಅಯೋಧ್ಯೆ: ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾಗವಹಿಸಲು ಆಗಮಿಸಿದ ಗಯಾನಾದ ಉಪರಾಷ್ಟ್ರಪತಿ ಗಳಾದ ಭರತ ಜಗದೇವ ತಮ್ಮ ದೇಶಕ್ಕೆ ತೆರಳುವ ಮೊದಲು ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದರ್ಶನವನ್ನು ಪಡೆಯಲು ಶನಿವಾರ ಅಯೋಧ್ಯೆಯ ಶ್ರೀರಾಮ ಮಂದಿರಕ್ಕೆ ಭೇಟಿ ನೀಡಿ ಶ್ರೀರಾಮಲಲಾ ಹಾಗೂ ಶ್ರೀರಾಮ ಪರಿವಾರ ದರ್ಶನದ ನಂತರ ಜನ್ಮಭೂಮಿ ಆವರಣದಲ್ಲಿರುವ ಮಂದಿರಗಳ ದರ್ಶನದವನ್ನು ಪಡೆದರು. ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತ್ ರಾಯ ಅವರ ಜತೆ ಮಂದಿರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸಿದರು.

ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಕಾಂಗ್ರೆಸ್ ಪ್ರತಿಭಟನೆ

ಕೈ ನಡೆಗೆ ಪ್ರತಿಪಕ್ಷಗಳ ಆಕ್ಷೇಪ

ಹೊಸದಿಲ್ಲಿ: ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಶರ್ಟ್‌ರಹಿತ ಪ್ರತಿಭಟನೆ ದೇಶದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಈ ಘಟನೆಗೆ ವಿರೋಧ ವ್ಯಕ್ತಪಡಿಸಿ ಬಿಜೆಪಿ ಕಾರ್ಯಕರ್ತರು ಶನಿವಾರ ಹಲವಾರು ರಾಜ್ಯಗಳಲ್ಲಿ ಆಂದೋಲನ ನಡೆಸಿದರು. ಜಾಗತಿಕ ವೇದಿಕೆಯಲ್ಲಿ ಭಾರತದ ಕೀರ್ತಿಗೆ ಧಕ್ಕೆಯುಂಟಾಗಿದೆ ಎಂದು ಆಡಳಿತ ಪಕ್ಷ ಸೇರಿದಂತೆ ಕೆಲವು ಪ್ರತಿಪಕ್ಷಗಳೂ ಟೀಕಿಸಿವೆ.



ಮಹಾರಾಷ್ಟ್ರದ ಥಾಣೆಯಲ್ಲಿ ನ್ಯಾಯಾಲಯಕ್ಕೆ ವಿಚಾರಣೆಗೆ ತೆರಳುತ್ತಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಾಹನಕ್ಕೆ ಬಿಜೆಪಿ ಕಾರ್ಯಕರ್ತರು ಕಪ್ಪು ಧ್ವಜ ಪ್ರದರ್ಶಿಸಿದರು. ಇದೇ ವೇಳೆ ಭಾರತೀಯ ಜನತಾ ಯುವ ಮೋರ್ಚಾ ಕಾರ್ಯಕರ್ತರು ಜಮ್ಮು, ಜೈಪುರ್, ಪಟನಾ, ಬೆಂಗಳೂರು, ಪಂಚಕುಲಾ, ಇಂದೋರ್ ಸೇರಿದಂತೆ ಹಲವು ನಗರಗಳಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಪಿ ಆಕ್ರೋಶ: ಪ್ರತಿಭಟನೆ ಕುರಿತು ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಇದು ಕೇವಲ ನಕಾರಾತ್ಮಕ ರಾಜಕೀಯವಲ್ಲ, ರಾಷ್ಟ್ರದ್ರೋಹಕ್ಕೆ ಸಮಾನ," ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ಕಾಂಗ್ರೆಸಿಗೆ ತಿರುಗುಬಾಣ

ಕಾಂಗ್ರೆಸ್ ನಾಯಕ ಹಾಗೂ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅತ್ಯಂತ ಬೇಜವಾಬ್ದಾರಿಯುತವಾಗಿ ದೇಶದ್ರೋಹಿ ನಡವಳಿಕೆ ತೋರುತ್ತಿದ್ದು, ದೇಶದ ಅಭಿವೃದ್ಧಿಗೆ ಪ್ರತಿ ಹೆಜ್ಜೆ ಹೆಜ್ಜೆಗೂ ತಡೆಯೊಡ್ಡುವುದೇ ರಾಹುಲ್ ಗಾಂಧಿಯ ಯತ್ನವಾಗಿದೆ. ಎಲ್ಲಿ ಸಂತೃಪ್ತಿ ಇದೆಯೋ ಅಲ್ಲಿ ಅತೃಪ್ತಿ, ಅರಾಜಕತೆ ಹರಡಲು ಯತ್ನಿಸುವುದು ರಾಹುಲ್ ಗಾಂಧಿಯ ಕೃತ್ಯವಾಗಿದೆ.ಇದೀಗ ಇತರ ಕಾಂಗ್ರೆಸಿಗರು ಕೂಡ ರಾಹುಲ್ ಗಾಂಧಿಯ ಹಾದಿಯನ್ನೇ ಹಿಡಿಯುತ್ತಿದ್ದಾರೆ. ಇದೊಂದು 'ಟಾಪ್‌ಲೆಸ್, ಬ್ರೈನ್‌ಲೆಸ್,ಶೇಮ್‌ಲೆಸ್'ಕೃತ್ಯ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿತ್ತು. ಪ್ರಧಾನಿ ನರೇಂದ್ರ ಮೋದಿಯವರಿಗೆ ಅವಮಾನವಾಗಬೇಕೆಂದು ಶತಾಯಗತಾಯ ಯತ್ನಿಸಿದ ಕಾಂಗ್ರೆಸಿಗೆ ಈ ಕೃತ್ಯವೀಗ ತಿರುಗುಬಾಣವಾಗಿ ಪರಿಣಮಿಸಿರುವುದಾಗಿ ವಿಶ್ಲೇಷಿಸಲಾಗಿದೆ.

ಸಮಾನ ಕೃತಕ ಬುದ್ಧಿಮತ್ತೆಗೆ 88 ದೇಶಗಳ ಸಂಪೂರ್ಣ ಬೆಂಬಲ

ಎಐ ದಿಲ್ಲಿ ಘೋಷಣೆ ಅಂಗೀಕಾರ

ಹೊಸದಿಲ್ಲಿ: ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಜಾಗತಿಕ ಏಕಮನಸ್ಸಿನ ಮಹತ್ವದ ಬೆಳವಣಿಗೆಯಾಗಿ 88 ದೇಶಗಳು ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳು ಎಐ ಇಂಪ್ಯಾಕ್ಟ್ ಕುರಿತ ದಿಲ್ಲಿ ಘೋಷಣೆಯನ್ನು ಅಂಗೀಕರಿಸಿವೆ. ಎಐ ಪ್ರಯೋಜನಗಳು ಮಾನವಕುಲದಾದ್ಯಂತ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಬದ್ಧತೆಯನ್ನು ಘೋಷಣೆ ಒತ್ತಿಹೇಳಿದೆ.

ಎಐ ಇಂಪ್ಯಾಕ್ಟ್ ಸಮ್ಮೇಳನ 2026ರ ಸಮಾರೋಪದಲ್ಲಿ ಅಂಗೀಕರಿಸಲಾದ ಈ ಘೋಷಣೆ, ಸಹಕಾರಾತ್ಮಕ, ನಂಬಿಕೆಗೆ ಪಾತ್ರ, ಸ್ಥೈರ್ಯಶೀಲ ಮತ್ತು ಕಾರ್ಯಕ್ಷಮ ಎಐ ವ್ಯವಸ್ಥೆಗಳ ಅಭಿವೃದ್ಧಿಗೆ ಹಂಚಿಕೊಂಡ ದೃಷ್ಟಿಕೋನವನ್ನು ವಿವರಿಸುತ್ತದೆ. ಸಮಾನತೆ, ಪ್ರವೇಶ ಹಾಗೂ ಜಾಗತಿಕ ಸಹಕಾರ ಆಧಾರಿತ ಎಲ್ಲರಿಗೂ ಎಐ ಎಂಬ ಕರೆಯನ್ನು ಭಾರತ ಮುಂದಿಟ್ಟಿದೆ.

ಸರ್ವಜನ ಹಿತಾಯ, ಸರ್ವಜನ ಸುಖಾಯ ತತ್ತ್ವದಿಂದ ಪ್ರೇರಿತ ಘೋಷಣೆ, ಎಐಯ ಭರವಸೆ ಅದರ ಲಾಭಗಳು ಎಲ್ಲರಿಗೂ ತಲುಪಿದಾಗ ಮಾತ್ರ ಸಾಕಾರಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದೆ. ಅಂತಾರಾಷ್ಟ್ರೀಯ ಸಹಕಾರ ಬಲಪಡಿಸುವುದು, ಬಹುಪಕ್ಷೀಯ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು ಹಾಗೂ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಗೌರವ ನೀಡುವ ಅಗತ್ಯವನ್ನೂ ಉಲ್ಲೇಖಿಸಿದೆ.

ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, 'ಮಾನವಕೇಂದ್ರಿತ ಎಐ ಕುರಿತ ಭಾರತದ ದೃಷ್ಟಿಯನ್ನು ವಿಶ್ವ ಒಪ್ಪಿಕೊಂಡಿದೆ. ಎಐ ಸಂಪನ್ಮೂಲಗಳ ಜನತಂತ್ರೀಕರಣದ ಮೂಲಕ ತಂತ್ರಜ್ಞಾನ ಸಮಾಜದ ಪ್ರತಿಯೊಬ್ಬರಿಗೂ ತಲುಪುವ ದಾರಿಗೆ ಬೆಂಬಲ ವ್ಯಕ್ತವಾಗಿದೆ,' ಎಂದರು.

ಅಮೆರಿಕ, ಚೀನಾದಂತಹ ದೇಶಗಳ ಒಪ್ಪಿಗೆ

ಏಳು ಅಂಶಗಳ ಆಧಾರ: ಘೋಷಣೆ ಏಳು ಪ್ರಮುಖ ಅಂಶಗಳ ಆಧಾರದ ಮೇಲೆ ರೂಪುಗೊಂಡಿದ್ದು, ಎಐ ಸಂಪನ್ಮೂಲಗಳ ಜನತಂತ್ರೀಕರಣ, ಆರ್ಥಿಕ ವೃದ್ಧಿ ಮತ್ತು ಸಾಮಾಜಿಕ ಹಿತ, ಸುರಕ್ಷಿತ ಮತ್ತು ನಂಬಿಕೆಗೆ ಪಾತ್ರ ಎಐ, ವಿಜ್ಞಾನ ಕ್ಷೇತ್ರದ ಬಳಕೆ, ಸಾಮಾಜಿಕ ಸಬಲೀಕರಣ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸ್ಥೈರ್ಯಶೀಲ-ನವೀನ ಎಐ ವ್ಯವಸ್ಥೆಗಳತ್ತ ಗಮನ ಹರಿಸಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಅಮೆರಿಕಾ, ಚೀನಾ, ಬ್ರಿಟನ್, ರಷ್ಯಾ, ಫ್ರಾನ್ಸ್, ಆಸ್ಟ್ರೇಲಿಯಾ ಸೇರಿದಂತೆ ಹಲವು ಅಭಿವೃದ್ಧಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಘೋಷಣೆಗೆ ಬೆಂಬಲ ಸೂಚಿಸಿವೆ. ಒಟ್ಟು 118 ದೇಶಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದವು.

ಕಿರುಸುದ್ದಿ

ಫೆ. 25: ಸಿಎಂ ಸಿದ್ದರಾಮಯ್ಯ ಉಡುಪಿ ಜಿಲ್ಲಾ ಪ್ರವಾಸ



ಉಡುಪಿ: ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆ. 25ರಂದು ಉಡುಪಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದ ಮೂಲಕ ಹೊರಟು 11 ಗಂಟೆಗೆ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಲಿದ್ದಾರೆ. ಬೆಳಗ್ಗೆ 11.10 ಕ್ಕೆ ಹೆಲಿಕಾಪ್ಟರ್ ಮೂಲಕ ಹೊರಟು 11.30 ಕ್ಕೆ ಕಾರ್ಕಳ ತಾಲೂಕು ಕ್ರೀಡಾಂಗಣದ ಹೆಲಿಪ್ಯಾಡ್‌ಗೆ ಬಂದಿಳಿಯಲಿರುವ ಅವರು, ಕಾಬೆಟ್ಟುವಿನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ, ಕಾರ್ಕಳ ತಾಲೂಕು ಕಚೇರಿ ರಸ್ತೆಯ ಕುಕ್ಕುಂದೂರಿನಲ್ಲಿ ಕಿಸಾನ್ ಸಭಾ ಟ್ರಸ್ಟ್‌ನ ಮಹಾತ್ಮಾಗಾಂಧಿ ವಸತಿ ಪ್ರೌಢಶಾಲೆಯ ಇದರ ಕಿಸಾನ್ ಸಭಾ ಸಭಾಂಗಣ ಹಾಗೂ 35ನೇ ವರ್ಷದ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಸಂಜೆ 4 ಗಂಟೆಗೆ ಹೆಲಿಕಾಪ್ಟರ್ ಮೂಲಕ ಮಂಗಳೂರು ವಿಮಾನ ನಿಲ್ದಾಣಕ್ಕೆ ತೆರಳಿ ಅಲ್ಲಿಂದ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ತೆರಳಲಿದ್ದಾರೆ.

ಫೆ.26 ರಂದು ವಿಜ್ಞಾನ ಕೇರಳ ಜಿಲ್ಲಾ ಉದ್ಯೋಗ ಮೇಳ

ಕಾಸರಗೋಡು: ಕಾಸರಗೋಡು ಜಿಲ್ಲಾ ಪಂಚಾಯತ್, ವಿಜ್ಞಾನ ಕೇರಳ ಜಿಲ್ಲಾ ಮಿಷನ್ ಮತ್ತು ಕುಟುಂಬಶ್ರೀ ಜಂಟಿಯಾಗಿ ಆಯೋಜಿಸಿರುವ ಜಿಲ್ಲಾ ಉದ್ಯೋಗ ಮೇಳ ಜಾಬ್ ಪೊಲಿಮಾ – 2026 ಫೆ.26 ರಂದು ಬೆಳಗ್ಗೆ 10 ಗಂಟೆಗೆ ಕಾಞಂಗಾಡು ಆಲಾಮಿಪಳ್ಳಿ ಹೊಸ ಬಸ್ ನಿಲ್ದಾಣ ಪರಿಸರದಲ್ಲಿ ನಡೆಯಲಿದೆ. ವಿವಿಧ ವಲಯಗಳ ಸುಮಾರು 20 ಕಂಪೆನಿಗಳ ಪ್ರತಿನಿಧಿಗಳು ಮೇಳದಲ್ಲಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ವಿಜ್ಞಾನ ಕೇರಳ ಕಾಸರಗೋಡು ಜಿಲ್ಲಾ ಮಿಷನ್ – 9895554145 ಅಥವಾ 9383476260 ಕರೆ ಮಾಡಬಹುದು.

ಕಾರಿಗೆ ಹಾನಿ ಮಾಡಿದ ಮೆಸ್ಕಾಂ ಇಂಜಿನಿಯರ್ ವಿರುದ್ಧ ದೂರು ದಾಖಲು

ಸುಳ್ಯ: ಮನೆಯ ಆವರಣದೊಳಗೆ ಅಕ್ರಮ ಪ್ರವೇಶ ಮಾಡಿ ಕಾರಿನ ಗ್ಲಾಸ್‌ಗೆ ಹಾನಿ ಮಾಡಿದ ಆರೋಪದಲ್ಲಿ ಸುಳ್ಯ ಮೆಸ್ಕಾಂ ಇಂಜಿನಿಯರ್ ಓರ್ವರ ವಿರುದ್ಧ ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಳ್ಯ ಮೆಸ್ಕಾಂ ಇಂಜಿನಿಯರ್ ಸುಪ್ರಿತ್ ಎಂಬವರ ವಿರುದ್ಧ ತಡವಾಗಿ ಪ್ರಕರಣ ದಾಖಲಾಗಿದೆ. ಫೆ.20ರಂದು ಸುಪ್ರಿತ್ ಸುಳ್ಯದ ಕೇರ್ಪಳ ಬಾಲಚಂದ್ರ ಅವರ ಮನೆಯ ಆವರಣದೊಳಗೆ ಅವರ ತಂದೆ–ತಾಯಿ ಮಾತ್ರ ಇದ್ದ ವೇಳೆ ಅಕ್ರಮ ಪ್ರವೇಶ ಮಾಡಿ ಮನೆಯ ಬಳಿಯಿದ್ದ ಓಮ್ನಿ ಕಾರಿನ ಗ್ಲಾಸ್‌ಗೆ ಹೆಲ್ಮೆಟ್‌ನಿಂದ ಹೊಡೆದು ಹಾನಿ ಮಾಡಿದ್ದು, ರೂ.5 ಸಾವಿರ ನಷ್ಟ ಉಂಟಾಗಿದೆ. ಈ ಹಿನ್ನಲೆಯಲ್ಲಿ ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಸುಳ್ಯ ಠಾಣೆಗೆ ನೀಡಿದ ದೂರಿನನ್ವಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಗಾಂಜಾ ಆರೋಪಿಗೆ ಒಂದು ವರ್ಷ ಕಠಿಣ ಶಿಕ್ಷೆ

ಕಾಸರಗೋಡು: ಗಾಂಜಾ ಸಾಗಾಟ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ದ್ವಿತೀಯ) ನ್ಯಾಯಾಧೀಶ ರಾಮು ರಮೇಶ್ಚಂದ್ರ ಭಾನು ಒಂದು ವರ್ಷ ಕಠಿಣ ಸಜೆ ಮತ್ತು 20 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಕಡಂಬಾರು ಪತ್ತನಾಡಿ ಸಂತಡ್ಕದ ಅಬ್ದುಲ್ ರಹ್ಮಾನ್ (49) ಎಂಬಾತನಿಗೆ ಈ ರೀತಿ ಶಿಕ್ಷೆ ವಿಧಿಸಲಾಗಿದೆ. 2021 ಮಾರ್ಚ್ 19ರಂದು ಇಚ್ಚಂಗೋಡು ಜಂಕ್ಷನ್‌ನಲ್ಲಿ ಅಂದು ಕುಂಬಳೆ ಠಾಣೆ ಎಸ್‌ಐ ಆಗಿದ್ದ ಎಂ.ಪಿ.ಶಾಜಿ ನೇತೃತ್ವದಲ್ಲಿ ಎಎಸ್‌ಐ ಪ್ರಕಾಶನ್ ಮತ್ತು ಸಿವಿಲ್ ಪೊಲೀಸ್ ಆಫೀಸರ್ ಸುಭಾಷ್‌ರನ್ನೊಳಗೊಂಡ ಪೊಲೀಸರ ತಂಡ ವಾಹನ ತಪಾಸಣೆಯಲ್ಲಿ ತೊಡಗಿದ್ದಾಗ ಆ ದಾರಿಯಾಗಿ ಬಂದ ಆರೋಪಿಯ ಸ್ಕೂಟರ್‌ನ್ನು ಪೊಲೀಸರು ತಡೆದು ನಿಲ್ಲಿಸಿ ತಪಾಸಣೆಗೊಳಪಡಿಸಿದಾಗ ಅದರಲ್ಲಿ 1.670 ಕಿಲೋ ಗಾಂಜಾ ಪತ್ತೆಯಾಗಿತ್ತು. ಈ ಬಗ್ಗೆ ಪೊಲೀಸರು ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದರು. ಪ್ರಾಸಿಕೂಶನ್ ಪರ ಹೆಚ್ಚುವರಿ ಸರಕಾರಿ ಪ್ಲೀಡರ್ ಜಿ.ಚಂದ್ರಮೋಹನ್ ಮತ್ತು ವಕೀಲೆ ಚಿತ್ರಕಲಾ ನ್ಯಾಯಾಲಯದಲ್ಲಿ ವಾದಿಸಿದ್ದರು.

ಕೃಷಿಕರಿಗೆ ತರಬೇತಿ ತರಗತಿ

ಕಾಸರಗೋಡು: ಕಾಸರಗೋಡು ಜಿಲ್ಲಾ ಮಣ್ಣು ಸಮೀಕ್ಷೆ ಮತ್ತು ಮಣ್ಣು ಸಂರಕ್ಷಣಾ ಇಲಾಖೆಯ ನೇತೃತ್ವದಲ್ಲಿ ಕೃಷಿಕರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಆಸಕ್ತ ಕೃಷಿಕ ಗುಂಪುಗಳು ಅಥವಾ 50ಕ್ಕಿಂತ ಕಡಿಮೆಯಿಲ್ಲದ ಸದಸ್ಯರನ್ನು ಹೊಂದಿರುವ ಸಂಘಗಳು ಕಾಸರಗೋಡಿನ ಮಣ್ಣು ಸಮೀಕ್ಷೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ 9447271765 ಕರೆ ಮಾಡಬಹುದು.



ಎಂಆರ್‌ಪಿಎಲ್ ವತಿಯಿಂದ ಕಾಪು ಪೊಲಿಪುವಿನ ಸರಕಾರಿ ಹೈಯರ್ ಪ್ರೈಮರಿ ಶಾಲೆಗೆ ನಿರ್ಮಿಸಿ ಕೊಟ್ಟ ಶೌಚಾಲಯವನ್ನು ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಉದ್ಘಾಟಿಸಿದರು. ಈ ಸಂದರ್ಭ ಎಂಆರ್‌ಪಿಎಲ್ ಅಧಿಕಾರಿಗಳು, ಶಾಲಾ ಶಿಕ್ಷಕ-ಶಿಕ್ಷಕಿಯರು ಹಾಗೂ ಮಕ್ಕಳು ಪಾಲ್ಗೊಂಡರು.

ಎಂಐಆರ್ ಗ್ರೂಪ್‌ನ ನೂತನ ಘಟಕ ಕೈಗಾರಿಕಾ ವಲಯಕ್ಕೆ ಹೊಸ ದಿಕ್ಕು: ನಿತಿಕ್

ಮಂಗಳೂರು: ಇಲ್ಲಿನ ಎಂಎಸ್‌ಈ ಝೆಡ್ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗಲಿರುವ ಇಟಲಿಯ ಎಂಐಆರ್ ಗ್ರೂಪ್‌ನ ನೂತನ ವಿದ್ಯುತ್ ಉತ್ಪಾದನಾ ಘಟಕವು ಕೈಗಾರಿಕಾ ವಲಯದಲ್ಲಿ ಹೊಸ ದಿಕ್ಕು ತೋರಲಿದೆ ಎಂದು ಸಂಸ್ಥೆಯ ಕಾರ್ಯ ನಿರ್ವಾಹಕ ನಿರ್ದೇಶಕ ನಿತಿಕ್ ರತ್ನಾಕರ್ ತಿಳಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಯೋಜನೆಯು ಬಣ್ಣ, ಬೆಳಕು ಮತ್ತು ತಾಂತ್ರಿಕತೆಯ ಸಂಯೋಜನೆಗೆ ಸಾಕ್ಷಿಯಾಗಲಿದೆ. ಘಟಕದ ಮೇಲ್ಛಾವಣಿಯೇ ವಿದ್ಯುತ್ ಉತ್ಪಾದನಾ ಘಟಕವಾಗಿ ನಿರ್ಮಾಣವಾಗುವುದರಿಂದ ಹೆಚ್ಚು ಲಾಭದಾಯಕವಾಗಿ ಪರಿಣಮಿಸಲಿದೆ. ಸದ್ಯ ಮೇಲ್ಛಾವಣಿಯಲ್ಲಿ ಸೌರ ಫಲಕಗಳನ್ನು ಅಳವಡಿಸುವ ಮೂಲಕ ಸೌರ ಶಕ್ತಿಯ ಬಳಕೆ ಮಾಡಲಾಗುತ್ತಿದೆ. ನೂತನ ತಂತ್ರಜ್ಞಾನದಲ್ಲಿ ಮೇಲ್ಛಾವಣಿಯೇ ವಿದ್ಯುತ್ ಉತ್ಪಾದನಾ ಘಟಕವಾಗಲಿದೆ ಎಂದರು. ಮೇಲ್ಛಾವಣಿಯನ್ನು ವಿವಿಧ ಆಕರ್ಷಕ ಬಣ್ಣಗಳಲ್ಲಿ ರೂಪಿಸಬಹುದು. ಇದು ಘಟಕಕ್ಕೆ ಹೊಸ ಮೆರುಗು ನೀಡಲಿದೆ. ಮೇಲ್ಛಾವಣಿಯ ಪ್ರತಿ 5 ಚದರ ಮೀಟರ್‌ಗೆ ಸುಮಾರು 1 ಕಿಲೋವ್ಯಾಟ್ ವಿದ್ಯುತ್ ಉತ್ಪಾದನೆ ಸಾಧ್ಯವಿದೆ. ಘಟಕಕ್ಕೆ ಮಿಂಚಿನಿಂದಾಗುವ ಹಾನಿಯನ್ನು ತಪ್ಪಿಸಲು ರಕ್ಷಣಾ ಕ್ರಮಗಳನ್ನು ಅನುಸರಿಸಲಾಗುತ್ತದೆ. ಸುದ್ದಿಗೋಷ್ಠಿಯಲ್ಲಿ ಎಂಐಆರ್ ಗ್ರೂಪ್‌ನ ಸಿಇಒ ಆರ್ಕಿಟೆಕ್ಟ್ ರಫೇಲೆ ಮರಾಝೊ, ಇಮ್ಮಾನುಯೆಲ್ ಪಿನಾ ಮತ್ತಿತರರು ಉಪಸ್ಥಿತರಿದ್ದರು.

ಬದಲಿಸಲು ಸಾಧ್ಯವಿದೆ

ಫಲಕಗಳ ಸಂಪರ್ಕಗಳನ್ನು ಸಮಾನಂತರ ವಿಧಾನದಲ್ಲಿ ಜೋಡಿಸುವುದರಿಂದ ಒಂದು ಫಲಕದಲ್ಲಿ ದೋಷ ಉಂಟಾದರೂ ಇತರ ಫಲಕಗಳ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವುದಿಲ್ಲ. ಹಾನಿಗೊಳಗಾದ ಫಲಕವನ್ನು ಪ್ರತ್ಯೇಕವಾಗಿ ಬದಲಿಸಲು ಸಾಧ್ಯವಿದೆ ಎಂದು ನಿತಿಕ್ ರತ್ನಾಕರ್ ವಿವರಿಸಿದರು.

ಕಾಸರಗೋಡು ಜಿಲ್ಲೆ ಮತದಾರರ ಅಂತಿಮ ಪಟ್ಟಿ ಪ್ರಕಟ | ಪಕ್ಷ ಪ್ರತಿನಿಧಿಗಳಿಗೆ ಪ್ರತಿ ಹಸ್ತಾಂತರ

ಮತದಾರರ ಸಂಖ್ಯೆಯಲ್ಲಿ 74,896 ಏರಿಕೆ

ಕಾಸರಗೋಡು: ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಬಳಿಕ ಕಾಸರಗೋಡು ಜಿಲ್ಲೆಯ ಅಂತಿಮ ಮತದಾರರ ಪಟ್ಟಿಯನ್ನು ಶನಿವಾರ ಪ್ರಕಟಿಸಲಾಗಿದೆ. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರು ಜಿಲ್ಲಾಧಿಕಾರಿಗಳ ಕೊಠಡಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಪಟ್ಟಿಯ ಪ್ರತಿಗಳನ್ನು ಹಸ್ತಾಂತರಿಸುವ ಮೂಲಕ ಪಟ್ಟಿಯನ್ನು ವಿದ್ಯುಕ್ತವಾಗಿ ಬಿಡುಗಡೆ ಮಾಡಿದರು.

ಪರಿಷ್ಕೃತ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಈಗ ಒಟ್ಟು 10,96,241 ಮಂದಿ ಮತದಾರರಿದ್ದಾರೆ. ಹಿಂದಿನ ಕರಡು ಪಟ್ಟಿಗೆ ಹೋಲಿಸಿದರೆ ಇದು 74,896 ಮಂದಿ ಹೆಚ್ಚಳವಾಗಿದೆ. ಪುರುಷರು 5,40,698 ಮಂದಿ, ಮಹಿಳೆಯರು 5,55,530 ಹಾಗೂ ಟ್ರಾನ್ಸ್‌ಜೆಂಡರ್ 13 ಮಂದಿ ಈ ಪಟ್ಟಿಯಲ್ಲಿ ಒಳಗೊಂಡಿದ್ದಾರೆ.

ಅಂತಿಮ ಪಟ್ಟಿಯಲ್ಲಿ 74,896 ಮತದಾರರ ಹೆಚ್ಚಳ ಕಂಡುಬಂದಿದ್ದು, 37,580 ಪುರುಷ ಮತದಾರರು, 37,313 ಮಹಿಳಾ ಮತದಾರರು ಮತ್ತು ಮೂವರು ಟ್ರಾನ್ಸ್‌ಜೆಂಡರ್ ಮತದಾರರು ಇದ್ದಾರೆ. ಎಸ್‌ಐಆರ್‌ಗೆ ಮೊದಲು ಮತದಾರರ ಸಂಖ್ಯೆ 10,78,256 ಆಗಿತ್ತು. ಕರಡು ಪಟ್ಟಿಯನ್ನು ಪ್ರಕಟಿಸಿದಾಗ 10,21,345 ಮತದಾರರ ಸಂಖ್ಯೆಯಿತ್ತು. ಆಕ್ಷೇಪಣೆಗಳು ಮತ್ತು ದೂರುಗಳನ್ನು ಪರಿಗಣಿಸಿ ಹಾಗೂ ಹೊಸ ಅರ್ಜಿಗಳನ್ನು ಸ್ವೀಕರಿಸಿದ ನಂತರ ಮತದಾರರ ಸಂಖ್ಯೆ ಏರಿಕೆಯಾಗಿದೆ.

ಉತ್ತಮ ಪ್ರದರ್ಶನದೊಂದಿಗೆ ಕಾಸರಗೋಡು ಜಿಲ್ಲೆ

ಕೇರಳ ರಾಜ್ಯ ಮಟ್ಟದಲ್ಲಿ ಮತದಾರರ ಪಟ್ಟಿ ನವೀಕರಣ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಕಾಸರಗೋಡು ಜಿಲ್ಲೆ ಉತ್ತಮ ಪ್ರದರ್ಶನ ನೀಡಿದೆ. ಈ ಸಾಧನೆಗೆ ಚುನಾವಣಾ ನೋಂದಣಿ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳ 24/7 ಶ್ರಮ ಕಾರಣ ಎಂದು ಜಿಲ್ಲಾಧಿಕಾರಿ ಪ್ರಶಂಸೆ ವ್ಯಕ್ತಪಡಿಸಿದರು. ವಿವಿಧ ರಾಜಕೀಯ ಪಕ್ಷಗಳು, ಬಿಎಲ್‌ಒಗಳು, ಕುಟುಂಬಶ್ರೀ ಕಾರ್ಯಕರ್ತೆಯರು, ಎಸ್‌ಸಿ ಮತ್ತು ಎಸ್‌ಟಿ ಕಾರ್ಯಕರ್ತರು ಈ ನಿಟ್ಟಿನಲ್ಲಿ ಸಹಕರಿಸಿದ್ದಕ್ಕೆ ಜಿಲ್ಲಾಡಳಿತವು ಕೃತಜ್ಞತೆ ಸಲ್ಲಿಸಿದೆ.

ಮತದಾರರ ಪಟ್ಟಿ ಪರಿಶೀಲನೆಗೆ ಅವಕಾಶ

ಮತದಾರರು ಪಟ್ಟಿಯನ್ನು ಪರಿಶೀಲಿಸಬೇಕು ಮತ್ತು ಎಲ್ಲಾ ಅರ್ಹ ಮತದಾರರು ಪಟ್ಟಿಯಲ್ಲಿ ಸೇರಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಪಟ್ಟಿಯಲ್ಲಿ ಯಾವುದೇ ನಕಲಿ ಮತಗಳು ಕಂಡುಬಂದರೆ ಫಾರಂ 7 ಬಳಸಿಕೊಂಡು ಅವುಗಳನ್ನು ತೆಗೆದುಹಾಕಲು ಯಾರಾದರೂ ಅರ್ಜಿ ಸಲ್ಲಿಸಬಹುದು. ಪಟ್ಟಿಯಲ್ಲಿ ಹೆಸರು ಇಲ್ಲದವರು ಚಿಂತಿಸಬೇಕಾಗಿಲ್ಲ. ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲು ತಮ್ಮ ಹೆಸರುಗಳನ್ನು ಸೇರಿಸಲು ಅವಕಾಶವಿರುತ್ತದೆ ಎಂದು ಜಿಲ್ಲಾಡಳಿತ ತಿಳಿಸಿದೆ.

ಅರ್ಹ ಮತದಾರರು ಕೊನೆಯ ಕ್ಷಣದವರೆಗೂ ಕಾಯದೆ ಮತದಾರರ ಪಟ್ಟಿಗೆ ತಮ್ಮ ಹೆಸರುಗಳನ್ನು ಸೇರಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ವಿನಂತಿಸಿದ್ದಾರೆ. ಮತದಾರರ ಪಟ್ಟಿ ಬಿಡುಗಡೆ ಕಾರ್ಯಕ್ರಮದಲ್ಲಿ ಚುನಾವಣಾ ಆರ್‌ಡಿಒ ಬಿನು ಜೋಸೆಫ್, ಉಪ ಜಿಲ್ಲಾಧಿಕಾರಿ ಎ.ಎನ್.ಗೋಪಕುಮಾರ್, ಜೆಎಸ್ ಎ.ರಾಜೀವನ್, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಕೆ.ಎ.ಮುಹಮ್ಮದ್ ಹನೀಫ್, ಪಿ.ರಮೇಶ್, ಹ್ಯಾರಿಸ್ ಚೂರಿ, ಬಿಜು ಉಣ್ಣಿತ್ತಾನ್, ಹರೀಶ್ ಬಿ.ನಂಬಿಯಾರ್, ಮಾಮುನಿ ವಿಜಯನ್ ಮತ್ತು ಇತರರು ಭಾಗವಹಿಸಿದ್ದರು.

ಹೊಸ ಮತದಾರರ ಸೇರ್ಪಡೆ

ಹೊಸ ಮತದಾರರು ನಮೂನೆ 6ರಲ್ಲಿ 71,789 ಅರ್ಜಿಗಳು ಬಂದಿದ್ದು, ಅವುಗಳಲ್ಲಿ 65,938 (91.85%) ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ. ಕಾಸರಗೋಡು ಕ್ಷೇತ್ರದಲ್ಲಿ ಅತಿ ಹೆಚ್ಚು ಅರ್ಜಿಗಳನ್ನು (19,342 ಅರ್ಜಿಗಳು) ಸಲ್ಲಿಸಲಾಗಿದೆ. ಮಂಜೇಶ್ವರ ಕ್ಷೇತ್ರದಲ್ಲಿ 16,692 ಅರ್ಜಿಗಳು, ಉದುಮದಲ್ಲಿ 15,671 ಅರ್ಜಿಗಳು, ಕಾಞಂಗಾಡಿನಲ್ಲಿ 10,419 ಅರ್ಜಿಗಳು ಮತ್ತು ತೃಕ್ಕರೀಪ್ಪುರದಲ್ಲಿ 9,665 ಅರ್ಜಿಗಳು ಬಂದಿವೆ.

ಅನಿವಾಸಿ ಮತದಾರರು ನಮೂನೆ 6ಎರಲ್ಲಿ ಅನಿವಾಸಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗಾಗಿ ಬಂದ 11,746 ಅರ್ಜಿಗಳಲ್ಲಿ 8,851 (75.35%) ಅರ್ಜಿಗಳನ್ನು ಅನುಮೋದಿಸಲಾಗಿದೆ. ಈ ಪೈಕಿ ತೃಕ್ಕರೀಪ್ಪುರ ಕ್ಷೇತ್ರವು ಅತಿ ಹೆಚ್ಚು ಅರ್ಜಿಗಳನ್ನು (3,996 ಅರ್ಜಿಗಳು) ಸ್ವೀಕರಿಸಿದೆ. ಮಂಜೇಶ್ವರ ಕ್ಷೇತ್ರವು 789 ಅರ್ಜಿಗಳು, ಕಾಸರಗೋಡು ಕ್ಷೇತ್ರವು 1526 ಅರ್ಜಿಗಳು, ಉದುಮ ಕ್ಷೇತ್ರವು 2174 ಅರ್ಜಿಗಳು ಮತ್ತು ಕಾಞಂಗಾಡು ಕ್ಷೇತ್ರವು 3261 ಅರ್ಜಿಗಳನ್ನು ಪಡೆದುಕೊಂಡಿದೆ.



ಕಾಸರಗೋಡು ಜಿಲ್ಲಾಧಿಕಾರಿಯಿಂದ ಮತದಾರರ ಪಟ್ಟಿ ಹಸ್ತಾಂತರ

ಮತದಾರರ ಪಟ್ಟಿಯಲ್ಲಿನ ದೋಷಗಳ ನಿವಾರಣೆ

ಮತದಾರರ ಪಟ್ಟಿಯಲ್ಲಿರುವ ದೋಷಗಳ ತಿದ್ದುಪಡಿಯಂತೆ (ನಮೂನೆ 8) 11,780 ಅರ್ಜಿಗಳು ಬಂದಿವೆ. ದೋಷಗಳ ತಿದ್ದುಪಡಿಗಾಗಿ ಸ್ವೀಕರಿಸಲಾದ ಅರ್ಜಿಗಳಲ್ಲಿ 11,110 (ಶೇಕಡಾ 94.31) ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ. ಮಂಜೇಶ್ವರ ಕ್ಷೇತ್ರದಲ್ಲಿ 3653 ಅರ್ಜಿಗಳು, ಕಾಸರಗೋಡಿನಲ್ಲಿ 2453 ಅರ್ಜಿಗಳು, ಉದುಮ ಕ್ಷೇತ್ರದಲ್ಲಿ 1992 ಅರ್ಜಿಗಳು, ಕಾಞಂಗಾಡು ಕ್ಷೇತ್ರದಲ್ಲಿ 1458 ಅರ್ಜಿಗಳು ಮತ್ತು ತೃಕ್ಕರೀಪ್ಪುರ ಕ್ಷೇತ್ರದಲ್ಲಿ 2224 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಜಿಲ್ಲಾ ಚುನಾವಣಾ ವಿಭಾಗವು ಮಾಹಿತಿ ನೀಡಿದೆ.

ಅನರ್ಹರು ಪಟ್ಟಿಯಿಂದ ಹೊರಗೆ

ಅನರ್ಹರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ಬಂದ 8,095 ಅರ್ಜಿಗಳಲ್ಲಿ 7,957 (98.30%) ಅರ್ಜಿಗಳನ್ನು ಸ್ವೀಕರಿಸಿ ಕ್ರಮ ಕೈಗೊಳ್ಳಲಾಗಿದೆ. ಮಂಜೇಶ್ವರ ಕ್ಷೇತ್ರದಲ್ಲಿ 1877 ಅರ್ಜಿಗಳು, ಕಾಸರಗೋಡಿನಲ್ಲಿ 1731 ಅರ್ಜಿಗಳು, ಉದುಮದಲ್ಲಿ 1446 ಅರ್ಜಿಗಳು, ಕಾಞಂಗಾಡಿನಲ್ಲಿ 1849 ಅರ್ಜಿಗಳು, ತೃಕ್ಕರೀಪ್ಪುರದಲ್ಲಿ 1192 ಅರ್ಜಿಗಳು ಸಲ್ಲಿಕೆಯಾಗಿವೆ.

ತಿದ್ದುಪಡಿಗಳು ಮತ್ತು ಬದಲಾವಣೆಗಳ ಪೈಕಿ (ಫಾರ್ಮ್ 8) ವಿಳಾಸ ಬದಲಾವಣೆಗೆ (ಶಿಫ್ಟಿಂಗ್) ಒಟ್ಟು 3,108 ಅರ್ಜಿಗಳು ಬಂದಿವೆ. ಅದರಲ್ಲಿ 2616 (84.17%) ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಮಂಜೇಶ್ವರ ಕ್ಷೇತ್ರದಲ್ಲಿ 770 ಅರ್ಜಿಗಳು, ಕಾಸರಗೋಡಿನಲ್ಲಿ 553 ಅರ್ಜಿಗಳು, ಉದುಮ ಕ್ಷೇತ್ರದಲ್ಲಿ 489 ಅರ್ಜಿಗಳು, ಕಾಞಂಗಾಡು ಕ್ಷೇತ್ರದಲ್ಲಿ 867 ಅರ್ಜಿಗಳು ಮತ್ತು ತೃಕ್ಕರೀಪ್ಪುರ ಕ್ಷೇತ್ರದಲ್ಲಿ 429 ಅರ್ಜಿಗಳು ಈ ರೀತಿಯಾಗಿ ಬಂದಿವೆ.

ಶಬರಿಮಲೆ ಪ್ರಕರಣದಲ್ಲಿ ಸರ್ಕಾರಕ್ಕೆ ಕೋರ್ಟ್ ವಿವೇಕ, ಸಂಯಮ, ಜವಾಬ್ದಾರಿಯ ಪಾಠ: ಶ್ರೀ

ಕಾಸರಗೋಡು: ಶಬರಿಮಲೆ ಚಿನ್ನ ಹಗರಣ ಪ್ರಕರಣದಲ್ಲಿ ನ್ಯಾಯಾಲಯವು ಶಬರಿಮಲೆ ಶ್ರೀ ಅಯ್ಯಪ್ಪ ದೇವಾಲಯದ ತಂತ್ರಿವರ್ಯ ಶ್ರೀ ಕಂಠರಾರ್ ರಾಜೀವರ್ ಅವರಿಗೆ ಜಾಮೀನು ನೀಡಿ ತಂತ್ರಿಯವರ ವಿರುದ್ಧ ಯಾವುದೇ ಸಾಕ್ಷ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಇದರಿಂದ ತನಿಖಾ ಪ್ರಕ್ರಿಯೆಗಳಲ್ಲಿ ವಿವೇಕ, ಸಂಯಮ ಹಾಗೂ ಜವಾಬ್ದಾರಿ ಎಷ್ಟು ಅವಶ್ಯಕ ಎಂಬುದನ್ನು ನ್ಯಾಯಾಲಯವು ಸರಕಾರಕ್ಕೆ ಮತ್ತೊಮ್ಮೆ ನೆನಪಿಸಿದೆ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಹೇಳಿದರು.

ಎಡನೀರು ಮಠದಲ್ಲಿ ಮಾಧ್ಯಮದವರೊಂದಿಗೆ ಶ್ರೀಗಳು ಮಾತನಾಡಿ, ಈ ವಿಷಯ ತಿಳಿಸಿದರು. ಹಿಂದೂ ದೇವಾಲಯದ ಪರಂಪರೆಯ ರಕ್ಷಕರಾಗಿರುವ ತಂತ್ರಿಗಳು ಕೇವಲ ವ್ಯಕ್ತಿಗಳಷ್ಟೇ ಅಲ್ಲ. ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿಕೊಂಡು ಬಂದ ದೈವಿಕ ಹಾಗೂ ಆಧ್ಯಾತ್ಮಿಕ ಜವಾಬ್ದಾರಿಯ ಪ್ರತೀಕರಾಗಿದ್ದಾರೆ. ಅಂತಹ ಸ್ಥಾನದಲ್ಲಿರುವ ವ್ಯಕ್ತಿಯನ್ನು ಸಾಕ್ಷ್ಯ ಯಾ ಪುರಾವೆಗಳಿಲ್ಲದೆ ಪ್ರಕರಣದಲ್ಲಿ ಆರೋಪಿಯಾಗಿ ಮಾಡುವುದು ಮತ್ತು ಬಂಧಿಸುವುದು ಸರಿಯಲ್ಲ. ಕೇವಲ ಕಾನೂನಿನ ಮೇಲಿರುವ ನಂಬಿಕೆ ಮಾತ್ರವಲ್ಲ. ಕೋಟ್ಯಾಂತರ ಭಕ್ತರ ಹಿಂದೂ ಧರ್ಮದ ಬಗ್ಗೆ ಇರುವ ನಂಬಿಕೆಯನ್ನೂ ಗಂಭೀರವಾಗಿ ಹಾನಿಗೊಳಿಸುವ ಕ್ರಮವಾಗಿದೆ. ಇದು ಭಕ್ತರ ನಂಬಿಕೆಗೆ ಗಾಯ ಮಾಡುವುದಕ್ಕೆ ಸಮಾನವಾಗಿದೆ.



ಕಾನೂನು ಪ್ರಕ್ರಿಯೆಗಳ ಮೂಲಕ ಸತ್ಯ ಹೊರಬರುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ದೇವಾಲಯಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ತನಿಖಾ ಸಂಸ್ಥೆಗಳು ಹೆಚ್ಚು ಜಾಗರೂಕತೆ ಹಾಗೂ ಸಂಯಮವನ್ನು ಪಾಲಿಸಬೇಕಾಗಿದೆ. ಶಬರಿಮಲೆ ಪ್ರಕರಣದಲ್ಲಿ ತಂತ್ರಿಯವರನ್ನು ಬಂಧಿಸಿದ ವಿಚಾರದಲ್ಲಿ ಎಸ್‌ಐಟಿಯಿಂದ ತಪ್ಪಾಗಿದೆ ಎಂಬ ಅಭಿಪ್ರಾಯ ಭಕ್ತರಲ್ಲಿ ವ್ಯಾಪಕವಾಗಿದೆ. ಈ ಕ್ರಮವು ಕೋಟ್ಯಂತರ ಭಕ್ತರ ಮನಸ್ಸಿನಲ್ಲಿ ನೋವು ಹಾಗೂ ಅಶಾಂತಿಯನ್ನುಂಟುಮಾಡಿದೆ. ಇತ್ತೀಚೆಗೆ ಹಿಂದೂ ದೇವಾಲಯಗಳು ಹಾಗೂ ಆರಾಧನಾ ಸ್ಥಳಗಳನ್ನು ಗುರಿಯಾಗಿಸಿಕೊಂಡು ಉಂಟಾಗುತ್ತಿರುವ ಸುಳ್ಳು ಆರೋಪಗಳು ಹೆಚ್ಚುತ್ತಾ ಇದೆ. ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ವಿಷಯವಾಗಿದೆ. ಅಲ್ಲದೆ ಈ ವಿಷಯದಲ್ಲಿ ಸಮಾಜವು ಎಚ್ಚೆತ್ತುಕೊಳ್ಳಬೇಕಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ನಡೆದ ಪ್ರಕರಣಗಳಂತೆಯೇ ಇರುವ ದುಷ್ಪ್ರಚಾರಗಳು, ಇಂತಹ ಆರೋಪಗಳು ಉಂಟುಮಾಡುವ ದುಷ್ಪರಿಣಾಮಗಳು ಎಷ್ಟು ಗಂಭೀರವಾಗಿವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಹಿಂದೂ ಧಾರ್ಮಿಕ ಸಂಸ್ಥೆಗಳ ಗೌರವವನ್ನು ಕಾಪಾಡುವುದು ಮತ್ತು ಕಾನೂನಿನ ಪಾವಿತ್ರ್ಯವನ್ನು ರಕ್ಷಿಸಬೇಕಾಗಿದೆ. ವಿವೇಕಪೂರ್ಣ ಹಾಗೂ ಜವಾಬ್ದಾರಿಯುತ ತನಿಖೆಯ ಮೂಲಕ ಈ ಎರಡನ್ನೂ ಒಂದೇ ಸಮಯದಲ್ಲಿ ಸಾಧಿಸಬಹುದು. ಆದ್ದರಿಂದ ಶಬರಿಮಲೆ ತಂತ್ರಿಯವರ ಬಂಧನಕ್ಕೆ ಸಂಬಂಧಿಸಿದ ವಿಷಯದಲ್ಲಿಯೂ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ನಡೆದಿರುವ ಸಂಚಿನ ಕುರಿತು ಇದುವರೆಗೆ ಸಂಭವಿಸಿರುವ ತಪ್ಪುಗಳನ್ನು ಸರಿಪಡಿಸಲು ಸಂಬಂಧಪಟ್ಟ ಸರಕಾರಗಳು ಅಗತ್ಯದ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ಸಮಯದಲ್ಲಿ ಶಬರಿಮಲೆ ಚಿನ್ನ ದರೋಡೆ ಪ್ರಕರಣದ ನಿಜವಾದ ಆರೋಪಿಗಳು ಯಾರೇ ಆದರೂ ಅವರನ್ನು ಪತ್ತೆಹಚ್ಚಿ ಕಾನೂನು ಪ್ರಕಾರ ಮಾದರಿಯಾಗಿ ಶಿಕ್ಷಿಸಬೇಕು ಎಂದರು.

ಎಸ್‌ಸಿಡಿಸಿಸಿ ಬ್ಯಾಂಕ್‌ನ ಬೈಂದೂರು ಶಾಖೆಯ ನೂತನ ಕಟ್ಟಡಕ್ಕೆ ಭೂಮಿ ಪೂಜೆ



ಮಂಗಳೂರು: ಎಸ್‌ಸಿಡಿಸಿಸಿ ಬ್ಯಾಂಕ್‌ನ ಬೈಂದೂರು ಶಾಖೆಗೆ ಯಡ್ತರೆ ಗ್ರಾಮದಲ್ಲಿ ನಿರ್ಮಾಣ ಗೊಳ್ಳಲಿರುವ ನೂತನ ಕಟ್ಟಡದ ಭೂಮಿಪೂಜೆ ಕಾರ್ಯಕ್ರಮವು ಶುಕ್ರವಾರ ವಿಧಿವಿಧಾನಗಳೊಂದಿಗೆ ನೆರವೇರಿತು.

ಬ್ಯಾಂಕ್‌ನ ನಿರ್ದೇಶಕ ಎಂ. ಮಹೇಶ್ ಹೆಗ್ಡೆ ಅವರು ಭೂಮಿಪೂಜೆಯನ್ನು ನೆರವೇರಿಸಿದರು.

ಪುರೋಹಿತರಾದ ಶ್ರೀ ಕೆರೆಕಟ್ಟೆ ಸುಬ್ರಹ್ಮಣ್ಯ ಅಡಿಗ ಅವರು ಪೂಜಾವಿಧಿ ವಿಧಾನಗಳನ್ನು ನೆರವೇರಿಸಿದರು.


ಈ ಸಂದರ್ಭದಲ್ಲಿ ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷ ರಾಜು ಪೂಜಾರಿ, ಎಸ್‌ಸಿಡಿಸಿಸಿ ಬ್ಯಾಂಕ್‌ನ ಮಹಾಪ್ರಬಂಧಕ ಯು. ಸುನೀಲ್ ಕುಮಾರ್ ಹೊಳ್ಳ, ಗುತ್ತಿಗೆದಾರ ಉದಯ ಕುಮಾರ್ ಶೆಟ್ಟಿ, ಬ್ಯಾಂಕ್‌ನ ಪ್ಯಾನೆಲ್ ಇಂಜಿನಿಯರ್ ತಾರನಾಥ ಹೆಚ್.ಟಿ., ಬೈಂದೂರು ಶಾಖಾ ವ್ಯವಸ್ಥಾಪಕ ಸತೀಶ್ ಹೆಚ್., ಬೈಂದೂರು ವಲಯ ಮೇಲ್ವಿಚಾರಕ ಶಿವರಾಮ ಪೂಜಾರಿ ಸೇರಿದಂತೆ ಬ್ಯಾಂಕ್‌ನ ಅಧಿಕಾರಿಗಳು ಉಪಸ್ಥಿತರಿದ್ದರು.

ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಆಯ್ದ ಭಾಗಗಳಲ್ಲಿ ಗಜಪಡೆಗಾಗಿ ವಿಶೇಷ ದಾರಿ | ಇನ್ನು ಸಿಗಲಿದೆ ಕೃಷಿ ತೋಟದೊಳಗೆ ನುಗ್ಗಿ ನಡೆಸುವ ಸಂಘರ್ಷಗಳಿಗೆ ಮುಕ್ತಿ

ಪೆರಿಯಶಾಂತಿ, ಅಡ್ಡಹೊಳೆಗಳಲ್ಲಿ ಆನೆ ದಾಟು ಯೋಜನೆ ಕಾಮಗಾರಿ ಪೂರ್ಣ

ಉಪ್ಪಿನಂಗಡಿ: ಪಶ್ಚಿಮ ಘಟ್ಟದ ತಪ್ಪಲು ಪ್ರದೇಶವಾಗಿರುವ ಶಿರಾಡಿ–ಶಿಶಿಲ ರಕ್ಷಿತಾರಣ್ಯವನ್ನು ಒಳಗೊಂಡ ಪ್ರದೇಶದಲ್ಲಿ ಹಾದು ಹೋಗುವ ಮಂಗಳೂರು–ಬೆಂಗಳೂರು ಸಂಪರ್ಕದ ರಾಷ್ಟ್ರೀಯ ಹೆದ್ದಾರಿ 75ರಲ್ಲಿ, ನೆಲ್ಯಾಡಿ– ಹೊಸಮಜಲು ಸಮೀಪದ ಮಣ್ಣಗುಂಡಿಯಿಂದ ಗುಂಡ್ಯ ತನಕ ಲಾವತಡ್ಕ ಅಥವಾ ಮಣ್ಣಗುಂಡಿ, ಪೆರಿಯಶಾಂತಿ, ಅಡ್ಡಹೊಳೆ ಈ 3 ಕಡೆಯಲ್ಲಿ ಆನೆ ದಾಟು ಯೋಜನೆ ಮಂಜೂರಾಗಿದ್ದು, ಈ ಪೈಕಿ ಪೆರಿಯಶಾಂತಿ ಮತ್ತು ಅಡ್ಡಹೊಳೆಗಳಲ್ಲಿನ ಆನೆ ದಾಟು ಯೋಜನೆ ಕಾಮಗಾರಿ ಪೂರ್ಣಗೊಂಡಿದೆ.

ಪೆರಿಯಶಾಂತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ರಸ್ತೆ ಮೇಲ್ಸೇತುವೆ ಮೇಲೆ ಹಾದು ಹೋಗುತ್ತದೆ. ಇದರ ಬದಿಯಲ್ಲಿ ನೆಲದ ಅಂತರದಲ್ಲಿ ಧರ್ಮಸ್ಥಳ–ಕುಕ್ಕೆ ಸುಬ್ರಹ್ಮಣ್ಯ ಸಂಪರ್ಕ ರಸ್ತೆ ಕವಲೊಡೆದು ಹಾದು ಹೋಗುತ್ತದೆ. ಇದರಿಂದ ಸುಮಾರು 300 ಮೀಟರ್ ದೂರದಲ್ಲಿ ಹೆದ್ದಾರಿಯ ಇಕ್ಕಡೆಯಲ್ಲಿರುವ ಮೀಸಲು ರಕ್ಷಿತಾರಣ್ಯದ ಮಧ್ಯೆ ತೋಡು ಹರಿದು ಹೋಗುತ್ತಿದೆ. ಆನೆಗಳಿಗೆ ನೀರು ಕುಡಿಯಲು ಈ ತೋಡು ಉಪಯೋಗ ಆಗುವ ರೀತಿಯಲ್ಲಿ ಅಂಡರ್ ಪಾಸ್ ರೀತಿಯಲ್ಲಿ ಆನೆ ದಾಟು ನಿರ್ಮಾಣ ಆಗಿರುತ್ತದೆ. ಅಡ್ಡಹೊಳೆಯಲ್ಲಿಯೂ ಇದೇ ರೀತಿಯಾಗಿ ನಿರ್ಮಾಣ ಆಗಿದೆ.



ಪೆರಿಯಶಾಂತಿಯಲ್ಲಿ ನಿರ್ಮಾಣ ಆಗಿರುವ ಆನೆ ದಾಟು 12 ಅಡಿ ಅಗಲ ಮತ್ತು ಸುಮಾರು 70 ಮೀ. ಉದ್ದವಿದೆ. 3 ಕಡೆ ಪಿಲ್ಲರ್ ಹಾಕಲಾಗಿ 3 ಹಂತದಲ್ಲಿ ದಾಟು ನಿರ್ಮಿಸಲಾಗಿದೆ. ಒಂದು ಪಿಲ್ಲರ್‌ನಿಂದ ಇನ್ನೊಂದು ಪಿಲ್ಲರ್‌ನ್ನು 15 ಮೀ. ಅಂತರದಲ್ಲಿ ನಿರ್ಮಿಸಲಾಗಿದೆ. ಸಹಜವಾಗಿ ಆನೆಗಳು ಹಿಂಡುಗಳಾಗಿ ಹೋಗುವುದಕ್ಕೂ ಸಾಧ್ಯವಾಗುವ ರೀತಿಯಲ್ಲಿ ದಾಟು ನಿರ್ಮಾಣವಾಗಿದೆ ಎಂದು ಕಾಮಗಾರಿ ನಿರ್ವಹಿಸಿರುವ ಔತಾಡೆ ಸಂಸ್ಥೆಯ ಅಧಿಕಾರಿ ತಿಳಿಸಿದ್ದಾರೆ.

ಆನೆಗಳ ಸಾಮರ್ಥ್ಯ

ಆನೆ ತನ್ನ ಸೊಂಡಿಲಿನ ಮೂಲಕ ನೆಲ ಸ್ಪರ್ಶಿಸಿ ನೀರು ಎಲ್ಲಿ ಇದೆ ಎಂದು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಅದು ನೀರು ಮತ್ತು ಆಹಾರಕ್ಕಾಗಿ ಅತೀ ಹತ್ತಿರದ ದಾರಿಯನ್ನು ಹುಡುಕುತ್ತಿರುತ್ತದೆ. ಆನೆಗಳು ಒಂದು ಬಾರಿ ನೀರು, ಆಹಾರ ಹುಡುಕಿಕೊಂಡು ಹೋದಾಗ ಇವೆರಡೂ ಸಿಕ್ಕರೆ ಅದು ಮತ್ತೆ 100 ವರ್ಷ ಕಳೆದರೂ ಬೇರೆಲ್ಲೂ ನೀರು ಆಹಾರ ಸಿಗದಿದ್ದಾಗ ಆ ಜಾಗಕ್ಕೆ ಬಂದು ನೀರು ಯಾ ಆಹಾರ ತಿಂದು ಹೋಗುತ್ತದೆ. ಈ ರೀತಿಯಾಗಿ ಮಣ್ಣಗುಂಡಿಯಿಂದ ಸಕಲೇಶಪುರ ತನಕವೂ ಅಲ್ಲಲ್ಲಿ ಆನೆ ದಾಟು ಅಗತ್ಯ ಇದೆ. ಕಾಡು ಪ್ರಾಣಿಗಳಾದ ಜಿಂಕೆ, ಕಡವೆ, ಕಾಡುಕೋಣಗಳಿಗೂ ಇದರಿಂದ ಪ್ರಯೋಜನವಾಗಲಿದೆ ಎನ್ನುತ್ತಾರೆ ವನ್ಯಜೀವಿ ಪರಿಣತ ಭುವನೇಶ್ ಕೈಕಂಬ.

ಇನ್ನೂ ಮೂರು ಬೇಕಿತ್ತು

ಉಪ್ಪಿನಂಗಡಿ ವಲಯ ಅರಣ್ಯ ವ್ಯಾಪ್ತಿಯಲ್ಲಿ 3 ಯಾ 4 ಹಿಂಡುಗಳಾಗಿ ಆನೆಗಳಿವೆ. ಆದರೆ ಇವುಗಳ ಮೂಲ ಈ ಪ್ರದೇಶಗಳಾಗಿರುವುದಿಲ್ಲ. ಉಪ್ಪಿನಂಗಡಿ ವಲಯ ಅರಣ್ಯ ವ್ಯಾಪ್ತಿಯಲ್ಲಿ ಕಳೆಂಜ, ಶಿಶಿಲ, ರೆಖ್ಯ, ಪೋರ್ಕಳ, ಗುಂಡ್ಯ, ಶಿರಾಡಿ, ಅಡ್ಡಹೊಳೆ, ಬಂದಾರು ಹೀಗೆ ಈ ಪ್ರದೇಶದಲ್ಲಿ 10ಕ್ಕೂ ಅಧಿಕ ಆನೆಗಳು ಇವೆ. ಇನ್ನು ಪಂಜ, ಸುಬ್ರಹ್ಮಣ್ಯ ವಲಯ ಅರಣ್ಯ ವ್ಯಾಪ್ತಿಯಿಂದಲೂ ಇಲ್ಲಿಗೆ ಬಂದು ಹೋಗುತ್ತಿರುತ್ತವೆ. ಹೀಗಾಗಿ ಹೆದ್ದಾರಿಯಲ್ಲಿ 3 ಕಡೆ ಆನೆ ದಾಟು ಮಾಡಿರುವುದು ಕಡಿಮೆ ಆಗಿದ್ದು, ಇನ್ನೂ ಕನಿಷ್ಠ 3 ಆಗಬೇಕಾಗಿತ್ತು.

■ ರಾಘವೇಂದ್ರ, ಉಪ್ಪಿನಂಗಡಿ ವಲಯ ಅರಣ್ಯಾಧಿಕಾರಿ

ಶ್ಲಾಘನೀಯ ಕ್ರಮ

ಆನೆ ಸಹಿತ ಕಾಡು ಪ್ರಾಣಿಗಳು ನಾಡಿಗೆ ಲಗ್ಗೆ ಇರಿಸದಂತೆ ಕಾಡು ಸಂಪದ್ಭರಿತವಾಗಿರಬೇಕು. ಕಾಡಿನೊಳಗೆ ಯಥೇಚ್ಛ ಆಹಾರಗಳು ಅವುಗಳಿಗೆ ಲಭಿಸುವಂತಿರಬೇಕು. ನೀರಿನಾಶ್ರಯ ಮತ್ತು ಆಹಾರದ ನೆಲೆಗಳು ಬತ್ತಿ ಹೋಗದಂತೆ ನೋಡಿಕೊಳ್ಳುವ ಹೊಣೆ ನಾಗರಿಕ ಸಮಾಜ ಮತ್ತು ಇಲಾಖೆಯದ್ದಾಗಿದೆ. ಹೆದ್ದಾರಿ ಅಗಲೀಕರಣಗೊಂಡು ಹೆದ್ದಾರಿಯನ್ನು ದಾಟುವ ಸಂದರ್ಭದಲ್ಲಿ ಅಪಘಾತ ಸಂಭವಿಸುವುದನ್ನು ತಪ್ಪಿಸಲು ಆನೆ ದಾಟು ಯೋಜನೆಯನ್ನು ಅಳವಡಿಸಿರುವುದು ಶ್ಲಾಘನೀಯ. ಆದರೆ, ಅದು ಯಥೇಚ್ಛ ಪ್ರಮಾಣದಲ್ಲಿರಬೇಕಿತ್ತು.

■ ಕಂಗ್ನೆ ವಿಶ್ವನಾಥ ಶೆಟ್ಟಿ, ಪರಿಸರ ಪ್ರೇಮಿ, ಸಾಮಾಜಿಕ ಕಾರ್ಯಕರ್ತ

ಯುವಕರಿಗೆ ಕೌಶಲ ತರಬೇತಿ ಅನಿವಾರ್ಯ: ವಿವೇಕ್

ಶಿಕಾರಿಪುರ: ಯುವ ಪೀಳಿಗೆ ಕೇವಲ ಉನ್ನತ ಶೈಕ್ಷಣಿಕ ಫಲಿತಾಂಶಕ್ಕೆ ಮಾತ್ರ ತೃಪ್ತಿರಾಗದೆ ಎಲ್ಲ ಕ್ಷೇತ್ರ ಗಳಲ್ಲಿನ ವೇಗದ ಬದಲಾವಣೆಯ ಬಗ್ಗೆ ಸೂಕ್ಷ್ಮವಾಗಿ ಅವಲೋಕಿಸಿ ಪೂರಕವಾಗಿ ಕೌಶಲ್ಯಗಳನ್ನು ಪಡೆ ಯವ ಅನಿವಾರ್ಯತೆ ಇದೆ. ಬದ್ಧತೆ, ಆತ್ಮವಿಶ್ವಾಸ, ಸಮಯಪ್ರಜ್ಞೆಯ ಮನೋಭಾವವನ್ನು ಅಳವಡಿಸಿ ಕೊಂಡು ನಿರಂತರವಾಗಿ ಪ್ರಯತ್ನಿಸಬೇಕು ಎಂದು ಮೂಡಬಿದರೆ ಆಳ್ವಾಸ್ ಫೌಂಡೇಶನ್ ಟ್ರಸ್ಟಿ ವಿವೇಕ್ ಆಳ್ವ ಸಲಹೆ ನೀಡಿದರು

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಆವರಣ ದಲ್ಲಿ ಸತತ 2 ದಿನಗಳ ಕಾಲ ನಡೆದ ಬೃಹತ್ ಉದ್ಯೋಗ ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸ್ಥಳೀಯ ಯುವಕ ಯುವತಿಯರ ಮತ್ತು ಪೋಷಕರ ಕನಸು ನನಸಾಗಿಸುವಲ್ಲಿ ಉದ್ಯೋಗ ಮೇಳ ಯಶಸ್ವಿ ಯಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಗ್ರಾಮೀಣ ಪ್ರದೇಶ ಹೆಚ್ಚಿರುವ ತಾಲೂಕಿನಲ್ಲಿನ ಉದ್ಯೋಗಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮೇಳದಲ್ಲಿ ಭಾಗವಹಿಸಿ 83ಕ್ಕಿಂತ ಹೆಚ್ಚಿನ ಕಂಪನಿಗಳ ಸಂದರ್ಶನ ಎದುರಿಸಿ ಧನಾತ್ಮಕ ಅನುಭವ ಗಳನ್ನು ಹೊತ್ತು ಉದ್ಯೋಗ ಭರವಸೆಯ ಆತ್ಮವಿಶ್ವಾಸದಲ್ಲಿದ್ದಾರೆ. ಸಂಸದ ರಾಘವೇಂದ್ರ, ಶಾಸಕ ವಿಜಯೇಂದ್ರ ನೇತೃತ್ವದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಜನ್ಮದಿನದ ಅಂಗವಾಗಿ ನಡೆದ ಮೇಳದ ಯಶಸ್ಸಿಗೆ ಕಳೆದ 2 ತಿಂಗಳಿನಿಂದ ಉದ್ಯೋಗಾಕಾಂಕ್ಷಿಗಳಿಗೆ ಶಿರಾಳಕೊಪ್ಪ ಮತ್ತು ಶಿಕಾರಿಪುರದಲ್ಲಿ ಐದು ಹಂತದಲ್ಲಿ ಮಾಹಿತಿ ಶಿಬಿರ ಆಯೋಜಿಸಿ ಆತ್ಮವಿಶ್ವಾಸವನ್ನು ತುಂಬುವ ಮೂಲಕ 2 ಸಾವಿರಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಸೂಕ್ತ ರೀತಿಯ ಮಾರ್ಗದರ್ಶನದಿಂದ ಮೇಳದಲ್ಲಿ ಭಾಗವಹಿಸಲು ಪ್ರೇರೇಪಣೆ ದೊರೆತಿತ್ತು ಎಂದು ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ ಒಟ್ಟು 1363 ಉದ್ಯೋಗಾಕಾಂಕ್ಷಿಗಳು ಸಂದರ್ಶನ ಎದುರಿಸಿ 1181 ಅಭ್ಯರ್ಥಿ ವಿವಿಧ ಕಂಪನಿಯ ಆಯ್ಕೆ ಹಂತಕ್ಕೆ ಪರಿಗಣಿಸಿ ಅಂತಿಮ ಹಂತದಲ್ಲಿ 351 ಅಭ್ಯರ್ಥಿಗಳಿಗೆ ನೇಮಕಾತಿ ಅಂತಿಮಗೊಳಿಸಲಾಗಿದೆ ಎಂದ ಅವರು, ಮೇಳ ಹೆಚ್ಚಿನ ಯುವಕ ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಭರವಸೆಯನ್ನು ನೀಡುತ್ತದೆ ಎಂದು ಆಶಯ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಸಂಸ್ಥೆ ಅಧ್ಯಕ್ಷ ಶಿವಕುಮಾರ್, ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ, ಶ್ರವಣ, ಬಸವರಾಜ ಮಠದ್, ಪ್ರಾಚಾರ್ಯ ಡಾ.ರವೀಂದ್ರ, ಡಾ.ವೀರೇಂದ್ರ, ವಿದ್ಯಾಶಂಕರ್, ವಿಶ್ವನಾಥ, ಪ್ರಶಾಂತ್ ಕುಬಸದ್ ಇತರರು ಉಪಸ್ಥಿತರಿದ್ದರು.



ನಿರಂತರ ಪರಿಶ್ರಮ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಗುರುತಿಸಿಕೊಂಡ ಆಳ್ವಾಸ್ ಶಿಕ್ಷಣ ಸಂಸ್ಥೆ ನಮ್ಮ ಸಂಸ್ಥೆಯೊಂದಿಗೆ ಕೈ ಜೋಡಿಸಿ ಕಳೆದ ಎರಡೂವರೆ ತಿಂಗಳಿನಿಂದ ವಿವೇಕ್ ಆಳ್ವಾ ನಿರಂತರ ಪರಿಶ್ರಮ ಮತ್ತು ಸತತ ಮಾರ್ಗದರ್ಶನದಿಂದ ಮೇಳ ಯಶಸ್ವಿಯಾಗಿದೆ. ಇದರಿಂದಾಗಿ ಸ್ಥಳೀಯ ಹಲವು ಯುವಕ ಯುವತಿಯರಿಗೆ ಉದ್ಯೋಗ ದೊರೆಯುವಂತಾಗಿದೆ ಎಂದು ಪ್ರಾಚಾರ್ಯ ಡಾ.ಶಿವಕುಮಾರ್ ತಿಳಿಸಿದರು.

ರಾಮ ಬಾಣ



ಕಿಡಿ ನುಡಿ

▪ ವಾಸುದೇವರಾವ್ ಕಕ್ಕೆನೇಜಿ

ನಾವು ಮಾತನಾಡುವಾಗ ಇಂಗ್ಲಿಷ್ ಬೆರೆಸುವುದೇ ದೊಡ್ಡ ಗೌರವ ಎಂದುಕೊಳ್ಳುತ್ತಿರುವುದು ವಿಷಾದದ ಸಂಗತಿ
- ಡಾ.ಬಾಲಮುಕುಂದ ಪಾಂಡೆ

- ಇಂಗ್ಲಿಷರು ಹೋದರೂ ಇಂಗ್ಲಿಷರ ಭಾಷೆ, ವೇಷ, ಹುಟ್ಟುಹಬ್ಬಕ್ಕೆ ದೀಪ ಬೆಳಗಿಸುವ ಬದಲು ದೀಪ ಆರಿಸುವಂತಹ ಆಚರಣೆಗಳು ಆದರ್ಶ ಅಂತ ಆಗುತ್ತಿವೆ. ಇಂಗ್ಲಿಷರು ಇನ್ನೂ ಇರುತ್ತಿದ್ದರೆ ನಿಜವಾಗಿಯೂ ನಮ್ಮ ಮಂದಿ ಇನ್ನೂ ಬಹಳ ಬಹಳ ಮುಂದುವರಿದವರಾಗಿರಬಹುದಿತ್ತು!

ದಿನ ಭವಿಷ್ಯ

ಮೇಷ ಬಂಧುಗಳ ಅನಿರೀಕ್ಷಿತ ಭೇಟಿ. ಬಾಕಿ ಇರುವ ಹೊಣೆಗಾರಿಕೆ ಪೂರೈಸಿ. ಕೌಟುಂಬಿಕ ಪರಿಸರ ಉಲ್ಲಾಸಕಾರಿ. ಶಾಪಿಂಗ್ ಸಂಭ್ರಮ.

ವೃಷಭ ಸಂಬಂಧದಲ್ಲಿ ಮಹತ್ತರ ತಿರುವು. ಆತ್ಮೀಯ ಸಂಬಂಧ ಹೊಸ ಆಯಾಮ ಪಡೆದೀತು. ಮಾನಸಿಕ ಉದ್ವಿಗ್ನತೆ ಶಮನ. ನಿರಾಳತೆ.

ಮಿಥುನ ಮುಕ್ತವಾಗಿ ಮಾತಾಡಿ, ಸಂಬಂಧ ಹಗುರಗೊಳಿಸಿ. ಇದು ನಿಮಗೆ ಇಂದಿನ ಸಲಹೆ. ಅನಾರೋಗ್ಯ ಇದ್ದರೆ ಕಡೆಗಣಿಸಬೇಡಿ.

ಕಟಕ ನಿಮ್ಮ ಪೂರ್ಣ ಪ್ರಯತ್ನ ಹಾಕಿ, ಯಶಸ್ಸು ಸಿಗುವುದನ್ನು ಕಾಣಿರಿ. ಅನ್ಯರ ಟೀಕೆಗೆ ಗಮನ ಕೊಡಬೇಡಿ. ಬಾಂಧವ್ಯ ಕೆಡದಂತೆ ಎಚ್ಚರ ವಹಿಸಿ.

ಸಿಂಹ ಸಂತೋಷವೆಂಬುದು ಮನಸ್ಸಿನ ಸ್ಥಿತಿ. ಅದನ್ನು ಬೇರೆಲ್ಲೋ ಹುಡುಕಬೇಡಿ. ದ್ವೇಷ, ವೈರ ಬಿಟ್ಟು ಹೊಂದಾಣಿಕೆಯ ದಾರಿ ಹಿಡಿಯಿರಿ. ಧನವ್ಯಯ.

ಕನ್ಯಾ ನಿಮ್ಮ ಅದೃಷ್ಟದ ದಿನ. ಎಲ್ಲ ಕಾರ್ಯದಲ್ಲೂ ಯಶಸ್ಸು. ಇಷ್ಟಾರ್ಥ ಪೂರೈಕೆ. ಬಂಧುವಿನಿಂದ ಶುಭ ಸುದ್ದಿ ಕೇಳುವಿರಿ. ಧನಪ್ರಾಪ್ತಿಯಾದೀತು.

ತುಲಾ ವೈರುಧ್ಯಮಯ ಭಾವಗಳ ಸಂಘರ್ಷ. ಹೆಚ್ಚುವರಿ ಹೊಣೆ. ತಾಳ್ಮೆ ಅವಶ್ಯ. ಚಿಂತನೆಯಲ್ಲಿ ಸ್ಪಷ್ಟತೆಯಿರಲಿ. ಮಾತು ಹದ ಮೀರದಿರಲಿ.

ವೃಶ್ಚಿಕ ದಂಪತಿಗೆ ಶುಭ ಬೆಳವಣಿಗೆ. ಹಣಕಾಸು ಸ್ಥಿರ. ಆರೋಗ್ಯ ಚಿಂತೆ ಪರಿಹಾರ. ಆಪ್ತರ ಜತೆ ಪ್ರವಾಸದ ಅವಕಾಶ. ಆದಾಯದಲ್ಲಿ ಉನ್ನತಿ.

ಧನು ಯಾವುದೇ ಕೆಲಸ ಇಂದು ವೈಫಲ್ಯ ಕಾಣದು. ಆದರೆ ಕೌಟುಂಬಿಕ ಸೌಹಾರ್ದತೆಗೆ ಭಂಗ ಬಂದೀತು. ದುಡುಕಿನ ವರ್ತನೆ ನಿವಾರಿಸಿ.

ಮಕರ ರಹಸ್ಯ ವೈರಿಗಳು ನಿಮ್ಮ ಬೆನ್ನ ಹಿಂದೆ ಇದ್ದಾರೆ. ಅವರ ಹಿಡಿತಕ್ಕೆ ಸಿಗದಂತೆ ಎಚ್ಚರ ವಹಿಸಿ. ಭಾವನೆಗಳ ಸಂಘರ್ಷ ಎದುರಿಸುವಿರಿ. ಆರ್ಥಿಕ ಬಿಕ್ಕಟ್ಟು.

ಕುಂಭ ಕೆಲಸದ ಒತ್ತಡ ಇಂದು ಕಡಿಮೆ ಆಗಲಿದೆ. ಆ ಮೂಲಕ ಮನಸ್ಸಿಗೆ ನಿರಾಳತೆ. ಬಾಂಧವ್ಯದಲ್ಲಿ ಸಣ್ಣ ಕುಂದು ಕಂಡೀತು. ಅದನ್ನು ನಿರ್ಲಕ್ಷಿಸಿ.

ಮೀನ ಕೆಲಸದಲ್ಲಿ ಪೂರ್ಣ ತಲ್ಲೀನ. ಭವಿಷ್ಯದ ಗುರಿಯತ್ತ ಹೆಚ್ಚು ಗಮನ ಕೊಡಿ. ಕುಟುಂಬದ ಸಂತೋಷಕ್ಕೆ ಹೆಚ್ಚು ಹಣ ವ್ಯಯಿಸುವಿರಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 6,1,8,3

ಉನ್ನತ ಶಿಕ್ಷಣವು ತಾಂತ್ರಿಕ ಬದಲಾವಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪಿಂಚಣಿ ಸಮಸ್ಯೆಗೆ ಸಮಿತಿ ರಚನೆ

ಬೆಂಗಳೂರು: ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಗಿದೆ. ಅದಲ್ಲದೇ, ಪಿಂಚಣಿ ಸಮಸ್ಯೆ ಕುರಿತು ಪ್ರಸ್ತಾಪಿಸಿದ್ದಾರೆ. ಈ ಕುರಿತು ಉನ್ನತ ಶಿಕ್ಷಣ ಸಚಿವರ ಜತೆ ಚರ್ಚಿಸಿದ್ದು, ಈ ಸಮಸ್ಯೆ ಬಗೆಹರಿಸಲು ಸಮಿತಿ ರಚಿಸಲು ಸಲಹೆ ನೀಡಿದ್ದೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಲೋಕಭವನ, ಉನ್ನತ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ವತಿಯಿಂದ ಶನಿವಾರ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ -2026 ರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಉನ್ನತ ಶಿಕ್ಷಣವು ತಾಂತ್ರಿಕ ಬದಲಾವಣೆ ಮತ್ತು ಜಾಗತಿಕ ಸ್ಪರ್ಧೆಯ ಮಟ್ಟದಲ್ಲಿದೆ. ನಮ್ಮ ಸಂಸ್ಥೆಗಳು ಕೇವಲ ಪದವಿ ನೀಡುವುದನ್ನು ಗುರಿಯನ್ನಾಗಿಟ್ಟುಕೊಳ್ಳಬಾರದು. ಕಲಿಕೆಯಲ್ಲಿ ನಾವೀನ್ಯತೆ, ವಿಮರ್ಶಾತ್ಮಕ ಚಿಂತನೆ ಮತ್ತು ಉದ್ಯೋಗಾವಕಾಶವನ್ನು ಬೆಳೆಸಬೇಕಾಗಿದೆ.

ಈ ನಿಟ್ಟಿನಲ್ಲಿ ನಾವು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಬೆಂಬಲದೊಂದಿಗೆ 2,500 ಕೋಟಿ ರೂ. ವೆಚ್ಚದ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನು ಜಾರಿಗೆ ತರುತ್ತಿದ್ದೇವೆ. ಇದು ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ ಸಂಶೋಧನೆಗೆ ಉತ್ತೇಜನ ನೀಡುತ್ತದೆ ಎಂದು ತಿಳಿಸಿದರು.

ಕುಲಪತಿ ಯುವಜನತೆಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹೆಚ್ಚು ನಿಗಾವಹಿಸಬೇಕು. ಪದವಿ ಪ್ರಮಾಣ ಪತ್ರ ನೀಡುವುದು ಶಿಕ್ಷಣವಾಗುವುದಿಲ್ಲ. ಸಮಾಜದಲ್ಲಿ ಉತ್ತಮ ನಾಗಕರಿಕರನ್ನಾಗಿ ಮಾಡುವುದು ನಿಜವಾದ ಶಿಕ್ಷಣ. ಯುವಜನತೆಯಲ್ಲಿ ವೈಜ್ಞಾನಿಕ ಮತ್ತು ವೈಚಾರಿಕತೆ ಮನಸ್ಥಿತಿಯನ್ನು ಬೆಳೆಸಬೇಕು ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಪ್ರಕ್ರಿಯೆ ಆರಂಭ: ಕಳೆದ 10 ವರ್ಷಗಳಿಂದ ಕಾಲ-ಕಾಲಕ್ಕೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಪ್ರಾಧ್ಯಾಪಕರ ನೇಮಕಾತಿ ಸರಿಯಾಗಿ ಆಗದಿರುವುದರಿಂದ ಶಿಕ್ಷಕರ ಕೊರತೆ ಕಾಡುತ್ತಿವೆ. ರಾಜ್ಯದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಶೇ. 60 ರಿಂದ 70 ರಷ್ಟು ಶಿಕ್ಷಕರ ಹುದ್ದೆಗಳು ಖಾಲಿಯಿರುವುದು ಸರ್ಕಾರದ ಗಮನದಲ್ಲಿದೆ. ಈ ಹಿನ್ನೆಲೆ ಸರ್ಕಾರಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ಖಾಲಿಯಿರುವ 2 ಸಾವಿರ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದ್ದೇವೆ ಎಂದು ವಿವರಿಸಿದರು. ಡಿಸಿಎಂ ಡಿ.ಕೆ. ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕಾರ್ಯದರ್ಶಿ ಖುಷ್ಬೂ ಚೌಧರಿ, ಕಾಲೇಜು, ತಾಂತ್ರಿಕ ಶಿಕ್ಷಣ ಇಲಾಖೆಯ ಆಯುಕ್ತೆ ಮಂಜುಶ್ರೀ, ಪ್ರೊ. ಎಸ್.ಆರ್. ನಿರಂಜನ್ ಇದ್ದರು.



ರಾಜ್ಯದ ವಿವಿಗಳು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವ ಸಾಮರ್ಥ್ಯ ಹೊಂದಬೇಕು. ಹಣಕಾಸಿನ ಸವಾಲುಗಳಿದ್ದರೂ ಸಂಪನ್ಮೂಲ ಕ್ರೋಢಿಕರಣದ ಬಗ್ಗೆ ಸ್ಪಷ್ಟ ದೃಷ್ಟಿಕೋನ ಹೊಂದಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಕುಲಪತಿಗಳು ಮುಂದಾಗಬೇಕು. ಲಭ್ಯವಿರುವ ಸಿಎಸ್‌ಆರ್ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.
■ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

ಹೊಸ ಉದ್ಯೋಗಾಧಾರಿತ ಕೋರ್ಸ್ ಪರಿಚಯಿಸುವುದು ಅಗತ್ಯ

ವಿಶ್ವವಿದ್ಯಾಲಯಗಳನ್ನು ಅಭಿವೃದ್ಧಿಪಡಿಸಲು ಕುಲಪತಿಗಳು ಮತ್ತು ಕುಲಸಚಿವರ ನಡುವೆ ಉತ್ತಮ ಸಮನ್ವಯದ ಅವಶ್ಯಕತೆಯಿದ್ದು, ಶೈಕ್ಷಣಿಕ ಸಿಬ್ಬಂದಿಯನ್ನು ಸಕಾಲಿಕವಾಗಿ ಮೇಲ್ದರ್ಜೆಗೇರಿಸುವ ಅಗತ್ಯವಿದೆ. ಪ್ರಸ್ತುತ ಅವಶ್ಯಕತೆಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ವಿದ್ಯಾರ್ಥಿಗಳನ್ನು ಹೆಚ್ಚು-ಹೆಚ್ಚು ಉದ್ಯೋಗದೊಂದಿಗೆ ಸಂಪರ್ಕಿಸುವ ಅವಶ್ಯಕತೆಯಿದೆ. ಪ್ರಸ್ತುತ ಅವಶ್ಯಕತೆಗೆ ಅನುಗುಣವಾಗಿ ಹೊಸ ಉದ್ಯೋಗ ಆಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸುವ ಅವಶ್ಯಕತೆಯಿದ್ದು, ನಮ್ಮ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಕ್ಯಾಂಪಸ್ ಪರಿಸರವನ್ನು ಸುಧಾರಣೆಯಾಗಬೇಕಾಗಿದೆ. ಎಂದು ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು ಸಲಹೆ ನೀಡಿದರು.

ವೈದ್ಯ ಲೋಕದಲ್ಲಿರಲಿ ಮಾನವೀಯ ಮುಖ

ಪುಟ ೧➡ **ರೋಗ ತಡೆಗಟ್ಟಲು ಆದ್ಯತೆ ನೀಡಿ:** ಆರೋಗ್ಯ ಇಲಾಖೆಯ ಕೆಲಸ ಕಾರ್ಯಗಳಲ್ಲಿ ಜಾತಿಧರ್ಮಗಳ ಭೇದಗಳನ್ನು ಮೀರಿ, ಮಾನವೀಯತೆಯಿಂದ ಸೇವೆ ಸಲ್ಲಿಸುವುದು ಮುಖ್ಯ. ರೋಗಿಗಳಿಗೆ ಚಿಕಿತ್ಸೆ ವೇಳೆ ಅಗತ್ಯವಿರುವ ರಕ್ತ ಪಡೆಯಲು ಯಾವುದೇ ಜಾತಿ, ಧರ್ಮ ಪರಿಗಣಿಸುವುದಿಲ್ಲ. ಆದರೆ ಜನರು ಗುಣಮುಖರಾದಂತಹ ತಕ್ಷಣ ಪುನಃ ಜಾತಿ, ಧರ್ಮಗಳ ಸುಳಿಯಲ್ಲಿ ಬೀಳುತ್ತಾರೆ. ರೋಗ ತಡೆಗಟ್ಟುವುದಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಈ ದಿಸೆಯಲ್ಲಿ ಆರೋಗ್ಯ ಇಲಾಖೆ ಕಾರ್ಯಪ್ರವೃತ್ತರಾಗಬೇಕು. ರಾಜ್ಯದ ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಸರ್ಕಾರ ಕಾರ್ಯಗತಗೊಳಿಸಲಾಗುತ್ತಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

970 ಅರ್ಹ ಅರೆ- ವೈದ್ಯ ಸಿಬ್ಬಂದಿಗೆ ನೇಮಕಾತಿ ಪತ್ರ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದ 320 ಮತ್ತು ರಾಜ್ಯದ ಉಳಿದ ಭಾಗದ 650, ಒಟ್ಟು 970 ಅರ್ಹ ಅರೆ-ವೈದ್ಯಕೀಯ ಹುದ್ದೆಗಳಿಗೆ ಖಾಯಂ ನೇಮಕಾತಿ ಪತ್ರ ನೀಡುತ್ತಿದ್ದೇವೆ. 77 ಡ್ರಗ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾದವರಿಗೆ ನೇಮಕಾತಿ ಪತ್ರ ನೀಡುತ್ತಿದ್ದೇವೆ. 223 ಡಿ ಫಾರ್ಮಾ ವಿದ್ಯಾರ್ಥಿಗಳನ್ನು ಅಪ್ರೆಂಟಿಸ್ ಆಗಿ ತೆಗೆದುಕೊಂಡಿದ್ದೇವೆ. ಇನ್ನೂ 700 ವಿದ್ಯಾರ್ಥಿಗಳನ್ನು ನೇಮಕ ಮಾಡಲಾಗುವುದು. ಇದರಿಂದ ಅವರಿಗೆ ವೃತ್ತಿ ಅನುಭವದ ಜತೆ, ಪ್ರತಿ ತಿಂಗಳು 8 ಸಾವಿರ ವೇತನ ನೀಡುತ್ತೇವೆ. ಇದು ದೇಶದಲ್ಲೇ ಮೊದಲು. ಒಂದೆರಡು ತಿಂಗಳಲ್ಲಿ ಸುಮಾರು 220 ತಜ್ಞ ವೈದ್ಯರ ನೇಮಕಾತಿಯಾಗಲಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿಯೇ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆ ದೊರೆಯಬೇಕು ಎನ್ನುವುದು ನಮ್ಮ ಉದ್ದೇಶ ಎಂದು ಅಭಿಪ್ರಾಯಪಟ್ಟರು.

ಭ್ರಷ್ಟಾಚಾರ ತಡೆಗೆ ಕೌನ್ಸೆಲಿಂಗ್

ಎಲ್ಲ ನೇಮಕಾತಿಗಳನ್ನು ಕೌನ್ಸೆಲಿಂಗ್ ಮೂಲಕ ಮಾಡುತ್ತಿದ್ದು, ಭ್ರಷ್ಟಾಚಾರ ತಡೆಯಲು ಸಾಧ್ಯವಾಗುತ್ತಿದೆ. 5,700 ಹುದ್ದೆಗಳನ್ನು ವೈದ್ಯರನ್ನು ಸೇರಿದಂತೆ ಇತರೆ ಸಿಬ್ಬಂದಿಗಳನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲಾಗಿದೆ. ನೇಮಕಾತಿ ಹಾಗೂ ವರ್ಗಾವಣೆಗಳಲ್ಲಿ ಭ್ರಷ್ಟಾಚಾರ ತಡೆಯುವುದು ಸರ್ಕಾರದ ಆಶಯ. ವರ್ಗಾವಣೆಯಲ್ಲಿ ಏಜೆಂಟರುಗಳ ಹಾವಳಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ನೌಕರರು ಇದಕ್ಕೆ ಬಲಿಯಾಗಬಾರದು ಎಂದು ಸಿದ್ದರಾಮಯ್ಯ ತಿಳಿಸಿದರು.

ಪ್ರತಿಭಟನೆ; ಕೈಗೆ ಜೆನ್ ಝಿ ಸ್ಫೂರ್ತಿ

ಪುಟ ೧➡ ಬಂಧಿತರನ್ನು ಕಸ್ಟಡಿಗೆ ಒಪ್ಪಿಸುವಂತೆ ಪಟಿಯಾಲಾ ಹೌಸ್ ಕೋರ್ಟ್‌ನಲ್ಲಿ ಮನವಿ ಮಾಡಿದ ದಿಲ್ಲಿ ಪೊಲೀಸರು, ಇದು ಸಣ್ಣ ಪ್ರಕರಣವಲ್ಲ. ನೇಪಾಳದ ಜೆನ್ ಝಿ ದಂಗೆಯಿಂದ ಸ್ಫೂರ್ತಿ ಪಡೆದು ನಡೆಸಿದ ದೊಡ್ಡ ಷಡ್ಯಂತ್ರದ ಭಾಗವಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಪ್ರತಿಭಟನಾಕಾರರಿಗೆ ಹಣಕಾಸಿನ ಸಹಾಯ, ಪ್ರತಿಭಟನೆಯಲ್ಲಿ ಬಳಸಿದ ಟಿ-ಶರ್ಟ್ ಪ್ರಿಂಟ್ ಮಾಡಲು ಹಣಕಾಸಿನ ನೆರವು ಯಾರು ನೀಡಿದ್ದಾರೆಂಬ ಮಾಹಿತಿ ಕಲೆಹಾಕಬೇಕಿದ್ದು, ತನಿಖೆ ನಡೆಸಲಾಗುವುದು ಎಂದು ಪಟಿಯಾಲಾ ನ್ಯಾಯಾಲಯಕ್ಕೆ ಪೊಲೀಸರು ತಿಳಿಸಿದ್ದಾರೆ. ಪಿಎಂ ಈಸ್ ಕಾಂಪ್ರಮೈಸ್ಡ್ (ರಾಜಿಯಾಗಿದ್ದಾರೆ), ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಮತ್ತು ಎಪ್‌ಸ್ಟೀನ್ ಫೈಲ್ಸ್ ಇತ್ಯಾದಿ ಬರಹಗಳೊಂದಿಗೆ ಪ್ರಿಂಟ್ ಮಾಡಿದ್ದ ಟಿ-ಶರ್ಟ್‌ಗಳನ್ನು ಯುವ ಕಾಂಗ್ರೆಸಿಗರು ಪ್ರದರ್ಶಿಸಿದ್ದರು.

5 ದಿನಗಳ ಕಸ್ಟಡಿ ಸೇರಿದ ನಾಲ್ವರು

ಪುಟ ೧➡ ಐವೈಸಿ ರಾಷ್ಟ್ರೀಯ ಕಾರ್ಯದರ್ಶಿ ಕೃಷ್ಣ ಹರಿ (ಬಿಹಾರ), ಐವೈಸಿ ರಾಜ್ಯ ಕಾರ್ಯದರ್ಶಿ ಕುಂದನ್ ಯಾದವ್ (ಬಿಹಾರ), ಐವೈಸಿ ರಾಜ್ಯಾಧ್ಯಕ್ಷ ಅಜಯ್ ಕುಮಾರ್ (ಉತ್ತರಪ್ರದೇಶ) ಮತ್ತು ನರಸಿಂಹ ಯಾದವ್ (ತೆಲಂಗಾಣ) ನಾಲ್ವರು ಆರೋಪಿಗಳೆಂದು ಗುರುತಿಸಲಾಗಿದೆ. ಇವರ ಮೊಬೈಲ್ ಫೋನ್‌ಗಳನ್ನು ವಶಪಡಿಸಲಾಗಿದೆ. ಆರೋಪ ಸಾಬೀತಾದರೆ 7 ವರ್ಷ ಜೈಲು ಶಿಕ್ಷೆಯಾಗಲಿದೆ.

ಟ್ರಂಪ್ ಸುಂಕ 15ಕ್ಕೇರಿಕೆ!

ಪುಟ ೧➡ ಸುಪ್ರೀಂ ತೀರ್ಪಿನ ಬಗ್ಗೆ ಟ್ರಂಪ್ ಭಾರೀ ಹತಾಶೆ ವ್ಯಕ್ತಪಡಿಸಿದ್ದಾರೆ.

ಶೇ.7 ಸುಂಕ ಇಳಿಸಿದ್ದ ಟ್ರಂಪ್: ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಹೇರಿದ್ದ ಶೇ.50 ಸುಂಕವನ್ನು ಅಮೆರಿಕ ಶೇ.18ಕ್ಕೆ ಇಳಿಕೆ ಮಾಡಿತ್ತು. ರಷ್ಯಾ ಕಚ್ಚಾ ತೈಲ ಖರೀದಿ ನಿಲ್ಲಿಸುವಂತೆ ಕೋರಿ ಭಾರತೀಯ ಸರಕುಗಳ ಮೇಲೆ ಹೇರಿದ್ದ ಶೇ.25 ದಂಡದಿಂದ ಸಂಪೂರ್ಣ ವಿನಾಯಿತಿ ಘೋಷಿಸಿದ್ದರು. ಶೇ.25 ಪ್ರತಿಸುಂಕವನ್ನು ಶೇ.18ಕ್ಕೆ ಕಡಿತಗೊಳಿಸಿದ್ದರು. ಭಾರತದೊಂದಿಗಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ಉದ್ದೇಶದಿಂದ ಟ್ರಂಪ್ ಭಾರತದ ಮೇಲಿನ ಸುಂಕ ಕಡಿತಗೊಳಿಸಿದ್ದರು.

ರಿಪಬ್ಲಿಕನ್ನರಿಂದ ಸ್ವಾಗತ: ಅಮೆರಿಕದ ಸುಪ್ರೀಂ ಕೋರ್ಟ್ ತೀರ್ಪನ್ನು ಹಲವು ರಿಪಬ್ಲಿಕನ್ ಪಕ್ಷದ ನಾಯಕರೇ ಸ್ವಾಗತಿಸಿದ್ದು, ಅಧ್ಯಕ್ಷ ಟ್ರಂಪ್‌ರಿಗೆ ಭಾರೀ ಹಿನ್ನಡೆಯಾಗಿದೆ.

ಎಲ್ಲವೂ ಗಮನದಲ್ಲಿದೆ: ಭಾರತ ಪ್ರತಿಕ್ರಿಯೆ

ಪುಟ ೧➡ ಟ್ರಂಪ್ ಹೇರಿರುವ ತೆರಿಗೆ ಬಗ್ಗೆ ಅಮೆರಿಕ ಸುಪ್ರೀಂಕೋರ್ಟ್ ಶುಕ್ರವಾರ ನೀಡಿರುವ ತೀರ್ಪನ್ನು ಗಮನಿಸಿದ್ದೇವೆ. ತೀರ್ಪಿನ ಬೆನ್ನಲ್ಲೇ ಅಧ್ಯಕ್ಷ ಟ್ರಂಪ್ ಸುದ್ದಿಗೋಷ್ಠಿ ಕರೆದಿದ್ದಾರೆ. ಟ್ರಂಪ್ ಆಡಳಿತ ಕೆಲವು ಕ್ರಮಗಳನ್ನು ಘೋಷಿಸಿದೆ ಕೂಡ. ಇವೆಲ್ಲ ವಿದ್ಯಮಾನಗಳು ಸೃಷ್ಟಿಸಲಿರುವ ತೊಡಕುಗಳ ಬಗ್ಗೆ ನಾವು ಅಧ್ಯಯನ ನಡೆಸುತ್ತಿದ್ದೇವೆಂದು ವಾಣಿಜ್ಯ ಖಾತೆ ಲಿಖಿತ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ದೇಗುಲಗಳಲ್ಲಿ ವಿಡಿಯೋ ನಿರ್ಬಂಧ

ಪುಟ ೧➡ ಇದಕ್ಕೆ ಕಡಿವಾಣ ಹಾಕಿ ದೇವಾಲಯದ ಪಾವಿತ್ರ್ಯ ಕಾಪಾಡುವ ನಿಟ್ಟಿನಲ್ಲಿ ಮುಜರಾಯಿ ಆಡಳಿತ ಮಂಡಳಿ ಬಿಗಿ ಕ್ರಮದೊಂದಿಗೆ ಚಿತ್ರೀಕರಣಕ್ಕೆ ಪೂರ್ವಾನುಮತಿ ಕಡ್ಡಾಯಗೊಳಿಸಿದೆ. ನಿಯಮ ಉಲ್ಲಂಘಿಸಿ ಚಿತ್ರೀಕರಣವಾದಲ್ಲಿ ಕಾನೂನು ಕ್ರಮವಾಗಲಿದೆ. ಇದಕ್ಕೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಹೊಣೆಯಾಗಲಿದ್ದಾರೆ ಎಂದು ಎಚ್ಚರಿಸಿದರು.

ದೇಗುಲದ ಪಾವಿತ್ರ್ಯ ರಕ್ಷಣೆ ಅವಶ್ಯ: ಭಕ್ತಾದಿಗಳು ಮೊಬೈಲ್‌ಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ರೀಲ್ ಮಾಡುವುದು, ಯೂಟ್ಯೂಬ್ ಚಾನೆಲ್‌ಗಳು ಹಾಗೂ ಇತರೆ ಕೆಲವರು ವಾಣಿಜ್ಯ ಉದ್ದೇಶಗಳಿಗೆ ದೇವಾಲಯದ ಪಾವಿತ್ರ್ಯ ಹಾಳು ಮಾಡುವ ಹಾಗೂ ಅವುಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ರೀತಿ ಬಿಂಬಿಸಲಾಗುತ್ತಿದೆ.

ಶುಲ್ಕ ಎಷ್ಟು ನಿಗದಿ ಪುಟ ೧➡ ಹಾಗೂ ನ್ಯೂಸ್ ಚಾನೆಲ್‌ಗಳಲ್ಲಿ ಕ್ಷೇತ್ರದ ಮಹಿಮೆ ಸಾರುವ, ಐದು ನಿಮಿಷಗಳ ಅವಧಿ ಮೀರದ ಚಿತ್ರೀಕರಣಕ್ಕಾಗಿ 250 ರೂ. ಹಾಗೂ 5 ನಿಮಿಷಗಳ ನಂತರದ ಚಿತ್ರೀಕರಣಕ್ಕೆ ಗಂಟೆಗಳ ಆಧಾರದಲ್ಲಿ ಶುಲ್ಕ ನಿಗದಿಪಡಿಸಲಾಗಿದೆ. ಸಂಬಂಧಿಸಿದವರು ದೇವಾಲಯದ ಹೆಸರಿನಲ್ಲಿ ಬೇಡಿಕೆ ಹುಂಡಿ ಶುಲ್ಕ ಪಾವತಿಸಿ, ಅನುಮತಿ ಪತ್ರವನ್ನು ಮುಜರಾಯಿ ಇಲಾಖೆಯ ಪ್ರಧಾನ ಕಚೇರಿಯಲ್ಲಿ ನೀಡಬೇಕು. ಇಲಾಖೆಯಿಂದಲೇ ಸಂಬಂಧಿಸಿದ ದೇವಾಲಯಗಳಿಗೆ ಸೂಚನೆ ಹೋಗುತ್ತದೆ. ಆಗ ಆ ದೇವಾಲಯಗಳ ಆಡಳಿತ ಮಂಡಳಿಯವರು ಭಕ್ತರಿಗೆ ತೊಂದರೆಯಾಗದಂತೆ ಶೂಟಿಂಗ್‌ಗೆ ಅವಕಾಶ ನೀಡುತ್ತಾರೆ. ಆದರೆ ಕ್ಷೇತ್ರದ ಮಹಿಮೆಯನ್ನು ಸಾರುವ ಸಾಕ್ಷ್ಯಚಿತ್ರವನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಬಾರದು ಎಂದು ಸ್ಪಷ್ಟಪಡಿಸಲಾಗಿದೆ.

ಶಾಸಕ ಚಂದ್ರು ಲೋಕಾ ಬಲೆಗೆ

ಪುಟ ೧➡ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಶಾಸಕರ ಆಪ್ತ ಸಹಾಯಕ ಗುರು ನಾಯಕ್ 50 ಸಾವಿರ ನಗದು ಇದ್ದ ಕವರ್‌ನ್ನು ಆಸ್ಪತ್ರೆ ಹಿಂಭಾಗದ ಖಾಸಗಿ ಶಾಲೆಯೊಂದರ ಕಾಂಪೌಂಡ್ ಒಳಕ್ಕೆ ಎಸೆದ ಘಟನೆಯೂ ನಡೆಯಿತು. ಕವರ್‌ನಲ್ಲಿದ್ದ 50 ಸಾವಿರ ಹಾಗೂ ಆಸ್ಪತ್ರೆಯಲ್ಲಿ ಸಿಕ್ಕ ರೂ. 4.50 ಲಕ್ಷ ಹಣವನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೂವರು ಸಿಪಿಐ, ಮೂವರು ಪಿಎಸ್‌ಐ, ಒಂದು ಡಿಆರ್ ತುಕಡಿ ಸೇರಿ 50ಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡಲಾಗಿದೆ. ಲೋಕಾಯುಕ್ತ ಪೊಲೀಸರಿಂದ ದಾಖಲೆಗಳ ಪರಿಶೀಲನೆ ಮುಂದುವರಿದಿದೆ. ಲೋಕಾಯುಕ್ತ ಎಸ್‌ಪಿ ಸಿದ್ದಲಿಂಗಪ್ಪ ಅವರ ಮಾರ್ಗದರ್ಶನದಲ್ಲಿ ಗದಗ ಲೋಕಾಯುಕ್ತ ಡಿವೈಎಸ್‌ಪಿ ವಿಜಯ್ ಬಿರಾದಾರ, ಇನ್‌ಸ್ಪೆಕ್ಟರ್ ಪರಮೇಶ್ ಕವಟಗಿ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದಾರೆ.

ಜೇನು ದಾಳಿ: ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ ವೇಳೆ ಆಸ್ಪತ್ರೆ ಕಟ್ಟಡದಲ್ಲಿದ್ದ ಜೇನುಗೂಡಿನಿಂದ ಆಕಸ್ಮಿಕವಾಗಿ ಜೇನು ಹುಳುಗಳು ಎದ್ದ ಪರಿಣಾಮ ಕೆಲಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಆರೋಗ್ಯ ತಪಾಸಣೆ ಬಳಿಕ ಕೋರ್ಟ್‌ಗೆ ಹಾಜರು

ಶಾಸಕ ಡಾ.ಚಂದ್ರು ಲಮಾಣಿ ಅವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ದು ಆರೋಗ್ಯ ತಪಾಸಣೆ ಮಾಡಿಸಿದ ಬಳಿಕ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಮಾವನಿಂದ ಅಳಿಯನ ಮನೆಗೆ ಬೆಂಕಿ

ಮಂಡ್ಯ: ಮನೆಯವರ ವಿರೋಧದ ನಡುವೆಯೂ ಪ್ರೀತಿಸಿ ಮದುವೆಯಾದರೆಂಬ ಕಾರಣಕ್ಕೆ ಮಾವನೇ ಅಳಿಯನ ಮನೆಗೆ ಬೆಂಕಿ ಇಟ್ಟ ಘಟನೆ ತಾಲೂಕಿನ ಚುಂಚಗಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ವಿನೋದ್ ಹಾಗೂ ಕಾವ್ಯ ಪ್ರೀತಿಸಿ ಮದುವೆಯಾಗಿದ್ದರಿಂದ ಯುವತಿಯ ತಂದೆ ಚನ್ನೇಗೌಡ ಅಳಿಯನ ಮನೆಗೆ ಬೆಂಕಿ ಇಟ್ಟಿದ್ದಾರೆ. ಮನೆಯಲ್ಲಿದ್ದ ವಸ್ತುಗಳೆಲ್ಲಮೂ ಸುಟ್ಟು ಕರಕಲಾಗಿದೆ.

ಘಟನೆ ವಿವರ: ಮನೆಯವರ ವಿರೋಧವನ್ನು ಲೆಕ್ಕಿಸದ ಪ್ರೇಮಿಗಳು ನ.19ರಂದು ಯಾರಿಗೂ ವಿಷಯ ತಿಳಿಸದೆ ಮದುವೆಯಾಗಿದ್ದರು. ವಿವಾಹದ ಬಳಿಕ ಮನೆಗೆ ಬಾರದೆ ಬೇರೆಯವರ ಮನೆಯಲ್ಲಿ ನೆಲೆಸಿದ್ದರು.ಈ ವಿಷಯ ಯುವತಿಯ ತಂದೆ ಚನ್ನೇಗೌಡರಿಗೆ ತಿಳಿದು ಕೋಪೋದ್ರಿಕ್ತರಾದರು. ಶನಿವಾರ ಬೆಳಗ್ಗೆ ಅಳಿಯನ ಮನೆ ಎದುರು ಬಂದು ಏಕಾಏಕಿ ಮನೆಗೆ ಬೆಂಕಿ ಹಚ್ಚಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

87 ಕಡೆ ಗಾಂಧಿ ಸ್ತಂಭ

▶ ಮಹೇಶ್ ಹೆಗಡೆ

ಬೆಂಗಳೂರು: ಕರ್ನಾಟಕದೊಂದಿಗಿನ ಮಹಾತ್ಮ ಗಾಂಧಿಗೆ ನಂಟಿರುವ ಐತಿಹಾಸಿಕವಾದ ಆಯ್ದ 87 ಸ್ಥಳಗಳಲ್ಲಿ ಗಾಂಧಿ ಸ್ತಂಭಗಳನ್ನು ನಿರ್ಮಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಅಯೋಧ್ಯೆಯ ರಾಮನ ವಿಗ್ರಹದ ರೂವಾರಿ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್‌ಗೆ ಸ್ತಂಭಗಳ ನಿರ್ಮಾಣದ ಜವಾಬ್ದಾರಿ ವಹಿಸಲಾಗಿದೆ. ಮಹಾತ್ಮ ಗಾಂಧಿಯವರು ತಮ್ಮ ಜೀವಿತಾವಧಿಯಲ್ಲಿ ಕರ್ನಾಟಕದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದು, ಅದರ ನೆನಪಿಗಾಗಿ ಸ್ತಂಭ ಗಳನ್ನು ನಿರ್ಮಿಸಲಾಗುತ್ತಿದೆ. ಮಹಾತ್ಮ ಗಾಂಧಿಯವರು ಒಟ್ಟು 87 ಬಾರಿ ಕರ್ನಾಟಕದ ವಿವಿಧೆಡೆ ಭೇಟಿ ನೀಡಿದ್ದು, ಅಲ್ಲೆಲ್ಲ ಈ ಸ್ತಂಭಗಳು ತಲೆಯೆತ್ತಲಿವೆ.

ರಾಮನ ವಿಗ್ರಹ ರೂವಾರಿಗೆ ಕೆತ್ತನೆ ಹೊಣೆ: ಅಯೋಧ್ಯೆಯ ರಾಮಲಲಾ ಮೂರ್ತಿಯನ್ನು ಕೆತ್ತಿದ ಅರುಣ್ ಯೋಗಿರಾಜ್ ಅವರ ಕಲಾ ನೈಪುಣ್ಯವನ್ನು ಗುರುತಿಸಿರುವ ರಾಜ್ಯ ಸರ್ಕಾರ, ಯೋಜನೆಯ ಜವಾಬ್ದಾರಿಯನ್ನು ಅವರಿಗೆ ವಹಿಸಿದೆ.

ಇದಕ್ಕಾಗಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡಿ, 5.09 ಕೋಟಿ ರೂ.ಗೆ ಅರುಣ್ ಯೋಗಿರಾಜ್ ಅವರ ಕಶ್ಯಪ ಶಿಲ್ಪ ಕಲಾನಿಕೇತನಕ್ಕೆ ಸ್ತಂಭ ನಿರ್ಮಾಣದ ಹೊಣೆ ವಹಿಸಲಾಗಿದೆ. ಗಾಂಧಿ ಸ್ತಂಭ ನಿರ್ಮಾಣ ವಿಷಯವಾಗಿ ಹೊಸ ದಿಗಂತದೊಂದಿಗೆ ಮಾತನಾಡಿದ ಅರುಣ್ ಯೋಗಿರಾಜ್, ನಾವು ಕಳೆದ ಸುಮಾರು 2-3 ತಿಂಗಳುಗಳಿಂದಲೇ ಇದರ ಬಗ್ಗೆ ಸಾಕಷ್ಟು ತಯಾರಿ ನಡೆಸುತ್ತಿದ್ದೆವು. ಈಗ ಅಧಿಕೃತ ಆದೇಶ ಬಂದಿದೆ. ಸ್ತಂಭಗಳ ಗಾತ್ರ, ವಿನ್ಯಾಸ ಮತ್ತು ಯಾವ ಶೈಲಿ ಬಳಸಿದರೆ ಸ್ತಂಭ ನೂರಾರು ವರ್ಷ ಬಾಳಿಕೆ ಬರುತ್ತದೆ ಎಂಬ ಬಗ್ಗೆ ಚರ್ಚಿಸಿ ವಿನ್ಯಾಸ ಸಿದ್ಧಪಡಿಸಲಾಗಿದೆ. ಈ ಸ್ತಂಭಗಳು ಸುಮಾರು 10 ಅಡಿ ಎತ್ತರ ಮತ್ತು 3 ರಿಂದ 3.5 ಅಡಿ ಅಗಲ ಇರುತ್ತವೆ. ಇವುಗಳನ್ನು ಸಂಪೂರ್ಣವಾಗಿ ಗಟ್ಟಿಯಾದ ಶಿಲೆಯಲ್ಲಿ ಕೆತ್ತಲಾಗುವುದು. ವಿನ್ಯಾಸದಲ್ಲಿ ಮಹಾತ್ಮ ಗಾಂಧಿಯವರ ಸಂಕೇತವಾದ ಚರಕ, ಅವರ ಪ್ರಸಿದ್ಧ ಸಂದೇಶಗಳು, ಸ್ಥಳಕ್ಕೆ ಭೇಟಿ ನೀಡಿದ ದಿನಾಂಕ, ಅಲ್ಲಿ ಅವರು ಮಾಡಿದ ಭಾಷಣದ ಸಾರಾಂಶ, ಅಲ್ಲಿ ನಡೆದ ಪ್ರಮುಖ ಘಟನೆಯ ವಿವರಗಳು ಕೆತ್ತನೆಯಲ್ಲಿ ಇರಲಿವೆ ಎಂದು ತಿಳಿಸಿದರು.

ಎಲ್ಲೆಲ್ಲಿ ಸ್ತಂಭ ನಿರ್ಮಾಣ?

ಮಹಾತ್ಮ ಗಾಂಧಿಯವರು ಕರ್ನಾಟಕದಲ್ಲಿ ಭೇಟಿ ನೀಡಿದ ಸ್ಥಳಗಳಲ್ಲಿ ಪ್ರಮುಖವಾಗಿ, ಬೆಂಗಳೂರಿನ ಆನಂದ ರಾವ್ ವೃತ್ತ, ನಂದಿಬೆಟ್ಟ, ಕುಮಾರಕೃಪಾ ಅತಿಥಿಗೃಹ, ಬೆಳಗಾವಿಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನ, ಹುದಲಿ ಗ್ರಾಮ, ಮೈಸೂರಿನ ಬದನವಾಳು ಗ್ರಾಮ, ಮಂಗಳೂರು, ಅಂಕೋಲಾ, ತುಮಕೂರು, ಶಿವಮೊಗ್ಗ, ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದು ಕರೆಯುವ ವಿದುರಾಶ್ವತ್ಥ ಸೇರಿದಂತೆ 87 ಸ್ಥಳಗಳನ್ನು ಗುರುತಿಸಲಾಗಿದೆ. ಆಯಾ ಜಿಲ್ಲಾಡಳಿತಗಳ ಮೂಲಕ ಜಾಗವನ್ನು ಕಾಯ್ದಿರಿಸುವ ಪ್ರಕ್ರಿಯೆ ನಡೆಯುತ್ತಿದೆ. ಕೇವಲ ಸ್ಮಾರಕಗಳಾಗಿ ಮಾತ್ರವಲ್ಲದೆ, ಇತಿಹಾಸವನ್ನು ಸಾರುವ ಕಲಾಕೃತಿಗಳನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆ.



ಮಹಾತ್ಮ ಗಾಂಧಿಯವರು ಜಗತ್ತಿಗೆ ಶಾಂತಿ ಸಾರಿದವರು. ಅವರು ನಮ್ಮ ಕರ್ನಾಟಕಕ್ಕೆ ಭೇಟಿ ನೀಡಿದ್ದ ನೆನಪಿಗಾಗಿ ಈ ಕೆಲಸ ಮಾಡುವುದು ನಮಗೂ ಮತ್ತು ಮುಂದಿನ ಪೀಳಿಗೆಗೂ ಬಹಳ ಮುಖ್ಯ. ಈ ಅವಕಾಶ ನನಗೆ ಸಿಕ್ಕಿರುವುದು ಹೆಮ್ಮೆಯ ವಿಷಯ. ಅವಕಾಶ ನೀಡಿದ್ದಕ್ಕೆ ಸರ್ಕಾರಕ್ಕೆ ಧನ್ಯವಾದಗಳು.
■ ಅರುಣ್ ಯೋಗಿರಾಜ್, ಶಿಲ್ಪಿ

ಆಳ್ವಾಸ್ ಶಾಲೆಗೆ ವಿದ್ಯಾರ್ಥಿಸಾಗರ!

ಪುಟ ೧➡ ವಿದ್ಯಾರ್ಥಿಗಳಿಗೆ, ಹೆತ್ತವರಿಗೆ ಕನ್ನಡ ಭಾಷೆಯ ಬಗೆಗಿರುವ ವ್ಯಾಮೋಹ ಕಡಿಮೆಯಾಗಿಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟವಾಗುತ್ತದೆ!

ಇದೊಂದು ಮಾದರಿ ಕಾರ್ಯ: ಆಳ್ವಾಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ, ಡಾ.ಎಂ. ಮೋಹನ ಆಳ್ವಾ ಅವರ ಕನಸಿನ ಕೂಸು ಈ ಕನ್ನಡ ಮಾಧ್ಯಮ ಶಾಲೆ. ಇಡೀ ರಾಜ್ಯದಲ್ಲಿ ಒಂದು ಮಾದರಿ ಶಾಲೆಯನ್ನಾಗಿ ಇದನ್ನು ರೂಪಿಸುವ ದೃಷ್ಟಿಯಿಂದ ವಿಶೇಷ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. 'ಕನ್ನಡದ ಬಗೆಗಿರುವ ಪ್ರೀತಿ ಬಾಯಲ್ಲಿ ಇದ್ದರೆ ಸಾಲದು, ಬದಲಾಗಿ ಅದು ಕಾರ್ಯರೂಪದಲ್ಲಿರಬೇಕು' ಎಂಬ ಆಳ್ವರ ಅಭಿಪ್ರಾಯವೇ ಅವರಿಗೆ ಈ ಶಾಲೆಯ ಮೇಲಿರುವ, ಕನ್ನಡದ ಮೇಲಿರುವ ಪ್ರೀತಿಗೆ ಸಾಕ್ಷಿಯಾಗಿದೆ.

ಎಲ್ಲೆಲ್ಲೂ ವಿದ್ಯಾರ್ಥಿಗಳು: ಶನಿವಾರವೇ ಮೂಡುಬಿದಿರೆಯತ್ತ ಕರ್ನಾಟಕದಾದ್ಯಂತದಿಂದ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಆಗಮಿಸತೊಡಗಿದ್ದಾರೆ. ಇವರೆಲ್ಲರಿಗೂ ಸುಸಜ್ಜಿತ ವ್ಯವಸ್ಥೆಯನ್ನು ಆಳ್ವಾಸ್ ಸಂಸ್ಥೆ ಆಯೋಜಿಸಿದೆ. ಎಲ್ಲೂ ಏನೂ ಲೋಪಗಳು ಆಗಬಾರದೆಂಬ ದೃಷ್ಟಿಯಿಂದ ಸುಸಜ್ಜಿತ ವ್ಯವಸ್ಥೆ ಕಲ್ಪಿಸಲಾಗಿದೆ. ಬಸ್, ಕಾರು, ಟೆಂಪೋ ಮೂಲಕ ದಂಡುದಂಡಾಗಿ ವಿದ್ಯಾರ್ಥಿಗಳು, ಪೋಷಕರು ಆಳ್ವಾಸ್ ಸಂಸ್ಥೆಯತ್ತ ಆಗಮಿಸತೊಡಗಿದ್ದಾರೆ. ಭಾನುವಾರ ಬೆಳಗ್ಗೆ ಪರೀಕ್ಷೆ ನಡೆಯಲಿದೆ. ವಿವಿಧ ಜಿಲ್ಲೆಗಳಿಂದ ಬರುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅತ್ಯಂತ ಶಿಸ್ತಿನ ವ್ಯವಸ್ಥೆ ಮಾಡಲಾಗಿದೆ. ಪ್ರತ್ಯೇಕ ನೋಂದಣಿ ವ್ಯವಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆಳ್ವಾಸ್ ಸಂಸ್ಥೆಯ ಸಿಬ್ಬಂದಿ, ಶಿಕ್ಷಕರು ಈ ಕಾರ್ಯದಲ್ಲಿ ನಿರತರಾಗಿದ್ದಾರೆ.

3 ಹಂತದ ಆಯ್ಕೆ ಪ್ರಕ್ರಿಯೆ: ಕನ್ನಡ ಮಾಧ್ಯಮ ಶಾಲೆಗಾಗಿ 3 ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದ್ದು, ಪ್ರಾಥಮಿಕ ಹಂತ, ಮುಖ್ಯ ಹಂತ, ಸಂದರ್ಶನ ಹಂತ ಎಂದು ಗುರುತಿಸಲಾಗುತ್ತದೆ. ಪ್ರಾಥಮಿಕ ಹಂತದಲ್ಲಿ ಒಎಂಆರ್ ಆಧಾರಿತ ಬಹು ಆಯ್ಕೆ ಮಾದರಿ ಪ್ರಶ್ನೆಪತ್ರಿಕೆ ಇದ್ದು ಉಳಿದ ಸ್ಪರ್ಧಾತ್ಮಕ ಪರೀಕ್ಷೆಯಂತೆ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ವಿದ್ಯಾರ್ಥಿಯ ಚಿಂತನಾ ಸಾಮರ್ಥ್ಯ ಗುರುತಿಸಲಾಗುತ್ತದೆ. ಇದರಲ್ಲಿ ಸಂಸ್ಥೆ ನಿಗದಿಪಡಿಸಿದ ಮಾನದಂಡ ಗಳಿಸಿದವರು ಮಾತ್ರವೇ ಮುಖ್ಯ ಹಂತಕ್ಕೆ ಆಯ್ಕೆಯಾಗುತ್ತಾರೆ.

ಉಚಿತ ಶಿಕ್ಷಣ

ಆಯ್ಕೆಯಾದ ವಿದ್ಯಾರ್ಥಿಗಳು 6ನೇ ತರಗತಿಯಿಂದ 10ನೇ ತರಗತಿವರೆಗೆ ಉಚಿತ ವಸತಿ ಊಟೋಪಚಾರಸಹಿತ ಶಿಕ್ಷಣವನ್ನು ಪಡೆಯುತ್ತಾರೆ. ಈಗಾಗಲೇ ಕ್ರೀಡಾ ಹಾಗೂ ಸಾಂಸ್ಕೃತಿಕ ವಿಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಗಾಗಿ ಪತ್ರಿಕಾ ಪ್ರಕಟಣೆ ನೀಡಿದ್ದು, ಕ್ರೀಡಾ ಮತ್ತು ಸಾಂಸ್ಕೃತಿಕ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಶಾಲೆಯಲ್ಲಿ ವಿಶೇಷ ಆದ್ಯತೆಯನ್ನು ನೀಡಿ ಪ್ರತ್ಯೇಕ ಆಯ್ಕೆ ಶಿಬಿರಗಳನ್ನು ನಡೆಸಿ ಆಯ್ಕೆ ಮಾಡಲಾಗುತ್ತದೆ.

ಪಾರದರ್ಶಕ ವ್ಯವಸ್ಥೆ

ಪ್ರವೇಶಾತಿಗೆ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಂಸ್ಥೆ ಅವಕಾಶ ಒದಗಿಸಿಕೊಟ್ಟಿತ್ತು. ಅಕ್ಟೋಬರ್‌ನಲ್ಲಿ ಈ ಬಗ್ಗೆ ಅಧಿಕೃತ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು.

ಬೆನ್ನಿಗೆ ಚೂರಿ ಹಾಕುವ ಪಾಕಿಸ್ತಾನ: ಶ್ರೀಗಳು

ದಾವಣಗೆರೆ: ಭಾರತವನ್ನು ಪ್ರಸ್ತುತ ಇಬ್ಬರು ಹೊರಗಿನ ಪಾಪಿಗಳು ಕಾಡುತ್ತಿದ್ದಾರೆ. ಒಬ್ಬ ಜಗತ್ತಿನ ದೊಡ್ಡಣ್ಣ ಎಂಬ ಭ್ರಮೆಯಲ್ಲಿರುವ ಟ್ರಂಪ್, ಇನ್ನೊಂದು ನೇರವಾಗಿ ನಮ್ಮನ್ನು ಎದುರಿಸಲಾಗದೆ ಬೆನ್ನಿಗೆ ಚೂರಿ ಹಾಕುವ ಪಾಕಿಸ್ತಾನ ಎಂದು ಉಡುಪಿ ಅದಮಾರು ಮಠದ ಪೀಠಾಧಿಪತಿ ಶ್ರೀವಿಶ್ವಪ್ರಿಯತೀರ್ಥ ಶ್ರೀಪಾದಂಗಳವರು ಸಲಹೆ ನೀಡಿದರು.

ನಗರದ ಕೆ.ಬಿ ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಮಠದ ಸುವರ್ಣ ಮಹೋತ್ಸವದ ಅಂಗವಾಗಿ ಶನಿವಾರ ಶ್ರೀಗಳು ಸಂಸ್ಥಾನ ಪೂಜೆ ನೆರವೇರಿಸಿ ಅನುಗ್ರಹ



ಸಂದೇಶ ನೀಡಿದರು. ದೇಶದ ಒಳಗೇ ಇದ್ದುಕೊಂಡು ಪ್ರಭು ಶ್ರೀರಾಮನಿಗೆ, ಭಾರತಕ್ಕೆ ಕಿರಿಕಿರಿ ಮಾಡುವವರೂ ಇದ್ದಾರೆ. ಅಂತಹವರನ್ನು ಓಡಿಸು ಅಥವಾ ಅಂತಹವರ ದುರ್ಬುದ್ಧಿಯನ್ನಾದರೂ ಓಡಿಸು ಎಂಬುದು ರಾಯರಲ್ಲಿ ನಮ್ಮ ಪ್ರತಿನಿತ್ಯದ ಪ್ರಾರ್ಥನೆಯಾಗಿರಬೇಕು ಎಂದು ಅವರು ಆಶಿಸಿದರು.

ಬ್ರಿಟೀಶರು ದೇಶ ಬಿಟ್ಟು ಹೋಗಿ 70 ವರ್ಷವಾದರೂ ಜನರಿಗೆ ಮೋದ(ಆನಂದ) ಕೊಡುವವರು ಯಾರೂ ಇರಲಿಲ್ಲ. ಆ ರೀತಿ ಮೋದ ಕೊಟ್ಟವರೇ ಇಂದು ನರೇಂದ್ರ ಮೋದಿ ಎಂಬುದಾಗಿ ಹೆಸರಾಗಿದ್ದಾರೆ. ದೇಶದ ಶತೃಗಳನ್ನು ಬಗ್ಗುಬಡಿಯುವ ಮೋದ ಶಾಸ್ತ್ರ(ಆನಂದ ಶಾಸ್ತ್ರ) ನರೇಂದ್ರ ಮೋದಿಯವರಿಗೆ ಗೊತ್ತಿದೆ. ಹೀಗಾಗಿಯೇ ದೇವರು ಅವರನ್ನು ಆ ಸ್ಥಾನದಲ್ಲಿ ಕೂರಿಸಿದ್ದಾನೆ. ಜಗತ್ತಿನ ದೊಡ್ಡಣ್ಣ 200 ಪರ್ಸೆಂಟ್ ಸುಂಕ ಹಾಕಿದರೂ, ಸುಮಂಗಲೆಯರ ಪ್ರಾರ್ಥನೆಯಿಂದ ಪ್ರಪಂಚದಲ್ಲಿನ ಎಲ್ಲ ಲಕ್ಷ್ಮೀಯರು ಭಾರತದಲ್ಲೇ ಬಂದು ಕೂತಿದ್ದಾರೆ. ಯಾರು ಎಷ್ಟೇ ಹೆದರಿಸಿದರೂ, ಬೆದರಿಸಿದರೂ ಸಮರ್ಥ ನಾಯಕತ್ವ ಹೊಂದಿರುವ ಭಾರತ ಜಗ್ಗುವುದಿಲ್ಲ, ಕುಗ್ಗುವುದಿಲ್ಲ ಎಂದರು. ಶ್ರೀಹರಿವಾಯು ಸ್ತುತಿ ಪಾರಾಯಣ ಹಾಗೂ ಶ್ರೀರಾಘವೇಂದ್ರ ಅಷ್ಟೋತ್ತರ ಪಾರಾಯಣ ನಡೆಸಲಾಯಿತು.

ಎತ್ತಿನ ಗಾಡಿ ಓಟದ ಸ್ಪರ್ಧೆ



ಧಾರವಾಡದಲ್ಲಿ ಮೈನವಿರೇಳಿಸಿದ ಎತ್ತಿನ ಚಕ್ಕಡಿ ಸ್ಪರ್ಧೆಯಲ್ಲಿ ಶನಿವಾರ ಭಾಗವಹಿಸಿದ ಜೋಡೆತ್ತು.

ಸ್ನೇಹಮಯಿ ಕಷ್ಣ ಬಿಡುಗಡೆ

ಬೆಂಗಳೂರು: ಮುಡಾ ಹಗರಣದ ಆರೋಪ ಎದುರಿಸುತ್ತಿರುವ ಹಿಂದಿನ ಆಯುಕ್ತ ಡಿ.ಬಿ.ನಟೇಶ್ ಮುಂಬಡ್ತಿ ವಿಚಾರವಾಗಿ ಸಾಮಾಜಿಕ ಜಾಲತಾಣದಲ್ಲಿ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಮೈಸೂರಿನ ಸ್ನೇಹಮಯಿ ಕಷ್ಣ ಅವರನ್ನು ಬಂಧಿಸಿದ್ದ ಕೇಂದ್ರ ಅಪರಾಧ ವಿಭಾಗ (ಸಿಸಿಬಿ)ದ ಪೊಲೀಸರು ವಿಚಾರಣೆ ನಡೆಸಿ ಶನಿವಾರ ಬಿಡುಗಡೆ ಮಾಡಿದ್ದಾರೆ. ಸಿಸಿಬಿ ವಿಚಾರಣೆ ವೇಳೆ ಡಿ.ಬಿ.ನಟೇಶ್ ಜತೆಗೆ ಮೈಸೂರಿನ ಎನ್. ವಿನೋದ್ ಬೋಗಾದಿ ವೈಯಕ್ತಿಕ ವ್ಯವಹಾರ ನಡೆಸಿದ್ದರು. ಆದರೆ, ಈ ವ್ಯವಹಾರದ ವಿಚಾರವಾಗಿ ಇಬ್ಬರಲ್ಲಿ ವೈಮನಸ್ಸು ಉಂಟಾಗಿತ್ತು. ವಿನೋದನು ನಟೇಶ್ ವಿರುದ್ಧ ದ್ವೇಷ ಸಾಧಿಸಲು ಸ್ನೇಹಮಯಿ ಕೃಷ್ಣ ಅವರನ್ನು ಸಂಪರ್ಕಿಸಿ ಸತ್ಯಕ್ಕೆ ದೂರವಾದ ಸುಳ್ಳು ಮಾಹಿತಿಗಳನ್ನು ನೀಡಿದ್ದಾನೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ವ್ಯಕ್ತಿ ಬಂಧನ: ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ಸುಳ್ಳು ಮಾಹಿತಿ ನೀಡಿದ್ದ ಮೈಸೂರು ಮೂಲದ ಎನ್.ವಿನೋದ್ ಎಂಬಾತನನ್ನು ಸಿಸಿಬಿ ಪೊಲಿಸರು ಬಂಧಿಸಿ ದ್ದಾರೆ. ಆಧಾರ ರಹಿತ ಆರೋಪ ಮಾಡಿರುವ ಆರೋಪದ ಅಡಿ ವ್ಯಕ್ತಿಯನ್ನು ಬಂಧಿಸಿ ವಿಚಾರಣೆ ಕೈಗೊಳ್ಳಲಾಗಿದೆ.

ಶಾಲಿನಿ ರಜನೀಶ್ ಅವರ ಕ್ಷಮೆಯಾಚಿಸುತ್ತೇನೆ

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಮೇಲೆ ಲಂಚದ



ಆರೋಪ ಮಾಡಿರುವ ಬಗ್ಗೆ ನಾನು ಕ್ಷಮೆಯಾಚಿಸುತ್ತೇನೆ. ಕೆಎಎಸ್ ಅಧಿಕಾರಿ ನಟೇಶ್ ಅವರು ನನ್ನ ವಿರುದ್ಧ ಸುಳ್ಳು ದೂರು ನೀಡಿದ್ದಾರೆ. ಈ ಸಂಬಂಧ ಸಿಸಿಬಿ ಪೊಲೀಸರು ತನ್ನನ್ನು ವಿಚಾರಣೆ ನಡೆಸಿದ್ದಾರೆ. ಬಿಡುಗಡೆಗೊಳಿಸಿದ ಆಡಿಯೋದಲ್ಲಿ ನಟೇಶ್ ಮಾತನಾಡಿದ್ದಾರೆ. ಆದರೆ, ಮುಂಬಡ್ತಿ ವಿಚಾರ ಸಂಬಂಧ ಶಾಲಿನಿ ರಜನೀಶ್ ಅವರು, 1.60 ಕೋಟಿ ರೂ. ಲಂಚ ಪಡೆದಿದ್ದಾರೆ ಎಂದು ವಿನೋದ್ ತನಗೆ ಸುಳ್ಳು ಮಾಹಿತಿ ನೀಡಿದ್ದನು. ವಿಚಾರಣೆಯಲ್ಲಿ ಹಣವನ್ನು ಪ್ರಭಾವಿ ವ್ಯಕ್ತಿಗಳಿಗೆ ನೀಡಿರುವುದು ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾನೆ.

ಕಿರುಸುದ್ದಿ

34 ಗಂಟೆ ರುದ್ರ ಪಾರಾಯಣ ಪಠಿಸಿ ಗಿನ್ನಿಸ್ ದಾಖಲೆ



ಯಲ್ಲಾಪುರ: ಕರ್ನಾಟಕ–ತಮಿಳುನಾಡು ಗಡಿ ಪ್ರದೇಶದ ಹೊಸೂರಿನಲ್ಲಿರುವ ಓಎಂಜಿ ಸಂಸ್ಥೆ ಇತ್ತೀಚೆಗೆ ಆಯೋಜಿಸಿದ್ದ ರುದ್ರ ಪಾರಾಯಣದಲ್ಲಿ 25 ವೇದ ವಿದ್ವಾಂಸರು ಸತತ 34 ಗಂಟೆಗಳ ಕಾಲ ನಿರಂತರ ರುದ್ರ ಪಠಿಸಿ ಗಿನ್ನಿಸ್ ದಾಖಲೆ ಮಾಡಿದ್ದಾರೆ. ತಾಲೂಕಿನ ಉಮ್ಮಚಗಿಯ ಶ್ರೀ ಮಾತಾ ಸಂಸ್ಕೃ ತ ಮಹಾಪಾಠ ಶಾಲೆಯ ವಿದ್ಯಾರ್ಥಿಗಳಾದ ಶುಭಾಂಗ ಹೆಗಡೆ ಚಿಪಗೇರಿ ಹಾಗೂ ವೀರೇಂದ್ರ ಭಟ್ಟ ಕಾರವಾರ ಅವರು ಈ ತಂಡದ ಸದಸ್ಯರಾಗಿ ಗಿನ್ನಿಸ್ ದಾಖಲೆಯ ಗೌರವಕ್ಕೆ ಪಾತ್ರರಾಗಿದ್ದಾರೆ. ದಾಖಲೆ ಮಾಡಿದ ತಂಡದಲ್ಲಿ ರಾಜ್ಯದ ವಿವಿಧೆಡೆಯಿಂದ ಬಂದ ವೇದ ವಿದ್ವಾಂಸರು ಇದ್ದರು.

ಮಿತ್ರಪಕ್ಷಗಳಿಂದಲೂ ಈಗ ಕಿಡಿ

ಪುಟ ೧➡ **ಶುಕ್ರವಾರ ಏನಾಗಿತ್ತು ?**

ಶುಕ್ರವಾರ ಎಐ ಶೃಂಗಸಭೆ ನಡೆಯುತ್ತಿದ್ದ ಪ್ರತಿಷ್ಠಿತ ಭಾರತ್ ಮಂಟಪದ ವಸ್ತುಪ್ರದರ್ಶನ ಕೊಠಡಿ ಸಂಖ್ಯೆ 5ಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ರಗಳನ್ನು ಹೊಂದಿದ್ದ ಬಿಳಿ ಟಿ–ಷರ್ಟ್‌ಗಳನ್ನು ದರಿಸಿ ನುಗ್ಗಿದ ಯುವಕಾಂಗ್ರೆಸಿಗರ ಗುಂಪು ಅರೆಬೆತ್ತಲೆ ಪ್ರತಿಭಟನೆ ನಡೆಸಿ ಘೋಷಣೆ ಕೂಗಿ ರಾದ್ಧಾಂತ ನಡೆಸಿತ್ತು. ಈ ಸಂದರ್ಭ ಅಲ್ಲಿ ಸೇರಿದ್ದ ನಾಗರಿಕರೇ ಆಕ್ರೋಶಿತರಾಗಿ ಈ ಕಾಂಗ್ರೆಸಿಗರನ್ನು ಒದ್ದು ಹೊರಗೋಡಿಸಿದ್ದರು. ಕಾಂಗ್ರೆಸಿಗರ ಈ ಕೃತ್ಯಕ್ಕೆ ನೆಟ್ಟಿಗರು ಸೇರಿದಂತೆ ದೇಶಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಅನೇಕ ಕಾಂಗ್ರೆಸ್ ಬೆಂಬಲಿಗರು ಕೂಡ ಕಾಂಗ್ರೆಸ್ ಇಂತಹ ವರ್ತನೆಯನ್ನು ಮುಂದುವರಿಸಿದಲ್ಲಿ ಮುಂದಿನ ಚುನಾವಣೆಯಲ್ಲೂ ಹೀನಾಯ ಸೋಲು ಕಾಣಲಿದೆ ಎಂದಿದ್ದರು.

ನಾಚಿಕೆಗೇಡಿನ ಕೃತ್ಯ

ವೈಎಸ್‌ಆರ್ ಕಾಂಗ್ರೆಸಿನ ಮುಖ್ಯಸ್ಥ ವೈ.ಎಸ್. ಜಗನ್ ಮೋಹನ್ ರೆಡ್ಡಿ ಪ್ರತಿಕ್ರಿಯಿಸಿ, ಅವರು (ಯುವ ಕಾಂಗ್ರೆಸಿಗರು)ಎಐ ಶೃಂಗಸಭೆಯಲ್ಲಿ ಎಸಗಿದ ಕೃತ್ಯದಿಂದ ನಮ್ಮೆಲ್ಲರನ್ನೂ ತಲೆತಗ್ಗಿಸುವಂತೆ ಮಾಡಿದರು. ನಮ್ಮ ರಾಜಕೀಯ ಎತ್ತ ಸಾಗುತ್ತಿದೆ !ಯಾರೂ ಕೂಡ ನಮ್ಮ ದೇಶವನ್ನು ಕೀಳಾಗಿ ಕಾಣಬಾರದು. ನಮ್ಮ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇರಲಿ, ನಾವು ಜಗತ್ತಿನ ಮುಂದೆ ಒಗ್ಗಟ್ಟಾಗಿರಬೇಕು "ಎಂದು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಬಿಎಸ್ಪಿ ನಾಯಕಿ ಮಾಯಾವತಿ ಆಕ್ರೋಶ

ಬಿಎಸ್‌ಪಿ ವರಿಷ್ಠೆ ಮಾಯಾವತಿ ಅವರು ಕೂಡ ಕಾಂಗ್ರೆಸಿಗರ ವರ್ತನೆಯನ್ನು ತೀವ್ರ ತರಾಟೆಗೆತ್ತಿಕೊಂಡಿದ್ದು, ಎಐ ಇಂಪ್ಯಾಕ್ಟ್ ಶೃಂಗಸಭೆಯಂತಹ ಅಂತಾರಾಷ್ಟ್ರೀಯವಾಗಿ ಮಹತ್ವ ಹೊಂದಿದ ಸಮಾರಂಭದಲ್ಲಿ ಈ ರೀತಿ ಅರೆಬೆತ್ತಲೆ ಪ್ರತಿಭಟನೆ ನಡೆಸಿದ್ದು ಅತ್ಯಂತ ಅನುಚಿತ ಮತ್ತು ಖಂಡನೀಯ ಎಂದಿದ್ದಾರೆ.ನಮ್ಮ ದೇಶದ ಘನತೆ, ಗೌರವ, ವರ್ಚಸ್ಸುಗಳಿಗೆ ಮಸಿ ಬಳಿಯುವಂತಹ ಕೃತ್ಯ ಎಸಗಿದ್ದು ಸರಿಯಲ್ಲ ಎಂದು ಅವರು ತೀವ್ರ ಅಸಮಾಧಾನದಿಂದ ಹೇಳಿದರು. ಆರ್‌ಜೆಡಿಯ ಸಂಸದ ಮನೋಜ್ ಕುಮಾರ್ ಝಾ ಅವರು ,ಅಸಂತೃಪ್ತಿ ಇದ್ದಲ್ಲಿ ಅದನ್ನು ವ್ಯಕ್ತಪಡಿಸಲು ಬೇರೆ ಉತ್ತಮ ದಾರಿಗಳಿದ್ದವು. ಅಮೆರಿಕ ಜೊತೆಗಿನ ಒಪ್ಪಂದದ ಬಗ್ಗೆ ಸ್ಪಷ್ಟತೆಯ ಕೊರತೆ ಅಥವಾ ಎಪ್‌ಸ್ಟೈನ್ ಫೈಲ್ಸ್ ವಿವಾದ ಏನೇ ಇದ್ದರೂ ಇದನ್ನು ಬೇರೆ ಉತ್ತಮ ರೀತಿಯಲ್ಲಿ ವ್ಯಕ್ತಪಡಿಸಬಹುದಾಗಿತ್ತು.ನನ್ನ ಸ್ವಂತ ಅಭಿಪ್ರಾಯ ಹೇಳುವುದಾದಲ್ಲಿ ಯಾವುದೇ ಚಳವಳಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಬೇಕು ಎಂದರು.

ಕಾಂಗ್ರೆಸ್ ಕಚೇರಿಗೆ ಬಿಜೆಪಿ ಕಾರ್ಯಕರ್ತರ ಮುತ್ತಿಗೆಗೆ ಯತ್ನ

ರಾಜ್ಯದೆಲ್ಲೆಡೆ ಬಿಜೆಪಿ ಪ್ರತಿಭಟನೆ

ಬೆಂಗಳೂರು: ದಿಲ್ಲಿಯ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸ್‌ನ ವರ್ತನೆಯನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ವತಿಯಿಂದ ರಾಜ್ಯದ ವಿವಿಧೆಡೆ ಶನಿವಾರ ಪ್ರತಿಭಟನೆ ಹಾಗೂ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕು ಪ್ರಯತ್ನ ನಡೆಸಲಾಯಿತು.



ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷ ಮತ್ತು ಶಾಸಕ ಧೀರಜ್ ಮುನಿರಾಜ್ ಮಾತನಾಡಿ, ಎಐ ಶೃಂಗಸಭೆಯಲ್ಲಿ ಪ್ರತಿಭಟನೆ ಮಾಡುವ ಮೂಲಕ ಕಾಂಗ್ರೆಸ್ಸಿನವರು ತಮ್ಮ ಕೆಟ್ಟ ಸಂಸ್ಕೃತಿಯ ಅನಾವರಣ ಮಾಡಿದ್ದಾರೆ. ವಿದೇಶಿ ಅತಿಥಿಗಳ ಸಮ್ಮುಖದಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಅವಮಾನ ಮಾಡುವಂತೆ ನಡೆದುಕೊಂಡಿದ್ದು ಖಂಡನೀಯ. ಯುವ ಕಾಂಗ್ರೆಸ್ಸಿಗರು ತಮ್ಮ ವರ್ತನೆಗೆ ಬೇಷರತ್ ಕ್ಷಮೆ ಕೇಳಲಿ ಎಂದು ಆಗ್ರಹಿಸಿದರು.

ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿ, ಎಐ ಶೃಂಗಸಭೆಯಲ್ಲಿ 30–35 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು, ಭಾರತಕ್ಕೆ ಅವಮಾನವಾಗುವ ರೀತಿಯಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಅರೆ ಬೆತ್ತಲೆ ಪ್ರತಿಭಟನೆ ನಡೆಸಿದ್ದಾರೆ. ಇದು ಖಂಡನೀಯ ಎಂದು ಹೇಳಿದರು. ಭಾರತದಲ್ಲಿ ಉತ್ತಮ ಆವಿಷ್ಕಾರ ನಡೆಯುತ್ತಿದೆ. ಈ ಸಂದರ್ಭದಲ್ಲಿ ಪ್ರಧಾನಿಯವರಿಗೂ ಧಿಕ್ಕಾರ ಕೂಗಿದ ಯುವ ಕಾಂಗ್ರೆಸ್ಸಿಗರ ವರ್ತನೆ ಅನಪೇಕ್ಷಣೀಯ. ಇವರ ವರ್ತನೆಯನ್ನು ಖಂಡಿಸಿ ಸಾರ್ವಜನಿಕರೂ ಒದೆ – ಗೂಸಾ ಕೊಟ್ಟಿದ್ದಾರೆ ಎಂದು ಗಮನ ಸೆಳೆದರು. ಪ್ರತಿಭಟನೆಯನ್ನು ಖಂಡಿಸಿ ಕೆಪಿಸಿಸಿ ಕಚೇರಿಗೂ ಮುತ್ತಿಗೆ ಹಾಕುವುದಾಗಿ ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಮಾತನಾಡಿ, ಕಾಂಗ್ರೆಸ್ಸಿನವರು ಎಲ್ಲ ಕಾರ್ಯಕ್ರಮ, ಯೋಜನೆಗಳಿಗೆ ತಮ್ಮ ನಾಯಕರಾದ ನೆಹರು, ಇಂದಿರಾ, ರಾಜೀವ್ ಗಾಂಧಿ ಅವರ ಹೆಸರು ಇಟ್ಟುಕೊಂಡಿದ್ದಾರೆ. ನಮ್ಮ ಪ್ರಧಾನಿ ಮೋದಿ ಅವರು ಯಾವುದೇ ಒಂದು ಯೋಜನೆಗೂ ತಮ್ಮ ಹೆಸರನ್ನು ಇಟ್ಟುಕೊಂಡಿಲ್ಲ ಎಂದು ಗಮನ ಸೆಳೆದರು. ದೇಶದ ಮಾನ ಕಳೆಯುವಂತೆ ಶುಕ್ರವಾರ ನಡೆದ ಘಟನೆ ಅತ್ಯಂತ ಖಂಡನೀಯವಾಗಿದೆ ಎಂದು ಹೇಳಿದರು. ಇದೇ ವೇಳೆ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ಸಿಗರಿಗೆ ಧಿಕ್ಕಾರ ಕೂಗಿದರು. ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಮುಖಂಡ ಉಮೇಶ್ ಶೆಟ್ಟಿ, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾರ್ಯಕರ್ತರ ಬಂಧನ ಬಿಡುಗಡೆ

ಮೈಸೂರು: ಹೊಸದಿಲ್ಲಿಯಲ್ಲಿ ಅಂತಾರಾಷ್ಟ್ರೀಯ ಎಐ ಸಮ್ಮೇಳನ ನಡೆಯುತ್ತಿದ್ದ ಸಂದರ್ಭದಲ್ಲಿ ಕಾಂಗ್ರೆಸ್‌ನ ಕೆಲವು ಮುಖಂಡರು, ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ದೇಶದ ಹಿರಿಮೆಗೆ ಮಸಿ ಬಳಿಯುವ ಪ್ರಯತ್ನ ನಡೆಸಿರುವುದನ್ನು ಖಂಡಿಸಿ, ಶನಿವಾರ ನಗರದಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಹೊರಟ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರನ್ನು ಪೊಲೀಸರು ಬಂಧಿಸಿದ ಘಟನೆ ನಡೆಯಿತು. ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು. ದೇಶಕ್ಕೆ ಅಪಮಾನ ಎಸಗಿದವರ ವಿರುದ್ಧ ಕ್ರಮಜರುಗಿಸುವಂತೆ ಒತ್ತಾಯಿಸಿದರು. ವಿಶ್ವಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಎಐ ಶೃಂಗಸಭೆಯಂತಹ ದೊಡ್ಡ, ಜಾಗತಿಕ ವೇದಿಕೆಯಲ್ಲಿ, ಪ್ರತಿಭಟನೆ ಸೋಗಿನಲ್ಲಿ ಕಾಂಗ್ರೆಸ್ ಪಕ್ಷ ತನ್ನ ಹತಾಶೆ, ಅಸಹನೆಯನ್ನು, ಕೆಟ್ಟ ರೀತಿಯಲ್ಲಿ ಬೀದಿಗೆ ತಂದಿದೆ. ಅಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ಜಾಗತಿಕವಾಗಿ ದೇಶಕ್ಕೆರ ಅಪಮಾನ ಮಾಡುವ ಕೆಲಸ ಮಾಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಶಾಂತಿ ಸಭೆ, ಹಿಂದು ಕಾರ್ಯಕರ್ತರು ಗೈರು

ಬಾಗಲಕೋಟೆ: ಶಿವಾಜಿ ಜಯಂತಿ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟದಿಂದ ಬೂದಿ ಮುಚ್ಚಿದ ಕೆಂಡದಂತಿರುವ ಬಾಗಲಕೋಟೆಯಲ್ಲಿ ಫೆ.24ರ ವರೆಗೂ ನಿಷೇಧಾಜ್ಞೆ ಇದ್ದರೂ ಹಿಂದೂ ಸಮಾವೇಶದ ಭವ್ಯ ಮೆರವಣಿಗೆ ನಡೆಯಿತು. ಇನ್ನೊಂದೆಡೆ ಡಿಸಿ ಕಚೇರಿಯಲ್ಲಿ ಮುಸ್ಲಿಂ ಮುಖಂಡರ ಸಭೆ ನಡೆಯಿತು. ಹಿಂದೂ ಮುಖಂಡರು ಸಭೆಯಿಂದ ದೂರ ಸರಿದರು.

ಕಲ್ಲು ತೂರಾಟ, ಚಪ್ಪಲಿ ತೂರಾಟದಿಂದಾಗಿ ಶುಕ್ರವಾರ ಹಿಂದೂ ಕಾರ್ಯಕರ್ತರು ಅಂಗಡಿಗಳನ್ನು ಮುಚ್ಚಲು ಮುಂದಾದಾಗ ಲಾಠಿ ಚಾರ್ಜ್ ನಡೆದಿತ್ತು. ಹೀಗಾಗಿ ಬಾಗಲಕೋಟೆಯಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡ ಪೊಲೀಸ್ ಇಲಾಖೆ ಬೇರೆ ಬೇರೆ ಜಿಲ್ಲೆಗಳಲ್ಲಿ ಹೆಚ್ಚಿನ ಸಿಬ್ಬಂದಿ ಕರೆಯಿಸಿ ನಗರದ ಆಯಕಟ್ಟಿನ ಸ್ಥಳದಲ್ಲಿ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು. ಶುಕ್ರ ವಾರ ಡಿಸಿಗಳ ನೇತೃತ್ವದಲ್ಲಿ ಗುರುವಾರ ಶಾಂತಿ ಸಭೆ ನಡೆಸುವ ಸಂದರ್ಭದಲ್ಲಿ ಹಿಂದೂ ಮುಖಂಡರು ಭಾಗವಹಿಸಿದ್ದರು.

ಆಗ ಮುಸ್ಲಿಂ ಮುಖಂಡರು ಆಗಮಿಸದ ಹಿನ್ನೆಲೆಯಲ್ಲಿ ಸಭೆ ರದ್ದಾಗಿತ್ತು. ಹೀಗಾಗಿ ಶನಿವಾರ ಮಧ್ಯಾಹ್ನ 12ಕ್ಕೆ ಮತ್ತೊಮ್ಮೆ ಜಿಲ್ಲಾಧಿಕಾರಿ ಸಂಗಪ್ಪ, ಸಿಇಒ ಶಶಿಧರ ಕೂರೇರಾ, ಎಸ್ಪಿ ಸಿದ್ಧಾರ್ಥ ಗೋಯಲ್, ಅಮರನಾಥ ರೆಡ್ಡಿ ನೇತೃತ್ವದಲ್ಲಿ ಮತ್ತೊಮ್ಮೆ ಸಭೆ ಕರೆಯಲಾಗಿತ್ತು. ಆ ಸಭೆಗೆ ಮುಸ್ಲಿಂ ಮುಖಂಡರು, ಕಾಂಗ್ರೆಸ್ ಮುಖಂಡರು ಹಾಜರಾದರು. ಹಿಂದೂ ಮುಖಂಡರನ್ನು ಕರೆಯದೇ ಮರಾಠ ಸಮಾಜದವರನ್ನು ಮಾತ್ರ ಸಭೆಗೆ ಕರೆಯಲಾಗಿದೆ ಎಂದು ಆರೋಪಿಸಿ ಮರಾಠಾ ಸಮಾಜದ ಮುಖಂಡರು ಸಭೆ ಬಹಿಷ್ಕರಿಸಿದರು.

ನಂತರ ಮರಾಠಾ ಸಮಾಜದಿಂದ ಉಪವಿಭಾಗಾಧಿಕಾರಿಗಳಿಗೆ ಸಮಾಜದ ರಾಜ್ಯ ಉಪಾಧ್ಯಕ್ಷ ಶೇಖರ ಮಾನೆ, ಶ್ರೀಕಾಂತ ಪಾಟೀಲ ನೇತೃತ್ವದಲ್ಲಿ ಮನವಿ ಸಲ್ಲಿಸಿ, ಎಲ್ಲ ಆರೋಪಿಗಳನ್ನ ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಲಾಯಿತು.

ವ್ಯಾಪಾರ ವಹಿವಾಟುಗೆ ಹೊಡೆತ

ಮೊದಲೇ ಮುಳುಗಡೆಯಿಂದ ಮೂರು ಭಾಗವಾಗಿ ಹೋಗಿರುವ ಬಾಗಲಕೋಟೆಯಲ್ಲಿ ಈ ಘಟನೆಯಿಂದಾಗಿ ವ್ಯಾಪಾರ ವಹಿವಾಟಿಗೆ ತೀವ್ರ ತೊಂದರೆಯಾಯಿತು. ಗ್ರಾಹಕರು ಘಟನೆಗೆ ಅಂಜಿ ಮಾರುಕಟ್ಟೆ ಕಡೆಗೆ ಆಗಮಿಸುವುದು ಕಡಿಮೆಯಾಗಿತ್ತು. ಇದರಿಂದಾಗಿ ವ್ಯಾಪಾರಸ್ಥರು ಸರಿಯಾದ ವ್ಯಾಪಾರವಿಲ್ಲದೇ ತೀವ್ರ ನಷ್ಟ ಅನುಭವಿಸಿದರು.

ರಾಜ್ಯ ಆರ್ಥಿಕವಾಗಿ ದಿವಾಳಿ: ಬಿವೈವಿ

ಹೊನ್ನಾಳಿ: ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯ ಆರ್ಥಿಕ ವ್ಯವಸ್ಥೆ ದಿವಾಳಿಯಾಗಿದೆ. ಅಭಿವೃದ್ಧಿ ಶೂನ್ಯವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.



ತಾಲೂಕಿನ ತರಗನಹಳ್ಳಿ ಗ್ರಾಮದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ವಿಬಿ–ರಾಮ್–ಜಿ ಬಗ್ಗೆ ಪಾದಯಾತ್ರೆ ಹಾಗೂ ಜನಜಾಗೃತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಅವಧಿಯಲ್ಲಿ ನರೇಗಾ ಯೋಜನೆಯಲ್ಲಿ ಗುಂಡಿ ಮುಚ್ಚು ಗುಂಡಿ ತೆಗಿ ಎನ್ನುವ ಕಾಯಕದಲ್ಲೇ ಭ್ರಷ್ಟಾಚಾರ ನಡೆಸಿದ್ದಾರೆ. ಯಂತ್ರಗಳ ಮೂಲಕ ಕೆಲಸ ಮಾಡಿಸಿ ತಮಗೆ ಇಚ್ಚೆಗೆ ಅನುಗುಣವಾಗಿ ಕೆಲಸ ಮಾಡಿ ದುರುಪಯೋಗ ಮಾಡಿಕೊಂಡಿದ್ದರು. ಅವರ ಕಾಲದಲ್ಲಿ ನರೇಗಾ ಯೋಜನೆಗಳು ಸದುಪಯೋಗ ಆಗಲಿಲ್ಲ ಎಂದರು.

ಬೆಳಗಾವಿಯಲ್ಲಿ ಕಬ್ಬು ಬೆಳೆಗಾರರಿಗೆ ಸಮಪಕ ಬೆಲೆ ನೀಡದೆ ರೈತರು ಪ್ರತಿಭಟನೆ ನಡೆಸಿದಾಗ ನಾನೂ ಸಹ ಅಹೋರಾತ್ರಿ ಧರಣಿನಿರತ ನಾಗಿದ್ದೆ. ಆ ಸಂದರ್ಭದಲ್ಲಿ ಸರಕಾರ 300 ಪ್ರೋತ್ಸಾಹಧನ ನೀಡುವುದಾಗಿ ಹೇಳಿ ಇದುವರೆಗೂ ಕಬ್ಬು ಬೆಳೆಗಾರರಿಗೆ ಪಾವತಿ ಮಾಡಿಲ್ಲ ಎಂದು ದೂರಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿದರು. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಚಿವ ಕರುಣಾಕರರೆಡ್ಡಿ, ಮಾಜಿ ಶಾಸಕರಾದ ಬಸವರಾಜ್‌ನಾಯ್ಕ್, ಬಿಜೆಪಿ ರಾಜ್ಯ ಮುಖಂಡ ದತ್ತಾತ್ರಿ, ಜಿಲಾ ಬಿಜೆಪಿ ಅಧ್ಯಕ್ಷ ರಾಜಶೇಖರ್ ನಾಗಪ್ಪ ಮಾತನಾಡಿದರು. ಇದಕ್ಕೂ ಮೊದಲು ತಾಲೂಕಿನ ಸಿಂಗಟಕೆರೆಯಿಂದ ತರಗನಹಳ್ಳಿವರೆಗೆ 101 ಪೂರ್ಣ ಕುಂಭದೊಂದಿಗೆ ಪಾದಯಾತ್ರೆ ನಡೆಯಿತು.

ಜಗಳೂರು ಮಾಜಿ ಶಾಸಕ ರಾಮಚಂದ್ರಪ್ಪ, ವಿಧಾನ ಪರಿಷತ್ತಿನ ಮಾಜಿ ಮುಖ್ಯಸಚೇತಕ ಡಾ. ಶಿವಯೋಗಿಸ್ವಾಮಿ, ಮಾಡಾಳು ಮಲ್ಲಿಕಾರ್ಜುನ, ಕಲ್ಲೇಶ್, ನೆಲಹೊನ್ನೆ ಮಂಜುನಾಥ್ ಇದ್ದರು.

ಪೂರ್ವನಿಯೋಜಿತ ಕೃತ್ಯ

ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಕಾರ್ಯಕ್ರಮದ ಮೇಲೆ ನಡೆದ ಕಲ್ಲು ತೂರಾಟ ಪೂರ್ವನಿಯೋಜಿತ ಕೃತ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಂದರು. ಶನಿವಾರ ಹೊನ್ನಾಳಿಗೆ ಆಗಮಿಸಿದಾಗ ಸುದ್ದಿಗಾರರೊಂದಿಗೆ ಮಾತನಾಡಿ, ಹಿಂದೂಗಳು ಯಾವುದೇ ಧಾರ್ಮಿಕ ಕಾರ್ಯಕ್ರಮ ಅಥವಾ ಮೆರವಣಿಗೆ ನಡೆಸಿದಾಗಲೂ ಇಂತಹ ಕೃತ್ಯ ನಡೆಸುತ್ತಾರೆ. ಆದರೆ ಸರ್ಕಾರ ಇವರ ವಿರುದ್ಧ ಕ್ರಮ ಜರುಗಿಸಲು ಪೊಲೀಸರಿಗೆ ಸೂಚಿಸುವುದಿಲ್ಲ ಇದೊಂದು ದುರಂತವೇ ಸರಿ ಎಂದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಅವರ ತುಷ್ಟೀಕರಣ ನೀತಿಯಿಂದಾಗಿ ವಿಕೃತ ಮನಸ್ಸು ಇರುವವರು ಇಂತಹ ಹೀನ ಕೃತ್ಯದಲ್ಲಿ ತೊಡಗಿದ್ದಾರೆ ಎಂದರು.

ತುಂಗಭದ್ರಾ ನದಿ ತೀರದಲ್ಲಿ ಪಾರ್ಟಿ: ಪ್ರಕರಣ ದಾಖಲು

ಕೊಪ್ಪಳ: ವಿದೇಶಿಗರ ಅಕ್ರಮ ಪಾರ್ಟಿಗಳು ಮುಂದುವರಿದಿವೆ. ಈ ಸಂಬಂಧ ರೆಸಾರ್ಟ್ ಮಾಲೀಕರ ಮೇಲೆ ಪ್ರಕರಣ ದಾಖಲಾಗಿದೆ. ಗಂಗಾವತಿ ಸಮೀಪದ ತುಂಗಭದ್ರಾ ನದಿ ತೀರದಲ್ಲಿ ಫೆ.16ರಂದು ಯಾವುದೇ ಅನುಮತಿ ಪಡೆಯದೆ ಭರ್ಜರಿ ಪಾರ್ಟಿ ಆಯೋಜಿಸಲಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿತ್ತು. ವಿಡಿಯೋ ನೋಡಿದ್ದ ಪೊಲೀಸರು ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಕಾರ್ಯಕ್ರಮ ಮುನಿರಾಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಎಚ್ಚೆತ್ತ ಪೊಲೀಸ್ ಇಲಾಖೆ 'ದಿ ಹಂಪಿ ಕೆಫೆ' ರೆಸಾರ್ಟ್ ಮಾಲೀಕ ಪಿಯೂಷ್ ಹಾಗೂ ವ್ಯವಸ್ಥಾಪಕರ ವಿರುದ್ಧ ಅನುಮತಿ ಇಲ್ಲದೆ ಪಾರ್ಟಿ ಆಯೋಜಿಸಿದ ಆರೋಪದಡಿ ಪ್ರಕ ರಣ ದಾಖಲಿಸಿದೆ. ಕಾರ್ಯಕ್ರಮಕ್ಕೆ ಯಾರು ಯಾರು ಹಾಜರಾಗಿದ್ದರು ಎಂಬುದರ ಕುರಿತು ತನಿಖೆ ನಡೆಯುತ್ತಿದೆ. ರೆಸಾರ್ಟ್‌ನಲ್ಲಿ ನಿಯಮಬಾಹಿರ ಚಟುವಟಿಕೆಗಳ ಪರಿಶೀಲನೆಗಾಗಿ ವಿಶೇಷ ತಂಡ ರಚಿಸಲಾಗಿದ್ದು, ಜಿಲ್ಲಾಡಳಿತವೂ ಟಾಸ್ಕ್‌ಫೋರ್ಸ್ ರಚಿಸಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಅರಸಿದ್ಧಿ ತಿಳಿಸಿದ್ದಾರೆ.

ಉನ್ನತಮಟ್ಟಕ್ಕೇರುವುದು ಕೈಗೆ ಇಷ್ಟವಿಲ್ಲ

ಬೆಂಗಳೂರು: ಭಾರತ ಮುಂದುವರೆಯುವುದು, ಉನ್ನತ ಮಟ್ಟಕ್ಕೇರುವುದು ಕಾಂಗ್ರೆಸ್ಸಿಗೆ ಇಷ್ಟವಿಲ್ಲ. ಅದಕ್ಕಾಗಿ ಕಾಂಗ್ರೆಸ್ಸಿನ ಕೆಲವು ಗುಲಾಮರನ್ನು ಎಐ ಶೃಂಗಸಭೆಯಲ್ಲಿ ವಿರೋಧಿಸಲು ಕಳುಹಿಸಿದ್ದು, ಅವರು ಒಳಗೆ ಬಂದು ಅದನ್ನು ಅಡ್ಡಿಪಡಿಸಲು ಮುಂದಾಗಿದ್ದಾರೆ ಎಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.



ಅವರು ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮೋದಿ ಅವರು ಎಐ ಶೃಂಗಸಭೆಯ ಮೂಲಕ ಭಾರತದ ಗೌರವ ಎತ್ತಿ ಹಿಡಿಯುವ ಕೆಲಸ ಮಾಡುತ್ತಿದ್ದಾರೆ. ಆದರೆ, ಶೃಂಗಸಭೆಗೆ ಅಡ್ಡಿಪಡಿಸುವ ಕೆಲಸ ರಾಹುಲ್ ಗಾಂಧಿ ಮಾಡಿಸಿದ್ದಾರೆ ಎಂದು ವರದಿಗಳು ಬರುತ್ತಿವೆ. ಇದು ದೇಶವಿರೋಧಿ ನಡೆಯಾಗಿದೆ ಎಂದರು.

ಶೃಂಗಸಭೆಯ ಬಳಿ ಸೇರಿದ್ದ ಸಾರ್ವಜನಿಕರು ಬಟ್ಟೆ ಬಿಚ್ಚಿಕೊಂಡಿದ್ದ ಕಾಂಗ್ರೆಸ್ಸಿನವರಿಗೆ ಬೂಟಿನಲ್ಲಿ ಒದೆ ಕೊಟ್ಟು ಕಳುಹಿಸಿದ್ದಾರೆ. ಕಾಂಗ್ರೆಸ್ಸಿಗೆ ಇವತ್ತು ಜನರೇ ಬೂಟಿನ ಏಟು ಕೊಡುವ ಕೆಲಸ ಮಾಡಿದ್ದಾರೆ.

ಕಾಂಗ್ರೆಸ್ ಸಂಸ್ಕೃ ತಿಗೆ ಬೂಟಿನ ಏಟು ಬೇಕಾಯಿತು. ಇದು ಜನರಿಂದ ಇವತ್ತು ಪ್ರಾರಂಭ. ದೇಶಾದ್ಯಂತ ಇನ್ನು ಕಾಂಗ್ರೆಸ್ಸಿನವರಿಗೆ ಇದೇ ರೀತಿಯ ಪೂಜೆ ಸಹಜವಾಗಿ ಆಗಲಿದೆ ಎಂದು ಕಾಣಿಸುತ್ತಿದೆ ಎಂದು ವಿಶ್ಲೇಷಿಸಿದರು.

ಇಂಥ ಚಿತಾವಣೆ ಮಾಡುವವರಿಗೆ ಪ್ರತಿಯೊಬ್ಬರಿಗೂ ಶಿಕ್ಷೆ ಆಗಬೇಕು. ಜನರು ಹೇಳುತ್ತಿರುವುದು ಸರಿಯೇ? ನೀವು ಹಿಂದುಗಳನ್ನು ಯಾಕೆ ಟಾರ್ಗೆಟ್ ಮಾಡುತ್ತೀರಿ ಎಂಬುದಕ್ಕೆ ಪ್ರಿಯಾಂಕ್ ಖರ್ಗೆ ಉತ್ತರ ಕೊಡಬೇಕು ಎಂದು ಆಗ್ರಹಿಸಿದರು. ನಾನು ಎಲ್ಲ ಮುಸ್ಲಿಮರನ್ನು ನಿಂದಿಸುವುದಿಲ್ಲ. ಉಳಿದವರಿಗೆ ನೋವು ಕೂಡ ಆಗಬಹುದು. ಯಾರು ಈ ಕೃತ್ಯಗಳಲ್ಲಿ ಭಾಗಿಯಾಗುತ್ತಾರೋ ಅವರು ಮಾತ್ರ.

ನಾಲ್ಕು ಜನ ಮಾಡುವ ಕೃತ್ಯಗಳಿಂದ ನಮ್ಮ ಸಮುದಾಯಕ್ಕೆ ಇವತ್ತು ಕೆಟ್ಟ ಹೆಸರು ಬರುತ್ತಿದೆ ಎಂದು ಅನೇಕರು ಮಾತನಾಡುತ್ತಾರೆ. ಆದ್ದರಿಂದ ನಾನು ಸಾರಾಸಗಟಾಗಿ ಮುಸಲ್ಮಾನರನ್ನು ವಿರೋಧಿಸುವುದಿಲ್ಲ. ಈ ಕೃತ್ಯಗಳಲ್ಲಿ ಇರುವವರನ್ನು ಹೆಡೆಮುರಿ ಕಟ್ಟುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಒತ್ತಾಯಿಸಿದರು.

ಹಿಂದುಗಳ ಮೇಲಿನ ದಬ್ಬಾಳಿಕೆ ಖಂಡನೀಯ

ಬಾಗಲಕೋಟೆಯಲ್ಲಿ ಆಗಿರುವುದು ಹಿಂದುಗಳ ಮೇಲಿನ ದಬ್ಬಾಳಿಕೆ, ಇದನ್ನು ಸಹಿಸಲಾಗದು. ಈಗ ಶಾಂತಿ ಸಭೆಗೆ ಕರೆದರೂ ಕೆಲವರು ಬರುತ್ತಿಲ್ಲ. ಇದಕ್ಕೆ ಈಗಿನ ಸರ್ಕಾರವೇ ಕಾರಣ. ಚಿತ್ತಾಪುರದಲ್ಲಿ ನಡೆದಿದೆ ಎಂದರೆ ಚಿತಾವಣೆ ಯಾರು? ಇದಕ್ಕೆಲ್ಲ ಚಿತ್ತಾಪುರದ ಶಾಸಕ ಪ್ರಿಯಾಂಕ್ ಖರ್ಗೆ ಅವರೇ ಏನೋ ಮಾಡಿಸುತ್ತಿದ್ದಾರೆಂಬ ಅನುಮಾನವಿದೆ ಎಂದು ಸ್ಥಳೀಯ ಕೆಲವರು ತಿಳಿಸಿದ್ದಾಗಿ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಕಲ್ಲು ತೂರಾಟ ಪ್ರಕರಣ | ಹೆಚ್ಚುವರಿ ಎಸ್ಪಿ, ಡಿವೈಎಸ್ಪಿಗಳ ನಿಯೋಜನೆ

ಬಾಗಲಕೋಟೆಯಲ್ಲಿ ಪೊಲೀಸ್ ಸರ್ಪಗಾವಲು

ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜಯ ಜಯಂತಿ ನಿಮಿತ್ತ ಭವ್ಯ ಮೆರವಣಿಗೆ ನಡೆಯುತ್ತಿರುವ ಸಂದರ್ಭದಲ್ಲಿ ಗುರುವಾರ ರಾತ್ರಿ ಮಸೀದಿಯಿಂದ ಕಲ್ಲು ತೂರಾಟ, ಚಪ್ಪಲಿ ತೂರಿ ಬಂದ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಸದ್ಯ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಪೊಲೀಸ್ ಸರ್ಪಗಾವಲು ಹಾಕಲಾಗಿದೆ.

ಕಲ್ಲು ತೂರಾಟ ಪ್ರಕರಣ ನಡೆದ ಬಳಿಕ ಬಾಗಲಕೋಟೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಜತೆ ಸೇರಿ ಐವರು ಐಪಿಎಸ್ ಅಧಿಕಾರಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ. ಐಜಿಪಿ ಚೇತನ್ ಸಿಂಗ್ ರಾಠೋಡವರ ಘಟನೆ ನಡೆದ ಸ್ಥಳದಲ್ಲೇ ಕಳೆದ ಎರಡು ದಿನಗಳಿಂದ ಎಲ್ಲವನ್ನೂ ಪರಿಶೀಲಿಸುತ್ತಿದ್ದಾರೆ. ಹಿಂದಿನ ಬಾಗಲಕೋಟೆ ಎಸ್ಪಿಯಾಗಿ ಕಾರ್ಯನಿರ್ವಹಿಸಿದ್ದ ರಿಷ್ಯಂತ್, ಅಮರನಾಥ ರೆಡ್ಡಿಯವರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಪೊಲೀಸರ ರೂಟ್‌ಮಾರ್ಚ್: ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ, ಗೃಹರಕ್ಷದಳ, ಪಿಎಸ್‌ಐ, ಸಿಪಿಐಗಳಿಂದ ನಗರದ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಶಾಂತಿ ಕಾಪಾಡುವಂತೆ ಪಥಸಂಚಲನ ನಡೆಸಿದರು.

ಖಾಕಿ ಸರ್ಪಗಾವಲು: ನಗರದ ಪಂಕಾ ಮಸೀದಿ ಮುಂಭಾಗ



ಎರಡ್ಮೂರು ಜಿಲ್ಲಾ ಸಶಸ್ತ್ರ ಪಡೆ ಹಾಗೂ ಕೆಎಸ್‌ಆರ್‌ಪಿ ತುಕಡಿಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು. ಗಂಟೆಗೊಮ್ಮೆ ಐಜಿಪಿ ಚೇತನ್ ಸಿಂಗ್ ರಾಠೋಡ ನಗರದಲ್ಲಿ ಸಂಚರಿಸಿ ಪರಿಶೀಲನೆ ನಡೆಸುತ್ತಿದ್ದರು. ಇನ್ನೂ ಬಾಗಲಕೋಟೆ ಹಿಂದಿನ ಎಸ್ಪಿ ಅಮರನಾಥ ರೆಡ್ಡಿ, ಸಿ.ಬಿ.ರಿಷ್ಯಂತ್ ಕೂಡ ನಗರದಲ್ಲಿ ಸಂಚಾರ ನಡೆಸಿದರು. ಪಂಕಾ ಮಸೀದಿ ಬಳಿ ಎಸ್ಪಿಗಳು ಮುಕ್ಕಾಂ ಹೂಡಿದ್ದರು.

ಬಂದ್ ವಾತಾವರಣ ಕಾಣಲಿಲ್ಲ: ಬಾಗಲಕೋಟೆ ನಗರದ ಹಳೆ ಮಾರುಕಟ್ಟೆ, ತರಕಾರಿ,ಕಿರಾಣಿ ಮಾರುಕಟ್ಟೆಯಲ್ಲಿ ಎಂದಿನಂತೆ ಶನಿವಾರ ಮಾರುಕಟ್ಟೆ ಆರಂಭಾಗಿತ್ತು. ಸಾರ್ವಜನಿಕರು ಕೂಡ ಎಂದಿನಂತೆ ತಮ್ಮ ದೈನಂದಿನ ಚಟುವಟಿಕೆಯಲ್ಲಿ ಭಾಗವಹಿಸಿದ್ದರು.

ಬೂದಿ ಮುಚ್ಚಿದ ಕೆಂಡ: ಬಾಗಲಕೋಟೆಯ ಪಂಕಾ ಮಸೀದಿ, ಅಂಬಾಭವಾನಿ ದೇವಸ್ಥಾನದ ಸಮೀಪದ ರಸ್ತೆಯಲ್ಲಿ ಆತಂಕದ ವಾತಾವರಣ ಇತ್ತು. ಸದ್ಯಕ್ಕೆ ಬೂದಿ ಮುಚ್ಚಿದ ಕೆಂಡದಂತೆ ಇಲ್ಲಿ ಕಂಡುಬಂದಿತು.

ಸಭೆ ನಡೆಸದ ಸಚಿವರು

ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆಯಲ್ಲಿ ಕಲ್ಲು ತೂರಾಟ, ಚಪ್ಪಲಿ ಎಸೆತೆ ನಡೆದ ಪ್ರಕರಣ ನಡೆದು ಬಾಗಲಕೋಟೆಯಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾದ ಸಂದರ್ಭದಲ್ಲಿ ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ಆರ್ .ಬಿ.ತಿಮ್ಮಾಪುರ ಗ್ಯಾರಂಟಿ ಸಮಾವೇಶ ಉತ್ಸವದಲ್ಲಿ ಭಾಗಿಯಾಗಿದ್ದರು. ಕಾರ್ಯಕ್ರಮ ನಂತರವೂ ಬಾಗಲಕೋಟೆಯಲ್ಲಿ ನಡೆದ ಘಟನಾ ಸ್ಥಳಕ್ಕೂ ಭೇಟಿ ನೀಡಲಿಲ್ಲ. ಇನ್ನೂ ಬಾಗಲಕೋಟೆಯ ಘಟನೆಗೆ ಸಂಬಂಧಿಸಿದಂತೆ ಹಿಂದೂ ಮುಸ್ಲಿಂ ಮುಖಂಡರನ್ನು ಕರೆದು ಸಭೆ ಕೂಡ ನಡೆಸಲಿಲ್ಲ. ಇದರಿಂದ ಹಿಂದೂ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಲಬುರಗಿಯಲ್ಲೂ ಶಿವಾಜಿ ಜಯಂತಿ ವೇಳೆ ಗದ್ದಲ

2 ಸಮುದಾಯಗಳ ನಡುವೆ ಗಲಾಟೆ

ಕಲಬುರಗಿ: ಶಿವಾಜಿ ಮಹಾರಾಜರ ಜಯಂತಿ ಹಿನ್ನೆಲೆ ರಾಜ್ಯದ ಬಾಗಲಕೋಟೆಯಲ್ಲಿನ ಮಸೀದಿ ಬಳಿ ನಡೆದ ಕಲ್ಲು ತೂರಾಟದ ಪ್ರಕರಣ ಮಾಸುವ ಮುನ್ನವೇ, ಇದೀಗ ಅಂತಹದ್ದೇ ಘಟನೆ ಕಲಬುರಗಿಯಲ್ಲಿ ನಡೆದಿದ್ದು, ಕೇವಲ ಡಿಜೆ ಸೌಂಡ್ ಕಡಿಮೆ ಮಾಡು ಎನ್ನುವ ವಿಚಾರಕ್ಕಾಗಿ ಎರಡು ಸಮುದಾಯಗಳ ನಡುವೆ ಗಲಾಟೆಯಾಗಿ ಓರ್ವರಿಗೆ ಗಾಯವಾಗಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಜಿಲ್ಲೆಯ ಚಿತ್ತಾಪುರ ತಾಲೂಕಿನ ರಾವೂರ್ ಗ್ರಾಮದ ಗೋಕುಲ್ ನಗರದ ಗಣೇಶ್ ಕಟ್ಟೆಯ ಮೇಲೆ ಕಳೆದ ಫೆ.19ರಂದು ಪ್ರತಿ ವರ್ಷದಂತೆ ಈ ವರ್ಷವೂ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯಂದು ಶಿವಾಜಿ ಮಹಾರಾಜರ ಭಾವಚಿತ್ರವಿಟ್ಟು ಪೂಜೆ ಮಾಡಲಾಗುತ್ತಿತ್ತು. ಈ ವೇಳೆ ಡಿಜೆ (ಧ್ವನಿವರ್ಧಕ) ಹಚ್ಚಿ ಹಿಂದೂ ಯುವಕರು ಡ್ಯಾನ್ಸ್ ಮಾಡುವಾಗ ಅನ್ಯ ಕೋಮಿನವರು ಡಿಜೆ ಸೌಂಡ್ ಕಡಿಮೆ ಮಾಡುವಂತೆ ಕಿರಿಕ್ ಮಾಡಿಕೊಂಡಿದ್ದೆ ಎರಡು ಸಮುದಾಯಗಳ ನಡುವೆ ನಡೆದ ಗಲಾಟೆಗೆ ಕಾರಣವಾಗಿದೆ.

ಡಿಜೆ ಸೌಂಡ್ ಕಡಿಮೆ ಮಾಡುವಂತೆ ಹೇಳಿ ಕಿರಿಕ್ ಮಾಡುತ್ತಿದ್ದಾಗ,ಈ ವೇಳೆ ಅವರನ್ನು ಸಮಾಧಾನ ಪಡಿಸಲು ಮುಂದಾದರೂ ಸಹ ಒಂದು ಕೋಮಿನ ಜನರು ಗಲಾಟೆ ಮಾಡಿದ್ದಾರೆ. ಗಲಾಟೆ ಬಿಡಿಸಲು ಹೋದಾಗ ಕಲ್ಲು ತೂರಾಟ, ಬಡಿಗೆ ಹಿಡಿದು ಕೆಲ ಕಿಡಿಗೇಡಿಗಳು ಹಲ್ಲೆ ಮಾಡಿದ್ದಾರೆ. ಗಲಾಟೆ ಸಮಯದಲ್ಲಿ ಪೊಲೀಸರ ಸಂಖ್ಯೆ ಕಡಿಮೆ ಇರುವುದರಿಂದ ಎರಡು ಸಮುದಾಯಗಳ ನಡುವಿನ ಗಲಾಟೆ ವಿಕೋಪಕ್ಕೆ ಹೋಗಲು ಕಾರಣವಾಗಿದೆ ಎನ್ನಲಾಗುತ್ತಿದೆ.



"ಶಿವಾಜಿ ಮಹಾರಾಜರ ಜಯಂತಿ ವೇಳೆ ಸೌಂಡ್ ವಿಚಾರವಾಗಿ ಗಲಾಟೆ ನಡೆದಿದೆ. ಆದರೆ, ಯಾರಿಂದಲೂ ಇಲ್ಲಿಯವರೆಗೆ ಎಫ್‌ಐಆರ್ ದಾಖಲಾಗಿಲ್ಲ. ಗಲಾಟೆಯಲ್ಲಿ ಓರ್ವನಿಗೆ ಸಣ್ಣ ಪ್ರಮಾಣದಲ್ಲಿ ಗಾಯವಾಗಿವೆ. ಗಲಾಟೆ ವೇಳೆ ಕಂಡ ಜನರಲ್ಲಿ ಬಹುತೇಕರು ಗಲಾಟೆ ಬಿಡಿಸಲು ಪ್ರಯತ್ನ ಮಾಡಿದ್ದಾರೆ.ಇದೀಗ ವಾತಾವರಣ ಶಾಂತವಾಗಿದೆ.

■ **ಅಡ್ಡೂರು ಶ್ರೀನಿವಾಸುಲು, ಪೊಲೀಸ್ ವರಿಷ್ಠಾಧಿಕಾರಿ, ಕಲಬುರಗಿ**

ಪ್ರಶ್ನೋತ್ತರ ರತ್ನಮಾಲಿಕೆ

◆ ವಿದ್ವಾನ್ ನರಸಿಂಹ ಭಟ್

ಮಾತಿಗೆ ಭೂಷಣ ಯಾವುದು?

▶ ಉ: ಸತ್ಯ

ಮಾತಿಗೆ ಭೂಷಣವಾದುದು ಯಾವುದು ಎಂಬುದು ಪ್ರಶ್ನೆ. ಅದಕ್ಕೆ ಉತ್ತರ 'ಸತ್ಯ' ಎಂಬುದು. ಅಂದರೆ ಮಾತು ಮತ್ತು ಸತ್ಯ ಇವೆರಡೂ ಪರಸ್ಪರ ಅನ್ಯೋನ್ಯವಾದವುಗಳು ಎಂಬುದು ಇದರ ತಾತ್ಪರ್ಯವಷ್ಟೇ. ಮಾತು ಯಾವಾಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಲ್ಲದು? ಅಥವಾ ಮಾತು ಯಾವಾಗ ಪರಿಪೂರ್ಣವಾಗಬಲ್ಲದು? ಎಂದರೆ ಆ ಮಾತಿನಲ್ಲಿ ಸತ್ಯ ಹುದುಗಿದಾಗ, ಎಂಬುದು ಇದರ ಹಿಂದಿರುವ ಆಶಯವಷ್ಟೇ. ಮಾತಿನಲ್ಲಿ ಸತ್ಯವಿಲ್ಲದಿದ್ದರೆ ಅದು ಪೂರ್ಣವಾಗಲಾರದು. ಅದಕ್ಕಾಗಿ ಸತ್ಯವನ್ನು ಮಾತಿಗೆ ಭೂಷಣ ಎಂಬುದಾಗಿ ಹೇಳಲಾಗಿದೆ. 'ಭೂಷಣ' ಎಂದರೆ ಅಲಂಕಾರ ಎಂದರ್ಥ. ಅಂದರೆ ಸತ್ಯದಿಂದ ಮಾತ್ರವೇ ಮಾತು ಅಲಂಕೃತವಾಗುತ್ತದೆ. ಮಾತು ಆಡಿದವರನ್ನು ಅಲಂಕರಿಸುತ್ತದೆ. ಅವರನ್ನು ಮಾನ್ಯರನ್ನಾಗಿ ಮಾಡುತ್ತದೆ ಎಂಬುದಷ್ಟೇ ಇಲ್ಲಿನ ವಿಷಯ.

ಮಾತು ಹೇಗಿರಬೇಕು? ಮಾತಿನ ಮೌಲ್ಯವೇನು? ಇತ್ಯಾದಿ ವಿಷಯದ ಬಗ್ಗೆ ವೇದದಿಂದ ಹಿಡಿದು ಎಲ್ಲ ಸಾಹಿತ್ಯಗಳಲ್ಲೂ ವಿಪುಲವಾಗಿ ಹೇಳಿದ್ದನ್ನು ನಾವು ಕಾಣಬಹುದು. ಅಂತೆಯೇ ಮಾತಿಗೂ ಮಿಗಿಲಾಗಿ ಸತ್ಯವನ್ನು ಇನ್ನಷ್ಟು ವಿವರವಾಗಿ ಹೇಳಿದ್ದನ್ನು ಕಾಣಬಹುದು. ಹಾಗಾಗಿ ಮಾತು ಮತ್ತು ಸತ್ಯ ಎರಡು ಒಂದಕ್ಕೊಂದು ಎಡಬಿಡದೆ ಸೇರಿರುವ ಎರಡು ಸಂಗತಿಗಳು ಎಂಬುದನ್ನು ಹೇಳಬಹುದು. ಮಾತಿನಲ್ಲಿ ಸತ್ಯ ಎಂಬುದು ಅತ್ಯಂತ ಅನಿವಾರ್ಯ. ಉಪನಿಷತ್ತು ಈ ಮಾತನ್ನು ಸಾರುತ್ತದೆ – 'ಸತ್ಯಂ ವದ' ಎಂಬುದಾಗಿ. ಸತ್ಯವನ್ನು ಮಾತನಾಡಬೇಕು. ಸತ್ಯವನ್ನೇ ಮಾತನಾಡಬೇಕು. ಸತ್ಯವನ್ನು ಬಿಟ್ಟು ಬೇರೆ ಯಾವುದೂ ಕೂಡ ಮಾತಿನಲ್ಲಿ ಇರಬಾರದು. ಅಷ್ಟರಮಟ್ಟಿಗೆ ಮಾತು ಸತ್ಯವನ್ನು ಆವರಿಸಿಕೊಂಡು ಇರಬೇಕು. ಮಾತಾಡಿದರೆ ಅದು ಸತ್ಯವೇ ಆಗಿರಬೇಕು. ಸತ್ಯವಲ್ಲದ ಮಾತನ್ನು ಆಡಬಾರದು ಎಂಬುದು ಇದರ ಅರ್ಥ. ರಘುವಂಶದ ರಾಜರು ಸತ್ಯವನ್ನು ಯಾವ ರೀತಿಯಾಗಿ ಆಚರಿಸುತ್ತಿದ್ದರು ಎಂಬುದನ್ನು ಕಾಳಿದಾಸ ಹೀಗೆ ಹೇಳುತ್ತಾನೆ – 'ಸತ್ಯಾಯ ಮಿತಭಾಷಿಣಾಮ್' ಎಂಬುದಾಗಿ. ಅಂದರೆ ಅವರ ಮಾತುಗಳಲ್ಲಿ ಮಿತಿ ಇರುತ್ತಿತ್ತು. ಅದಕ್ಕೆ ಕಾರಣ ಆ ಮಾತು ಸತ್ಯದಿಂದ ಕೂಡಿತ್ತು. ಯಾವ ಮಾತು ಸತ್ಯದಿಂದ ಕೂಡಿರುತ್ತದೆಯೋ, ಆ ಮಾತು ಹಿತವು ಮಿತವು ಆಗಿಯೇ ಇರಬೇಕು. ಅಂತಹ ಸತ್ಯದ ನಡೆಯನ್ನು ಆ ರಾಜರ ನಡೆಯಲ್ಲಿ ಕಾಣಬಹುದಾಗಿತ್ತು. ಸತ್ಯ ಎಂದರೆ ಇದ್ದದ್ದನ್ನು ಇದ್ದಂತೆಯೇ ಹೇಳುವುದು, 'ಯಥಾರ್ಥವಚನಂ' ಎಂಬುದಾಗಿ. ಸತ್ಯವನ್ನು ಹೇಳುವುದರಿಂದ ಯಾವೆಲ್ಲ ಲಾಭಗಳು ಆಗುತ್ತವೆ ಎಂಬುದನ್ನು ವೇದ, ಪುರಾಣ, ಇತಿಹಾಸ ಮೊದಲಾದ ಎಲ್ಲಾ ಗ್ರಂಥಗಳೂ ಸಾರುತ್ತವೆ. ಯೋಗಶಾಸ್ತ್ರವು ಹೀಗೆ ಹೇಳುತ್ತದೆ "ಯಾರು ಸತ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೋ, ಅವರು ಹಾಡಿದ ಮಾತುಗಳು ಯಥಾರ್ಥವಾಗುತ್ತವೆ" ಎಂಬುದಾಗಿ. 'ಸತ್ಯಪ್ರತಿಷ್ಠಾಯಾಂ ಕ್ರಿಯಾಫಲಾಶ್ರಯತ್ವಮ್' ಅಂದರೆ ಮಾಡದ ಕ್ರಿಯೆಗೆ ಫಲ ದೊರಕಿಸುವ ಸಾಮರ್ಥ್ಯ ಸತ್ಯವಚನಕ್ಕೆ ಇದೆ ಎಂಬಷ್ಟರ ಮಟ್ಟಿಗೆ ಸತ್ಯದ ಸಾಮರ್ಥ್ಯವನ್ನು ಇಲ್ಲಿ ಕೊಂಡಾಡಲಾಗಿದೆ. ಹಾಗಾಗಿ ಸತ್ಯವಿದ್ದರೆ ಮಾತ್ರ ಅದು ಮಾತಾಗುತ್ತದೆ. ಸತ್ಯವಿಲ್ಲದಿದ್ದರೆ ಅದು ಕೇವಲ ಶಬ್ದಾಡಂಬರವಾಗುತ್ತದೆ. ಸತ್ಯವೆಂದರೆ ಭಗವಂತ. ಅವನನ್ನು ಹೊತ್ತ ಮಾತು ಸತ್ಯವೇ ಆಗಿರುತ್ತದೆ. ಯಾವುದೇ ಮಾತನ್ನು ಆಡಬೇಕಾದರೂ ಆ ಮಾತು ಭಗವಂತನ ಅಥವಾ ಅವನ ಸೃಷ್ಟಿಯ ನಡೆಗೆ ವಿರೋಧವಾಗುವಂತೆ ಇರಬಾರದು. ಅಂತಹ ಸತ್ಯ ಮಾತಿಗೆ ಭೂಷಣ ಎಂಬುದು ಈ ಪ್ರಶ್ನೋತ್ತರದ ಆಶಯವಾಗಿದೆ.

ವ್ಯಾಸ ವೀಕ್ಷಿತ

◆ ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನನ್ನು ವಧಿಸಲು ಏಕಾಂತವೇ ಯುಕ್ತ

ಶ್ರೀಕೃಷ್ಣನು ಜರಾಸಂಧನನ್ನು ವಧಿಸಲು ಬೇಕಾದ ಹಿನ್ನೆಲೆಯನ್ನು ಯುಧಿಷ್ಠಿರನಿಗೆ ತಿಳಿಸಿಕೊಡುತ್ತಿದ್ದಾನೆ. ಜರಾಸಂಧನು ತನ್ನ ಮಹಾಗದೆಯನ್ನು ಮಥುರೆಯತ್ತ ಪ್ರಬಲವಾಗಿ ಬೀಸಿದ ಬಳಿಕ ಆದುದನ್ನು ತಿಳಿಸುತ್ತಾನೆ. ಆಗ ಬಲಶಾಲಿಗಳಾದ ಕುಕ್ಕುರ–ಅಂಧಕ–ವೃಷ್ಣಿ ಈ ವಂಶಗಳ ವೀರರೂ ಇದ್ದರು. ಆದರೂ ರಾಜನೀತಿಯ ಲೆಕ್ಕದ ಮೇರೆಗೆ ಅವರು ಜರಾಸಂಧನನ್ನು ಉಪೇಕ್ಷಿಸಿದರು. ಹಾಗೆಂದರೆ, ಆ ಕಾರಣಕ್ಕಾಗಿ ಆತನ ಮೇಲೆ ಸಮರ ಮಾಡಲು ಹೋಗಲಿಲ್ಲ ಎಂದರ್ಥ.

ಒಟ್ಟಾರೆ ಹೇಳುವುದಾದರೆ, ಹಂಸ–ಡಿಂಭಕರು ಮುಳುಗಿ ಸತ್ತರು. ಕಂಸನೂ ಪರಿವಾರ ಸಮೇತನಾಗಿ ಹತನಾದನು. ಇನ್ನೀಗ ಜರಾಸಂಧನ ಸಾವಿನ ಸಮಯವೊದಗಿದೆ. ಸುರರಾಗಲಿ ಅಸುರರಾಗಲಿ, ಈ ಜರಾಸಂಧನನ್ನು ಯುದ್ಧದಲ್ಲಿ ಜಯಿಸಲಾರರು. ಈತನನ್ನು ಬಾಹು ಯುದ್ಧದಿಂದಲೇ ಸೋಲಿಸಬೇಕೆಂಬುದೇ ತೋರುವುದು.

ಯುಧಿಷ್ಠಿರಾ, ನನ್ನಲ್ಲಿ ರಾಜನೀತಿಯ ಜ್ಞಾನವು ಚೆನ್ನಾಗಿದೆ; ಭೀಮನಲ್ಲಿ ಬಲವಿದೆ; ನಮ್ಮಿಬ್ಬರನ್ನೂ ಜಯನು, ಎಂದರೆ ಅರ್ಜುನನು ರಕ್ಷಿಸುವವನಾಗಿದ್ದಾನೆ. ನಾವು ಮೂವರು ಹೇಗೆಂದರೆ, ಯಜ್ಞ ಸಾಧನೆಯಲ್ಲಿ ಮೂರು ಅಗ್ನಿಗಳು. ಎಂದರೆ ದಾಕ್ಷಿಣಾತ್ಯ–ಗಾರ್ಹಪತ್ಯ–ಆಹವನೀಯಗಳೆಂಬ ಹೆಸರಿನವು. ಹೇಗೆ ಭಾಗಿಗಳೋ ಹಾಗೆಯೇ. ನಾವು ಮೂವರೂ ಸೇರಿ ಈ ಮಾಗಧನನ್ನು, ಎಂದರೆ ಜರಾಸಂಧನನ್ನು ಸಾಧಿಸುವುದಾಗಬೇಕಾಗಿದೆ ಎಂದರೆ ವಧಿಸಬೇಕಾಗಿದೆ.

ನಾವು ಮೂವರು ಆತನನ್ನು ನಿರ್ಜನ ಪ್ರದೇಶದಲ್ಲಿ, ಎಂದರೆ ರಹಸ್ಯವಾಗಿ ಎದುರಿಸುವುದೇ ಯುಕ್ತ. ಏಕೆ ಗೊತ್ತೇ? ಹಾಗೆ ಮಾಡಿದಲ್ಲಿ, ಆತನು ಒಬ್ಬರೊಂದಿಗಾದರೂ ಯುದ್ಧಕ್ಕೆ ಬಂದೇ ಬರುವನು; ಇದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ. ಅವಮಾನವೆನ್ನುವ ಕಾರಣದಿಂದಲೂ, ಲೋಭ ನಿಮಿತ್ತವಾಗಿಯೂ, ಸ್ವಬಾಹು–ವೀರ್ಯ–ದರ್ಪದಿಂದಲೂ, ಆತನು ಭೀಮಸೇನನೊಂದಿಗೇ ಯುದ್ಧಕ್ಕೆ ಬರುವನು. ಭೀಮಸೇನನು ಮಹಾಬಾಹು ಹಾಗೂ ಮಹಾಬಲ. ಹಾಗಿರುವುದರಿಂದಲೇ, ಸೊಕ್ಕಿದ ಲೋಕದ ವಿನಾಶಕ್ಕೆ ಹೇಗೆ ಯಮರಾಜನೇ ತಕ್ಕವನೋ, ಹಾಗೆಯೇ ಭೀಮಸೇನನೇ ಇಲ್ಲಿ ತಕ್ಕವನು. ನನ್ನ ಹೃದಯವನ್ನು ನೀನು ಅರಿಯುವೆಯಾದರೆ ಹಾಗೂ ನನ್ನ ಮೇಲೆ ನಂಬಿಕೆಯಿರುವುದಾದರೆ ಯುಧಿಷ್ಠಿರಾ, ನೀನು ಒಡನೆಯೇ ಭೀಮಸೇನ–ಅರ್ಜುನರನ್ನು ನನಗೆ ನ್ಯಾಸ ರೂಪವಾಗಿ ಕೊಡು. (ನ್ಯಾಸವಾಗಿ ಕೊಡುವುದೆಂದರೆ, ಕೊಟ್ಟಿದ್ದನ್ನು ಆಮೇಲೆ ಯಥಾವತ್ತಾಗಿ ಹಿಂದಿರುಗಿಸುವುದು ಇದ್ದೇ ಇದೆ ಎಂಬ ಭಾವ).

ಹೀಗೆಂಬುದಾಗಿ ಕೃಷ್ಣನು ಹೇಳಲಾಗಿ, ಯುಧಿಷ್ಠಿರನು ಭೀಮ–ಅರ್ಜುನರತ್ತ ತನ್ನ ದೃಷ್ಟಿಯನ್ನು ಹಾಯಿಸಿದನು. ಅವರಂತೂ ಸಂಪ್ರಹೃಷ್ಟರಾಗಿದ್ದರು . ಎಂದರೆ ಬಹು ಹರ್ಷದಿಂದ ಅರಳಿದ ಮುಖವುಳ್ಳವರಾಗಿದ್ದರು.

ಆಗ ಯುಧಿಷ್ಠಿರನು ಹೇಳಿದನು:

ಅಚ್ಯುತ, ಅಚ್ಯುತ, ಬೇಡ, ಹೀಗೆ ಹೇಳಬೇಡ! ಶತ್ರು ಸಂಹಾರಕನಾದವನು ನೀನು. ಪಾಂಡವರಿಗೆ ನೀನೇ ಒಡೆಯ! ನಿನ್ನನ್ನು ಆಶ್ರಯಿಸಿರತಕ್ಕವರು ನಾವು.

ಮಗುವನ್ನು ಮಲಗಿಸುವುದೆಂದರೆ...

ವಕ್ರದೃಷ್ಟಿ

◆ ಎನ್. ರಾಮನಾಥ್
anakuramanath@gmail.com



"ನಿದ್ದೆ ಬಂದಿದೆ ಮಗೂಗೆ" ಘೋಷಿಸಿದಳು ಮಡದಿ. ಸಾಮಾನ್ಯ ಜನರಿಗೆ ನಿದ್ರೆ ಯಾವಾಗ ಬರುತ್ತದೆಂದು ತಿಳಿಯುವುದಿಲ್ಲ. ಅತ್ಯಂತ ನಿಶ್ಶಬ್ದದ ಹೆಜ್ಜೆಗಳನ್ನಿರಿಸುತ್ತಾ ಬರುವ ನಿದ್ರಾಂಗನೆಯು ತನುವನ್ನು ಆಲಿಂಗಿಸುವುದು ತಿಳಿಯುವುದೇ ಇಲ್ಲ. ಆದರೆ ಮಕ್ಕಳಿಗೆ ನಿದ್ರೆಯು ಸದ್ದು ಮಾಡುತ್ತಲೇ ಆಗಮಿಸುವುದು. ಮಂದ್ರದಿಂದ ಆರಂಭವಾಗುವ 'ಉವ್ವೇ...' ತಾರಕಕ್ಕೇರಿ ಅಲ್ಲಿಯೇ ಒಂದಷ್ಟು ವಿಹರಿಸಿ, ಆನಂತರ ಕಟಕ್ ಕಿಟಿಕ್ ಕಿಟಿಕ್ ಕಟಕ್ ಎಂಬ ಸ್ವರಚ್ಛಿದ್ರದಲ್ಲಿ ಮುಂದುವರೆದು, ಒಂದಿಷ್ಟು ಕಣ್ಣೀರಿನಲ್ಲಿ ನೆನೆದರೆ, ಮಗುವಿಗೆ ನಿದ್ರೆ ಇನ್ನೇನು ಬಂದಿತು ಎಂದರ್ಥ.

"ಓಡಾಡಿಸಿದರೆ ಮಲಗುತ್ತಾನೆ" ಎಂದಳು ಮಗಳು. ಮಗುವನ್ನು ಭುಜಕ್ಕಾನಿಸಿಕೊಂಡು ಗಡಿಪ್ರದೇಶದ ಪಹರೆಯವರು ಅತ್ತಿಂದಿತ್ತ, ಇತ್ತಿಂದತ್ತ ಠಳಾಯಿಸುವಂತೆ ನಡೆಯತೊಡಗಿದೆ. ಮೊದಲಿಗೆ ಮೊಬೈಲನ್ನು ಕಚ್ಚಿಹಿಡಿದ ಬ್ಯಾಕ್ ಕವರ್‌ನಂತೆ ನನ್ನನ್ನು ಆತುಕೊಂಡಿದ್ದ ಮಗುವು ಕ್ರಮೇಣ ಕಟ್ಟಡಗಳ ತುದಿಯಿಂದ ಬಾಲ್ಕನಿಗಳು ಹೊರಚಾಚುವಂತೆ ನನ್ನ ಭುಜದ ಪಾರ್ಶ್ವದಿಂದ ಹೊರಕ್ಕೆ ತಲೆಯನ್ನು ಚಾಚಿ ವಾಲಿತು. ಮಗುವಿನ ಬುಡವನ್ನು ಭದ್ರವಾಗಿ ಹಿಡಿದೆ. ಮಗುವು ತನ್ನ ವಾಲುಕೋನವನ್ನು ಹೆಚ್ಚಿಸಿ ಪಿಜ್ಜಾದ ಲೀನಿಂಗ್ ಟವರ್‌ನಂತೆ ವಾಲಿತು. ಪಿಜ್ಜಾದ ಸರ್ಕಾರದವರು 'ಕೋರ್ಸ್ ಕರೆಕ್ಷನ್' ಮಾಡಲೆಂದು ಆಗಾಗ್ಗೆ ವಾಲುವಿಕೆಯನ್ನು ನಿಯಂತ್ರಿಸುವಂತೆಯೇ ನಾನೂ ಭುಜವನ್ನು ತಗ್ಗಿಸಿ, ಮಗುವನ್ನು ನನ್ನ ತನುವಿನತ್ತ ಕೊಂಚ ಎಳೆದುಕೊಂಡು, 'ಛಜ್ಜಾ ಪೊಸಿಷನ್'ಗೆ ತಂದಿರಿಸಿದೆ.

ವಾಲು–ನೇರಗಳ ಆಟದಲ್ಲಿ ಸಂತೋಷದಿಂದ ಪಾಲ್ಗೊಂಡಿದ್ದ ಮಗುವಿಗೆ ಆ ಆಟವು ಸಾಕೆನಿಸಿ ಛಿಟ್ಟನೆ ಚೀರಿತು. ಆಗಷ್ಟೇ ತಮ್ಮ ಅಂದಿನ ಆಗುಹೋಗುಗಳನ್ನು ಚಿಲಿಪಿಲಿಯ ಮೂಲಕ ವಿನಿಮಯ ಮಾಡಿಕೊಂಡು ಪರಸ್ಪರ ಗುಡ್ ನೈಟ್ ಹೇಳಿದ್ದ ಪಕ್ಷಿಗಳು ಈ ಛೀತ್ಕಾರಿಗೆ ಬೆಚ್ಚಿ ಎದ್ದು ತಮ್ಮದೇ ಭಾಷೆಯಲ್ಲಿ ಮಗುವನ್ನೂ, ನನ್ನನ್ನೂ ಆಶೀರ್ವದಿಸಿ ಮುಲುಗಿ ಮಲಗಿದವು. "ಪೊಸಿಷನ್ ಚೇಂಜ್ ಆದರೆ ಡೈವರ್ಟ್ ಆಗುತ್ತಾನೆ" ಎಂದು ಮಗಳು ನುಡಿದ ಕಾರಣ ನೆಲಕ್ಕೆ ಲಂಬಕೋನದಲ್ಲಿ ಎತ್ತಿಕೊಂಡಿದ್ದ ಮಗುವನ್ನು ನೆಲಕ್ಕೆ ಸಮಾನಾಂತರ ರೇಖೆಯಲ್ಲಿ ಎತ್ತಿಕೊಂಡೆ. ಮಗುವು ನನ್ನತ್ತ ನೋಡಿತು, ನಕ್ಕಿತು. ಆ ನಗೆಯು "ಮುಂದಕ್ಕೈತೆ ಮಾರಿಹಬ್ಬ" ಎನ್ನುವುದರ ಸೂಚನೆಯೆಂದು ನನಗೆ ಆಗ ಹೊಳೆಯಲಿಲ್ಲ.

ನನ್ನ ಠಳಾಯಿಸುವಿಕೆಯು ಅಂದಿನ ವಾಕಿಂಗ್ ಕೋಟಾ ಆದ ಟೆನ್ ಥೌಸೆಂಡ್ ಸ್ಟೆಪ್ಸ್ ಅನ್ನು ಸಮೀಪಿಸುತ್ತಿತ್ತು. ನನ್ನ ಮೊದಮೊದಲ ಸ್ಟೆಪ್ಪುಗಳ ಸಮಯದಲ್ಲಿ ನಿದ್ರೆಯ ಸೂಚನೆಯಾಗಿ ಸಣ್ಣ ಕಣ್ಣಾಗಿದ್ದ ಮಗುವು ಈಗ ಬೊಗಸೆಗಾತ್ರಕ್ಕೆ ಕಣ್ಣುಗಳನ್ನು ಹಿಗ್ಗಿಸಿತ್ತು. ಮೊದಮೊದಲು ಸಣ್ಣ ಗೊರಕೆಯ ಸದ್ದನ್ನು ಹೊರಡಿಸುತ್ತಿದ್ದ ಅದು ಈಗ ದೊಡ್ಡ ದೊಡ್ಡ ಕೇಕೆಗಳನ್ನು ಹಾಕುತ್ತಾ ತನ್ನ ಶಬ್ದಗಾರುಡಿಯ ಅಮೋಘ ಪ್ರದರ್ಶನವನ್ನು ತೋರುತ್ತಿತ್ತು.

"ಮನೆಯೊಳಗೆ ಇದ್ದರೆ ನಿದ್ರೆ ಮಾಡಲ್ಲ. ಹೊರಗೆ ಕರೆದುಕೊಂಡು ಹೋಗಿ" ಎಂದಳು ಮಡದಿ. ಅಗಲಗಣ್ಣಿನ, ಕೇಕೆಕಂಠದ ಕಂದನೊಡನೆ ಮನೆಯ ಅಂಗಳಕ್ಕಿಳಿದೆ. ಅದೇ ಸಮಯವು ತನ್ನ ಸೈಲೆನ್ಸರ್ ರಹಿತ ಮೋಟರ್ ಬೈಕನ್ನು ಆ ರಸ್ತೆಯಲ್ಲಿ ಓಡಿಸಲು ಸುಮುಹೂರ್ತವೆಂದು ಭಾವಿಸಿದ ಪಡ್ಡೆಯೊಬ್ಬನು ತನ್ನ ವಾಹನವನ್ನು ನಮ್ಮ ಮನೆಯ ಮುಂದೆ ರೊಯ್ರೊಯ್ರೊಯ್ಯಿಸಿದ. 'ಎನಗಿಂತ ಸದ್ದಿಗರುಂಟೆ ಜಗದೊಳ್!' ಎಂಬ ಭಾವವನ್ನು ಹೊಂದಿದ ಮಗುವು ಕಿಟ್ ಕಿಟ್ ಕಿಟಾರ್ ಎಂದರಚಿ ಬೈಕಿನ ಸದ್ದು ಸದ್ದೇ ಅಲ್ಲವೆನ್ನಿಸಿತು. ಹೀಗೆ ಕಿಟಾರ್ ಎನ್ನುವುದರಿಂದ ಮಗುವನ್ನು 'ಕಿಟಾರ್ ವಾದಕ' ಎನ್ನಬಹುದೇ ಎಂದು ಯೋಚಿಸುತ್ತಲೇ ಅಂಗಳದ ವಾಕ್‌ಗೆ ಮಂಗಳ ಹಾಡಿ ಒಳಸರಿದೆ.

ಮಗುವನ್ನು ನಾವು ಕಂದ ಎಂದು ಕರೆದರೂ ಅದರ ಪದ್ಯಪ್ರಕಾರ ರಗಳೆಯೇ. ನಗುತ್ತಿರುವಾಗ ಮಂದಾನಿಲದಂತೆಯೂ, ನಿದ್ರಿಸುವಾಗ ಸರಳವಾಗಿಯೂ ಕಾಣುವ ಮಗುವಿನದು ಕೇಕೆ ಹಾಕುವ ಸಮಯದಲ್ಲಿ ಉತ್ಸಾಹ ರಗಳೆ. ಸರಳಕ್ಕೂ, ಮಂದಾನಿಲಕ್ಕೂ ಮಧ್ಯದ ಸಮಯದಲ್ಲಿ ಮಂದಾಕ್ರಾಂತ ವೃತ್ತದಲ್ಲಿ ಆಕ್ರಂದನಗೈವ ಮಗುವು ಹಠ ಹಿಡಿದು ಕುಳಿತರೆ ಯಾವ ಶಾರ್ದೂಲ ವಿಕ್ರೀಡಿತಕ್ಕೂ ಕಡಿಮೆಯಿರುವುದಿಲ್ಲ. ಭಾಮಿನಿಯ ಸಾಂಗತ್ಯದಲ್ಲಿ ಪಿರಿಯಕ್ಕರೆ ತೋರಿದರೂ, ಶಿಶುವು 'ಹಠಯೋಗ'ದಲ್ಲಿರುವಾಗ ಅವನಿಂದ ಕಿರಿಯಕ್ಕರೆ ಪಡೆಯುವುದೂ ಕಷ್ಟವೇ. ನಮ್ಮ ಶಿಶುವು ಅಂಗಳವನ್ನು ತೊರೆದ ಆ ಸಮಯದಲ್ಲಿ ಹಠಯೋಗದಲ್ಲಿಯೇ ಇದ್ದು, ನನ್ನೆರಡು ತೋಳುಗಳೆಂಬ ಹಾಸಿಗೆಯ ಮೇಲಿನಿಂದ ತನ್ನ ತನುವಿನ ಮಧ್ಯಭಾಗವನ್ನು ಬಿಲ್ಲಿನಂತೆ ಬಾಗಿಸಿ ಮೇಲೇರಿಸಿ, ತಲೆಯನ್ನು ಮೊಣಕೈಯಿಂದ ವಿಶಾಲಕೋನದಲ್ಲಿ ಹೊರಚಾಚಿ 'ಅರ್ಧವೃತ್ತವಿಶಾಲಕೋನಾಸನ'ವೆಂಬ ಹೊಸ ಭಂಗಿಯನ್ನೇ ವಿಶ್ವಕ್ಕೆ ಅರ್ಪಿಸಿದ್ದನು ಹಾಗೂ ಹಾಗೆ ಅರ್ಪಿಸಿದ ಸಂತೋಷವನ್ನು ಜಗಕ್ಕೆ ಅರುಹಲೆಂದೋ ಎಂಬಂತೆ ಕಿಟ್ಟಕಿಟಾರನೆ ಗೋಳಿಟ್ಟನು.



"ನಿಮಕ್ಕೈಲಾಗಲ್ಲ, ಕೊಡಿ ಇಲ್ಲಿ" ಎಂದಳು ಶಿಶುಭಾಷಾಪ್ರವೀಣೆ. ಯಾವುದೇ ಹುಡುಗನು ಹೊಸ ವಾಹನವನ್ನು ಮೆಚ್ಚಿಕೊಳ್ಳುವಂತೆಯೇ ಮಗುವೂ ತನ್ನ ಹೊಸ ವಾಹನದಲ್ಲಿನ ಪ್ರಯಾಣವನ್ನು ಸುಖಕರವೆಂದು ಪರಿಗಣಿಸಿತೆಂದು ಅದರ ನಗೆಮೊಗವು ಸೂಚಿಸುತ್ತಿತ್ತು. ಕಿಟಾರ್ ವಾದನವು ಮುಗಿದು ನಗೆಮಲ್ಲಿಗೆಯು ಅರಳಿದುದಕ್ಕೆ ತನ್ನ ಶಿಶುಗ್ರಹಣಕೌಶಲವೇ ಕಾರಣವೆಂದು ಕಣ್ಣಿನಿಂದಲೇ ಸೂಚಿಸುತ್ತಾ ಪಹರೆನಡೆಯನ್ನು ಕೈಗೊಂಡಳವಳು. 'ನಿದ್ದೆ ಬಂದಿದೆ ಮಗೂಗೆ' ಎನ್ನಿಸಿಕೊಂಡಿದ್ದ ಮಗುವಿನ ಕಣ್ಣಿನಿಂದ ಈಗ ಝೋಂಪಿನ ಸೂಚನೆಯೂ ಮಾಯವಾಗಿತ್ತು.

ಅಂತಿಂಥ ನಿದ್ರೆ ನಿನದಲ್ಲ; ನಿನ್ನಂಥ ನಿದ್ರೆ ಇನ್ನಿಲ್ಲ ।
ನಡೆನಡೆದು ಕಾಲ ಕೀಲೆಲ್ಲ ಸ್ಟೈಕ್ ಮಾಡುತಿಹವು 'ನಡೆಯೊಲ್ಲ'
ತಿರುತಿರುಗಿ ಕೊರಳ ನರವೆಲ್ಲ ಹೇಳಿಹವು 'ನಾವು ಹೊರಳಲ್ಲ' ॥
ನಡುಮಧ್ಯದಲ್ಲಿ ನಿನ್ನೂರು ಭುಜಕೀಲಿನಲ್ಲಿ ನಿನ್ನಲರು
ತೊಟ್ಟಿಲಲಿ ಮಲಗೆ ನೀನೊಲ್ಲೆ ಬಲು ಪ್ರಿಯವು ನಿನಗೆ ಉಯ್ಯಾಲೆ ॥
ಎದೆಮಟ್ಟದಲ್ಲಿ ನಾ ಹೊತ್ತೆ; ತಿರುಗಾಡಿಸಿದೆನು ಬಲು ಹೊತ್ತೆ
ಹೊತ್ತಾಯಿತಷ್ಟೆ ನಿನ ಹೊತ್ತು; ಬರಲಿಲ್ಲ ನಿದಿರೆ ಕಿಂಚಿತ್ತು ॥

ಎಂಬ 'ಅನಿದ್ರೆಗೀತೆ'ಯೊಂದು ನನ್ನ ಮನದಲ್ಲಿ ಮೂಡಿತು. ಮಡದಿ–ಮಗುವಿನ ಠಳಾಯಿಸುವಿಕೆಯು ಎರಡು ದಿನಗಳಿಗೆ ಆಗುವಷ್ಟು ಸ್ಟೆಪ್ಸನ್ನು ತಲುಪಿತ್ತು. ಮಗುವಿನ ಕಣ್ಣಲ್ಲಿ ಲವಲೇಶವೂ ಕಾಣದ ನಿದ್ರೆಯ ಛಾಯೆಯು ಮಡದಿಯ ಕಣ್ಣಲ್ಲಿ ಢಾಳಾಗಿ ಕಾಣತೊಡಗಿತು. ಇವೆಲ್ಲವನ್ನೂ ಗಮನಿಸುತ್ತಿದ್ದ ಮಗಳು "ಕೊಡಮ್ಮ, ಹಾಲು ಕುಡಿದರೆ ನಿದ್ರಿಸ್ತಾನೆ" ಎಂದು ಮಗುವನ್ನು ಒಳಗೆ ಕರೆದೊಯ್ದಳು. ಮಡದಿಯು ನಿದ್ರೆಯ ಮೊದಲ ಮೆಟ್ಟಿಲನ್ನು ಏರಿದಳು.

ಕೊಂಚ ಸಮಯದ ನಂತರ 'ಸ್ವಲ್ಪ ಮಗೂನ ಎತ್ಕೊಳ್ಳಿ' ಎಂಬ ಮಗಳ ನಿದ್ರಾಭರಿತ ಸ್ವರವೂ, ಮಗುವಿನ ಕಿಟಾರ್ ವಾದನವೂ ಕೇಳಿಸಿತು. ಸತಿವಾಕ್ಯಪರಿಪಾಲಕನಾದ ಅಳಿಯನು ಕಾವಡಿಯನ್ನು ಹೊತ್ತ ಹರೋಹರರಂತೆ, ಇರುಮುಡಿಯನ್ನು ಹೊತ್ತ ಅಯ್ಯಪ್ಪರಂತೆ ಮಗುವನ್ನು ಹೊತ್ತು ಓಡಾಡತೊಡಗಿದನು. ಇವೆಲ್ಲವನ್ನೂ ದೂರದಿಂದ ಗಮನಿಸುತ್ತಿದ್ದ ಅಪಾರ್ಟ್‌ಮೆಂಟಿನ ಸೆಕ್ಯುರಿಟಿ ಗಾರ್ಡ್‌ಗಳು 'ಮಗೀ ಬ್ಯಳ್ಯೋ ಗಂಟ ನಾವು ನೇಟ್ ಡೂಟಿ ಮಾಡ್ಬೇಕಾಗಿಲ್ಲ. ಈ ಮನ್ಯವ್ರೇ ಬೆಳತನ್ಕ ಎದ್ದಿರೋವಾಗ ಯಾವ್ಕಳ್ಳೂ ಬರಾಕಿಲ್ಲ. ಮೂರ್ದಿನ ಟ್ರಿಪ್ ಓಗ್ಬರೋಮಾ' ಎಂಬ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದರೆಂದು ಮರುದಿನ ನನಗೆ ಬಲ್ಲ ಮೂಲಗಳಿಂದ ತಿಳಿಯಿತು.

ಮಗುವಿನ ಕಣ್ಣುಗಳು ಈಗ ಡಬಲ್ ಜಾಮೂನಿನ ಬಟ್ಟಲುಗಳಷ್ಟು ಅಗಲವಾಗಿದ್ದವು. ಅಳಿಯನ ಕಾಲುಗಳು ಸೋಲುತ್ತಿದ್ದವು. ತೂಕಡಿಕೆಯಿಂದ ಅವನ ಶಿರವು ಪೆಂಡುಲಮ್‌ನಂತೆ ಆಡುತ್ತಿತ್ತು. ಮಗುವು ಪ್ರತಿ ಮೂವತ್ತು ಸೆಕೆಂಡಿಗೊಮ್ಮೆ ಕೇಕೆ ಹಾಕುವ ಮೂಲಕ ಪೆಂಡುಲಮ್ ಆಟಕ್ಕೆ ತನ್ನ ಮೆಚ್ಚುಗೆ ಸೂಚಿಸುತ್ತಿತ್ತು. ಮಗುವನ್ನು ಚುಕ್ಕು ತಟ್ಟುತ್ತಾ ಮಲಗಿಸುವುದೆಂದು ತೀರ್ಮಾನಿಸಿದ ಅಳಿಯನು ಮಗುವನ್ನು ಹಾಸಿಗೆಯ ಮಧ್ಯದಲ್ಲಿ ಮಲಗಿಸಿದನು.

ಮರದಲ್ಲಿನ ಪಕ್ಷಿಗಳು ಮತ್ತೆ ನಿದ್ರೆಯಿಂದೇಳುವಂತೆ ದನಿಯೇರಿಸಿತು ಮಗು. ಮಡದಿ, ಮಗಳು, ಅಳಿಯ ನಿದ್ರೆಗೆ ಜಾರಿದ್ದರು. ಈಗ ಎದ್ದಿದ್ದದ್ದು ನಾನು ಮತ್ತು ಮಗು ಮಾತ್ರ. ಹಾಸಿಗೆಯಿಂದ ಮಗುವನ್ನು ಎತ್ತಿಕೊಂಡು ಹೊರಬಂದು ಉಯ್ಯಾಲೆಯಲ್ಲಿ ಕುಳಿತು ಜೀಕತೊಡಗಿದೆ. ಮಗುವಿನ ಡಬಲ್ ಜಾಮೂನ್ ಬಟ್ಟಲ ಕಣ್ಣುಗಳು ಸಿಂಗಲ್ ಜಾಮೂನ್ ಬಟ್ಟಲಿನ ಗಾತ್ರಕ್ಕೆ ಇಳಿದವು; ಮಿನಿ ರಸಗುಲ್ಲಾದ ಬಟ್ಟಲಿನ ಗಾತ್ರಕ್ಕೆ ಕ್ಷೀಣಿಸಿದವು; ಕೆಳರೆಪ್ಪೆಯು ಅಯಸ್ಕಾಂತದಂತೆ ಬದಲಾಗಿ ಮೇಲ್ರೆಪ್ಪೆಯನ್ನು ಜಗ್ಗತೊಡಗಿತು; ಮೇಲ್ರೆಪ್ಪೆಯು ಅಂಗಡಿಯ ಶಟರ್‌ಗಳು ಕ್ಲೋಸ್ ಆಗಿ ಅಂಗಡಿಯ ವಸ್ತುಗಳಾವುವೂ ಕಾಣದಂತಾಗಿಸುವಂತೆಯೇ ಕಣ್ಣಪಾಪೆಗಳ ಮೇಲೆ ಚಾಚಿಕೊಂಡಿತು. ಮೂಗಿನ ಹೊಳ್ಳೆಗಳು ಸಣ್ಣದಾಗಿ ಅರಳಿ ಶ್ವಾಸೋಚ್ಛ್ವಾಸವು ಮಂದಗತಿಯನ್ನು ತಲುಪಿತು.

ಊಹೂಂ. ಇವಾವುವೂ ಮಗುವಿನ ಕಣ್ಣಿಗೆ ಸಂಬಂಧಿಸಿದ ಬಾಬ್ತಲ್ಲ, ನನ್ನ ಕಣ್ಣುಗಳಿಗೆ ಸಂಬಂಧಿಸಿದವು. ಹಳ್ಳಿಯ ಜನರ ಮೈಮೇಲೆ ದೇವರು ಬಂದಾಗ ಅತ್ತಿತ್ತ ಆಡುವ ಕೊರಳಿನಂತೆ ನನ್ನ ಕೊರಳೂ ನಿದ್ರಾಭಾರಕ್ಕೆ ತೂಗತೊಡಗಿತು. ಕಷ್ಟ ಪಟ್ಟು ಉಯ್ಯಾಲೆಯಿಂದೆದ್ದು ತಟ್ಟಾಡುತ್ತಲೇ ಮಗುವನ್ನು ಎತ್ತಕೊಂಡು ಬಂದು ನನ್ನ ಹಾಸಿಗೆಯ ಮೇಲೆ ನನ್ನ ಪಕ್ಕದಲ್ಲಿಯೇ ಮಲಗಿಸಿಕೊಂಡು, ನನ್ನ ಪಿಳುಚುಕಣ್ಣುಗಳನ್ನು ಕೀಲಿಸಿ, ಮಗುವಿನತ್ತ ನೋಡಿದೆ.

ತನಗೂ ನಿದ್ರೆಗೂ ಏನೇನೂ ಸಂಬಂಧವಿಲ್ಲ ಎಂಬಂತಿದ್ದವು ಶಿಶುವಿನ ಕಣ್ಣುಗಳು. ಮುಖದಲ್ಲಿ ಮಂದಾನಿಲ ರಗಳೆಯ ಛಾಯೆಯು ಉತ್ಸಾಹ ರಗಳೆಯಾಗಿ ಬದಲಾಗುತ್ತಿರುವುದು ಗೋಚರಿಸಿತು. ನಿದ್ರೆ ಬಂದಿದ್ದ ಮಗುವು ಎಲ್ಲರನ್ನೂ ಮಲಗಿಸಿ, ಅಂತಹ ಸಾಧನೆಯನ್ನು ಗೈದುದಕ್ಕೆ ಕೇಕೆ ಹಾಕುತ್ತಾ ಕುಳಿತಿತ್ತು.

ಮಕ್ಕಳ ಕ್ಯಾನ್ಸರ್ ಆರೈಕೆಯಲ್ಲಿ ಸಂಗೀತ: ಒಂದು ಸಂಶೋಧನಾ ಅನುಭವ

▶ ವರಲಕ್ಷ್ಮಿ ಎನ್.

> ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ.

ಜಗತ್ತಿನಾದ್ಯಂತ ಪ್ರತಿ ವರ್ಷ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಮಕ್ಕಳು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಭಾರತದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ದೇಶದ ವಿವಿಧ ಕ್ಯಾನ್ಸರ್ ನೋಂದಣಿ ಕೇಂದ್ರಗಳ ವರದಿಯ ಪ್ರಕಾರ, 0 ರಿಂದ 14 ವರ್ಷದ ಮಕ್ಕಳಲ್ಲಿ ಸುಮಾರು ಶೇ.4 ಮತ್ತು 0 ರಿಂದ 19 ವರ್ಷದ ಮಕ್ಕಳಲ್ಲಿ ಸುಮಾರು ಶೇ.6 ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇವುಗಳಲ್ಲಿ ಅಸಂಖ್ಯಾತ ಕುಟುಂಬಗಳ ಕಣ್ಣೀರಿನ ಕಥೆಗಳಿವೆ. ಕ್ಯಾನ್ಸರ್ ರೋಗನಿರ್ಣಯವು ಕೇವಲ ಮಗುವಿನ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ, ಇಡೀ ಕುಟುಂಬದ ದೈನಂದಿನ ಬದುಕು ಮತ್ತು ಮಾನಸಿಕ ನೆಮ್ಮದಿಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಈ ಕಠಿಣ ಪಯಣದಲ್ಲಿ ಮಕ್ಕಳು ಮತ್ತು ಅವರ ಪೋಷಕರು ಅನುಭವಿಸುವ ನೋವು, ಅನಿಶ್ಚಿತತೆ, ಆತಂಕ ಮತ್ತು ವಿವರಿಸಲಾಗದ ಒತ್ತಡದ ವ್ಯಥೆ–ಕಥೆಗಳು ಅತ್ಯಂತ ಗಾಢವಾದುದು. ಕ್ಯಾನ್ಸರ್ ಚಿಕಿತ್ಸೆ ಎಂದರೆ ಕೇವಲ ಔಷಧಿ, ಕಿಮೋಥೆರಪಿ ಅಥವಾ ಶಸ್ತ್ರಚಿಕಿತ್ಸೆ ಮಾತ್ರವಲ್ಲ. ಅದು ಮಕ್ಕಳ ಮನಸ್ಸಿನ ಮೇಲೆಯೂ ಭಾರೀ ಪರಿಣಾಮ ಬೀರುತ್ತದೆ. ಆಸ್ಪತ್ರೆ, ಇಂಜೆಕ್ಷನ್, ಪರೀಕ್ಷೆಗಳು, ಅಪರಿಚಿತ ವಾತಾವರಣ – ಇವೆಲ್ಲವೂ ಮಕ್ಕಳಲ್ಲಿ ಆತಂಕ, ಒಂಟಿತನ ಮತ್ತು ಭಯವನ್ನು ಹೆಚ್ಚಿಸುತ್ತವೆ. ಈ ಸಂದರ್ಭದಲ್ಲಿ ಮಕ್ಕಳಿಗೆ ಬೇಕಾಗುವುದು ಕೇವಲ ದೈಹಿಕ ಚಿಕಿತ್ಸೆ ಅಲ್ಲ; ಮನಸ್ಸಿಗೆ ನೆಮ್ಮದಿ ಕೊಡುವ ಮಾನವೀಯ ಸ್ಪರ್ಶ.

ಇದೇ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ ಒಂದು ಶೆಲ್ಟರ್ ಹೋಂನಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗಾಗಿ ಒಂದು ಸಂಗೀತ ಕಾರ್ಯಕ್ರಮವನ್ನು ನಡೆಸಿದ್ದೆ. ಅದು ವೇದಿಕೆ ಮೇಲೆ ನಿಂತು ಹಾಡುವ ಕಾರ್ಯಕ್ರಮವೂ ಅಲ್ಲ, ಪ್ರೇಕ್ಷಕರಿಗಾಗಿ ತಯಾರಿಸಿದ ಪ್ರದರ್ಶನವೂ ಅಲ್ಲ. ಅದು ಮಕ್ಕಳ ಜೊತೆ, ಅವರ ಕಣ್ಣೆದುರು, ಅವರ ನೆಲೆಯಲ್ಲೇ ಕುಳಿತುಕೊಂಡು ನಡೆಸಿದ ಒಂದು ಸರಳ ಸಂಗೀತ ಸಂವಾದ. ಮಕ್ಕಳಿಗೆ ಇಷ್ಟವಾದ ಹಾಡುಗಳನ್ನು ಕೇಳುತ್ತಾ, ಅವರ ಜೊತೆಗೆ ಗುನುಗುತ್ತಾ, ಕೆಲವೊಮ್ಮೆ ತಾಳಕ್ಕೆ ಕೈತಟ್ಟುತ್ತಾ, ಆಟವಾಡುತ್ತಾ ಸಾಗಿದ ಕ್ಷಣಗಳು ಅವು.

ಹಾಡು ಆರಂಭವಾದ ಕೆಲವೇ ಕ್ಷಣಗಳಲ್ಲಿ ಮಕ್ಕಳ ಮುಖದಲ್ಲಿ ಕಂಡ ಬದಲಾವಣೆ ಸ್ಪಷ್ಟವಾಗಿತ್ತು. ಸಾಮಾನ್ಯವಾಗಿ ಆಸ್ಪತ್ರೆಯ ವಾತಾವರಣದಲ್ಲಿ ಮೌನವಾಗಿರುವ, ದಣಿದಂತೆ ಕಾಣುವ ಮಕ್ಕಳು ತಾಳಕ್ಕೆ ಕೈತಟ್ಟಿದರು. ಕೆಲವರು ನಿಧಾನವಾಗಿ ಗುನುಗಲು ಆರಂಭಿಸಿದರು. ಆಸ್ಪತ್ರೆ, ಚಿಕಿತ್ಸೆ, ಇಂಜೆಕ್ಷನ್, ಕಿಮೋಥೆರಪಿ, ಪರೀಕ್ಷೆಗಳ ನಡುವೆ ಸಿಕ್ಕ ಈ ಕ್ಷಣಗಳಲ್ಲಿ ಮಕ್ಕಳು ಸ್ವಲ್ಪ ಹೊತ್ತು ತಮ್ಮ ಕಾಯಿಲೆಯನ್ನು ಮರೆತಂತಾಯಿತು. ಒಬ್ಬ ಮಗು ತನ್ನ ಇಷ್ಟವಾದ ಹಾಡು ಬಂದಾಗ ಕಣ್ಣುಮಿಟುಕಿಸುತ್ತಾ ನಗುತ್ತಿದ್ದರೆ, ಮತ್ತೊಬ್ಬ ಮಗು ತನ್ನ ಇಷ್ಟದ ಹಾಡು ಕೇಳುತ್ತಿದ್ದಂತೆ ತಲೆಯನ್ನು ಮೆಲ್ಲಗೆ ತಟ್ಟಿಕೊಂಡು ನಗುತ್ತಿದ್ದ ದೃಶ್ಯ ಇನ್ನೂ ಮನಸ್ಸಿನಲ್ಲಿ ಉಳಿದಿದೆ. ಆ ಕ್ಷಣಗಳು ನನ್ನನ್ನು ಒಂದು ಆಳವಾದ ಪ್ರಶ್ನೆಯ ಕಡೆಗೆ ಕರೆದೊಯ್ದವು: "ಸಂಗೀತವು ಮಕ್ಕಳಲ್ಲಿ ಇಷ್ಟು ಬದಲಾವಣೆ ತರುತ್ತಿದ್ದರೆ, ಇದನ್ನು ಚಿಕಿತ್ಸೆ ಭಾಗವಾಗಿ ಯಾಕೆ ಹೆಚ್ಚು ಬಳಸುವುದಿಲ್ಲ?"

ಮ್ಯೂಸಿಕ್‌ಥೆರಪಿ

ವಿಶ್ವದ ಅನೇಕ ದೇಶಗಳಲ್ಲಿ ಮ್ಯೂಸಿಕ್ ಥೆರಪಿಯನ್ನು ಕ್ಯಾನ್ಸರ್ ಚಿಕಿತ್ಸೆಯ ಭಾಗವಾಗಿ ಬಳಸಲಾಗುತ್ತಿದೆ. ಸಂಗೀತದ ಮೂಲಕ ಮಕ್ಕಳಲ್ಲಿ ಆತಂಕ ಕಡಿಮೆಯಾಗುವುದು, ನೋವಿನ ಅನುಭವ ತಗ್ಗುವುದು ಮತ್ತು ಆಸ್ಪತ್ರೆಯ ಒತ್ತಡವನ್ನು ಸಹಿಸುವ ಶಕ್ತಿ ಹೆಚ್ಚಾಗುವುದು ಎಂಬುದನ್ನು ಹಲವಾರು ಅಧ್ಯಯನಗಳು ಸೂಚಿಸಿವೆ. ಆದರೆ ಭಾರತದಲ್ಲಿ, ವಿಶೇಷವಾಗಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ ದಿನನಿತ್ಯದ ಸಂಗೀತದ ಪಾತ್ರದ ಬಗ್ಗೆ ಸಂಶೋಧನೆ ಬಹಳ ಕಡಿಮೆ. ಔಷಧಿ , ಶಸ್ತ್ರಚಿಕಿತ್ಸೆ, ಕಿಮೋಥೆರಪಿ ಇವೆಲ್ಲದರ ಬಗ್ಗೆ ಸಾಕಷ್ಟು ಮಾತುಗಳಿವೆ. ಆದರೆ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬೇಕಾದ ಆರೈಕೆ ಕುರಿತು, ಅದರಲ್ಲೂ ಸಂಗೀತದಂತಹ ಸರಳ ಮತ್ತು ಸಹಜ ಸಾಧನಗಳ ಕುರಿತು ಹೆಚ್ಚು ಚರ್ಚೆ ನಡೆದಿಲ್ಲ. ಈ ಅನುಭವವೇ ನನ್ನ ಸಂಶೋಧನೆಗೆ ಆಧಾರವಾಯಿತು. ಈ ಅಧ್ಯಯನವು ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ 'ಎವ್ರಿ ಡೇ ಮ್ಯೂಸಿಕ್ ಎಂಗೇಜ್ಮೆಂಟ್', ಅಂದರೆ ದಿನನಿತ್ಯದ ಸರಳ ಸಂಗೀತ ಚಟುವಟಿಕೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಪಾಲಕರ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ. ಇಲ್ಲಿ ನಾನು ವೇದಿಕೆಯ ಮೇಲಿನ ಮ್ಯೂಸಿಕ್ ಥೆರಪಿಯ ಬಗ್ಗೆ ಮಾತ್ರ ನೋಡಿಲ್ಲ; ಮನೆಯಲ್ಲೋ, ಆಸ್ಪತ್ರೆಯ ಕೊಠಡಿಗಳಲ್ಲೋ, ಮೊಬೈಲ್ ಫೋನಿನ ಸ್ಪೀಕರ್‌ನಲ್ಲೋ, ತಾಯಿಯ ಗುನುಗು ಲಾಲಿಯಲ್ಲೋ ನಡೆಯುವ ಸಂಗೀತದ ಬಗ್ಗೆ ಕೇಳಿದೆ. ಪಾಲಕರು ತಮ್ಮ ಮಕ್ಕಳನ್ನು ದಿನನಿತ್ಯ ಇಪ್ಪತ್ನಾಲ್ಕು ಗಂಟೆ ನೋಡುತ್ತಿರುತ್ತಾರೆ.



ಚಿಕಿತ್ಸೆಗೂ ಮೊದಲು, ಚಿಕಿತ್ಸೆಯ ಸಮಯದಲ್ಲಿ, ನೋವು, ಆಯಾಸ, ಭಯ ಎಲ್ಲದರ ನಡುವೆ, ಚಿಕಿತ್ಸೆಯ ನಂತರದ ಸಮಯದಲ್ಲೂ ಪಾಲಕರು ಮಕ್ಕಳ ಜೊತೆ ಇರುತ್ತಾರೆ. ಅವರ ಮಾತುಗಳಲ್ಲಿ ಸಂಗೀತದ ಪರಿಣಾಮ ಸ್ಪಷ್ಟವಾಗಿ ಕೇಳಿಬರುತ್ತದೆ.

"ನಾವು ಹಾಡು ಹಾಕಿದಾಗ ಅವನು ನಗುತ್ತಾನೆ, ಶಕ್ತಿಯುತವಾಗಿ ವರ್ತಿಸುತ್ತಾನೆ, ಸುತ್ತಲೂ ಜಿಗಿಯುತ್ತಾನೆ. ಅದು ನನಗೂ ಸಂತೋಷವನ್ನು ನೀಡುತ್ತದೆ. ಅವನು ಚಿಕಿತ್ಸೆ ಪಡೆಯುತ್ತಿರುವಾಗಲು ಆ ಹಾಡಿಗೆ ನಲಿದಾಡುತ್ತಿರುತ್ತಾನೆ" ಎಂದು ಒಬ್ಬ ತಾಯಿ ಹೇಳಿದರೆ, "ಕಿಮೋಥೆರಪಿ ಇಂಜೆಕ್ಷನ್ ಸಮಯದಲ್ಲಿ ನಾವು ಭಕ್ತಿಗೀತೆಯನ್ನು ಹಾಕಿದರೆ, ಅವಳು ತುಂಬಾ ಶಾಂತವಾಗಿರುತ್ತಾಳೆ. ಭಕ್ತಿಗೀತೆಗಳು, ಹನುಮಾನ್ ಚಾಲೀಸಾವನ್ನು ಕೇಳಿದಾಗ ಯಾವುದೇ ಚಿಕಿತ್ಸಾ ವಿಧಾನಗಳಿಗೆ ಅವಳು ಧೈರ್ಯದಿಂದ, ಆತ್ಮವಿಶ್ವಾಸದಿಂದ ಕೂರುತ್ತಾಳೆ" ಎಂದು 9 ವರ್ಷದ ಪುಟ್ಟಿಯ ತಂದೆ–ತಾಯಿ ತಮ್ಮ ಅನುಭವವನ್ನು ಹಂಚಿಕೊಂಡರು. ಈ ಮಾತುಗಳು ಹೇಳುವುದೇನೆಂದರೆ, ಸಂಗೀತ ಮಕ್ಕಳಿಗೆ ಕೇವಲ ಮನೋರಂಜನೆ ಅಲ್ಲ. ಅದು ಭದ್ರತೆಯ ಅನುಭವವನ್ನು ನೀಡುತ್ತದೆ. ಆಸ್ಪತ್ರೆಯ ಅಜ್ಞಾತ ಜಗತ್ತಿನಲ್ಲಿ, ಸಂಗೀತ ಮಕ್ಕಳಿಗೆ ಪರಿಚಿತವಾದ ಧ್ವನಿ, ಮನೆಯ ನೆನಪು, ಮತ್ತು ಸ್ವಲ್ಪ ಹೊತ್ತು "ನಾನು ರೋಗಿ" ಅನ್ನುವ ಭಾವನೆಯನ್ನು ಮರೆಸುವ ಒಂದು ಸೇತುವೆಯಾಗಿದೆ.

ಬಹುತೇಕ ಪಾಲಕರು ಸಂಗೀತವನ್ನು ಬಹಳ ಸರಳವಾಗಿ ಬಳಸುತ್ತಿದ್ದಾರೆ – ಮೊಬೈಲಿನಲ್ಲಿ ಹಳೆಯ ಹಾಡುಗಳು, ದೇವರ ಭಜನೆಗಳು, ಸಿನಿಮಾ ಗೀತೆಗಳು, ಮಗು ತಾನೇ ಹಾಡಿದ ಹಾಡುಗಳು ಅಥವಾ ಅಜ್ಜಿಯ ಲಾಲಿ ಹಾಡುಗಳು. ಇವೆಲ್ಲವುಗಳು ಮಕ್ಕಳಿಗೆ ನೆಮ್ಮದಿ ಕೊಡುತ್ತಿವೆ. ಆದರೆ ಇದೇ ಸಮಯದಲ್ಲಿ ಪಾಲಕರು ಒಂದು ಕೊರತೆಯನ್ನೂ ಸೂಚಿಸುತ್ತಾರೆ. ಸಂಗೀತ ಸಹಾಯ ಮಾಡುತ್ತಿದೆ ಎಂಬುದು ಗೊತ್ತಿದ್ದರೂ, ಅದನ್ನು ಹೇಗೆ ಸರಿಯಾಗಿ ಬಳಸಬೇಕು, ಯಾವ ಸಮಯದಲ್ಲಿ, ಯಾವ ರೀತಿಯಲ್ಲಿ ಎಂಬ ಮಾರ್ಗದರ್ಶನ ಅವರಿಗೆ ಇಲ್ಲ. ಮ್ಯೂಸಿಕ್ ಥೆರಪಿ ಮಾಡಲು ವಿಶೇಷ ತರಬೇತಿ ಪಡೆದ ಥೆರಪಿಸ್ಟ್‌ಗಳ ಅಗತ್ಯವಿದೆ. ಇದು ಮಕ್ಕಳ ಆರೈಕೆಯಲ್ಲಿ ಸಂಗೀತವನ್ನು ಗಂಭೀರವಾಗಿ ಸೇರಿಸಬಹುದಾದ ದೊಡ್ಡ ಅವಕಾಶವನ್ನು ತೋರಿಸುತ್ತದೆ. ಕಡಿಮೆ ಖರ್ಚಿನ, ಮಕ್ಕಳಿಗೆ ಇಷ್ಟವಾದ, ಮನಸ್ಸಿಗೆ ನೆಮ್ಮದಿ ನೀಡುವ ಸಂಗೀತ – ಇವೆಲ್ಲವೂ ಕ್ಯಾನ್ಸರ್ ಚಿಕಿತ್ಸೆಯ ಔಷಧಿಗೆ ಪೂರಕವಾಗಿ ಕೆಲಸ ಮಾಡಬಹುದು.

ಈ ಸಂಶೋಧನೆಯ ಮೂಲಕ ಸ್ಪಷ್ಟವಾದದ್ದು ಏನೆಂದರೆ, ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಬದುಕಿನಲ್ಲಿ ಸಂಗೀತ ಒಂದು ಕ್ಷಣಿಕ ಬದಲಾವಣೆಯಾಗಿರಬಹುದು, ಆದರೆ ಅದರ ಪರಿಣಾಮ ಆಳವಾದದ್ದು. ಅದು ಮಕ್ಕಳಿಗೆ ಧೈರ್ಯವನ್ನು ನೀಡುತ್ತದೆ, ಮುದುಡಿದ ಜೀವನಕ್ಕೆ ಬಣ್ಣವನ್ನು ಹಚ್ಚುತ್ತದೆ, ಆರಾಮವನ್ನು ನೀಡುತ್ತದೆ. ಪಾಲಕರಿಗೂ ಧೈರ್ಯವನ್ನು ನೀಡುತ್ತಾ, ಒತ್ತಡದ ನಡುವೆ ಒಂದು ಉಸಿರಾಟದ ಅವಕಾಶವಾಗುತ್ತದೆ. ಇದಷ್ಟೇ ಅಲ್ಲ, ಸಂಗೀತವು ಪಾಲಕರಿಗೂ ಒಂದು ಮಹತ್ವದ ನೆಮ್ಮದಿಯ ಸಾಧನವಾಗಿದೆ. ಮಕ್ಕಳ ನೋವು, ಭಯ ಮತ್ತು ಅನಿಶ್ಚಿತತೆಯನ್ನು ಪ್ರತಿದಿನ ಎದುರಿಸುವ ಪಾಲಕರಿಗೆ ಸಂಗೀತವು ಸ್ವಲ್ಪ ಹೊತ್ತು ಮನಸ್ಸನ್ನು ಹಗುರಗೊಳಿಸುವ ಅವಕಾಶವನ್ನು ನೀಡುತ್ತದೆ. "ಮಗು ನಗುತ್ತಿರುವುದನ್ನು ನೋಡಿದಾಗ ನಮ್ಮ ನೋವು ಕೂಡ ಕ್ಷಣಮಾತ್ರಕ್ಕೆ ಕಡಿಮೆಯಾಗುತ್ತದೆ" ಎಂಬ ಮಾತುಗಳು ಹಲವಾರು ಪಾಲಕರಿಂದ ಕೇಳಿಬಂದವು. ಮಗುವಿನ ಜೊತೆ ಹಾಡನ್ನು ಹಂಚಿಕೊಳ್ಳುವ ಕ್ಷಣಗಳು ಪಾಲಕರಿಗೂ ನಿಟ್ಟುಸಿರು, ಅಲ್ಪವಾದರೂ ನಿರಾಳತೆಯ ಜಾಗವಾಗುತ್ತವೆ – ಅವು ದುಃಖದ ನಡುವೆ ಆಶಾಕಿರಣವಾಗಿ ಕಾಣಿಸುತ್ತವೆ. ಈ ಕಾರಣದಿಂದ ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ. ಕೆಲವೊಮ್ಮೆ ತಮ್ಮ ಭಾವನೆಗಳನ್ನು ಮಾತುಗಳ ಮೂಲಕ ಹೇಳಲು ಕಷ್ಟವಾಗುವ ಮಕ್ಕಳಿಗೆ, ಹಾಡೇ ಅವರ ಭಾವನೆಯ ಭಾಷೆಯಾಗುತ್ತದೆ.

ಪತ್ರ ಮಿತ್ರ

ಎಐ ಸಮ್ಮೇಳನ: ದೇಶದ ಹೀಯಾಳಿಕೆ ಸರಿಯೆ?

ಇತ್ತೀಚೆಗೆ ನಡೆದ ದಿಲ್ಲಿಯಲ್ಲಿ ನಡೆದ ಕೃತಕ ಬುದ್ಧಿಮತ್ತೆ (Artificial Intelligence) ಸಮ್ಮೇಳನದಲ್ಲಿ, ನೋಯ್ಡಾದ ಗೋಲ್ಗೋಟಿಯಾಸ್ ವಿಶ್ವವಿದ್ಯಾಲಯವು ಪ್ರದರ್ಶಿಸಿದ ಚೀನಾ ತಯಾರಿಕೆಯ ರೋಬೋಟ್ ನಾಯಿಯನ್ನು ತನ್ನದೇ ಉತ್ಪನ್ನ ಎಂದು ಪ್ರದರ್ಶಿಸಿದ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ವಿಷಯ ಬಹಿರಂಗವಾದ ನಂತರ ಟೀಕೆಗಳು ಎರಡು ದಿಕ್ಕುಗಳಲ್ಲಿ ಹರಿದವು– ಒಂದು ಕಡೆ ಸಂಸ್ಥೆಯ ಮೇಲೆ ಪ್ರಶ್ನೆ ಗಳು, ಇನ್ನೊಂದು ಕಡೆ ಸಂಪೂರ್ಣ ಭಾರತೀಯ ಎಐ ಸಾಮರ್ಥ್ಯದ ಮೇಲೆಯೇ ಅನುಮಾನ.

ಒಂದು ಖಾಸಗಿ ಸಂಸ್ಥೆಯ ತಪ್ಪು ನಡೆ ಇಡೀ ದೇಶದ ಸಂಪೂರ್ಣ ತಂತ್ರಜ್ಞಾನ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ಎಂಬ ಮೂಲಭೂತ ವಿಚಾರ ಇಲ್ಲಿ ಮಸುಕಾಗಿದೆ. ಯಾವ ಕ್ಷೇತ್ರದಲ್ಲಾದರೂ ಕೆಲವರು ಕೀರ್ತಿ ಪಡೆಯಲು ಅಡ್ಡ ದಾರಿಯನ್ನು ಹುಡುಕುತ್ತಾರೆ; ಅದನ್ನು ಒಂದು ರಾಷ್ಟ್ರದ ವೈಜ್ಞಾನಿಕ ಸಾಮರ್ಥ್ಯದ ಮಾನದಂಡವಾಗಿ ಪರಿಗಣಿಸುವುದು ತರ್ಕಸಮ್ಮತವಲ್ಲ.

ವಿಪಕ್ಷಗಳು ಈ ಘಟನೆಯನ್ನು ಸರ್ಕಾರದ ಮೇಲೆ ದಾಳಿ ಮಾಡಲು ಉಪಯೋಗಿಸುತ್ತಿವೆ. ಸರ್ಕಾರದ ನೀತಿಗಳ ಮೇಲೆ ಪ್ರಶ್ನೆ ಕೇಳುವುದು ಪ್ರಜಾಪ್ರಭುತ್ವದ ಅವಿಭಾಜ್ಯ ಹಕ್ಕು. ಆದರೆ ಒಂದು ಖಾಸಗಿ ಸಂಸ್ಥೆಯ ತಪ್ಪನ್ನು ದೇಶದ ವೈಜ್ಞಾನಿಕ ಮೂಲಸೌಕರ್ಯ ಅಥವಾ ಪ್ರಧಾನಮಂತ್ರಿಯ ವೈಯಕ್ತಿಕ ಸಾಮರ್ಥ್ಯಕ್ಕೆ ತಳುಕು ಹಾಕುವುದು ಅತಿರೇಕವೆನ್ನಬಹುದು.

ವಿಮರ್ಶೆ ಹಾಗೂ ಹೀಯಾಳಿಕೆ – ಇವೆರಡರ ನಡುವೆ ಸೂಕ್ಷ್ಮವಾದ ಗಡಿ ಇದೆ. ಸಾರ್ವಜನಿಕ ಹಿತಕ್ಕಾಗಿ ಪ್ರಶ್ನೆ ಕೇಳುವುದು ಅಗತ್ಯ; ಆದರೆ ರಾಷ್ಟ್ರದ ಸಾಧನೆಗಳನ್ನು ನಿರ್ಲಕ್ಷಿಸಿ ಕೇವಲ ಒಂದು ಘಟನೆ ಆಧಾರವಾಗಿ ದೇಶದ ಸಾಮರ್ಥ್ಯವನ್ನೇ ತಿರಸ್ಕರಿಸುವುದು ನಿರ್ಮಾಣಾತ್ಮಕ ಚರ್ಚೆಯಾಗುವುದಿಲ್ಲ.

ಇಂದು ಭಾರತ ಜಗತ್ತಿನ ಅತಿ ದೊಡ್ಡ ಡಿಜಿಟಲ್ ಮೂಲಸೌಕರ್ಯ ಹೊಂದಿದ ರಾಷ್ಟ್ರಗಳಲ್ಲಿ ಒಂದಾಗಿದೆ. ಯುಪಿಐ ಪಾವತಿ ವ್ಯವಸ್ಥೆ, ಆಧಾರ್ ಆಧಾರಿತ ಸೇವೆಗಳು, ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್, ಭಾಷಾ ಮಾದರಿಗಳ ಸಂಶೋಧನೆ, ಸ್ಟಾರ್ಟ್‌ಅಪ್ ಪರಿಸರ ಇವೆಲ್ಲವೂ ಎಐ ಅಭಿವೃದ್ಧಿಗೆ ಬಲವಾದ ನೆಲೆಯನ್ನು ಒದಗಿಸುತ್ತಿವೆ. ಭಾರತೀಯ ಮೂಲದ ವಿಜ್ಞಾನಿಗಳು ಗೂಗಲ್, ಮೈಕ್ರೋಸಾಫ್ಟ್, ಓಪನ್‌ಎಐ ಮುಂತಾದ ಜಾಗತಿಕ ಸಂಸ್ಥೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಅದರರ್ಥ ಎಲ್ಲವೂ ಪರಿಪೂರ್ಣವೆಂದಲ್ಲ. ಭಾರತ ಇನ್ನೂ ಸೆಮಿಕಂಡಕ್ಟರ್ ಉತ್ಪಾದನೆ, ಹಾರ್ಡ್‌ವೇರ್ ರೋಬೋಟಿಕ್ಸ್ ಮತ್ತು ಮೂಲ ಸಂಶೋಧನೆಗಳಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಅಗತ್ಯವಿದೆ. ಈ ಘಟನೆ ಒಂದು ಎಚ್ಚರಿಕೆಯ ಗಂಟೆಯಂತಿದೆ. ನಾವು 'ಪ್ರಚಾರ'ಕ್ಕಿಂತ 'ಪ್ರಮಾಣಿಕತೆ'ಗೆ ಆದ್ಯತೆ ಕೊಡಬೇಕೆಂದು ನೆನಪಿಸುತ್ತದೆ.

ದೇಶಾಭಿಮಾನ ಎಂದರೆ ತಪ್ಪುಗಳನ್ನು ಮುಚ್ಚುವುದು ಅಲ್ಲ; ತಪ್ಪುಗಳನ್ನು ಒಪ್ಪಿಕೊಂಡು ಸರಿಪಡಿಸುವುದು. ಹಾಗೆಯೇ ವಿರೋಧ ರಾಜಕೀಯ ಎಂದರೆ ದೇಶದ ಸಾಧನೆಗಳನ್ನು ಕಡಿಮೆ ಮಾಡುವುದು ಅಲ್ಲ; ಅವುಗಳನ್ನು ಮತ್ತಷ್ಟು ಬಲಪಡಿಸಲು ಒತ್ತಡ ತರುವುದು.

ಈ ವಿವಾದ ನಮಗೆ ಎರಡು ಪಾಠಗಳನ್ನು ಕಲಿಸುತ್ತದೆ: ಸಂಸ್ಥೆಗಳು ವಿಶ್ವಾಸಾರ್ಹತೆ ಕಾಪಾಡಬೇಕು ಹಾಗೂ ರಾಜಕೀಯ ಚರ್ಚೆ ತತ್ವಾಧಾರಿತವಾಗಿರಬೇಕು. ಒಂದು ತಪ್ಪು ಘಟನೆ ಭಾರತ ಎಐ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ಅದನ್ನು ನಾವು ಹೇಗೆ ಸರಿಪಡಿಸುತ್ತೇವೆ – ಅದೇ ನಮ್ಮ ರಾಷ್ಟ್ರದ ಪರಿಪಕ್ವತೆಯನ್ನು ತೋರಿಸುತ್ತದೆ.

ರಾಷ್ಟ್ರದ ಏಳಿಗೆ ಟೀಕೆಯಿಂದಲ್ಲ, ತಿದ್ದುವ ಮನೋಭಾವದಿಂದ ಸಾಧ್ಯ. ಒಂದು ತಪ್ಪನ್ನು ದೊಡ್ಡದಾಗಿಸುವುದಕ್ಕಿಂತ ಪರಿಹಾರ ಸೂಚಿಸುವುದೇ ದೇಶಭಕ್ತಿ. ಸಾಮಾಜಿಕ ಮಾಧ್ಯಮದ ಕೋಪ ಕ್ಷಣಿಕ; ಆದರೆ ದೇಶದ ಪ್ರತಿಷ್ಠೆ ಶಾಶ್ವತ. ವಿಮರ್ಶೆ ಬೇಕು, ಆದರೆ ಅವಮಾನವಲ್ಲ. ನಿರ್ಮಾಣವೇ ನಿಜವಾದ ರಾಜಕೀಯ.

–ಜಿ.ನಾಗೇಂದ್ರ ಕಾವೂರು, ಸಂಡೂರು

ತೆರೆಯಿತು ಉ.ಕ. ಭಾಗ್ಯದ ಬಾಗಿಲು

ಉತ್ತರ ಕನ್ನಡದ ಭಾಗ್ಯ ಮನೆ ಬಾಗಿಲಿಗೆ ಬಂದಂತಿದ್ದು, ಎಲ್ಲದಕ್ಕೂ ಉತ್ತರ ಸಿಗುವ ಸಾಧ್ಯತೆಗಳು ಗೋಚರಿಸುತ್ತಿವೆ.

ಇದೇನಪ್ಪಾ, ಹೊಸತು. ಇಲ್ಲಿಯ ತನಕ, ಉತ್ತರವನ್ನೇ ಕಾಣದ ಉತ್ತರಕನ್ನಡದ ಭವಿಷ್ಯವೇ ಬದಲಾಗುತ್ತಿದೆಯೆ ಅಂತ ಅನಿಸಿದರೆ, ಅದಕ್ಕೆ ಉತ್ತರ ಇದೇ ಫೆಬ್ರುವರಿ 22 ಕ್ಕೆ ನಮಗೆಲ್ಲ ಸಿಗಲಿದೆ.

ಅಂದು, ನಮ್ಮ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಯ ಪ್ರವಾಸ ಕೈಗೊಳ್ಳಲಿದ್ದು, ಇಲ್ಲಿಯ ತನಕ ಯಾವೆಲ್ಲ ಕಾರಣಗಳಿಂದ ನಾವು ನಿರುತ್ತರರಾಗಿದ್ದೇವೋ ಅವಕ್ಕೆಲ್ಲ ಸಮರ್ಪಕ ಉತ್ತರ ಸಿಗಲಿದೆ. ಬಹು ಚರ್ಚಿತ ಮತ್ತು ಹೋರಾಟಕ್ಕೆ ಎಡೆ ಮಾಡಿಕೊಟ್ಟ 'ಜಿಲ್ಲಾ ಸ್ಪೆಷಾಲಿಟಿಆಸ್ಪತ್ರೆ'ಗೆ ಬಂಧ ಮುಕ್ತಿ ದೊರೆಯುವಂತೆ ಕಾಣುತ್ತಿದೆ. ಮುಖ್ಯಮಂತ್ರಿಗಳು 450ಹಾಸಿಗೆಯ ಆಸ್ಪತ್ರೆಯ ಕಟ್ಟಡ ಉದ್ಘಾಟಿಸಲಿದ್ದಾರೆ! ಇದು ಬಹಳ ವರ್ಷದ ಕೂಗಾಗಿತ್ತು.

ಇದರ ಜತೆಗೇ ಅಂಕೋಲಾ – ಮಂಜಗುಣಿ, ಗಂಗಾವಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಸೇತುವೆ ಉದ್ಘಾಟನೆ, ಖಾನಾಪುರದಲ್ಲಿ ಸೇತುವೆ ನಿರ್ಮಾಣ, ಯಲ್ಲಾಪುರ ಪಟ್ಟಣದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ, ಮುಂಡಗೋಡಿನಲ್ಲಿ ಹೊಸ ಪ್ರವಾಸಿ ಮಂದಿರದ ಉದ್ಘಾಟನೆ ನಡೆಯಲಿದೆ.

ಈಗ ಹೇಳಿ, ಉತ್ತರ ಕನ್ನಡ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಅನ್ನದಿರಲಾದೀತೆ? ಕಾರವಾರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವಿಚಾರವೊಂದೇ ನಮ್ಮ ಜಿಲ್ಲೆಯ ಚಿತ್ರಣ ಬದಲಿಸಬಹುದು. ಅಷ್ಟೊಂದು ಅವಶ್ಯಕತೆಯ ವಿಷಯ. ಈಗ ಅದಕ್ಕೊಂದು ಕಾಯಕಲ್ಪ ಸಿಗುತ್ತಿದೆ ಅಂದಂತಾಯಿತು.

ಇಷ್ಟಕ್ಕೇ ಎಲ್ಲವೂ ಆಗೇ ಹೋಯಿತೆಂದು ಬೀಗುವ ಅಗತ್ಯವೂಇಲ್ಲ. ಇದು ಹೊಸ ಕಟ್ಟಡದ ಉದ್ಘಾಟನೆ ಅಷ್ಟೇ. ಆಗಬೇಕಾದ್ದು ಇನ್ನೂ ಸಾಕಷ್ಟಿದೆ. ಆದರೂ ಶುರುವಾಯಿತಲ್ಲ ಎಂಬ ಸಮಾಧಾನ, ಸಂತೋಷ!

ಕಟ್ಟಡವೂ ತಯಾರಾಗಿ, ಸುಸಜ್ಜಿತ ಸಲಕರಣೆ, ವೈದ್ಯರೊಂದಿಗೆ ಪ್ರಾರಂಭಗೊಳ್ಳುವತ್ತ ಇನ್ನು ಮುಂದೆ ನಮ್ಮ ಚಿತ್ತ ಇದ್ದರೆ ಸಾಕೆ ?

–ಶಂಕರನಾರಾಯಣ ಭಟ್, ಮಾಡಗೇರಿ

ಕಿರುಸುದ್ದಿ

ಇಂದು ಮದೆನಾಡಿನಲ್ಲಿ ಹಿಂದೂ ಸಂಗಮ-ಶೋಭಾಯಾತ್ರೆ

ಮಡಿಕೇರಿ: ಮಾತೃಭೂಮಿ ಸಂರಕ್ಷಣೆಯ ಜಾಗೃತಿ ಸಂದೇಶದ ಉದ್ದೇಶದಿಂದ ಆಯೋಜಿತ ಹಿಂದೂ ಸಂಗಮ ಕಾರ್ಯಕ್ರಮ ಫೆ. 22ರಂದು ಮದೆನಾಡು ಗ್ರಾಮದಲ್ಲಿ ಮದೆನಾಡು ಮಂಡಲದ ಹಿಂದೂ ಸಂಗಮ ಸಮಿತಿಯಿಂದ ನಡೆಯಲಿದೆ ಫೆ. 22ರಂದು ಮಧ್ಯಾಹ್ನ 3 ಗಂಟೆಗೆ ಮದೆ ಬಿಜಿಎಸ್ ಶಾಲೆಯ ಕೆಳಭಾಗದ ಪಾರ್ಕಿಂಗ್ ಜಾಗ ಕಾಫಿ ಬಿನ್ ರೆಸಾರ್ಟ್‌ನ ಮುಂಭಾಗದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಮದೆನಾಡಿಗೆ ಶೋಭಾಯಾತ್ರೆ ಸಾಗಿ ಬರಲಿದೆ.

ಶೋಭಾಯಾತ್ರೆಯಲ್ಲಿ ಕುಣಿತ ಭಜನೆ, ಸಿಂಗಾರಿ ಮೇಳ ಮೇಳೈಸಲಿದ್ದು, ಸಂಜೆ 4.30 ಗಂಟೆಗೆ ಮದೆ ಪೇಟೆಯ ಸೊಸೈಟಿಯ ಪಕ್ಕದ ತುರ್ತಿ ಮೈದಾನದಲ್ಲಿ ಸಭಾ ಕಾರ್ಯಕ್ರಮ ನೆರವೇರಲಿದೆ ಈ ಹಿಂದೂ ಸಂಗಮದಲ್ಲಿ ಮದೆನಾಡು, ಕಾಟಕೇರಿ, ತಾಳತ್ತಮನೆ, ಆವಂದೂರು, ಬೆಟ್ಟತ್ತೂರು, ಜೋಡುಪಾಲ, ದೇವರಕೊಲ್ಲಿ, ಎರಡನೇ ಮೊಣ್ಣಂಗೇರಿ ಗ್ರಾಮಸ್ಥರು ಪಾಲ್ಗೊಳ್ಳಲಿದ್ದಾರೆ. ಹಿಂದೂ ಸಮಾಜದ ಸಾಮರಸ್ಯ, ಸಾಮಾಜಿಕ ಪರಿವರ್ತನೆ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಸಂಗಮ ಆಯೋಜನಾ ಸಮಿತಿ ತಿಳಿಸಿದೆ.

ತಲಪಾಡಿಯ ಶಾರದಾ ವೈದ್ಯಕೀಯ ಕಾಲೇಜಿನಲ್ಲಿ 'ಉಚಿತ ಬೊಜ್ಜು ನಿರ್ವಹಣಾ ಕಾರ್ಯಾಗಾರ'

ಮಂಗಳೂರು: ಅತಿಯಾದ ದೇಹದ ತೂಕ ಹಾಗೂ ಬೊಜ್ಜಿನ ಸಮಸ್ಯೆಯಿಂದ ಬಳಲುತ್ತಿರುವವರಿಗಾಗಿ ತಲಪಾಡಿಯ ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಫೆ. 28ರಂದು ವಿಶೇಷ ಉಚಿತ ಕಾರ್ಯಾಗಾರಆಯೋಜಿಸಲಾಗಿದೆ.

ಭಾರತ ಸರ್ಕಾರದ ಆಯುಷ್ ಸಚಿವಾಲಯದ ಅಡಿಯಲ್ಲಿರುವ (ಸಿಸಿಆರ್‌ವೈಎನ್) ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಶೋಧನೆಯ ಕೇಂದ್ರ ಮಂಡಳಿಯ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2 ಗಂಟೆಯಿಂದ ಕಾರ್ಯಕ್ರಮ ನಡೆಯಲಿದ್ದು, ಶಾರದಾ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ. ಎಂ. ಬಿ. ಪುರಾಣಿಕ್ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಶಾರದಾ ಸಮೂಹ ಸಂಸ್ಥೆಗಳ ನಿರ್ದೇಶಕ ಮತ್ತು ಟ್ರಸ್ಟಿ ಸಮೀರ್ ಪುರಾಣಿಕ್, ಬೆಂಗಳೂರಿನ ರಾಜಶೇಖರಯ್ಯ, ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ ಆದ ಡಾ. ಆರ್. ಚೇತನ್ ಕುಮಾರ್, ಮಂಗಳೂರಿನ ಎ.ಜೆ. ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಹಿಮಾಂಶು ಆಚಾರ್ಯ ಎನ್. ಅವರು ಉಪಸ್ಥಿತರಿರುವರು. ಪ್ರಕೃತಿ ಚಿಕಿತ್ಸಾ ಪದ್ಧತಿಗಳು, ತೂಕ ಇಳಿಕೆಗಾಗಿ ವಿಶೇಷ ಯೋಗ ಚಿಕಿತ್ಸಾ ವಿಧಾನಗಳು, ಎಂಡೋಕ್ರೈನಾಲಜಿ ಮತ್ತು ಜೀವನಶೈಲಿ ವೈದ್ಯಕೀಯದ ಸಮನ್ವಯತೆ. ಆರೋಗ್ಯಕರ ಮತ್ತು ಸುಸ್ಥಿರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಇಚ್ಛಿಸುವ ಸಾರ್ವಜನಿಕರು ಈ ಉಚಿತ ಕಾರ್ಯಾಗಾರ ಸದುಪಯೋಗ ಪಡಿಸಿಕೊಳ್ಳಬೇಕಾಗಿ ಕಾಲೇಜಿನ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಶಾರದಾ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ದೇವಿನಗರ, ತಲಪಾಡಿ, ಮಂಗಳೂರು – 575023, ದೂರವಾಣಿ: 6363926599 / 9353909331.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ರಕ್ಷಾ ಪ್ರಶಾಂತ್, 'ಶಿವಾನುಗ್ರಹ', ಮಾಣಿಕ್ಕೈ, ರಾಯಿ ಬಂಟ್ವಾಳ (ತಾ).
2. ಪ್ರೇಮನಾಥ ಶೆಟ್ಟಿ ಮತ್ತು ಕುಟುಂಬಿಕರು, 'ಲೀಲಾ ವಿಹಾರ', ಪಡುಪಣಂಬೂರು.
3. ನವಶಕ್ತಿ ಸೇವಾ ಸಂಘ, ಮಳವೂರು, ಮಂಗಳೂರು (ತಾ).
4. ಓಂ ಫ್ರೆಂಡ್ಸ್, ಕುಂಪಲ, ಆಶ್ರಯ ಕಾಲೊನಿ, ಮೂರುಕಟ್ಟೆ, ಕೋಟೆಕಾರ್, ಉಳ್ಳಾಲ.
5. ವಿಕಾಸ್ ಕೊಯಿಲ, 'ತಾರಾ', ಮೊಡಂಕಾಪು, ಬಂಟ್ವಾಳ (ತಾ).
6. ಹಿಂದೂ ಯುವಸೇನೆ, ಓಂ ನಮೋಃ ಶಾಖೆ, ಕಾವೂರು ಘಟಕ, ಕಾವೂರು ಮೈದಾನದಲ್ಲಿ.
7. ಸಂಜೀವ ಶೆಟ್ಟಿ ಮತ್ತು ಕಸ್ತೂರಿ ಶೆಟ್ಟಿ, ನಡಿಗುಂಡ್ಯಗುತ್ತು, ಕುಳವೂರು, ಕುಪ್ಪೆಪದವು.

ಶ್ರೀ ಧರ್ಮಸ್ಥಳ ಮೇಳ
ಮುತ್ತಿನ ಕೊಪ್ಪದಲ್ಲಿ
ಸ್ನೇಹ ಬಳಗ ಮುತ್ತಿನ ಕೊಪ್ಪ

ಶ್ರೀ ಸಾಲಿಗ್ರಾಮ ಮೇಳ
ಮಂಕಿ ದೇವಿಕಾನದಲ್ಲಿ
ಶ್ರೀ ದೇವಿ ಮಹಾತ್ಮೆ

ಶ್ರೀ ಪೆರ್ಡೂರು ಮೇಳ
ಬೈರಂಪಳ್ಳಿ ದೂಪದಕಟ್ಟೆಯಲ್ಲಿ - ಚದುರಂಗ

ಶ್ರೀ ಹನುಮಗಿರಿ ಮೇಳ
ಪೆರ್ಲ ಇಡಿಯಡ್ಕದಲ್ಲಿ

ಶ್ರೀ ಪಾವಂಜೆ ಮೇಳ
ನಿತಿನ್ ಫ್ರೆಂಡ್ಸ್, ಬೆಳ್ಳೂರು, ಬಡಗಬೆಳ್ಳೂರು
ಶ್ರೀ ದೇವಿ ಮಹಾತ್ಮೆ



ಬಂಟ್ವಾಳದ ಎಸ್.ವಿ.ಎಸ್.ದೇವಳ ಆಂಗ್ಲಮಾಧ್ಯಮ ಶಾಲೆಯಲ್ಲಿನ 14 ರ ವಯೋಮಾನ ಮತ್ತು 17ರ ವಯೋಮಾನದ ಬಾಲಕ ಮತ್ತು ಬಾಲಕಿಯರ ವಿಭಾಗದ ಹಾವೇರಿಯಲ್ಲಿ ನಡೆದ ರಾಜ್ಯಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾಟದಲ್ಲಿ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ಮತ್ತು ಕೊಪ್ಪಳ ದಲ್ಲಿ ನಡೆದ ರಾಜ್ಯ ಮಟ್ಟದ ಪ್ರತಿಭಾ ಕಲೋತ್ಸವದಲ್ಲಿ ಪ್ರೌಢ ಶಾಲಾ ವಿಭಾಗ ಕವ್ವಾಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕ ರಕ್ಷಕ ಸಂಘದ ವತಿಯಿಂದ ಶಾಲಾ ಸಂಚಾಲಕ ಸುರೇಶ ಬಾಳಿಗ ಅಭಿನಂದಿಸಿ ಸನ್ಮಾನಿಸಿದರು.

ತಮಿಳುನಾಡು ಮೂಲದ ದಂಪತಿಗೆ ಮಗುವಿನ ದತ್ತು ಆದೇಶ ನೀಡಿದ ಡಿಸಿ

ಉಡುಪಿ: ತಮಿಳುನಾಡು ಮೂಲದ ದಂಪತಿಗೆ ಒಂದು ಮಗುವಿನ ಅಂತಿಮ ದತ್ತು ಆದೇಶವನ್ನು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಅವರು ಇತ್ತೀಚೆಗೆ ತಮ್ಮ ಕಚೇರಿಯಲ್ಲಿ ನೀಡಿದರು.

ದತ್ತು ಪ್ರಕ್ರಿಯೆ ಕಾನೂನು ಬದ್ಧವಾಗಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯಿದೆ 2021ರ ಸೆಕ್ಷನ್ 56 (1) 58 ಮತ್ತು 61ರ ಅಡಿಯಲ್ಲಿ ಕುಟುಂಬದ ಪ್ರೀತಿ ವಂಚಿತ, ಪೋಷಕರನ್ನು ಕಳೆದುಕೊಂಡ, ಪಾಲನೆ ಪೋಷಣೆ ವಂಚಿತ ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳು ಮಾತ್ರ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯಿಂದ ದತ್ತು ಮುಕ್ತ ಆದೇಶ ಪಡೆದು ದತ್ತು ನೀಡಲು ಅರ್ಹರಾಗಿರುತ್ತಾರೆ ಎಂದರು.

ದತ್ತು ಪಡೆಯಲು ಇಚ್ಛಿಸುವ ದಂಪತಿಗಳು ಕಾನೂನು ಬದ್ಧವಾಗಿ ದತ್ತು ಪ್ರಕ್ರಿಯೆ ಮೂಲಕ ದತ್ತು ಪಡೆಯಬೇಕು. ಮಗು ಬೇಡವಾದಲ್ಲಿ ಕಸದ ತೊಟ್ಟಿ, ಆಸ್ಪತ್ರೆ ಆವರಣ, ಶೌಚಾಲಯ, ರಸ್ತೆ ಬದಿ ಹಾಗೂ ಪೊದೆಗಳಲ್ಲಿ ಎಸೆಯದೇ ಪರಿತ್ಯಕ್ತ ಮಕ್ಕಳ ರಕ್ಷಣೆಗಾಗಿ ಇರುವ ವಿಶೇಷ ಮಮತೆಯ ತೊಟ್ಟಿಲುಗಳಲ್ಲಿ ಮಕ್ಕಳನ್ನು ಬಿಡಬಹುದಾಗಿದೆ. ಜಿಲ್ಲೆಯ ಸಂತೆಕಟ್ಟೆಯಲ್ಲಿ ಶ್ರೀಕೃಷ್ಣಾನುಗ್ರಹ ದತ್ತು ಕೇಂದ್ರ, ಉಡುಪಿಯ ಬಿ.ಆರ್.ಶೆಟ್ಟಿ ಆಸ್ಪತ್ರೆ ಹಾಗೂ ನಿಟ್ಟೂರು ಸರಕಾರಿ ಬಾಲಕಿಯರ ಬಾಲಮಂದಿರದಲ್ಲಿ ಮಮತೆಯ ತೊಟ್ಟಿಲುಗಳನ್ನು ಇರಿಸಲಾಗಿದೆ ಎಂದರು.

ಕಾನೂನು ಉಲ್ಲಂಘಿಸಿ ಅಥವಾ ಮಕ್ಕಳ ಮಾರಾಟ ಪ್ರಕರಣಗಳಲ್ಲಿ ಆಸ್ಪತ್ರೆ ಸಿಬ್ಬಂದಿಯವರು ಶಾಮೀಲಾಗಿದ್ದಲ್ಲಿ 1 ಲಕ್ಷ ರೂಪಾಯಿ ದಂಡ ಹಾಗೂ 7 ವರ್ಷದವರೆಗೆ ಜೈಲು ಶಿಕ್ಷೆ ಹಾಗೂ ಮಕ್ಕಳನ್ನು ಮಾರಾಟ ಮಾಡಿದವರಿಗೆ ಹಾಗೂ ಮಕ್ಕಳನ್ನು ಕೊಂಡುಕೊಂಡವರಿಗೆ 1 ಲಕ್ಷ ದಂಡ ಹಾಗೂ 5 ವರ್ಷದವರೆಗೆ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ನಾಗರತ್ನ ನಾಯಕ್, ಸಿಬ್ಬಂದಿ ಸುರಕ್ಷಾ, ಉಡುಪಿ ಕೃಷ್ಣಾನುಗೃಹ ವಿಶೇಷ ದತ್ತು ಕೇಂದ್ರದ ಮೆರಿನಾ ಉಪಸ್ಥಿತರಿದ್ದರು.

ದತ್ತು ಪ್ರಕ್ರಿಯೆ ಕುರಿತು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಚೇರಿ ದೂರವಾಣಿ ಸಂಖ್ಯೆ: 0820-2574964 ಹಾಗೂ ಶ್ರೀಕೃಷ್ಣಾನುಗೃಹ ವಿಶೇಷ ದತ್ತು ಕೇಂದ್ರ, ಆಶೀರ್ವಾದ್ ರಸ್ತೆ, ಸಂತೆಕಟ್ಟೆ, ಉಡುಪಿ ದೂರವಾಣಿ ಸಂಖ್ಯೆ: 9880442640ನ್ನು ಸಂಪರ್ಕಿಸಬಹುದಾಗಿದೆ.

ಮಾನವ – ವನ್ಯಜೀವಿ ಸಂಘರ್ಷ ನಿಯಂತ್ರಣ | ಇಂದು ಸಚಿವ ಶಶೀಂದ್ರನ್‌ರಿಂದ ಉದ್ಘಾಟನೆ

ಪುಲಿಪರಂಬಕ್ಕೆ ಕಾವಲು ಗೋಪುರ

ಕಾಸರಗೋಡು: ಜಿಲ್ಲಾ ಮಟ್ಟದ ಅರಣ್ಯ ವಿಭಾಗದಡಿಯಲ್ಲಿ ಮಾನವ – ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡಲು ಜಾರಿಗೆ ತರಲಾಗುತ್ತಿರುವ ಯೋಜನೆಗಳಲ್ಲಿ ಪುಲಿಪರಂಬ ವಾಚ್ ಟವರ್ ನಿರ್ಣಾಯಕ ಹೆಜ್ಜೆಯಾಗಿದೆ. ರಾಜ್ಯ ಅರಣ್ಯ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ಫೆ.22ರಂದು ವಾಚ್ ಟವರ್ ಉದ್ಘಾಟಿಸಲಿದ್ದಾರೆ.

ವನ್ಯಜೀವಿ ಸಂರಕ್ಷಣಾ ವ್ಯವಸ್ಥೆಗಳ ದಕ್ಷತೆಯನ್ನು ಹೆಚ್ಚಿಸುವುದು ಮತ್ತು ಅರಣ್ಯ ಸಿಬ್ಬಂದಿಗಳಿಗೆ ನಿರಂತರ ಮೇಲ್ವಿಚಾರಣಾ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಎರಡು ದಶಕಗಳಿಗೂ ಹೆಚ್ಚು ಕಾಲ ದೇಲಂಪಾಡಿ, ಕಾರಡ್ಕ, ಮುಳಿಯಾರು, ಬೇಡಡ್ಕ, ಕುತ್ತಿಕೋಲ್ ಗ್ರಾಮ ಪಂಚಾಯತ್‌ಗಳು ಕಾಡಾನೆಗಳು ಸಹಿತ ಇತರ ಕಾಡುಪ್ರಾಣಿಗಳಿಂದ ತೊಂದರೆ ಎದುರಿಸುತ್ತಿವೆ.

ಕೇರಳ – ಕರ್ನಾಟಕ ಗಡಿ ಅರಣ್ಯ ಪ್ರದೇಶದಿಂದ ಪ್ರವೇಶಿಸುವ ಕಾಡುಪ್ರಾಣಿಗಳು ವಸತಿ ಪ್ರದೇಶಗಳು ಮತ್ತು ಕೃಷಿ ಭೂಮಿಗೆ ಗಂಭೀರ ಹಾನಿಯನ್ನುಂಟು ಮಾಡಿವೆ. ಕಾಡಾನೆಗಳ ಉಪಟಳದಿಂದ ಅಪಾರ ಸಂಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾರಡ್ಕ ಆನೆ ಸಂರಕ್ಷಣಾ ಯೋಜನೆಯಡಿ ದೇಲಂಪಾಡಿ ಗ್ರಾಮ ಪಂಚಾಯತ್‌ನಲ್ಲಿ 21 ಕಿಲೋ ಮೀಟರ್ ಉದ್ದದಲ್ಲಿ ಅತ್ಯಾಧುನಿಕ ಸೌರಶಕ್ತಿ ಚಾಲಿತ ನೇತಾಡುವ ಬೇಲಿಯನ್ನು ಅಳವಡಿಸಲಾಗಿದೆ.



ಜಿಲ್ಲಾ ಮಟ್ಟದ ಯೋಜನಾ ಸಮಿತಿಯ ಶಿಫಾರಸು ಮತ್ತು ರಾಜ್ಯ ಮಟ್ಟದ ಅನುಮೋದನೆಯನ್ನು ಪಡೆದ ನಂತರ ವಿಶೇಷ ಆರ್ಥಿಕ ನೆರವಿನೊಂದಿಗೆ ಇದನ್ನು ನವೀನ ಯೋಜನೆಯಾಗಿ ಜಾರಿಗೆ ತರಲಾಯಿತು. ಈ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ ಮಾದರಿ ಎಂದು ಪರಿಗಣಿಸಲಾಗಿದೆ. ಬಂದಡ್ಕ ವಿಭಾಗದಲ್ಲಿ ತಲ್ಪಚ್ಚೇರಿಯಿಂದ ಅಂಚೆನಡ್ಕ ವರೆಗೆ 16.3 ಕಿಲೋ ಮೀಟರ್ ಸೌರಶಕ್ತಿ ಚಾಲಿತ ನೇತಾಡುವ ಬೇಲಿಯನ್ನು 196 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದೆ.

- ಮಾನವ - ವನ್ಯಜೀವಿ ಸಂಘರ್ಷವನ್ನು ಕಡಿಮೆ ಮಾಡಲು ಜಾರಿಗೆ ತರಲಾಗುತ್ತಿರುವ ಯೋಜನೆಗಳಲ್ಲಿ ಪುಲಿಪರಂಬ ವಾಚ್ ಟವರ್ ನಿರ್ಣಾಯಕ ಹೆಜ್ಜೆ
- ಅರಣ್ಯ ಸಿಬ್ಬಂದಿ ಗಳಿಗೆ ನಿರಂತರ ಮೇಲ್ವಿಚಾರಣಾ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವುದು
- ವನ್ಯಜೀವಿ ಸಂರಕ್ಷಣಾ ವ್ಯವಸ್ಥೆಗಳ ದಕ್ಷತೆಯನ್ನು ಹೆಚ್ಚಿಸುವುದು
- ಕಾಡಾನೆಗಳ ಉಪಟಳದಿಂದ ಅಪಾರ ಸಂಕಷ್ಟಗಳನ್ನು ಅನುಭವಿಸ ಬೇಕಾಗುತ್ತದೆ.

ತಡೆಗಟ್ಟುವ ಕ್ರಮಗಳ ಪರಿಣಾಮಕಾರಿ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ನಿರಂತರ ಮೇಲ್ವಿಚಾರಣೆ ಅತ್ಯಗತ್ಯವಾಗಿದ್ದರಿಂದ ಪುಲಿಪರಂಬದಲ್ಲಿ ಶಾಶ್ವತ ವೀಕ್ಷಣಾ ಪೋಸ್ಟ್ ಆಗಿ ಕಾವಲು ಗೋಪುರವನ್ನು ಸ್ಥಾಪಿಸಲಾಗಿದೆ. ಇದು ಮುಖ್ಯವಾಗಿ ಆನೆಗಳ ವಲಸೆ ಮಾರ್ಗದಲ್ಲಿರುವುದರಿಂದ ಇಲ್ಲಿಂದ ವೀಕ್ಷಣೆಯು ಗಡಿ ದಾಟುವ ವನ್ಯಜೀವಿಗಳ ಚಲನವಲನಗಳನ್ನು ಮುಂಚಿತವಾಗಿ ಗುರುತಿಸಲು ಸಹಾಯಕವಾಗಿದೆ. ಜನವಸತಿ ಪ್ರದೇಶಗಳಿಗೆ ಪ್ರವೇಶವನ್ನು ತಡೆಗಟ್ಟುವಲ್ಲಿ ಮತ್ತು ಕಾಡಿನ ಬೆಂಕಿಯಂತಹ ತುರ್ತು ಪರಿಸ್ಥಿತಿಗಳನ್ನು ಸಕಾಲಿಕವಾಗಿ ಪತ್ತೆಹಚ್ಚುವಲ್ಲಿ ವಾಚ್ ಟವರ್ ಉಪಯುಕ್ತವಾಗಿರುತ್ತದೆ.

ಕೇರಳ ಪೊಲೀಸ್ ವಸತಿ ನಿರ್ಮಾಣ ನಿಗಮ (ಕೆಪಿಎಚ್‌ಸಿಸಿ) ಈ ಕಾವಲು ಗೋಪುರದ ನಿರ್ಮಾಣವನ್ನು ಪೂರ್ಣಗೊಳಿಸಿದೆ. 23 ಲಕ್ಷ ರೂ. ವೆಚ್ಚದಲ್ಲಿ ಈ ಗೋಪುರವು ಉತ್ತಮ ಗುಣಮಟ್ಟದ ಸೌಲಭ್ಯಗಳನ್ನು ಹೊಂದಿದೆ. ಗಸ್ತು ತಿರುಗುವಿಕೆಯ ಭಾಗವಾಗಿ ದೀರ್ಘಕಾಲ ಅರಣ್ಯ ಪ್ರದೇಶದಲ್ಲಿ ಇರಬೇಕಾದ ರಕ್ಷಣಾ ವಿಭಾಗದ ನೌಕರರಿಗೆ ಅಗತ್ಯವಾದ ವಿಶ್ರಾಂತಿ ಸೌಲಭ್ಯಗಳನ್ನು ಸಹ ಒದಗಿಸಲಾಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಪ್ರಾಯೋಗಿಕ ತಡೆಗಟ್ಟುವ ಕ್ರಮಗಳನ್ನು ಸಂಯೋಜಿಸುವ ಇಂತಹ ಯೋಜನೆಗಳು ಅರಣ್ಯ ಸಂರಕ್ಷಣಾ ಚಟುವಟಿಕೆಗಳನ್ನು ಹೆಚ್ಚು ಪರಿಣಾಮಕಾರಿ ಮತ್ತು ಜನಪ್ರಿಯಗೊಳಿಸುತ್ತವೆ. ಪುಲಿಪರಂಬ ಕಾವಲು ಗೋಪುರವು ರೈತರ ಸುರಕ್ಷತೆ ಮತ್ತು ವನ್ಯಜೀವಿಗಳ ನೈಸರ್ಗಿಕ ಆವಾಸಸ್ಥಾನವನ್ನು ಸಂರಕ್ಷಿಸುವ ಅಂಗವಾಗಿ ರಾಜ್ಯ ಸರಕಾರ ಮತ್ತು ಅರಣ್ಯ ಇಲಾಖೆಯ ಬದ್ಧತೆಯ ಸಂಕೇತವಾಗಿದೆ.

ನಾಡ್ಪಾಲು ಗ್ರಾಪಂಗೆ ಶವ ಶೀತಲೀಕರಣ ಯಂತ್ರ ಕೊಡುಗೆ



ಹೆಬ್ರಿ: ಇಲ್ಲಿನ ನಾಡ್ಪಾಲು ಗ್ರಾ.ಪಂನ ಹಿರಿಯರ ಕ್ರೀಡಾಕೂಟದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಪಡೆದ ನಾಡ್ಪಾಲು ನಿವಾಸಿ ಕುಮಾರಸ್ವಾಮಿ ಹಾಗೂ ನಾಡ್ಪಾಲು ಗ್ರಾಮ ಪಂಚಾಯತ್‌ಗೆ ಶವ ಶೀತಲೀಕರಣ ಯಂತ್ರವನ್ನು ಕೊಡುಗೆಯಾಗಿ ನೀಡಿದ ಉಡುಪಿಯ ಗಾಂಧಿ ಆಸ್ಪತ್ರೆಯ ಡಾ. ಹರಿಶ್ಚಂದ್ರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಾತನಾಡಿದ ಡಾ. ಹರಿಶ್ಚಂದ್ರ ಭಟ್, ನಾಡ್ಪಾಲು ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯಗಳಿಗೆ ಸದಾ ಕೈಜೋಡಿಸುವೆನೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಐದು ವರ್ಷಗಳ ಕಾಲ ನಾಡ್ಪಾಲು ಗ್ರಾಮ ಪಂಚಾಯಿತಿಯ ಆಡಳಿತವನ್ನು ಸಮರ್ಥವಾಗಿ ನಡೆಸಿದ ಆಡಳಿತ ಮಂಡಳಿಯ ಸದಸ್ಯರಿಗೆ ಸಾರ್ವಜನಿಕರ ಪರವಾಗಿ ಅಭಿನಂದನೆಯನ್ನು ಸಲ್ಲಿಸಲಾಯಿತು.

ನಾಡ್ಪಾಲು ಗ್ರಾಮ ಪಂಚಾಯತ್ ಅಧ್ಯಕ್ಷರಾದ ನವೀನ್ ಕುಮಾರ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಗ್ರಾ.ಪಂ. ನಿಕಟಪೂರ್ವ ಅಧ್ಯಕ್ಷ ದಿನೇಶ್ ಹೆಗ್ಗಡೆ ಪ್ರಾಸ್ತಾವಿಕ ಮಾತನಾಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶೀತಲ್ ಸ್ವಾಗತಿಸಿದರು. ಕಾರ್ಯದರ್ಶಿ ದೇವಕಿ ಉಪಸ್ಥಿತರಿದ್ದರು. ಗಣೇಶ್ ಅರಸಮ್ಮನಕಾನು ನಿರೂಪಿಸಿದರು.

ಡಾ.ಕೆ.ಬಿ. ಸೂರ್ಯಕುಮಾರ್‌ಗೆ ಬಿ.ಎಸ್. ಗೋಪಾಲಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ

ಲೇಖಕರನ್ನು ನಿರಂತರ ಪ್ರೋತ್ಸಾಹಿಸೋಣ

ಮಡಿಕೇರಿ: ಬರಹಗಾರರನ್ನು ಪ್ರೋತ್ಸಾಹಿಸುವ ಕಾರ್ಯ ಕೊಡಗಿನಲ್ಲಿ ನಿರಂತರವಾಗಿ ನಡೆಯಬೇಕು. ಆ ಮೂಲಕ ಬರಹಗಾರರು ಎಲ್ಲೆಡೆ ಗುರುತಿಸಿಕೊಳ್ಳುವಂತಾಗಬೇಕು ಎಂದು ಹಿರಿಯ ಸಾಹಿತಿ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಹೇಳಿದ್ದಾರೆ.

ನಗರದ ರೆಡ್ ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕೊಡಗು ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿತ ಶಕ್ತಿ ಪತ್ರಿಕೆಯ ಸ್ಥಾಪಕರಾದ ಬಿ.ಎಸ್. ಗೋಪಾಲಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ಕೆ.ಬಿ. ಸೂರ್ಯಕುಮಾರ್ ಅವರಿಗೆ ವೈದ್ಯ ಕಂಡ ವಿಸ್ಮಯ ಕೃತಿಗಾಗಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕೃತಿ, ಲೇಖನ ರಚನೆಗೆ ವಯಸ್ಸಿನ ನಿರ್ಬಂಧ ಇಲ್ಲ. ಯಾವುದೇ ವಯಸ್ಸಿನಲ್ಲಿಯೂ ಉತ್ತಮ ಲೇಖನ, ಕೃತಿ ರಚನೆ ಸಾಧ್ಯವಿದೆ. ಸೂರ್ಯಕುಮಾರ್ ಅವರೇ ಈ ಮಾತಿಗೆ ಉತ್ತಮ ನಿದರ್ಶನ ಎಂದೂ ಕೆಪಿಬಿ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ಬಿ.ಎ. ಷಂಶುದ್ದೀನ್ ಮಾತನಾಡಿ, ಶಕ್ತಿ ಪತ್ರಿಕೆ ಪ್ರಭಾವಶಾಲಿ ಪತ್ರಿಕೆಯಾಗಿದ್ದರೂ ಕೂಡಾ ಅದನ್ನು ಎಂದೂ ತಮ್ಮ ಸ್ವಾರ್ಥಕ್ಕಾಗಿ ಅಥವಾ ಸ್ವಯಂ ಲಾಭಕ್ಕಾಗಿ ಗೋಪಾಲಕೃಷ್ಣ ಅವರು ಬಳಸಿಕೊಳ್ಳಲಿಲ್ಲ. ನಾಟಕ ನಿರ್ದೇಶಕರೂ ಕೊಡುಗೈ ದಾನಿಗಳೂ ಆಗಿದ್ದ ಗೋಪಾಲಕೃಷ್ಣ ಅವರು ತಮ್ಮ ನೇರ ಹಾಗೂ ನಿಷ್ಠುರ ಬರಹಗಳ ಮೂಲಕ ಕೊಡಗಿನ ಒಳಿತಿಗಾಗಿ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದರು. ವಾರ ಪತ್ರಿಕೆ, ಸಂಜೆ ಪತ್ರಿಕೆ, ಮಾಸ ಪತ್ರಿಕೆಗಳನ್ನೂ ಗೋಪಾಲಕೃಷ್ಣ ಅವರು ನಡೆಸಿದ್ದರು. ಕೊಡಗಿನ ಜನರಿಗಾಗಿಯೇ ಪತ್ರಿಕೆಯನ್ನು ಮುನ್ನಡೆಸಿದ ಪತ್ರಕರ್ತ ಗೋಪಾಲಕೃಷ್ಣ ಅವರ ಬದುಕು ಈಗಿನ ಪತ್ರಕರ್ತರಿಗೆ ಮಾದರಿಯಾಗಬೇಕು ಎಂದು ಹೇಳಿದರು.



ರಸ್ತೆಗೆ ಗೋಪಾಲಕೃಷ್ಣ ಹೆಸರು

ಕೊಡಗಿನ ಪತ್ರಿಕೋದ್ಯಮದ ಭೀಷ್ಮ ಎಂದೇ ಹೆಸರಾದ ಬಿ.ಎಸ್. ಗೋಪಾಲಕೃಷ್ಣ ಅವರ ಹೆಸರನ್ನು ಚಿರಸ್ಥಾಯಿಯಾಗಿಸುವ ನಿಟ್ಟಿನಲ್ಲಿ ಕೊಡಗು ಪತ್ರಕರ್ತರ ಸಂಘದ ನಿರಂತರ ಪ್ರಯತ್ನದ ಫಲವಾಗಿ ಮಡಿಕೇರಿಯ ಕೈಗಾರಿಕಾ ಬಡಾವಣೆಯ ಮುಖ್ಯ ರಸ್ತೆಗೆ ಗೋಪಾಲಕೃಷ್ಣ ಅವರ ಹೆಸರಿಡಲು ನಗರಸಭೆಯಿಂದ ಅನುಮತಿ ದೊರೆತಿದೆ. ಮಾರ್ಚ್ 4 ರ ಶಕ್ತಿ ಪತ್ರಿಕೆ ಹುಟ್ಟು ಹಬ್ಬದಂದು ಬೆಳಗ್ಗೆ 11 ಗಂಟೆಗೆ ಆ ರಸ್ತೆಗೆ ಬಿಎಸ್ ಜಿ ಹೆಸರಿಡುವ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಮಾಹಿತಿ ನೀಡಿದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ. ರಮೇಶ್, ಶಕ್ತಿ ಪತ್ರಿಕೆಯ ಪ್ರಧಾನ ಸಂಪಾದಕ ಜಿ.ರಾಜೇಂದ್ರ, ಶಕ್ತಿ ಪತ್ರಿಕೆಯ ಸಲಹಾ ಸಂಪಾದಕ ಬಿ.ಜಿ. ಅನಂತಶಯನ, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ., ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್, ಮಡಿಕೇರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್ ಮಾತನಾಡಿದರು.

ಪ್ರಶಸ್ತಿ ಪ್ರದಾನ ಸಂದರ್ಭ ಗೀತಾ ಸೂರ್ಯಕುಮಾರ್, ರಾಜಲಕ್ಷ್ಮಿ ಗೋಪಾಲಕೃಷ್ಣ, ಶಕ್ತಿ ಸಂಪಾದಕ ಜಿ.ಚಿದ್ವಿಲಾಸ್ ವೇದಿಕೆಯಲ್ಲಿದ್ದರು.

ವಿದೂಷಿ ಮೇಘಾಭಟ್ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಪ್ರದಾನ ಕಾರ್ಯದರ್ಶಿ ಪುದಿನೆರವನ ರೇವತಿ ರಮೇಶ್ ಸ್ವಾಗತಿಸಿ, ಪರಿಷತ್ ಖಜಾಂಚಿ ಎಸ್.ಎಸ್. ಸಂಪತ್ ಕುಮಾರ್ ಅತಿಥಿ ಪರಿಚಯ ಮಾಡಿದ ಕಾರ್ಯಕ್ರಮದಲ್ಲಿ ಪತ್ರಕರ್ತರ ಸಂಘದ ನಿರ್ದೇಶಕ ಉಜ್ವಲ್ ರಂಜಿತ್ ವಂದಿಸಿದರು. ಸ್ಪರ್ಧೆಯ ತೀರ್ಪುಗಾರರಾಗಿ ಸುಬ್ರಾಯ ಸಂಪಾಜೆ, ಪ್ರತಿಮಾ ಹರೀಶ್ ರೈ, ರಜನಿ ಅವರು ಕಾರ್ಯನಿರ್ವಹಿಸಿದ್ದರು.

ಹೆಮ್ಮಾಡಿ : ಅರ್ಹ ಫಲಾನುಭವಿಗಳಿಗೆ ಶ್ರವಣ ಯಂತ್ರ ಸಹಾಯಧನ ವಿತರಣೆ



ಕುಂದಾಪುರ : ಮನುಷ್ಯನಲ್ಲಿ ದೋಷಗಳು ಕಾಣಿಸಿಕೊಳ್ಳುವುದು ಸಹಜ. ಹಲವರು ತಮ್ಮ ದೋಷಗಳನ್ನು ಗುಣಪಡಿಸಿಕೊಳ್ಳಲು ಸಾಧ್ಯವಾಗದೆ ತಮ್ಮ ಜೀವನವನ್ನೇ ಬಲಿ ಕೊಡುತ್ತಾರೆ. ಶ್ರವಣ ದೋಷವುಳ್ಳವರನ್ನು ಸಮಾಜದಲ್ಲಿ ಕಡೆಗಣಿಸಲಾಗುತ್ತಿದ್ದು, ಶ್ರವಣ ದೋಷ ಉಳ್ಳವರು ಸೂಕ್ತ ಚಿಕಿತ್ಸೆಯ ಮೂಲಕ ಅಥವಾ ಶ್ರವಣ ಯಂತ್ರ ಅಳವಡಿಸಿಕೊಳ್ಳುವ ಮೂಲಕ ಇತರರಂತೆ ಜೀವನ ನಡೆಸಲು ಸಾಧ್ಯವಿದೆ ಎಂದು ಹೆಮ್ಮಾಡಿ ಜನತಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಗಣೇಶ ಮೊಗವೀರ ಹೇಳಿದರು.

ಹೆಮ್ಮಾಡಿ ಜನತಾ ಪದವಿ ಪೂರ್ವ ಕಾಲೇಜ್, ಕುಲಾಲ ಸಮಾಜ ಸುಧಾರಕ ಸಂಘ ಕುಂದಾಪುರ, ಜೇಸಿಐ ಕುಂದಾಪುರ ಸಿಟಿ, ಪ್ರಗತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ಹೆಮ್ಮಾಡಿ ಮತ್ತು ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಕುಂದಾಪುರ ಇವರ ಸಂಯುಕ್ತ ಆಶ್ರಯದಲ್ಲಿ ಟೀಮ್ ಈಶ್ವರ ಮಲ್ಪೆ ಸಹಯೋಗದೊಂದಿಗೆ ಹೆಮ್ಮಾಡಿಯ ಜನತಾ ಪದವಿಪೂರ್ವ ಕಾಲೇಜಿನ ವಠಾರದಲ್ಲಿ ಶುಕ್ರವಾರ ಉಚಿತ ಕಿವಿಯ ತಪಾಸಣೆ ಮತ್ತು ಶ್ರವಣ ಯಂತ್ರಕ್ಕೆ ಸಹಾಯಧನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜೇಸಿಐ ಕುಂದಾಪುರ ಸಿಟಿ ಪೂರ್ವಾಧ್ಯಕ್ಷ ರಾಘವೇಂದ್ರ ಕುಲಾಲ್ ಶುಭಾಶಂಸನೆಗೈದರು. ಅರ್ಹ ಫಲಾನುಭವಿಗಳಿಗೆ ಶ್ರವಣ ಯಂತ್ರ ಸಹಾಯಧನ ವಿತರಿಸಲಾಯಿತು.

ಕುಂದಾಪುರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಬಿ.ರಾಘವೇಂದ್ರ ಪೈ, ಜೇಸಿಐ ಕುಂದಾಪುರ ಸಿಟಿಯ ಕಿರಣ್ ದೇವಾಡಿಗ, ಟೀಮ್ ಈಶ್ವರ ಮಲ್ಪೆ ತಂಡದ ಲವ ಬಂಗೇರ, ಡಾ. ಅಂಕಿತಾ ಕಲ್ಮಾಡಿ, ಕಾಲೇಜಿನ ಉಪಪ್ರಾಂಶುಪಾಲ ಸತೀಶ್, ಹೈಸ್ಕೂಲು ವಿಭಾಗದ ಮುಖ್ಯೋಪಾಧ್ಯಾಯ ಜಗದೀಶ್ ಮೊದಲಾದವರು ಉಪಸ್ಥಿತರಿದ್ದರು.

ಉಪನ್ಯಾಸಕ ಆಲ್ತಾರು ನಾಗರಾಜ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ದಿನಗೂಲಿ ಕಾರ್ಮಿಕ ಹನೆಹಳ್ಳಿ ಕೃಷ್ಣರ ಗುಂಡಿಟ್ಟು ಕಗ್ಗೊಲೆ ಪ್ರಕರಣ

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಮತಾ ಸೈನಿಕ ದಳ ಪ್ರತಿಭಟನೆ

ಉಡುಪಿ: ಎರಡು ವರ್ಷಗಳ ಹಿಂದೆ ನಡೆದ ದಲಿತ ದಿನಗೂಲಿ ಕಾರ್ಮಿಕ ಹನೆಹಳ್ಳಿ ಕೃಷ್ಣರ ಗುಂಡಿಟ್ಟು ಕಗ್ಗೊಲೆ ಪ್ರಕರಣವನ್ನು ಸಿಐಡಿ ತನಿಖೆಗೆ ಹಾಗೂ ಅಂಬೇಡ್ಕರ್ ಆವಾಸ್ ಮನೆ ನಿರ್ಮಾಣದ ಸಹಾಯಧನ ಕನಿಷ್ಠ 9 ಲಕ್ಷ ರೂ. ಹಾಗೂ ಬಸವ ಇಂದಿರಾ ಆವಾಸ್‌ಗೆ 5 ಲಕ್ಷ ರೂ.ಸಹಾಯಧನ ನೀಡುವಂತೆ ಒತ್ತಾಯಿಸಿ ಸಮತಾ ಸೈನಿಕ ದಳದ ಉಡುಪಿ ಜಿಲ್ಲಾ ಸಮಿತಿ ಕಾರ್ಯಕರ್ತರು ಸಂಘಟನೆಯ ಜಿಲ್ಲಾಧ್ಯಕ್ಷ ವಿಶ್ವನಾಥ ಪೇತ್ರಿ ನೇತೃತ್ವದಲ್ಲಿ ಬ್ರಹ್ಮಗಿರಿ ಸರ್ಕಲ್‌ನಲ್ಲಿ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು.

ಸಮತಾ ಸೈನಿಕ ದಳ ಕಾರ್ಯಕರ್ತರು ಕಪ್ಪುಪಟ್ಟಿ ಧರಿಸಿ ಬ್ರಹ್ಮಗಿರಿಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಭವನದ ಎದುರು ಪ್ರತಿಭಟನೆ ನಡೆಸುವ ಘೋಷಣೆ ಮಾಡಿದ್ದರು. ಆದರೆ ಇದಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ನಾಯರ್‌ಕೆರೆಯ ಕಾಂಗ್ರೆಸ್ ಭವನದ ಎದುರು ಬೆಳಗಿನಿಂದಲೇ ಬಿಗು ಪೊಲೀಸ್ ಭದ್ರತೆಯನ್ನು ಒದಗಿಸಲಾಗಿತ್ತು.



ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಶೋಕಕುಮಾರ್ ಕೊಡವೂರು, ಕಾರ್ಯಾಧ್ಯಕ್ಷ ಕಿಶನ್ ಹೆಗ್ಡೆ ಕೊಳ್ಕೆಬೈಲು, ಬ್ಲಾಕ್ ಅಧ್ಯಕ್ಷ ರಮೇಶ್ ಕಾಂಚನ್, ಮಹಾಬಲ ಕುಂದರ್, ಸುರೇಶ್ ಶೆಟ್ಟಿ ಬನ್ನಂಜೆ, ಕೀರ್ತಿ ಶೆಟ್ಟಿ,ನಾಗೇಶ್ ಕುಮಾರ್ ಉದ್ಯಾವರ ಹಾಗೂ ಇತರ ನಾಯಕರು ಸ್ಥಳಕ್ಕೆ ಆಗಮಿಸಿ ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಸಮತಾ ಸೈನಿಕ ದಳದ ಪದಾಧಿಕಾರಿಗಳಾದ ಗಣೇಶ್ ಸಾಲಿಯಾನ್, ಜ್ಯೋತಿ ಶಿರಿಯಾರ, ವಿಘ್ನೇಶ್ ಬ್ರಹ್ಮಾವರ, ಸತೀಶ್ ಜನ್ನಾಡಿ, ಗಜೇಂದ್ರ ನಲ್ಲೂರು, ಎ.ಕೆ.ಸುಬ್ರಹ್ಮಣ್ಯ, ರಾಮ ಕೂಟೂರು ಹಾಗೂ ಇತರ ಮುಖಂಡರು ಉಪಸ್ಥಿತರಿದ್ದರು.

ತ್ಯಾಜ್ಯ ಸಮಸ್ಯೆ: ಹೊಟೇಲು ಉದ್ಯಮಿಗಳೊಂದಿಗೆ ಶಾಸಕರ ನೇತೃತ್ವದಲ್ಲಿ ಸಭೆ

ಕಿನ್ನಿಗೋಳಿಯಲ್ಲಿ ರೂ. 6 ಕೋ. ವೆಚ್ಚದ ದ್ರವ ತ್ಯಾಜ್ಯ ಘಟಕ

ಕಿನ್ನಿಗೋಳಿ : ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಶೀಘ್ರದಲ್ಲಿ ಮುಂದಿನ ಮೂರು ನಾಲ್ಕು ತಿಂಗಳಿನಲ್ಲಿ ಮಲತ್ಯಾಜ್ಯ ಸಂಸ್ಕರಣ ಘಟಕ ಆರಂಭವಾಗಲಿದೆ. ಸುಮಾರು ರೂ. 6 ಕೋಟಿ ವೆಚ್ಚದಲ್ಲಿ ದ್ರವತ್ಯಾಜ್ಯಸಂಸ್ಕರಣ ಘಟಕದ ಯೋಜನೆಯೂ ಆಗಲಿದೆ. ಈ ನಿಟ್ಟಿನಲ್ಲಿ ಬಹು ಮಹಡಿ ಕಟ್ಟಡ ಮಾಲಕರು, ಲಾಡ್ಜ್, ಹೋಟೇಲ್ ಮಾಲಕರು ಸಹಕಾರ ನೀಡಬೇಕು ಎಂದು ಶಾಸಕ ಉಮಾನಾಥ ಕೋಟ್ಯಾನ್ ಹೇಳಿದರು.

ಅವರು ಶುಕ್ರವಾರ ಕಿನ್ನಿಗೋಳಿ ಪಟ್ಟಣ ಪಂಚಾಯತ್‌ನಲ್ಲಿ ಕಿನ್ನಿಗೋಳಿ ನಗರದ ಹೊಟೇಲು ಉದ್ಯಮಿಗಳ ಸಭೆಯಲ್ಲಿ ಮಾತನಾಡಿದರು.

ದ್ರವ ತ್ಯಾಜ್ಯ ಸಮಸ್ಯೆ ಇದ್ದು ಇದರಿಂದ ಬಿತ್ತುಲ್ ಪರಿಸರದಲ್ಲಿ ಸಾರ್ವಜನಿಕರಿಗೆ ತೊಂದರೆ ಉಂಟಾಗುವ ಬಗ್ಗೆ ಸಾಕಷ್ಟು ದೂರುಗಳಿವೆ. ಕೋರ್ಟ್ ಕೇಸು ಆಗಿರುವುದರಿಂದ ಸಮಸ್ಯೆಗೆ ಪರಿಹಾರವಾಗಬೇಕು. ಹಾಗೂ ಮುಂದಿನ ಮೂರು ತಿಂಗಳಿನ ತನಕ ಕಟ್ಟಡ ಮಾಲಿಕರು ಹಾಗೂ ಹೋಟೇಲ್ ಮಾಲಿಕರು ಸಹಕಾರ ನೀಡಬೇಕು. ಮೆನ್ನಬೆಟ್ಟುವಿನಲ್ಲಿ ಮಲತ್ಯಾಜ್ಯ ಘಟಕ ಕೆಲಸ ಭಾಗಶಃ ಪೂರ್ಣಗೊಂಡಿದೆ. ಮುಂದಿನ ದಿನಗಳಲ್ಲಿ ಘಟಕ ಕಾರ್ಯಾರಂಭ ಮಾಡಲಿದೆ ಎಂದರು.



ಕಿನ್ನಿಗೋಳಿ ಪಟ್ಟಣ ಪಂಚಾಯತ್ ಬಹು ಕೋಟಿ ಯೋಜನೆಯಲ್ಲಿ ಒಳಚರಂಡಿ ಯೋಜನೆಯ ಬಗ್ಗೆ ಯೋಜನೆ ಸಿದ್ದಗೊಂಡು ಕಾರ್ಯರೂಪಕ್ಕೆ ಬರಲಿದೆ. ಈಗಾಗಲೇ 3 ಕೋಟಿ ರೂ ವೆಚ್ಚದಲ್ಲಿ ಮಲತ್ಯಾಜ್ಯ ಘಟಕದ ಆರಂಭವಾಗಲಿದೆ. ಹೋಟೇಲ್ ಹಾಗೂ ಬಹುಮಹಡಿ ಕಟ್ಟಡಗಳ ದ್ರವ ತ್ಯಾಜ್ಯವನ್ನು ಸಕ್ಕಿಂಗ್ ಮಾಡಿ ವಿಲೇವಾರಿ ಮಾಡಲಾಗುವುದು. ಇದಕ್ಕೆ ಪಟ್ಟಣ ಪಂಚಾಯತ್‌ಗೆ ಯಂತ್ರಗಳು, ಸಕ್ಕಿಂಗ್ ವಾಹನಗಳು ಬರಲಿವೆ. ದಿನಕ್ಕೆ ಎರಡು ಲಾರಿಗಳ ವಿಲೇವಾರಿ ಮಾಡುವ ಸಾಮರ್ಥ್ಯ ಹೊಂದಿದೆ. ಮುಂದಕ್ಕೆ ಇದರ ಮೂಲಕವೇ ಬಹು ಮಹಡಿ ಕಟ್ಟಡ ಹಾಗೂ ಹೋಟೇಲ್‌ಗಳಿಂದ ಮಲತ್ಯಾಜ್ಯವನ್ನು ವಿಲೇವಾರಿ ಮಾಡಲಾಗುವುದು ಎಂದು ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ ತಿಳಿಸಿದರು.

ಕಿನ್ನಿಗೋಳಿಯ ಮುಖ್ಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸೌಹಾರ್ದ ಸಭೆ ನಡೆಸಲಾಗಿದೆ. ಯಾರಿಗೂ ತೊಂದರೆಯಾಗದಂತೆ, ಸಮಸ್ಯೆ ಪರಿಹಾರ ಮಾಡಬೇಕಾಗಿದೆ ಎಂದು ಗುರುರಾಜ ಮಲ್ಲಿಗೆಯಂಗಡಿ ಹೇಳಿದರು.

ಉದ್ಯಮಿ ಡಾ. ಕಿಶೋರ್‌ಶೆಟ್ಟಿ, ಅಶೋಕ್ ಶೆಟ್ಟಿ, ಪುರುಷೋತ್ತಮ ಶೆಟ್ಟಿ, ಪ್ರಮೋದ್ ಕುಮಾರ್, ಹರೀಂದ್ರ ಸುವರ್ಣ, ಮಾಧವ ಶೆಟ್ಟಿಗಾರ್, ದಾಮೋದರ ಶೆಟ್ಟಿ, ಹೋರಾಟಗಾರ ಸ್ಟ್ಯಾನಿ ಪಿಂಟೊ ಮತ್ತಿತರರು ಸಮಸ್ಯೆಯನ್ನು ತಿಳಿಸಿದರು. ಉಪಾಧ್ಯಕ್ಷೆ ಪದ್ಮಲತಾ ರಾವ್, ಸದಸ್ಯ ಪ್ರಣೀಕ್, ಸಂತಾನ್ ಡಿಸೋಜ, ಮಲ್ಲಿಕಾ ಗುತ್ತಕಾಡು, ಪ್ರಕಾಶ್ ಆಚಾರ್, ದಾಮೋದರ ಶೆಟ್ಟಿ, ಮುಖ್ಯಾಧಿಕಾರಿ ಜಯಶಂಕರ್ ಇದ್ದರು.

ರಜಾದಿನಗಳಲ್ಲಿಯೂ ಕಚೇರಿ ತೆರೆದಿದೆ

ಕಾಸರಗೋಡು: ತೆರಿಗೆ ಸಂಗ್ರಹವನ್ನು ಹೆಚ್ಚಿಸುವ ಭಾಗವಾಗಿ ಸಾರ್ವಜನಿಕರು ಆಸ್ತಿ ತೆರಿಗೆ ಪಾವತಿಸಲು ಅನುಕೂಲವಾಗುವಂತೆ ಕಾಞಂಗಾಡು ನಗರಸಭೆಯ ಕಂದಾಯ ವಿಭಾಗವು ಮಾರ್ಚ್ 31ರ ವರೆಗೆ ಎಲ್ಲಾ ರಜಾದಿನಗಳಲ್ಲಿ ತೆರೆದಿರುತ್ತದೆ ಎಂದು ನಗರಸಭಾ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ಮಾರುಕಟ್ಟೆ ಧಾರಣೆ

21-02-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485	ಹಳೆ ಕರಿಗೋಟು	240 - 270
ಚೋಲ್ ಅಡಿಕೆ	515 - 540	ಹಸಿ ಕೊಕ್ಕೋ	80 - 110
ಡಬಲ್ ಚೋಲ್	515 - 540	ಒಣ ಕೊಕ್ಕೋ	380 - 380
ಹೊಸ ಪಟೋರ	365 - 415	**ಕಾಳುಮೆಣಸು ಧಾರಣೆ**	
ಹಳೆ ಪಟೋರ	400 - 430	ಕಾಳುಮೆಣಸು	465 - 665
ಹೊಸ ಉಳ್ಳಿ	115 - 300	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	105 - 305	ಆರ್‌ಎಸ್‌ಎಸ್ 1	210.50
ಹೊಸ ಕೋಕಾ	330 - 350	ಆರ್‌ಎಸ್‌ಎಸ್ 2	191.00
ಹಳೆ ಕೋಕಾ	355 - 375	ಸ್ಕ್ರಾಪ್ 1	133.00
ಹೊಸ ಕರಿಗೋಟು	240 - 270	ಸ್ಕ್ರಾಪ್ 2	123.00

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಳ್ತಂಗಡಿ

ಎಂ.ಸಿ.ನಂ.:30/2026

ಇವರೊಳಗೆ,
ಸುಂದರ ಎಂ ಕೆ ಮತ್ತು ಇತರರು ...ಅರ್ಜಿದಾರರು
-ಮತ್ತು-
ಜನನ ಮರಣಗಳ ಉಪ ನೋಂದಣಾಧಿಕಾರಿಗಳು/ತಹಶೀಲ್ದಾರ್ ಬೆಳ್ತಂಗಡಿ ...ಪ್ರತ್ಯರ್ಜಿದಾರರು

ನೋಟೀಸು

ಅರ್ಜಿದಾರರು ನ್ಯಾಯಾಲಯದಲ್ಲಿ ಈ ಮೇಲಿನ ಪ್ರಕರಣವನ್ನು ದಾಖಲು ಮಾಡಿ ಜನನ ಮರಣಗಳ ನೋಂದಣಾಧಿಕಾರಿಗಳಿಗೆ **ನೀಲಮ್ಮ** ಕೋಂ. ಕರಿಯ ಮಲೆಕುಡಿಯ ಎಂಬವರು **ದಿನಾಂಕ: 10.05.1965** ರಂದು ಬೆಳ್ತಂಗಡಿ ತಾಲೂಕಿನ ಶಿಶಿಲ ಗ್ರಾಮದಲ್ಲಿರುವ ಮನೆಯಲ್ಲಿ ಮರಣ ಹೊಂದಿದ ಬಗ್ಗೆ ಪ್ರತ್ಯರ್ಜಿದಾರರ ವಹಿಯಲ್ಲಿ ದಾಖಲು ಮಾಡಲು ನಿರ್ದೇಶಿಸಬೇಕಾಗಿ ಕೋರಲಾಗಿದ್ದು ಹಾಗೂ ಇದರ ಬಗ್ಗೆ ಸಾರ್ವಜನಿಕರ ಆಕ್ಷೇಪ ಇದ್ದಲ್ಲಿ ಹಾಗೂ ಇತರ ಯಾವುದೇ ವ್ಯಕ್ತಿಗಳ ಆಕ್ಷೇಪ ಇದ್ದಲ್ಲಿ **ದಿನಾಂಕ 06.03.2026 ರಂದು** ಖುದ್ದಾಗಿ ಯಾ ವಕೀಲರ ಮೂಲಕ ಆಕ್ಷೇಪ ಸಲ್ಲಿಸಲು ನ್ಯಾಯಾಲಯದ ಆದೇಶವಾಗಿರುತ್ತದೆ. ಸದ್ರಿ ದಿನಾಂಕದಂದು ತಾವು ಗೈರುಹಾಜರಾದ ಪಕ್ಷದಲ್ಲಿ ತಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಇತ್ಯರ್ಥಗೊಳಿಸಲಾಗುವುದು.

2026ನೇ ಇಸವಿ ಫೆಬ್ರವರಿ ಮಾಹೆಯ 14ನೇ ದಿನಾಂಕದಂದು ನ್ಯಾಯಾಲಯದ ಮೊಹರು ನಿಶಿ ನನ್ನ ದಸ್ಕತ್ತಿನೊಡನೆ ಕೊಡೋಣಾಗಿದೆ.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಹೆಚ್ಚುವರಿ ಸಿವಿಲ್ ಜಡ್ಜ್ ನ್ಯಾಯಾಲಯ ಬೆಳ್ತಂಗಡಿ

ಸಹಿ/- ಅಕ್ಷಯ ಟಿ. ರಾವ್
ಅರ್ಜಿದಾರರ ಪರ ವಕೀಲರು ಬೆಳ್ತಂಗಡಿ

ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ

ದೂರವಾಣಿ ಸಂ: 08152-222035 ಇ-ಮೇಲ್: dskolar@gmail.com
ಸಂಖ್ಯೆ: ಎಸ್.ಎನ್.ಆರ್/ಗ್ರೂಪ್-ಡಿ/ಹೊರಗುತ್ತಿಗೆ/22/2025-26
ದಿನಾಂಕ: 19.02.2026

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026-27 ನೇ ಸಾಲಿಗೆ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ವಿವಿಧ ಹುದ್ದೆಗಳ ಮಾನವ ಸಂಪನ್ಮೂಲ ಸೇವೆಗಳು, ಪಥ್ಯಾಹಾರ ಪದಾರ್ಥಗಳು ಹಾಗೂ ಔಷಧಿಗಳು/ಸರ್ಜಿಕಲ್ ಡಿಸ್ಪೋಸಬಲ್ಸ್ ಸರಬರಾಜಿಗೆ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಟೆಂಡರ್‌ದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಟೆಂಡರ್ ನಮೂನೆಗಳು ಹಾಗೂ ಷರತ್ತು ನಿಬಂಧನೆಗಳನ್ನು **http://kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳು ಹಾಗೂ ಟೆಂಡರ್ ಸಮಿತಿಯ ಇತರೆ ಷರತ್ತಿಗೆ ಒಳಪಟ್ಟಿರುತ್ತದೆ. **(1)** ನಾನ್‌ಕ್ಲಿನಿಕಲ್ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ನಾನ್‌ಕ್ಲಿನಿಕಲ್ ಸೇವೆ/23/2025-26, ದಿನಾಂಕ: 19.02.2026. ಟೆಂಡರ್ ಮೊತ್ತ ರೂ: 1,87,60,417/-, ಇ.ಎಂ.ಡಿ. ರೂ. 4,69,010/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026 ಸಂಜೆ 5.00 ರವರೆಗೆ. (2)** ಗ್ರೂಪ್-ಡಿ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಗ್ರೂಪ್-ಡಿ/ಹೊರಗುತ್ತಿಗೆ/22/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 2,18,39,117, ಇ.ಎಂ.ಡಿ. ರೂ. 5,46,000/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026 ಸಂಜೆ 5.00 ರವರೆಗೆ. (3)** ಒಳ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ಆಹಾರ ಪದಾರ್ಥಗಳು ಹಾಗೂ ಬ್ರೆಡ್ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ:ಎಸ್.ಎನ್.ಆರ್/ಪಥ್ಯಾಹಾರ/01/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 78,35,075 ಲಕ್ಷ, ಇ.ಎಂ.ಡಿ. ರೂ. 1,95,876/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.03.2026ಸಂಜೆ 5.00 ರವರೆಗೆ. (4)** ಔಷಧಿಗಳು, ಸರ್ಜಿಕಲ್ ಡಿಸ್ಪೋಸಬಲ್ಸ್ ಸರಬರಾಜು ಮರು ಟೆಂಡರ್ (2ನೇ ಕರೆ): ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಸರಬ/ಆರ್‌ಸಿ/53/2025-26, ದಿನಾಂಕ: 19.02.2026, ಟೆಂಡರ್ ಮೊತ್ತ ರೂ: 50 ಲಕ್ಷ, ಇ.ಎಂ.ಡಿ. ರೂ. 1,00,000/-, ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 02.03.2026 ಸಂಜೆ 5.00 ವರೆಗೆ**. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:507/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2025-26/50 ದಿ: 21.02.2026

ಟೆಂಡರ್ ಪ್ರಕಟಣೆ-50/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-2026 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನ **K.W-1, 2, 3** ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ಹೊನ್ನಾವರ ತಾ: ಚಿತ್ತಾರ ಪಂಚಾಯತದ ಹಡಿಕಲ್ ಅಮ್ಮನವರ ಮನೆಗೆ ಹೋಗುವ ರಸ್ತೆ ಹಾಗೂ ಆಡುಕಳ ಗಣಪತಿ ದೇವಸ್ಥಾನಕ್ಕೆ ರಸ್ತೆ ಕಾಂಕ್ರೀಟೀಕರಣ. **RDPR/2025-26/RD/WORK_INDENT24951**, ಅಂದಾಜು ಮೊತ್ತ: ರೂ. 35.00 ಲಕ್ಷ, ಮುಂಗಡ ಠೇವಣಿ: ರೂ. 70,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(2) ಹೊನ್ನಾವರ ತಾಲೂಕಿನ ನವಿಲಗೋಣ ಪಂಚಾಯತದ ಸುಗ್ಗೇರಿ ಕಟ್ಟೆಮನೆಗೆ ಹೋಗುವ ರಸ್ತೆ ನಿರ್ಮಾಣ ಮತ್ತು ಹೊನ್ನಾವರ ತಾಲೂಕಿನ ನವಿಲಗೋಣ ಪಂಚಾಯತದ ಕಾಂಕೂರು ಮನೆಯಿಂದ ಗದ್ದೆಗೆ ಹೋಗಲು ಕಾಲುದಾರಿ ಮತ್ತು ಹೊನ್ನಾವರ ತಾಲೂಕಿನ ನವಿಲಗೋಣ ಪಂಚಾಯತದ ಬಾದಳ್ಳಿ ರಸ್ತೆ ನಿರ್ಮಾಣ. **RDPR/2025-26/RD/WORK_INDENT25004**, ಅಂದಾಜು ಮೊತ್ತ: ರೂ. 35.00 ಲಕ್ಷ, ಮುಂಗಡ ಠೇವಣಿ: ರೂ. 70,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(3) ಹೊನ್ನಾವರ ತಾ: ಹೆರೆಂಗಡಿ ಮಹೇಶ ಮನೆಯಿಂದ ಕಡೆಹಿತ್ತಲ ಕೇರಿಗೆ ಹಾಗೂ ಕೆಳಗಿನ ಮೂಡ್ಕಣಿ ಅಂಗನವಾಡಿ ಹೋಗುವ ಕಾಂಕ್ರೀಟ್ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(4) ಹೊನ್ನಾವರ ತಾಲೂಕಿನ ಮುಗ್ವಾ ಗ್ರಾಮ ಪಂಚಾಯತದ ಆರೊಳ್ಳಿ ಮುಂಡಗೋಡ ಪ್ಲಾಟಕೇರಿ ರಸ್ತೆ ಹಾಗೂ ಕುಳಕೋಡದಲ್ಲಿ ರಸ್ತೆ ನಿರ್ಮಾಣ. **RDPR/2025-26/RD/WORK_INDENT25009**, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(5) ಹೊನ್ನಾವರ ತಾಲೂಕಿನ ಬಳಕೂರು ಗ್ರಾಮ ಪಂಚಾಯತದ ದೇವಿಮನೆಯಿಂದ ಕಟ್ಟಿನಹಿತ್ತಕೇರಿಗೆ ಹಾಗೂ ನೀಲಗೋಡ ಕ್ರಾಸನಿಂದ ಹಲಸಿನಡಿಕೇರಿಗೆ ಹೋಗುವ ರಸ್ತೆ ನಿರ್ಮಾಣ. **RDPR/2025-26/RD/WORK_INDENT25010**, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(6) ಹೊನ್ನಾವರ ತಾಲೂಕಿನ ಮಾವಿನಕುರ್ವಾ ಪಂಚಾಯತದ ಅಂಗಡಿಹಿತ್ಲು ರಸ್ತೆಯಿಂದ ಸ್ಮಶಾನಕಟ್ಟೆಗೆ ಹಾಗೂ ಖರ್ವಾ ಮಾವಿನಕುರ್ವಾ ಮುಖ್ಯ ರಸ್ತೆಯಿಂದ ಕೋರೆ ಶಾಲೆಗೆ ಹೋಗುವ ಕಾಂಕ್ರೀಟ ರಸ್ತೆ ನಿರ್ಮಾಣ. **RDPR/2025-26/RD/WORK_INDENT25012**, ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(7) ಹೊನ್ನಾವರ ತಾಲೂಕಿನ ಕೋಡಾಣಿ ಗ್ರಾಮ ಪಂಚಾಯತದ ಬೇರಂಕಿ ಮುಖ್ಯ ರಸ್ತೆಯಿಂದ ದೊಡ್ಡಮನೆಕೇರಿಗೆ ಹೋಗುವ ರಸ್ತೆ ಕಾಂಕ್ರೀಟೀಕರಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 50,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(8) ಹೊನ್ನಾವರ ತಾಲೂಕಿನ ಮುಗ್ವಾ ಪಂಚಾಯತದ ಹೊಸಹಿತ್ಲ ಬೆಣ್ಣೆಮನೆ ಹೋಗುವ ರಸ್ತೆ ಹಾಗೂ ನಿವೃತ್ತಿಕೊಡ್ಲು ಹೊಗುವಲ್ಲಿ ಕಾಂಕ್ರೀಟ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 40.00 ಲಕ್ಷ, ಮುಂಗಡ ಠೇವಣಿ: ರೂ. 80,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(9) ಹೊನ್ನಾವರ ತಾಲೂಕಿನ ಹಡಿನಬಾಳ ಗ್ರಾಮ ಪಂಚಾಯತದ ಕೆಳಗಿನಕೇರಿಯಿಂದ ಕ್ರಿಶ್ಚಿನಕೇರಿಗೆ ಹೋಗುವ ರಸ್ತೆ ಹಾಗೂ ಹಂದಿಮೂಲೆಯಿಂದ ಮೇಲಿನಕೇರಿಗೆ ಮತ್ತು ಹುಡಗೋಡ ಹೊಂಡದ ಕೊಟ್ಟಿಗೆಯಿಂದ ಮಾಸ್ತಮನೆವರೆಗೆ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 30.00 ಲಕ್ಷ, ಮುಂಗಡ ಠೇವಣಿ: ರೂ. 60,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(10) ಹೊನ್ನಾವರ ತಾಲೂಕಿನ ಮುಗ್ವಾ ಪಂಚಾಯತದ ಚಿನಕೋಡ ಶಾಲೆಯಿಂದ ಹಳಗೇರಿ ಹೋಗುವ ರಸ್ತೆ ದುರಸ್ತಿ ಹಾಗೂ ಹೊನ್ನಾವರ ತಾಲೂಕಿನ ಕಡ್ಲೆ ಪಂಚಾಯತ ಗಂಗೋಳ್ಳಿ ರಸ್ತೆ ನಿರ್ಮಾಣ ಹಾಗೂ ಹೊನ್ನಾವರ ತಾಲೂಕಿನ ಕಡತೋಕಾ ಪಂಚಾಯತದ ಕೆಂಪನಗದ್ದೆ ರಸ್ತೆ ಸುಧಾರಣೆ. **RDPR/2025-26/RD/WORK_INDENT250077**. ಅಂದಾಜು ಮೊತ್ತ: ರೂ. 50.00 ಲಕ್ಷ, ಮುಂಗಡ ಠೇವಣಿ: ರೂ. 1,00,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 1) (11) ಹೊನ್ನಾವರ ತಾ: ಹೆರೆಂಗಡಿ ಗ್ರಾಮ ಪಂಚಾಯತದ ಹೈಗುಂದದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ.ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (12) ಹೊನ್ನಾವರ ತಾಲೂಕಿನ ಕರ್ಕಿ ಪಂಚಾಯತ ಕೆಳಗಿನಕೇರಿ ಬುಚ್ಚನ ಶಾಸ್ತ್ರೀಮನೆಯ ಹತ್ತಿರ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಹೊನ್ನಾವರ ತಾಲೂಕಿನ ಕರ್ಕಿ ಪಂಚಾಯತ ಹೆಗಡೆಹಿತ್ತಲು ಚರಂಡಿ ನಿರ್ಮಾಣ ಹಾಗೂ ಹೊನ್ನಾವರ ತಾಲೂಕಿನ ಕರ್ಕಿ ಪಂಚಾಯತ ಕೆಳಗಿನಕೇರಿ ಎಂ.ಟಿ ನಾಯ್ಕ ಮನೆ ಹತ್ತಿರ ರಸ್ತೆ ನಿರ್ಮಾಣ. **RDPR/2025-26/ RD/WORK_INDENT25005**, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(13) ಹೊನ್ನಾವರ ತಾಲೂಕಿನ ಕರ್ಕಿ ಮೀನುಮಾರುಕಟ್ಟೆ ಎದುರು ಇಂಟರ್ಲಾಕ್ ಅಳವಡಿಸುವುದು ಹಾಗೂ ಹೊನ್ನಾವರ ತಾಲೂಕಿನ ಕರ್ಕಿ ತೊಪ್ಪಲಕೇರಿಯಿಂದ ಎಸ್ ಎಮ್ ಭಾಗ್ವತ್ ಮನೆಗೆ ಹೋಗುವಲ್ಲಿ ರಸ್ತೆ ನಿರ್ಮಾಣ ಹಾಗೂ ಕರ್ಕಿ ಪಂಚಾಯತದ ನಡಚಿಟ್ಟೆಯಲ್ಲಿ ರಸ್ತೆ ನಿರ್ಮಾಣ. **RDPR/2025-26/RD/WORK_INDENT25001**, ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(14) ಹೊನ್ನಾವರ ತಾ: ಅನಂತವಾಡಿ ಗ್ರಾಮ ಪಂಚಾಯತದ ಕೋಟಾ ಗಂಜಗೇರಿ ರಸ್ತೆ ಕಾಂಕ್ರೀಟೀಕರಣ. **RDPR/2025-26/RD/WORK_INDENT24956** ಅಂದಾಜು ಮೊತ್ತ: ರೂ. 25.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು.

1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು **Technical Bid** ನ್ನು ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 11.03.2026 ರ ಮಧ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ **Technical Bid** ನ್ನು ತೆರೆಯುವ ದಿನಾಂಕ: 12.03.2026 ಬೆಳಿಗ್ಗೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1134/25-26 dt. 21.02.2026

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ

ಫೋನ್:08258-298183, Email: dcfwlkarkala@gmail.com
ಕ್ರ.ಸಂಖ್ಯೆ:ಬಿ1:ಸಿಆರ್/01/ಹೊರಗುತ್ತಿಗೆ/ಟೆಂಡರ್/25-26 ದಿನಾಂಕ :21-02-2026

ಇ-ಟೆಂಡರ್ ಪ್ರಕಟಣೆ

ಕುದುರೆಮುಖ ವನ್ಯಜೀವಿ ವಿಭಾಗದ ಕಾರ್ಕಳ ವನ್ಯಜೀವಿ ವಲಯ, ಕೆರೆಕಟ್ಟೆ ವನ್ಯಜೀವಿ ವಲಯ, ಕುದುರೆಮುಖ ವನ್ಯಜೀವಿ ವಲಯ, ಬೆಳ್ತಂಗಡಿ ವನ್ಯಜೀವಿ ವಲಯ, ಸೋಮೇಶ್ವರ ವನ್ಯಜೀವಿ ವಲಯ, ಹೆಬ್ರಿ, ಆಗುಂಬೆ ವನ್ಯಜೀವಿ ವಲಯ, ಅಮಾಸೆಬೈಲು, ಸಿದ್ದಾಪುರ ವನ್ಯಜೀವಿ ವಲಯ ಮತ್ತು ಕೊಲ್ಲೂರು ವನ್ಯಜೀವಿ ವಲಯ ವ್ಯಾಪ್ತಿಯಲ್ಲಿ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು, ಬೇಟೆತಡೆ ಕಾವಲುಗಾರರು, ಕೇರ್ ಟೇಕರ್ ಇನ್ನಿತರ ಕಾವಲುಗಾರರು ಹಾಗೂ ಇತರ ಡಿ' ಗ್ರೂಪ್ ನೌಕರರು ಇವರುಗಳ ಸೇವೆ ಅವಶ್ಯವಿದ್ದು, 2026-27ನೇ ಸಾಲಿನ ಆರ್ಥಿಕ ವರ್ಷದಲ್ಲಿ ದಿನಾಂಕ:01-04-2026ರಿಂದ 31-03-2027ರ ವರೆಗೆ ಅಥವಾ ಮುಂದಿನ ಮೂರು ತಿಂಗಳವರೆಗೆ (ಅಂದರೆ 30-06-2027)ರ ವರೆಗೆ ಅಥವಾ ಮುಂದಿನ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ನೋಂದಾಯಿತ ಸೇವಾ ಸಂಸ್ಥೆಯಿಂದ ಪಡೆದುಕೊಳ್ಳುವ ಅಂದರೆ, Outsourcing ಮೂಲಕ ಪಡೆಯಲು https://kppp.karnataka.gov.in ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ನಮೂನೆಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ದಿನಾಂಕ:21-02-2026ರಿಂದ ಪಡೆಯಬಹುದಾಗಿದೆ. ವಿವರ ಈ ಕೆಳಗಿನಂತಿದೆ. ಟೆಂಡರ್ ಷರತ್ತು ಸಂಬಂಧ ವಿವರ/ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 05-03-2026 ಅಪರಾಹ್ನ 5.00 ಗಂಟೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:09-03-2026 ಅಪರಾಹ್ನ 2.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10-03-2026 ಅಪರಾಹ್ನ 2.30 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ:11-03-2026 ಪೂರ್ವಾಹ್ನ 11.30 ಗಂಟೆ. ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವನ್ಯಜೀವಿ ವಿಭಾಗ, ಕಾರ್ಕಳ ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ (**ಕಚೇರಿ ದೂರವಾಣಿ ಸಂಖ್ಯೆ : 08258-298183**),

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ವನ್ಯಜೀವಿ ವಿಭಾಗ, ಕಾರ್ಕಳ

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಗದಗ ವಿಭಾಗ, ಗದಗ

ಸಂಖ್ಯೆ/ವಾಕರಸಾ/ಗವಿ/ಸಂಚಾರ/ವಾಣಿಜ್ಯ:3197/25-26
ದಿನಾಂಕ : 21-02-2026

ಇ-ಟೆಂಡರ್ ಪ್ರಕಟಣೆ ಸಂಖ್ಯೆ : 02/2026

(ಕೆ.ಪಿ.ಪಿ ಪೋರ್ಟಲ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಗದಗ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ, ವಾಣಿಜ್ಯ ಮಳಿಗೆಗಳಿಗೆ ಹಾಗೂ ಸ್ವಚ್ಛತಾ ಗುತ್ತಿಗೆಗೆ (ಕೊಟೇಷನ್) ಇ-ವೇದಿಕೆಯ **Karnataka Public Procurement Portal (KPP Portal)** ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ ದಸ್ತಾವೇಜಗಳನ್ನು ಇ-ಪ್ರಕ್ಯೂರಮೆಂಟ್ ವೆಬ್‌ಸೈಟ್ ವಿಳಾಸ : **http/www.kppp.karnataka.gov.in/#/portal-home** ಮೂಲಕ ಡೌನಲೋಡ್ ಮಾಡಿಕೊಳ್ಳಬಹುದು. ನಿಗದಿತ ದಾಖಲಾತಿಗಳೊಂದಿಗೆ ದಿನಾಂಕ : **12-03-2026** ರಂದು 17:00 ಗಂಟೆಯವರೆಗೆ ಆನ್‌ಲೈನ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಇ-ಪ್ರಕ್ಯೂರಮೆಂಟ್ ಸೆಲ್‌ನಿಂದ **DSC(Digital Signature Certificate)** ಪಡೆದಿರುವ ಅಧೀಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ದಿನಾಂಕ : **14-03-2026** ರಂದು ಬೆಳಿಗ್ಗೆ 11.00 AM ಗಂಟೆಗೆ ಟೆಂಡರ ತೆರೆಯಲಾಗುವದು. (ಯಾವುದೇ ತಾಂತ್ರಿಕ ದೋಷವಿಲ್ಲದಿದ್ದಲ್ಲಿ). ಹೆಚ್ಚಿನ ವಿವರಗಳಿಗಾಗಿ ಹೆಲ್ಪಡೆಸ್ಕ್ ಸಂಖ್ಯೆ: **91+8046010000, 8068948777** ನ್ನು ಸಂಪರ್ಕಿಸಿ ಅಥವಾ ವಿಭಾಗೀಯ ಕಛೇರಿ, ವಾ.ಕ.ರ.ಸಾ ಸಂಸ್ಥೆ ಗದಗ ವಿಭಾಗ ಗದಗ ಇವರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : **7760991802** (ವಿಭಾಗೀಯ ಸಂಚಲನಾಧಿಕಾರಿಗಳು), **9986802447/ 7026047644** (ವಿಷಯ ನಿರ್ವಾಹಕ) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಇ-ಟೆಂಡರ್‌ನಲ್ಲಿ ಭಾಗವಹಿಸುವವರು ಇ-ಟೆಂಡರ್ ಪ್ರಕಟಣೆ ಸಂಖ್ಯೆ : 02/2026ರ ಮತ್ತು ಇ-ಟೆಂಡರ್ **Document** ನಲ್ಲಿ ನಮೂದಿಸಿದ ಷರತ್ತು ಮತ್ತು ನಿಭಂದನೆಗಳಿಗೆ ಭದ್ಧರಾಗಿರತಕ್ಕದ್ದು. ಕಾರಣ ನೀಡದೇ ಇ-ಟೆಂಡರ್‌ನಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಆಯ್ಕೆ ಮಾಡುವ ಅಥವಾ ಇ-ಟೆಂಡರ್ ಪ್ರಕಟಣೆಯನ್ನು ಮುಂದೂಡುವ, ಮಾರ್ಪಾಡು ಮಾಡುವ ಅಥವಾ ಪ್ರಕಟಣೆಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/667/25-26 ವಾ.ಕ.ರ.ಸಾ. ಸಂಸ್ಥೆ ಗದಗ ವಿಭಾಗ ಗದಗ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ, ಬಳ್ಳಾರಿ.

ಸಂ.ಲೋಇ/ಕಾನಿಇ/ಬವಿ/ಟಿಎಸ್-1/2025-26/6024 ದಿನಾಂಕ : 18-02-2026.

ಟೆಂಡರ್ ತಿದ್ದುಪಡಿ ಪ್ರಕಟಣೆ

ವಿಷಯ: 4059 ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ (CMIDP) ಯೋಜನೆ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಕಾಮಗಾರಿಗಳ ಟೆಂಡರ್ ತಿದ್ದುಪಡಿ ಬಗ್ಗೆ.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-1/5949/2025-26 ದಿನಾಂಕ: 16-02-2026

ಮೇಲಿನ ಉಲ್ಲೇಖದಲ್ಲಿನ ಈ ಕಛೇರಿ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಿದ್ದ ಕಾಮಗಾರಿಗಳ ಪೈಕಿ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಇಂಡೆಂಟ್ ಸಂಖ್ಯೆಗಳಲ್ಲಿ ಬದಲಾವಣೆಯಾಗಿದ್ದು, ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಇದನ್ನು ಗಮನಿಸಲು ಕೋರಿದೆ. ಇನ್ನುಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಬದಲಾವಣೆಗಳಿದ್ದಲ್ಲಿ ಪ್ರತ್ಯೇಕವಾಗಿ ತಿಳಿಯಪಡಿಸಲಾಗುವುದು.

ಕ್ರ ಸಂ	ಈ ಮೊದಲು ಪ್ರಕಟಿಸಲಾದ ಕಾಮಗಾರಿಯ ಇಂಡೆಂಟ್ ಸಂಖ್ಯೆ	ಬದಲಾಯಿತ ಇಂಡೆಂಟ್
1)	PWD/2025-26/RD/WORK_INDENT33375	PWD/2025-26/RD/WORK_INDENT33732

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1035/ಕೆಎಸ್‌ಎಂಸಿಎ/2025-26

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಧಾರವಾಡ ವಿಭಾಗ, ಟೋಲ್‌ನಾಕಾ, ಧಾರವಾಡ ದೂರವಾಣಿ : **0836-2747842** ಇ-ಮೇಲ್ : **ksdb.dhardiv@gmail.com**
ಸಂ.ಕಕೊಅಮ/ಕಾಪಾಅ/ಧಾ.ವಿ/ತಾಂ.ಶಾ/ಟೆಂ.ಪ್ರ/2025-26/988 ದಿನಾಂಕ : 10.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಬರುವ ಧಾರವಾಡ/ಗದಗ ಉಪವಿಭಾಗಕ್ಕೆ ಸಂಬಂಧಿಸಿಂತೆ, ಮಂಡಳಿಯಲ್ಲಿ ಅನುಷ್ಠಾನಗೊಳಿಸುತ್ತಿರುವ 2ನೇ ಹಂತದಲ್ಲಿ ಪೂರ್ಣಗೊಂಡಿರುವ 42345 ಮನೆಗಳಲ್ಲಿ ಗುಂಪು ಮನೆಗಳು ಹಾಗೂ ಜಿ+ಬಡಾವಣೆಗಳಿಗೆ ಮೂಲಭೂತ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಅರ್ಹ ಸಿವಿಲ್/ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ದರಪಟ್ಟಿಯನ್ನು ಆಧರಿಸಿ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ವಿಚಾರಣೆ ಇ-ಪ್ರೋಕ್ಯೂರ್‌ಮೆಂಟ್‌ನ https://kppp.karnataka.gov.in ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ : **20.02.2026** ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : **05.03.2026** ಸಂಜೆ 5.30 ಗಂಟೆಯವರೆಗೆ ಸ್ವೀಕೃತವಾದ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **07.03.2026** ರಂದು ಬೆಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು.

ಕಾಮಗಾರಿಯ ಕನಿಷ್ಟ ಮೊತ್ತ ರೂ. **25.00** ಲಕ್ಷಗಳು ಹಾಗೂ ಗರಿಷ್ಟ ಮೊತ್ತ ರೂ. **320.00** ಲಕ್ಷಗಳವರೆಗೆ 09 ಕಾಮಗಾರಿಗಳಿದ್ದು, ಟೆಂಡರನ್ ಇ.ಎಮ್.ಡಿ, ಗುತ್ತಿಗೆದಾರರ ಅರ್ಹತೆ/ಟೆಂಡರನ್ ನಿಯಮ/ಟೆಂಡರ್ ಶುಲ್ಕ ತುಂಬುವ ವಿಧಾನ್ ಇತ್ಯಾದಿ ವಿವರಗಳಿಗೆ https://kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿರುವವರ ಕಛೇರಿ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ವಾಸಾಸಂಇ/ಧಾ/ಕೆಎಸ್‌ಎಂಸಿಎ/1265/2025-26 ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಧಾರವಾಡ ವಿಭಾಗ, ಧಾರವಾಡ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಛೇರಿ. ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್

ತಾ: ಗಂಗಾವತಿ ಜಿ:ಕೊಪ್ಪಳ

ಸಂ:ಕಾನಿಅ/ಕನೀನಿನಿ/ನಂ.2ಕಾವಿವಕ್ಯಾಂ/ತಾಂಶಾ/ಸಇ-4/ಟೆಂಡರ್/2025-26/1577 ದಿ:20-02-2026

ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಛೇರಿಯಿಂದ ಕರ್ನಾಟಕ ಲೋಕೊಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ https://kppp.karnataka.gov.in ಮುಖಾಂತರ ಈ ವಿಭಾಗದಡಿ ಬರುವ Indent No:KNNL/2025-26/BR/WORK_INDENT3970 ಕಾಮಗಾರಿಯ ಶೇಕಡವಾರು ಟೆಂಡರನ್ನು ಎರಡು ಲಕೋಟೆಯಲ್ಲಿ ಆಹ್ವಾನಿಸಲಾಗಿದೆ. ಕಾಮಗಾರಿಗಳ ಇನ್ನು ಇತರೆ ಹೆಚ್ಚಿನ ವಿವರಗಳನ್ನು https://kppp.karnataka.gov.in ಜಾಲದಿಂದ ಪಡೆಯಬಹುದು. ಪೂರ್ವ ಬಿಡ್ ಸಭೆಯನ್ನು ಕಾರ್ಯಪಾಲಕ ಅಭಿಯಂತರರು ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿಕ್ಯಾಂಪ್ ಕಛೇರಿಯಲ್ಲಿ ದಿನಾಂಕ: **25-02-2026** ರಂದು ಬೆಳಿಗ್ಗೆ 11:00 ಘಂಟೆಗೆ ನಿರ್ವಹಿಸಲಾಗುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09-03-2026** ರ ಮದ್ಯಾಹ್ನ 4:30 ಘಂಟೆಯವರೆಗೆ ಮತ್ತು ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: **11-03-2026** ರಂದು ಬೆಳಿಗ್ಗೆ 10:30 ಘಂಟೆಗೆ ಮತ್ತು ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ: **13-03-2026** ರಂದು ಬೆಳಿಗ್ಗೆ 10:30 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರನ್ನು ಯಾವುದೆ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಕನೀನಿನಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್
ತಾ: ಗಂಗಾವತಿ ಜಿ: ಕೊಪ್ಪಳ

ಡಿಐಪಿಆರ್/ಕೊಪ್ಪಳ/702/ಕೆಎಸ್‌ಎಂಸಿಎ/2025-26

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2025-26 ದಿನಾಂಕ: 20-02-2026

ಅಲ್ಪಾವಧಿ / ಇ-ಟೆಂಡರ್ ಅಧಿಸೂಚನೆ

ಉಲ್ಲೇಖ : ಜಾಹಿರಾತು ನಂ:-1119 ದಿನಾಂಕ:- 21-01-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್ 2025-26ನೇ ಸಾಲಿನ 15ನೇ ಹಣಕಾಸು ಯೋಜನೆ ಹಾಗೂ ಸನ್ 2025-26ನೇ ಸಾಲಿನ ವಾರ್ಡವಾರು ಅನುದಾನ ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 1) ಇಂಡೆಂಟ್ ನಂ-55538 ರೂ. 16.50ಲಕ್ಷ, 2) ಇಂಡೆಂಟ್ ನಂ-55534 ರೂ. 18.50ಲಕ್ಷ, 3) ಇಂಡೆಂಟ್ ನಂ- 55552 ರೂ. 6.10ಲಕ್ಷ, 4) ಇಂಡೆಂಟ್ ನಂ-55465 ರೂ. 5.75ಲಕ್ಷ, 5) ಇಂಡೆಂಟ್ ನಂ-53181 ರೂ. 11.09ಲಕ್ಷ.

ಪರಿಶಿಷ್ಟ ಪಂಗಡದ **(ST)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 6) ಇಂಡೆಂಟ್ ನಂ-55562 ರೂ. 30.00ಲಕ್ಷ, 7) ಇಂಡೆಂಟ್ ನಂ-55548 ರೂ. 4.00ಲಕ್ಷ, 8) ಇಂಡೆಂಟ್ ನಂ-42588 ರೂ. 80.00ಲಕ್ಷ

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 9) ಇಂಡೆಂಟ್ ನಂ-55546 ರೂ. 25.00ಲಕ್ಷ

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 10) ಇಂಡೆಂಟ್ ನಂ-55521 ರೂ. 2.96ಲಕ್ಷ, 11) ಇಂಡೆಂಟ್ ನಂ-55547 ರೂ. 12.00ಲಕ್ಷ, 12) ಇಂಡೆಂಟ್ ನಂ-55394 ರೂ. 20.00ಲಕ್ಷ, 13) ಇಂಡೆಂಟ್ ನಂ-53182 ರೂ. 4.00ಲಕ್ಷ, 14) ಇಂಡೆಂಟ್ ನಂ-54695 ರೂ. 5.10ಲಕ್ಷ.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 15) ಇಂಡೆಂಟ್ ನಂ-55404 ರೂ. 7.00ಲಕ್ಷ, 16) ಇಂಡೆಂಟ್ ನಂ-55256 ರೂ. 12.58ಲಕ್ಷ, 17) ಇಂಡೆಂಟ್ ನಂ-55255 ರೂ. 4.45ಲಕ್ಷ, 18) ಇಂಡೆಂಟ್ ನಂ-54368 ರೂ. 21.00ಲಕ್ಷ, 19) ಇಂಡೆಂಟ್ ನಂ-54619 ರೂ. 16.45ಲಕ್ಷ, 20) ಇಂಡೆಂಟ್ ನಂ-55257 ರೂ. 22.82ಲಕ್ಷ, 21) ಇಂಡೆಂಟ್ ನಂ-55258 ರೂ. 12.42ಲಕ್ಷ, 22) ಇಂಡೆಂಟ್ ನಂ-55571 ರೂ. 44.00ಲಕ್ಷ, 23) ಇಂಡೆಂಟ್ ನಂ-55557 ರೂ. 28.00ಲಕ್ಷ, 24) ಇಂಡೆಂಟ್ ನಂ-55559 ರೂ. 19.00ಲಕ್ಷ, 25) ಇಂಡೆಂಟ್ ನಂ-55554 ರೂ. 30.00ಲಕ್ಷ, 26) ಇಂಡೆಂಟ್ ನಂ-55403 ರೂ. 10.00ಲಕ್ಷ, 27) ಇಂಡೆಂಟ್ ನಂ-55496 ರೂ. 17.10ಲಕ್ಷ, 28) ಇಂಡೆಂಟ್ ನಂ- **SE**7354 ರೂ. 14.75ಲಕ್ಷ

ಮರು ಕರೆ ಕಾಮಗಾರಿ

ಪರಿಶಿಷ್ಟ ಜಾತಿ **(SC)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 29) ಇಂಡೆಂಟ್ ನಂ-52872 ರೂ. 15.00ಲಕ್ಷ (2ನೇ ಕರೆ), 30) ಇಂಡೆಂಟ್ ನಂ-52387 ರೂ. 3.10ಲಕ್ಷ (2ನೇ ಕರೆ), 31) ಇಂಡೆಂಟ್ ನಂ-53504 ರೂ. 7.70ಲಕ್ಷ (2ನೇ ಕರೆ), 32) ಇಂಡೆಂಟ್ ನಂ-53963 ರೂ. 6.90ಲಕ್ಷ (2ನೇ ಕರೆ), 33) ಇಂಡೆಂಟ್ ನಂ-54176 ರೂ. 10.00ಲಕ್ಷ (2ನೇ ಕರೆ), 34) ಇಂಡೆಂಟ್ ನಂ-54259 ರೂ. 12.31ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡದ **(ST)** ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 35) ಇಂಡೆಂಟ್ ನಂ-52870 ರೂ. 4.13ಲಕ್ಷ (2ನೇ ಕರೆ), 36) ಇಂಡೆಂಟ್ ನಂ-52391 ರೂ. 13.25ಲಕ್ಷ (2ನೇ ಕರೆ), 37) ಇಂಡೆಂಟ್ ನಂ-52868 ರೂ. 8.60ಲಕ್ಷ (2ನೇ ಕರೆ), 38) ಇಂಡೆಂಟ್ ನಂ-54260 ರೂ. 7.80ಲಕ್ಷ (2ನೇ ಕರೆ)

(CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 39) ಇಂಡೆಂಟ್ ನಂ-53042 ರೂ. 10.00ಲಕ್ಷ (2ನೇ ಕರೆ),

(CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 40) ಇಂಡೆಂಟ್ ನಂ-53039 ರೂ. 24.00ಲಕ್ಷ (2ನೇ ಕರೆ), 41) ಇಂಡೆಂಟ್ ನಂ-53453 ರೂ. 25.00ಲಕ್ಷ (2ನೇ ಕರೆ), 42) ಇಂಡೆಂಟ್ ನಂ-52389 ರೂ. 6.00ಲಕ್ಷ (2ನೇ ಕರೆ), 43) ಇಂಡೆಂಟ್ ನಂ-52880 ರೂ. 18.20ಲಕ್ಷ (2ನೇ ಕರೆ), 44) ಇಂಡೆಂಟ್ ನಂ-53982 ರೂ. 7.00ಲಕ್ಷ (2ನೇ ಕರೆ), 45) ಇಂಡೆಂಟ್ ನಂ-53984 ರೂ. 2.35ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ : 46) ಇಂಡೆಂಟ್ ನಂ-53040 ರೂ. 21.60ಲಕ್ಷ (2ನೇ ಕರೆ), 47) ಇಂಡೆಂಟ್ ನಂ-53041 ರೂ. 5.06ಲಕ್ಷ (2ನೇ ಕರೆ), 48) ಇಂಡೆಂಟ್ ನಂ-53263 ರೂ. 16.00ಲಕ್ಷ (2ನೇ ಕರೆ), 49) ಇಂಡೆಂಟ್ ನಂ-51425 ರೂ. 4.90ಲಕ್ಷ (3ನೇ ಕರೆ), 50) ಇಂಡೆಂಟ್ ನಂ-51128 ರೂ. 10.00ಲಕ್ಷ (3ನೇ ಕರೆ), 51) ಇಂಡೆಂಟ್ ನಂ-52224 ರೂ. 10.00ಲಕ್ಷ (3ನೇ ಕರೆ), 52) ಇಂಡೆಂಟ್ ನಂ-52220 ರೂ. 10.00ಲಕ್ಷ (3ನೇ ಕರೆ), 53) ಇಂಡೆಂಟ್ ನಂ-51582 ರೂ. 16.47ಲಕ್ಷ (3ನೇ ಕರೆ), 54) ಇಂಡೆಂಟ್ ನಂ-48667 ರೂ. 12.00ಲಕ್ಷ (3ನೇ ಕರೆ), 55) ಇಂಡೆಂಟ್ ನಂ-52281 ರೂ. 4.00ಲಕ್ಷ (3ನೇ ಕರೆ), 56) ಇಂಡೆಂಟ್ ನಂ-44165 ರೂ. 5.00ಲಕ್ಷ (5ನೇ ಕರೆ), 57) ಇಂಡೆಂಟ್ ನಂ-39194 ರೂ. 6.00ಲಕ್ಷ (5ನೇ ಕರೆ), 58) ಇಂಡೆಂಟ್ ನಂ-43491 ರೂ. 5.40ಲಕ್ಷ (5ನೇ ಕರೆ), 59) ಇಂಡೆಂಟ್ ನಂ-49588 ರೂ. 6.85ಲಕ್ಷ (5ನೇ ಕರೆ), 60) ಇಂಡೆಂಟ್ ನಂ-48813 ರೂ. 25.00ಲಕ್ಷ (5ನೇ ಕರೆ), 61) ಇಂಡೆಂಟ್ ನಂ-44540 ರೂ. 6.45ಲಕ್ಷ (7ನೇ ಕರೆ), 62) ಇಂಡೆಂಟ್ ನಂ-44538 ರೂ. 6.45ಲಕ್ಷ (7ನೇ ಕರೆ), 63) ಇಂಡೆಂಟ್ ನಂ-48033 ರೂ. 32.00ಲಕ್ಷ (2ನೇ ಕರೆ), 64) ಇಂಡೆಂಟ್ ನಂ-42611 ರೂ. 55.00ಲಕ್ಷ (4ನೇ ಕರೆ), 65) ಇಂಡೆಂಟ್ ನಂ-50157 ರೂ. 7.60ಲಕ್ಷ (3ನೇ ಕರೆ), 66) ಇಂಡೆಂಟ್ ನಂ-44230 ರೂ. 8.95ಲಕ್ಷ (4ನೇ ಕರೆ), 67) ಇಂಡೆಂಟ್ ನಂ-46141 ರೂ. 5.00ಲಕ್ಷ (5ನೇ ಕರೆ), 68) ಇಂಡೆಂಟ್ ನಂ-37838 ರೂ. 4.00ಲಕ್ಷ (6ನೇ ಕರೆ), 69) ಇಂಡೆಂಟ್ ನಂ-44536 ರೂ. 6.45ಲಕ್ಷ (6ನೇ ಕರೆ), 70) ಇಂಡೆಂಟ್ ನಂ-46020 ರೂ. 18.00ಲಕ್ಷ (6ನೇ ಕರೆ), 71) ಇಂಡೆಂಟ್ ನಂ-45540 ರೂ. 17.60ಲಕ್ಷ (6ನೇ ಕರೆ), 72) ಇಂಡೆಂಟ್ ನಂ-45514 ರೂ. 8.20ಲಕ್ಷ (6ನೇ ಕರೆ), 73) ಇಂಡೆಂಟ್ ನಂ-44209 ರೂ. 3.75ಲಕ್ಷ (6ನೇ ಕರೆ), 74) ಇಂಡೆಂಟ್ ನಂ-28054 ರೂ. 49.10ಲಕ್ಷ (5ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ: **0836:2213834**ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ : **kppp.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 23-02-2026** ಪಡೆಯಬಹುದಾಗಿದೆ.

ಕ್ರ ಸಂ 08, 10 ರಿಂದ 12 27, 28 39 ರಿಂದ 41 65 ರಿಂದ 74ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 04-03-2026 ರಂದು ಸಾಯಂಕಾಲ 4.00 ಗಂಟೆಯವರೆಗೆ.

ಕ್ರ ಸಂ 08, 10 ರಿಂದ 12 27, 28 39 ರಿಂದ 41 65 ರಿಂದ 74ರ ಟೆಂಡರ್ ತೆರೆಯುವ ದಿನಾಂಕ: 05-03-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು.

ಕ್ರ ಸಂ 08ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 09-03-2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಕ್ರ ಸಂ 01 ರಿಂದ 07, 09 13 ರಿಂದ 26, 29 ರಿಂದ 38 42 ರಿಂದ 64ರ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 10-03-2026 ರಂದು ಸಾಯಂಕಾಲ 4.00 ಗಂಟೆಯವರೆಗೆ

ಕ್ರ ಸಂ 01 ರಿಂದ 07, 09 13 ರಿಂದ 26, 29 ರಿಂದ 38 42 ರಿಂದ 64ರ ಟೆಂಡರ್ ತೆರೆಯುವ ದಿನಾಂಕ: 11-03-2026 ಸಾಯಂಕಾಲ 4.30 ಗಂಟೆಯ ನಂತರ ತೆರೆಯಲಾಗುವುದು

ಕ್ರ ಸಂ 64ರ ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 16-03-2026 ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ

ವಾ.ಸಾ.ಇ/ಧಾರವಾಡ/1267/ದೇಶಪಾಂಡೆಪಬ್ಲಿಸಿಟಿ/2025-26

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-743) ಡ್ರಾ ಫೆಬ್ರವರಿ 21ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KV 668293 (CHITTUR)

Consolation Prize Rs.5,000/-
KN 668293 KO 668293 KP 668293 KR 668293
KS 668293 KT 668293 KU 668293 KW 668293
KX 668293 KY 668293 KZ 668293

2nd Prize Rs.25,00,000/- [25 Lakhs]
KT 556577 (KANNUR)

3rd Prize Rs.10,00,000/- [10 Lakhs]
KP 270540 (MOOVATTUPUZHA)

FOR THE TICKETS ENDING WITH THE FOLLOWING NUMBERS

4th Prize Rs.5,000/-
1090 1212 1599 2540 2923 3555 4235 4324 5454 5906
6792 7188 7258 7329 7925 8513 8884 8978 9863

5th Prize Rs.2,000/-
0262 1079 1466 4061 7399 9749

6th Prize Rs.1,000/-
0345 0525 0540 1512 1731 1823 1898 2036 2567 2576
4705 4799 4886 5366 6280 6758 7011 7429 8081 8106
8134 8451 9027 9605 9773

7th Prize Rs.500/-
0063 0118 0361 0497 0719 0729 0745 0819 0936 1284
1312 1364 1482 1496 1541 1665 1724 1776 1821 1888
1943 2199 2287 2500 2511 2777 2807 2930 2967 3346
3547 3617 3715 3740 4456 4466 4574 4597 4754 4778
4786 4945 5061 5447 5453 5562 5744 5820 6195 6202
6203 6270 6426 6565 6964 7152 7213 7356 7569 7766
8141 8201 8353 8462 8472 8476 8491 8771 8790 8837
8882 8900 9078 9777 9882 9922

8th Prize Rs.200/-
0579 0655 0857 0920 0924 0928 0931 1026 1247 1250
1357 1390 1520 1542 1705 1870 1887 1945 1950 1993
2024 2048 2160 2202 2291 2394 3172 3197 3220 3262
3270 3338 3545 3573 3641 3672 3712 3756 3822 3831
4029 4101 4199 4202 4269 4307 4414 4449 4492 4644
4727 4731 4802 4890 4933 5191 5247 5516 5694 5837
5877 6325 6475 6486 6742 6840 6851 6875 6898 7112
7423 7596 7683 7829 7981 8101 8295 8612 8833 8869
9294 9366 9469 9486 9589 9741 9784 9794 9881 9889
9898 9934

9th Prize Rs.100/-
0054 0417 0488 0509 0567 0624 0737 0742 0948 0998
1013 1015 1383 1536 1577 1692 1707 1833 1890 1922
1946 2275 2400 2413 2614 2632 2666 2696 2747 3128
3343 3487 3552 3554 3587 3621 3628 3751 3783 3788
3832 3905 3950 3962 3986 4000 4174 4218 4226 4246
4308 4343 4368 4504 4516 4603 4608 4639 4691 4747
4765 4797 4839 4908 4923 4957 5000 5004 5102 5117
5176 5209 5213 5222 5249 5274 5466 5482 5488 5523
5526 5530 5697 5752 5835 5846 5862 5989 6003 6031
6056 6063 6233 6278 6300 6309 6362 6484 6542 6650
6661 6788 6872 6916 7007 7038 7094 7171 7214 7253
7272 7312 7361 7397 7401 7556 7582 7706 7797 7882
8005 8017 8123 8349 8389 8713 8733 8785 8789 8817
8879 8890 9130 9362 9415 9419 9436 9458 9460 9505
9687 9859 9919 9991

ಹಿರಿಯ ಕಲಾವಿದೆ ಉಮಾಶ್ರೀಗೆ 'ಬಿಂದುಶ್ರೀ' ರಾಜ್ಯ ಪ್ರಶಸ್ತಿ ಪ್ರದಾನ

ಪ್ರೀತಿಯಿಂದ ಕೊಡುವ ಪ್ರಶಸ್ತಿ ಶ್ರೇಷ್ಠ



ಉಪ್ಪುಂದ: ರಾಷ್ಟ್ರೀಯ, ಅಂತಾರಾಷ್ಟ್ರೀಯ, ಸರ್ಕಾರ ಹಾಗೂ ಅಕಾಡೆಮಿಗಳು ಕೊಡುವ ಪ್ರಶಸ್ತಿಗಿಂತ ಜನರು ಪ್ರೀತ್ಯಾದರಗಳಿಂದ ಗುರುತಿಸಿ ನೀಡುವ ಪ್ರಶಸ್ತಿಗಳು ಶ್ರೇಷ್ಠವಾಗಿರುತ್ತದೆ ಎಂಬ ಭಾವನೆ ನನ್ನದು. ದೇವರು ಆರೋಗ್ಯಭಾಗ್ಯ ಕೊಟ್ಟರೆ ಸಮಾಜದಿಂದ ಪಡೆದಿದ್ದನ್ನು ಜೀವಿತದ ಕೊನೆ ತನಕ ರಂಗಭೂಮಿ ಸೇವೆಯ ಮೂಲಕ ಸಮಾಜಕ್ಕೆ ಮರಳಿ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಚಲನಚಿತ್ರ ಕಲಾವಿದೆ ಡಾ. ಉಮಾಶ್ರೀ ಹೇಳಿದರು.

ಇಲ್ಲಿನ ಶಾರದಾ ವೇದಿಕೆಯಲ್ಲಿ ಶುಕ್ರವಾರ ಸುರಭಿ ಸಂಸ್ಥೆ ಕೊಡಮಾಡುವ ಸುರಭಿ ಜೈಸಿರಿ-2026ನೇ ಸಾಲಿನ ಬಿಂದುಶ್ರೀ ರಾಜ್ಯಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಬದುಕಿನಲ್ಲಿ ಏರಿಳಿತಗಳು ಸಹಜ. ಸಾಂಸ್ಕೃತಿಕ ಕ್ಷೇತ್ರದ ಪಯಣಗಳು ಜೀವನಾನುಭವ ನೀಡುವುದು ಮಾತ್ರವಲ್ಲದೆ ನನ್ನಂಥ ಸಾವಿರಾರು ಕಲಾವಿದರಿಗೆ ಬದುಕು ಕೊಟ್ಟಿದೆ. ಈ ನೆಲೆಯಲ್ಲಿ ಇಪ್ಪತ್ತೈದು ವಸಂತಗಳನ್ನು ಪೂರೈಸಿದ ಸಾಂಸ್ಕೃತಿಕ ಸಂಘಟನೆ ಸುರಭಿಗೆ ತಮ್ಮೂರಿನ ಮಕ್ಕಳನ್ನು ಸಾಂಸ್ಕೃತಿಕವಾಗಿ ಬೆಳೆಸಬೇಕೆಂಬ ಹಂಬಲ ಹಾಗೂ ಪ್ರಯತ್ನ ಶ್ಲಾಘನೀಯ ಎಂದ ಅವರು, ಸಾಮಾಜಿಕ ಜಾಲತಾಣ, ದೃಶ್ಯ ಮಾಧ್ಯಮದ ಕಡೆಗೆ ಆಕರ್ಷಿತರಾಗಿರುವ ಮಕ್ಕಳನ್ನು ರಂಗಭೂಮಿ ಸೇರಿದಂತೆ ನಮ್ಮ ಸಾಂಪ್ರದಾಯಿಕ ಕಲೆಗಳತ್ತ ಸೆಳೆಯಲು ಗುಣಮಟ್ಟದ ಕಾರ್ಯಕ್ರಮಗಳನ್ನು ಆಯೋಜಿಸುವ ಅಗತ್ಯವಿದೆ ಎಂದು ಅಭಿಪ್ರಾಯ ಪಟ್ಟರು.

ಶಾಸಕ ಗುರುರಾಜ ಗಂಟಿಹೊಳೆ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ವಿದ್ವಾನ್ ಚಂದ್ರಶೇಖರ ನಾವಡ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

> **ರಂಗಭೂಮಿ ನಮ್ಮೊಳಗಿನ ಸಂತೋಷ, ನೋವು, ಹತಾಶೆಯನ್ನು ಪ್ರಕಟಿಸುವ ಜತೆಗೆ ವ್ಯಕ್ತಿತ್ವ ರೂಪಿಸುವ ಪ್ರಬಲ ಮಾಧ್ಯಮ. ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುವುದು ಕೇವಲ ಹವ್ಯಾಸವಾಗಿ ಉಳಿಯದೇ ಅದೊಂದು ಸಾಮಾಜಿಕ ಬದ್ಧತೆಯಾಗಿರಬೇಕು. ಇತಿಹಾಸ, ವರ್ತಮಾನದಲ್ಲಿ ಸಾಕಷ್ಟು ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳನ್ನು ಹುಟ್ಟು ಹಾಕಿದ ರಂಗಭೂಮಿಯ ಭವ್ಯ ಇತಿಹಾಸ ನಮ್ಮ ಮುಂದಿನ ಪೀಳಿಗೆಗೆ ಹಸ್ತಾಂತರವಾಗಬೇಕು**
> ■ ಗುರುರಾಜ ಗಂಟಿಹೊಳೆ, ಶಾಸಕರು

ಮೂಡಬಿದಿರೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಧರ ಪಿ. ಇವರನ್ನು ಸನ್ಮಾನಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಪೂರ್ಣಿಮಾ, ಉದ್ಯಮಿಗಳಾದ ಮಾರಣಕಟ್ಟೆ ಕೃಷ್ಣಮೂರ್ತಿ ಮಂಜರು, ಜಯಾನಂದ ಹೋಬಳಿದಾರ್, ಶಿರೂರು ಪ್ರಸಾದ ಪ್ರಭು, ಅನಿಲ್ ಶೇಟ್, ನಿವೃತ್ತ ಬ್ಯಾಂಕ್ ಅಧಿಕಾರಿ ವಸಂತ ಹೆಗ್ಡೆ, ಸುರಭಿಯ ಗಣಪತಿ ಹೋಬಳಿದಾರ್, ಸುಧಾಕರ ಪಿ. ಇದ್ದರು. ಸುರಭಿ ಪೂವಾಧ್ಯಕ್ಷ ನಾಗರಾಜ ಪಿ. ಯಡ್ತರೆ ಸ್ವಾಗತಿಸಿ, ಅಧ್ಯಕ್ಷ ಆನಂದ ಮದ್ದೋಡಿ ಪ್ರಾಸ್ತಾವಿಸಿದರು. ಕಾರ್ಯದರ್ಶಿ ರಾಮಕೃಷ್ಣ ದೇವಾಡಿಗ ನಿರೂಪಿಸಿದರು. ಶ್ರೀನಿವಾಸ ಎಂ. ವಂದಿಸಿದರು.

ಐತ್ತೂರು: ಕಾಡೆಮ್ಮೆ ಅಕ್ರಮ ಬೇಟೆ ಪ್ರಕರಣ

ತನಿಖಾ ಲೋಪವೆಸಗಿದ ಬಗ್ಗೆ ಅರಣ್ಯಾಧಿಕಾರಿಗಳ ವಿರುದ್ಧ ದೂರು

ಕಡಬ: ಸುಬ್ರಹ್ಮಣ್ಯ ಸಮೀಪದ ಐತ್ತೂರು ಗ್ರಾಮದ ಮೂಜೂರು ಮೀಸಲು ಅರಣ್ಯದ ಒಳಗಡೆ ಕೆಎಫ್‌ಡಿಸಿ ರಬ್ಬರ್ ನೆಡುತೋಪಿನಲ್ಲಿ ಜ.25ರಂದು ನಡೆದ ಗಂಡು ಕಾಡುಕೋಣ ಅಕ್ರಮ ಬೇಟೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಅರಣ್ಯಾಧಿಕಾರಿಗಳ ವಿರುದ್ಧ ತನಿಖೆಯಲ್ಲಿ ಲೋಪ ಎಸಗಿದ್ದಾರೆಂಬ ದೂರಿನ ಹಿನ್ನೆಲೆಯಲ್ಲಿ ತನಿಖೆ ನಡೆಸಿ ತಪ್ಪು ಕಂಡು ಬಂದಲ್ಲಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ರಾಜ್ಯ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ಹೊರಡಿಸಿದ್ದಾರೆ.

ಪ್ರಕರಣದ ಕುರಿತು ಕಡಬದ ಕೋಡಿಂಬಾಳ ನಿವಾಸಿ ತಿಮ್ಮಪ್ಪ ವಿ.ಕೆ. ಕಡಬ ಅವರು ಫೆ.6 ಮತ್ತು 7ರಂದು ಇ-ಮೇಲ್ ಮೂಲಕ ಸಲ್ಲಿಸಿದ ದೂರಿನಲ್ಲಿ, ಸ್ಥಳೀಯ ಅಧಿಕಾರಿಗಳು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ನಿಯಮಗಳನ್ನು ಗಾಳಿಗೆ ತೂರಿ ತನಿಖೆ ನಡೆಸಿದ್ದಾರೆ ಎಂದು ಆರೋಪಿಸಿದ್ದಾರೆ. ಆ ದೂರನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿರುವ ಬೆಂಗಳೂರಿನ ಅರಣ್ಯ ಭವನದ ಮುಖ್ಯ ವನ್ಯಜೀವಿ ಪಾಲಕರು, ಈಗ ಮಂಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪತ್ರ ಬರೆದು ತತ್‌ಕ್ಷಣದ ಕ್ರಮಕ್ಕೆ ಸೂಚಿಸಿದ್ದಾರೆ.

ಅರ್ಜಿದಾರರು ನೀಡಿರುವ ದೂರಿನಲ್ಲಿರುವ ಅಂಶಗಳನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಬೇಕು ಮತ್ತು ಈ ಪ್ರಕರಣದಲ್ಲಿ ಸ್ಥಳೀಯ ಅರಣ್ಯಾಧಿಕಾರಿಗಳಿಂದ ಯಾವುದೇ ರೀತಿಯ ಲೋಪವಾಗಿರುವುದು ಕಂಡು ಬಂದಲ್ಲಿ ಅವರ ವಿರುದ್ಧ ಅಗತ್ಯ ಕಾನೂನು ಕ್ರಮ ಜರುಗಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಅಷ್ಟೇ ಅಲ್ಲದೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ಅರ್ಜಿದಾರರಿಗೆ ಪಾರದರ್ಶಕವಾಗಿ ಮಾಹಿತಿ ಒದಗಿಸುವುದರ ಜೊತೆಗೆ ಕೇಂದ್ರ ಕಚೇರಿಗೆ ಸಮಗ್ರ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಫೆ.24-25: ಸುಳ್ಯದಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ-ವಿಚಾರ ಗೋಷ್ಠಿ

ಸುಳ್ಯ: ಸುಳ್ಯದಲ್ಲಿ ಅರೆಭಾಷೆ ಅಕಾಡೆಮಿ ವತಿಯಿಂದ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಒಂದು ದಿನದ ವಿಚಾರಗೋಷ್ಠಿ ಫೆ.24 ಮತ್ತು 25ರಂದು ನಡೆಯಲಿದೆ.

ಸುಳ್ಯ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಅರೆಭಾಷೆ ಅಕಾಡೆಮಿ ಸದಸ್ಯ ಚಂದ್ರಶೇಖರ ಪೇರಾಲು ಈ ಕುರಿತು ಮಾಹಿತಿ ನೀಡಿ, ಫೆ.24ರಂದು ಸುಳ್ಯದಲ್ಲಿ ಅರೆಭಾಷೆ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದ್ದು, ಪೂರ್ವಾಹ್ನ 9.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಬಳಿಕ ಭಾಷಾ ವಿಚಾರ ಸಂಕಿರಣ, ಅರೆಭಾಷಾ ವಿಚಾರ ಸಂಕಿರಣ, ಅರೆಭಾಷೆ ಸಂಸ್ಕೃತಿ ವಿಚಾರ ಸಂಕಿರಣ ನಡೆಯಲಿದೆ ಎಂದರು.

ಕೆ.ಟಿ. ವಿಶ್ವನಾಥ ಮಾತನಾಡಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಫೆ.25ರಂದು ಗಡಿನಾಡು ಸುಳ್ಯ ಪರಿಸರದ ಭಾಷಾ ಪರಂಪರೆ ವಿಷಯದಲ್ಲಿ ಒಂದು ದಿನದ ವಿಚಾರಗೋಷ್ಠಿ ನಡೆಯಲಿದ್ದು, 9.30ಕ್ಕೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ಡಾ.ಕೆ.ವಿ. ಚಿದಾನಂದ ಗೋಷ್ಠಿಯನ್ನು ಉದ್ಘಾಟಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲ, ಸದಸ್ಯ ಯಾಕೂಬ್ ಖಾದರ್ ಗುಲ್ವಾಡಿ, ಡಾ. ರುದ್ರಕುಮಾರ್, ಮಧುರಾ ಉಪಸ್ಥಿತರಿರುವರು. ವಿಶ್ವನಾಥ ಕೆ.ಟಿ. ಅಧ್ಯಕ್ಷತೆ ವಹಿಸುವರು ಎಂದು ಅವರು ಹೇಳಿದರು.

ಬಳಿಕ ಭಾಷಾ ವಿಚಾರಗೋಷ್ಠಿಗಳು ನಡೆಯಲಿದ್ದು, ಕವಯತ್ರಿ ಸ್ಮಿತಾ ಅಮೃತರಾಜ್ ಅವರು ಅರೆಭಾಷೆ ಬಗ್ಗೆ, ವಿಶ್ರಾಂತ ಪ್ರಾಂಶುಪಾಲ ಡಾ. ಪೂವಪ್ಪ ಕಣಿಯೂರು ಅವರು ತುಳು ಭಾಷೆ ಬಗ್ಗೆ, ಕೊರಗ್ ಕಲಾ ತಂಡದ ಅಧ್ಯಕ್ಷ ರಮೇಶ್ ಮಂಚಕಲ್ಲು ಮಂಗಳೂರು ಅವರು ಕೊರಗ ಭಾಷೆ ಬಗ್ಗೆ, ಬರಹಗಾರ್ತಿ ಸಹನಾ ಕಾಂತಬೈಲು ಅವರು ಹವ್ಯಕ ಭಾಷೆ ಬಗ್ಗೆ, ಅಧ್ಯಾಪಕ ಡಾ. ಸುಂದರ ಕೇನಾಜೆ ಅವರು ಮಲೆಯಾಳಿ ಭಾಷೆ ಬಗ್ಗೆ, ಬರಹಗಾರ ಇಸ್ಮತ್ ಪಜೀರ್ ಅವರು ಬ್ಯಾರಿ ಭಾಷೆ ಬಗ್ಗೆ, ಪಶು ವೈದ್ಯಾಧಿಕಾರಿ ಡಾ. ನಿತಿನ್ ಪ್ರಭು ಅವರು ಕೊಂಕಣಿ ಭಾಷೆ ಬಗ್ಗೆ, ಬರಹಗಾರ ಡಾ. ಸೆಲ್ವರತ್ನಂ ಕಂದಡ್ಕ ಅವರು ತಮಿಳು ಭಾಷೆ ಬಗ್ಗೆ ವಿಚಾರ ಮಂಡಿಸುವರು ಎಂದು ಅವರು ವಿವರಿಸಿದರು.

ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಡಾ. ರುದ್ರ ಕುಮಾರ್ ಅಧ್ಯಕ್ಷತೆ ವಹಿಸುವರು. ಹಿರಿಯ ವಿಮರ್ಶಕ ಎಸ್. ಆರ್. ವಿಜಯ ಶಂಕರ್ ಸಮಾರೋಪ ನುಡಿ ಮಾತನಾಡುವರು ಎಂದು ಅವರು ತಿಳಿಸಿದರು.

ಪ್ರಮುಖರಾದ ಡಾ. ರುದ್ರ ಕುಮಾರ್ ಎಂ.ಎಂ., ಅರೆಭಾಷೆ ಅಕಾಡೆಮಿ ಸದಸ್ಯ ಡಾ. ಜ್ಞಾನೇಶ್ ಎನ್.ಎ., ಮಧುರಾ, ಲೋಕೇಶ್ ಪೆರ್ಲಂಪಾಡಿ, ಡಾ. ಅನುರಾಧಾ ಕುರುಂಜಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ವಾರ್ಷಿಕ ಜಾತ್ರೆ



ಮಂಗಳೂರು: ಪುರಾತನ ಕಲ್ಕುಡ ರಕ್ತೇಶ್ವರಿ ಕೊಡಮಣಿತ್ತಾಯ ಸಪರಿವಾರ ದೈವಗಳ ವಾರ್ಷಿಕ ಜಾತ್ರೋತ್ಸವ ಬೆಳ್ತಂಗಡಿಯ ಪದ್ಮುಂಜ ಮಾಡದಲ್ಲಿ ಇತ್ತೀಚೆಗೆ ಜರಗಿತು. ಊರ ಪರವೂರ ಭಕ್ತರಿಂದ ಹೊರೆಕಾಣಿಕೆ ಸಮರ್ಪಣೆ, ಗಣಪತಿ ಹೋಮ ಆಶ್ಲೇಷ ಬಲಿ, ದೈವಗಳಿಗೆ ಕಲಶಾಭಿಷೇಕ, ಚಂಡಿಕಾ ಹೋಮ, ರಂಗಪೂಜೆ ಮತ್ತು ಸಪರಿವಾರ ದೈವಗಳಿಗೆ ನೇಮೋತ್ಸವ ನಡೆಯಿತು. ಕ್ಷೇತ್ರದ ಆಡಳಿತ ಮೊಕ್ತೇಸರ ಚಿದಾನಂದ ರಾವ್ ಕೊಲ್ಲಾಜೆ, ಟ್ರಸ್ಟ್ ಅಧ್ಯಕ್ಷ ವಿಜಯ ಕುಮಾರ್ ತಂತ್ರಿ, ಕಾರ್ಯದರ್ಶಿ ಮೋಹನ ಗೌಡ ಪದ್ಮುಂಜ, ಕಣಿಯೂರು ಗುತ್ತು ಸುರೇಂದ್ರ ಹೆಗ್ಡೆ, ಉಪಾಧ್ಯಕ್ಷ ಪ್ರಸನ್ನ ಕುಮಾರ್ ಜೈನ್, ಕೋಶಾಧಿಕಾರಿ ಸೀತಾರಾಮ ಮಡಿವಾಳ, ಸದಾಶಿವ ಶೆಟ್ಟಿ ಜೋಗಿ ಮೊದಲಾದವರಿದ್ದರು.

ಮಾ.2, 3ರಂದು ವಾರ್ಷಿಕೋತ್ಸವ

ಮಂಗಳೂರು: ಮಂಜೇಶ್ವರ ಸಮೀಪದ ಗೆಳೆಯರ ಬಳಗ ಬಲ್ಲಂಗುಡೆಲು ಪಟ್ಟತ್ತಮೊಗರು ಮಜಿಬೈಲು ಇದರ 34ನೇ ವರ್ಷದ ವಾರ್ಷಿಕೋತ್ಸವ ಮಾ. 2 ಮತ್ತು 3ರಂದು ಬಲ್ಲಂಗುಡೆಲು ಶ್ರೀ ಪಾಡಂಗರೆ ಭಗವತಿ ಕ್ಷೇತ್ರದ ವಠಾರದಲ್ಲಿ ಜರಗಲಿದೆ. ಮಾ. 2ರಂದು ಸ್ಥಳೀಯ ಪ್ರತಿಭೆಗಳಿಂದ ನೃತ್ಯ ವೈಭವ ಹಾಗೂ ಗಾಯಕ ರಂಜಿತ್ ಮೊಗರು ತಂಡದವರಿಂದ ಸಂಗೀತ ಸಂಜೆ ನಡೆಯಲಿದೆ. ಮಾ.3 ರಂದು ಸಂಜೆ 5.30ಕ್ಕೆ ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಯಕ್ಷಗಾನ ಮಂಡಳಿಯವರಿಂದ ಶ್ರೀದೇವಿ ಮಹಾತ್ಮೆ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ ಎಂದು ಸಂಘದ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಇಂದು ನಮ್ಮವರು ನಮ್ಮ ಹೆಮ್ಮೆ ಕಾರ್ಯಕ್ರಮ

ಮಂಗಳೂರು: ಕೂಟ ಮಹಾಜಗತ್ತು ಮಂಗಳೂರು ಅಂಗ ಸಂಸ್ಥೆಯ ವತಿಯಿಂದ 2026 ನೇ ಸಾಲಿನ ನಮ್ಮವರು ನಮ್ಮ ಹೆಮ್ಮೆ ಶಿರೋನಾಮೆಯಡಿ ಕೂಟ ಸಮಾಜದ ಕಣ್ಮಣಿ ಗೌರವ ಪುರಸ್ಕಾರ ಸಮಾರಂಭವು ಪಾಂಡೇಶ್ವರದ ಶ್ರೀ ಗುರು ನರಸಿಂಹ ಸಭಾಭವನದಲ್ಲಿ ಇಂದು ಸಂಜೆ 4.45 ಕ್ಕೆ ಕೂಟ ಮಹಾ ಜಗತ್ತಿನ ಕೇಂದ್ರಾಧ್ಯಕ್ಷ ಸತೀಶ ಹಂದೆಯವರ ಉಪಸ್ಥಿತಿಯಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಉದ್ಯಮಿಗಳಾದ ರಘುನಾಥ ಸೋಮಯಾಜಿ, ವಿಶ್ವೇಶ್ವರ ಬದೆವಿದೆ ಹಾಗೂ ಕೇಂದ್ರದ ಉಪಾಧ್ಯಕ್ಷರಾದ ನ್ಯಾಯವಾದಿ ಸದಾಶಿವ ಐತಾಳ್ ಮೊದಲಾದವರು ಭಾಗವಹಿಸಲಿದ್ದು, ಅಂಗಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳರವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಸಮಾಜದ ಸಾಧಕರಾದ ಕನ್ನಡ ತುಳು ಸಾಹಿತ್ಯ, ಜಾನಪದ ಸಂಶೋಧನೆ ಮತ್ತು ದಾಸ ಸಾಹಿತ್ಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರೊ. ಎ.ವಿ.ನಾವಡ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಾಧನೆ ಮಾಡಿದ ಕರ್ಣಾಟಕ ಬ್ಯಾಂಕ್ ಮಾಜಿ ಎಂ ಡಿ ಡಾ. ಮಹಾಬಲೇಶ್ವರ ಎಂ ಎಸ್, ಸಹಕಾರ, ಹಾಲು ಉತ್ಪಾದನಾ ಕ್ಷೇತ್ರ ಹಾಗೂ ಗ್ರಾಮೀಣಾಭಿವೃದ್ಧಿ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಡಾಕ್ಟರ್ ಬಿ.ವಿ ಸತ್ಯನಾರಾಯಣ, ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ. ಬಂಟ್ವಾಳ ವೆಂಕಟರಮಣ ಸೋಮಯಾಜಿ, ಉದ್ಯಮ ಕ್ಷೇತ್ರದ ಸಾಧಕರಾದ ಕುಡುಂಬೂರು ರಾಮ್ ಮೋಹನ್ ರಾವ್ ಕನ್ನಡ ಸಾಹಿತ್ಯ, ಸ್ತ್ರೀವಾದ ಚಿಂತನೆ, ಸಂಸ್ಕೃ ತಿ ವಿಮರ್ಶೆ ಹಾಗೂ ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಸಾಧನೆ ಮಾಡಿದ ಡಾ. ಗಾಯತ್ರಿ ನಾವಡ ಮೊದಲಾದವರನ್ನು ಸನ್ಮಾನಿಸಲಾಗುವುದು. ಸಾಂಸ್ಕೃ ತಿಕ ಕಾರ್ಯಕ್ರಮದಲ್ಲಿ ನೃತ್ಯ ರಂಜನೆಯನ್ನು ಭರತಾಂಜಲಿಯ ವಿದುಷಿ ಚಿನ್ಮಯಿ ಬಾಶಿ, ಗಾನ ನೃತ್ಯ ಅಕಾಡೆಮಿಯ ಮೈತ್ರೇಯಿ ನಾವಡ, ಸನಾತನ ನಾಟ್ಯಾಲಯದ ವಿದುಷಿ ಕಾವ್ಯಶ್ರೀ, ವಿದುಷಿ ಶಾರ್ವರಿ ವಿ. ಮಯ್ಯ, ಭೂಮಿಕಾ ಉಪಾಧ್ಯಾಯ, ರಮ್ಯಾ ತುಂಗಾ ಪ್ರದರ್ಶಿಸಲಿರುವರು ಎಂದು ಕಾರ್ಯದರ್ಶಿ ಗೋಪಾಲಕೃಷ್ಣ ಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲ್ಪೆಯಲ್ಲಿ ಮೀನು ವ್ಯಾಪಾರಿಯ ದರೋಡೆ: ಓರ್ವನ ಬಂಧನ

ಉಡುಪಿ: ಮಲ್ಪೆ ಬಂದರಿನಲ್ಲಿ ಮೀನು ವ್ಯಾಪಾರಿಯೊಬ್ಬರ ಮುಖಕ್ಕೆ ಖಾರದ ಪುಡಿ ಎರಚಿ, ಹಲ್ಲೆ ನಡೆಸಿ, ಚಿನ್ನದ ಸರ ಸುಲಿಗೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಓರ್ವ ಆರೋಪಿಯನ್ನು ಮಲ್ಪೆ ಪೊಲೀಸರು ಬಂಧಿಸಿದ್ದಾರೆ. ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕು ಮೂಲದ ಪ್ರಸ್ತುತ ಮಲ್ಪೆ ಕೊಳ ಬಾಡಿಗೆಮನೆ ನಿವಾಸಿ ಮುತ್ತಣ್ಣ(20) ಬಂಧಿತ ಆರೋಪಿ. ಈತನಿಂದ ಸುಲಿಗೆ ಮಾಡಿದ 37.570 ಗ್ರಾಂ ಚಿನ್ನದ ಸರವನ್ನು ವಶಪಡಿಸಿಕೊಳ್ಳಲಾಗಿದೆ.

ಫೆ.20ರಂದು ಬೆಳಗಿನ ಜಾವ ಮಲ್ಪೆ ಬಂದರಿನಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಮೀನು ವ್ಯಾಪಾರಿ ದಯಾನಂದ ಕುಂದರ್ ಅವರಲ್ಲಿ ಮೀನಿನ ಬಗ್ಗೆ ವಿಚಾರಿಸುವ ನೆಪದಲ್ಲಿ ಹತ್ತಿರ ಬಂದು, ಮುಖಕ್ಕೆ ಖಾರದ ಪುಡಿಯಲ್ಲಿ ಎರಚಿದನು. ನಂತರ ಅಲ್ಲಿದ್ದ ಇಬ್ಬರು ಅಪರಿಚಿತರು ಒಟ್ಟು ಸೇರಿ ದಯಾನಂದ ಕುಂದರ್ ಅವರಿಗೆ ಚಾಕು ತೋರಿಸಿ, ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕೊಡುವಂತೆ ಕೇಳಿದರು. ಸರ ಕೊಡಲು ನಿರಾಕರಿಸಿದಕ್ಕೆ ಆರೋಪಿ ಮುತ್ತಣ್ಣ ಮತ್ತು ಇಬ್ಬರು ಅಪರಿಚಿತರು ಸೇರಿ ದಯಾನಂದ ಕುಂದರ್ ಮೇಲೆ ಹಲ್ಲೆ ಮಾಡಿ 6 ಲಕ್ಷ ರೂ. ಮೌಲ್ಯದ ಸುಮಾರು 6 ಪವನ್ ಚಿನ್ನದ ಸರವನ್ನು ಸುಲಿಗೆ ಮಾಡಿದರು. ಈ ಬಗ್ಗೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಯನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಮಡಿಕೇರಿ ನಗರದ ಸಮಗ್ರ ಅಭಿವೃದ್ಧಿಗೆ ಬಜೆಟ್‌ನಲ್ಲಿ ಅನುದಾನ ನೀಡಿ: ಚೇಂಬರ್

ಮಡಿಕೇರಿ : ಮಡಿಕೇರಿ ನಗರದ ಸಮಗ್ರ ಅಭಿವೃದ್ಧಿಗೆ ಹಾಗೂ ಏಕಗವಾಕ್ಷಿ ಪ್ರವಾಸಿ ಸೇವಾ ಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಅನುದಾನವನ್ನು ಮುಂಬರುವ (2026-27ನೇ ಸಾಲಿನ) ಬಜೆಟ್‌ನಲ್ಲಿ ಬಿಡುಗಡೆ ಮಾಡಬೇಕೆಂದು ಮಡಿಕೇರಿ ನಗರ ಚೇಂಬರ್ ಆಫ್ ಕಾಮರ್ಸ್ ಶಾಸಕ ಡಾ.ಮಂಥರ್ ಗೌಡ ಅವರಲ್ಲಿ ಮನವಿ ಮಾಡಿದೆ.ಈ ಕುರಿತು ಶಾಸಕರಿಗೆ ಪತ್ರ ಬರೆದಿರುವ ಚೇಂಬರ್ ಆಫ್ ಕಾಮರ್ಸ್‌ನ ನಗರಾಧ್ಯಕ್ಷ ಸಂತೋಷ್ ಅಣ್ವೇಕರ್ ಅವರು, ಮಡಿಕೇರಿ ನಗರಕ್ಕೆ ಭೇಟಿ ನೀಡುವ ಪ್ರವಾಸಿಗರ ಹಿತದೃಷ್ಟಿಯಿಂದ ಏಕಗವಾಕ್ಷಿ ಪ್ರವಾಸಿ ಸೇವಾ ಕೇಂದ್ರ ಸ್ಥಾಪನೆಗೆ ಮತ್ತು ನಗರದ ಸಮಗ್ರ ಅಭಿವೃದ್ಧಿಗಾಗಿ ಮುಖ್ಯ ಯೋಜನೆಗಳಿಗೆ ಮುಂಬರುವ ರಾಜ್ಯ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕೆಂದು ಕೋರಿದ್ದಾರೆ. ನಗರಸಭೆ ವತಿಯಿಂದ ವ್ಯಾಪಾರಸ್ಥರಿಗೆ ನೀಡುವ ಟ್ರೇಡ್ ಲೈಸೆನ್ಸ್ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಪ್ರಸ್ತುತ ಇರುವ ವ್ಯವಸ್ಥೆಯನ್ನು ಮತ್ತಷ್ಟು ಸರಳೀಕರಣಗೊಳಿಸಬೇಕು. ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು ಮೊದಲಾದ ಪ್ರಸ್ತಾವನೆಗಳನ್ನು ಬಜೆಟ್ ನಲ್ಲಿ ಪರಿಗಣಿಸಲು ಸರಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಸಂತೋಷ ಅಣ್ವೇಕರ್ ಶಾಸಕರಲ್ಲಿ ಮನವಿ ಮಾಡಿದ್ದಾರೆ.



ತಿರುವನಂತಪುರದ ಆಟ್ಟುಕ್ಕಾಲ್ ಶ್ರೀ ಭಗವತೀ ಕ್ಷೇತ್ರದಲ್ಲಿ ಜರಗಲಿರುವ ವಿಶ್ವವಿಖ್ಯಾತ ಪೊಂಗಾಲ ಮಹೋತ್ಸವದ ಪೂರ್ವಭಾವಿ ಸಿದ್ಧತೆಗಳ ಕುರಿತು ಶನಿವಾರ ಹಮ್ಮಿಕೊಳ್ಳಲಾಗಿದ್ದ ಅವಲೋಕನಾ ಸಭೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ: ಕುಂಪಲ

ಕಲ್ಲು ತೂರಾಟ ಘಟನೆಗೆ ಬಿಜೆಪಿ ಖಂಡನೆ

ಮಂಗಳೂರು: ಬಾಗಲಕೋಟೆಯಲ್ಲಿಶಾಂತಯುತವಾಗಿ ನಡೆಯುತ್ತಿದ್ದ ಶಿವಾಜಿ ಯಾತ್ರೆ ಮೇಲೆ ನಡೆದ ಕಲ್ಲು ತೂರಾಟ ಪ್ರಕರಣ ರಾಜ್ಯದ ಕಾಂಗ್ರೆಸ್ ಸರಕಾರದ ಅರಾಜಕತೆ ಆಡಳಿತದಿಂದ ನಡೆದಿರುವುದು ಸ್ಪಷ್ಟವಾಗಿದೆ. ಪೊಲೀಸರ ಕೈಕಟ್ಟಲಾಗಿದ್ದು, ವೋಟ್ ಬ್ಯಾಂಕ್ ರಾಜಕೀಯ ಎಲ್ಲೆ ಮೀರಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ರಾಜ್ಯದಲ್ಲಿ ಹಿಂದೂಗಳನ್ನು ಭಯಭೀತ ಗೊಳಿಸಲು ಮತಾಂಧ ಶಕ್ತಿಗಳು ಹವಣಿಸುತ್ತಿದೆ. ಇದಕ್ಕೆ ಕಾಂಗ್ರೆಸ್ ಸರ್ಕಾರ ಕುಮ್ಮಕ್ಕು ನೀಡುತ್ತಿದೆ ಎಂದು ಭಾರತೀಯ ಜನತಾ ಪಾರ್ಟಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಆರೋಪಿಸಿದ್ದಾರೆ. ಕ್ರಿಮಿನಲ್‌ಗಳಿಗೆ ರಕ್ಷಣೆ, ದೇಶದ್ರೋಹಿಗಳಿಗೆ ರಾಜಾತಿಥ್ಯ, ಮತಾಂಧರಿಗೆ ಕಾನೂನಿನ ಮೇಲೆ ಭಯವಿಲ್ಲದ ವಾತಾವರಣ ಸೃಷ್ಟಿಸಿದೆ. ಕಾಂಗ್ರೆಸ್ ಸರ್ಕಾರ ರಾಜ್ಯಕ್ಕೆ ಮತ್ತು ಹಿಂದುಗಳಿಗೆ ಅತೀ ದೊಡ್ಡ ಶಾಪವಾಗಿದೆ. ಸರ್ಕಾರ ನ್ಯಾಯದ ಪರವಾಗಿದ್ದರೆ ಕಲ್ಲು ತೂರಾಟ ನಡೆಸಿದ ದುರುಳರ ಹೆಡೆಮುರಿ ಕಟ್ಟಲಿ, ಇಲ್ಲವೇ ಆಡಳಿತ ತನ್ನಿಂದ ಸಾಧ್ಯವಿಲ್ಲವೆಂದು ರಾಜೀನಾಮೆ ನೀಡಲಿ ಎಂದು ಕುಂಪಲ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕಾಂಗ್ರೆಸ್ ನಿಂದ ದೇಶದ ಘನತೆ ಕುಗ್ಗಿಸುವ ಪ್ರಯತ್ನ

ದಿಲ್ಲಿಯಲ್ಲಿ ಎಐ ಇಂಪ್ಯಾಕ್ಟ್ ಶೃಂಗ ಸಭೆಯು ನಡೆಯುತ್ತಿದ್ದ ಸ್ಥಳಕ್ಕೆ ನುಗ್ಗಿ ಅರೆಬೆತ್ತಲೆ ಪ್ರದರ್ಶನ ಮಾಡುವ ಮೂಲಕ ಕಾಂಗ್ರೆಸ್ ದೇಶದ ಘನತೆಯನ್ನು ಕುಗ್ಗಿಸುವ ಪ್ರಯತ್ನ ಪಡುತ್ತಿದೆ. ಇದು ಬಿ.ಜೆ.ಪಿ. ಸಭೆಯಲ್ಲ, ಜಾಗತಿಕ ಮಟ್ಟದ ಸಭೆ ಎನ್ನುವುದನ್ನು ಲಕ್ಷಿಸದೆ ಉದ್ಧಟತನ ಮೆರೆದಿದ್ದಾರೆ ಎಂದು ಭಾರತೀಯ ಜನತಾ ಪಾರ್ಟಿ ದ.ಕ. ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಹೇಳಿದ್ದಾರೆ. ನರೇಂದ್ರ ಮೋದಿ ಯವರ ಸಮರ್ಥ ನಾಯಕತ್ವ ದಲ್ಲಿ ದೇಶ ಇಂದು ಸರ್ವಾಂಗೀಣ ಅಭಿವೃದ್ಧಿ ಪಥದಲ್ಲಿದೆ. ವಿದೇಶದ ಅಗ್ರ ಗಣ್ಯ ನಾಯಕರು ಭಾರತದ ಮಾತಿಗೆ ಮಾನ್ಯತೆ ನೀಡುವ ಕಾಲಘಟ್ಟದಲ್ಲಿ ಇರುವ ಸಂದರ್ಭದಲ್ಲಿ ಕಾಂಗ್ರೆಸ್ ತನ್ನ ಹೀನ ಸಂಸ್ಕೃತಿಯನ್ನು ಪ್ರದರ್ಶಿಸುವ ಮೂಲಕ ತಾನು ದೇಶದ ವಿರುದ್ಧ ಎನ್ನುವುದನ್ನು ತೋರಿಸಿದೆ ಎಂದು ಕುಂಪಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಮ್ಮ ನಡಿಗೆ – ಶ್ರೀ ಗುರುವಿನೆಡೆಗೆ । ಶ್ರೀ ಕುದ್ರೋಳಿ ಕ್ಷೇತ್ರ ತೀರ್ಥಾಟನೆ । ಧಾರ್ಮಿಕ ಪ್ರವಚನ

ಗುರುಗಳ ಚಳವಳಿ ವಿಶ್ವಖ್ಯಾತ: ಶಿವಗಿರಿ ಶ್ರೀ

ಮಂಗಳೂರು: ಬ್ರಹ್ಮಶ್ರೀ ನಾರಾಯಣಗುರುಗಳು ವಿಶ್ವಾದ್ಯಂತ ಕೋಟಿಗಟ್ಟಲೆ ಜನತೆಯ ಪ್ರತ್ಯಕ್ಷ ದೇವರಾಗಿದ್ದಾರೆ. ಆಧುನಿಕ ಭಾರತದ ವಿಶ್ವಗುರು ನಾರಾಯಗಳ ಗುರುಗಳು ಎಂದು ಕೇರಳ ಶಿವಗಿರಿ ಮಠದ ಅಧ್ಯಕ್ಷ ಶ್ರೀ ಸಚ್ಚಿದಾನಂದ ಸ್ವಾಮೀಜಿ ಹೇಳಿದರು.

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಬ್ರಹ್ಮಶ್ರೀ ನಾರಾಯಣಗುರುಗಳು ಶಿವಲಿಂಗ ಪ್ರತಿಷ್ಠಾಪನೆ ಮಾಡಿದ ದಿನದ ನೆನಪಿನಲ್ಲಿ ನಗರದಲ್ಲಿ 'ನಮ್ಮ ನಡಿಗೆ -ಶ್ರೀ ಗುರುವಿನೆಡೆಗೆ' ಎಂಬ ಸಂಕಲ್ಪದೊಂದಿಗೆ ಶನಿವಾರ ನಡೆದ ಶ್ರೀ ಕುದ್ರೋಳಿ ಕ್ಷೇತ್ರ ತೀರ್ಥಾಟನೆ ಬಳಿಕ ಕುದ್ರೋಳಿ ಕ್ಷೇತ್ರದಲ್ಲಿ ಅವರು ಧಾರ್ಮಿಕ ಪ್ರವಚನ ನೀಡಿದರು.

ನಾರಾಯಣಗುರು ಶಿವಲಿಂಗ ಪ್ರತಿಷ್ಠಾಪಿಸಿದ ಕುದ್ರೋಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇದೊಂದು ಪುಣ್ಯ ದಿನ.

ಶಬರಿಮಲೆಯಲ್ಲಿ ಪ್ರತಿ ವರ್ಷ ತೀರ್ಥಾಟನೆ ಆಗುತ್ತಿದೆ. ಅದು ಬಿಟ್ಟರೆ ಶಿವಗಿರಿಯಲ್ಲಿ ತೀರ್ಥಾಟನೆ ನಡೆಯುತ್ತದೆ. ಮುಂಬೈ, ಬಹರೇನ್, ದುಬೈ, ಕುವೈಟ್ ನಲ್ಲೂ ಶಿವಗಿರಿ ತೀರ್ಥಾಟನೆ ನಡೆಯುತ್ತಿದೆ. ಇದೀಗ ಮಂಗಳೂರಿನಲ್ಲಿ ತೀರ್ಥಾಟನೆ ಆರಂಭಿಸಿರುವುದು ಸಂತಸ ತಂದಿದೆ. ಶ್ರೀನಾರಾಯಣ ಗುರುಗಳು ಜನಿಸಿದ್ದು ಕೇರಳದಲ್ಲಾದರೂ ಭಾರತದಲ್ಲೂ ಪ್ರಪಂಚದ ಎಲ್ಲ ಕಡೆಯೂ ಅವರ ಚಳವಳಿ ಖ್ಯಾತಿ ಗಳಿಸಿದೆ ಎಂದರು.

ಕನ್ಯಾಡಿ ಶ್ರೀರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಿ,



ವೇದವ್ಯಾಸರು ವೇದಗಳನ್ನು ಎತ್ತಿ ಹಿಡಿದರೆ, ವೇದದ ಸಾರವನ್ನು ಜನಸಾಮಾನ್ಯರಿಗೆ ಪಸರಿಸಿದವರು ಶ್ರೀನಾರಾಯಣಗುರುಗಳು. ಕುದ್ರೋಳಿ ಕ್ಷೇತ್ರದ ನವೀಕರಣದ ರೂವಾರಿ ಜನಾರ್ದನ ಪೂಜಾರಿ ಅವರು ಹಿಂದುಳಿದ ವರ್ಗಗಳ ಜನರಿಗೆ ಸ್ವಾಭಿಮಾನದ ಬದುಕು ನೀಡಿದವರು. ಜನಾರ್ದನ ಪೂಜಾರಿ ಅವರಂತಹ ನಾಯಕರು ರೂಪುಗೊಳ್ಳಬೇಕು ಎಂದರು.

ಸೋಲೂರು ಮಠದ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಬಿಲ್ಲವ ಸಮಾಜ ಶ್ರೀನಾರಾಯಣಗುರು ಅವರನ್ನು ಗುರುವಾಗಿ ಸ್ವೀಕರಿಸಿದ್ದು, ಅವರು ನಿರ್ಮಿಸಿದ ಕುದ್ರೋಳಿ ಕ್ಷೇತ್ರ ಎಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.

ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡಿ, ಮಾನವೀಯ ಮೌಲ್ಯವನ್ನು ಜಗತ್ತಿಗೆ ತೋರಿಸಿಕೊಟ್ಟವರು ಶ್ರೀನಾರಾಯಣಗುರುಗಳು.



ದೇವಸ್ಥಾನಕ್ಕೆ ಹಿಂದುಗಳಿದ ವರ್ಗದವರಿಗೆ ಪ್ರವೇಶವಿಲ್ಲದ ದಿನಗಳಲ್ಲಿ ಅವರು ಕುದ್ರೋಳಿ ಕ್ಷೇತ್ರ ಸ್ಥಾಪಿಸಿದ್ದರು. ಹಿಂದುಗಳಿದ ವರ್ಗದವರಿಗೆ ದೇವಸ್ಥಾನಕ್ಕೆ ಪ್ರವೇಶ ಇರಲಿ ಎಂಬುದನ್ನು ನಾನೂ ಕೇಳಿದ್ದೇನೆ, ಅನುಭವಿಸಿದ್ದೇನೆ. ಶ್ರೀನಾರಾಯಣ ಗುರುಗಳು ನೀಡಿದ ಮಾನವೀಯ ಸಂದೇಶ ಎಲ್ಲರಿಗೂ ಮಾದರಿಯಾದುದು ಎಂದು ಹೇಳಿದರು.

ಕೇಮಾರಿನ ಶ್ರೀ ಈಶ ವಿಠಲದಾಸ ಸ್ವಾಮೀಜಿ ಆಶೀರ್ವಚನ ನೀಡಿ, ಶ್ರೀನಾರಾಯಣಗುರುಗಳು ಶೋಷಿತ ವರ್ಗ, ಬಡಜನತೆಯ ಗುರು. ಅವರನ್ನು ಒಂದೇ ಜಾತಿಗೆ ಸೀಮಿತಗೊಳಿಸುವುದು ಸರಿಯಲ್ಲ. ಕುದ್ರೋಳಿ ತೀರ್ಥಾಟನೆ ಪ್ರತಿ ವರ್ಷ ನಡೆಯಲಿ ಎಂದರು.

ಶಿವಗಿರಿ ಮಠದ ಶ್ರೀ ಸತ್ಯಾನಂದ ಸ್ವಾಮೀಜಿ, ಶ್ರೀ ಅಸಂಗಾನಂದ ಸ್ವಾಮೀಜಿ, ಶ್ರೀ ದೇವಾತ್ಮಾನಂದ ಸ್ವಾಮೀಜಿ, ಶ್ರೀ ವಿರಜಾನಂದ ಸ್ವಾಮೀಜಿ, ಶ್ರೀ ಶಂಕರಾನಂದ ಸ್ವಾಮೀಜಿ, ನಾಗಾ ಸಾಧು ಶ್ರೀ ವಿಠಲಗಿರಿ ತಪೋನಿಧಿ ಮಹಾರಾಜ್, ನಿಪ್ಪಾಣಿಯ ಶ್ರೀ ರೇಣುಕಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಕುದ್ರೋಳಿ ಕ್ಷೇತ್ರಾಡಳಿತ ಮಂಡಳಿ ಅಧ್ಯಕ್ಷ ಜೈರಾಜ್ ಎಚ್. ಸೋಮಸುಂದರಂ, ಉಪಾಧ್ಯಕ್ಷ ಊರ್ಮಿಳಾ ರಮೇಶ್ ಉಪಸ್ಥಿತರಿದ್ದರು. ಕೋಶಾಧಿಕಾರಿ ಪದ್ಮರಾಜ್ ಆರ್. ಪೂಜಾರಿ ಸ್ವಾಗತಿಸಿದರು.

ನಡಿಗೆಯಲ್ಲಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಅಖಿಲ ಭಾರತ ಬಿಲ್ಲವರ ಯೂನಿಯನ್ ಅಧ್ಯಕ್ಷ ನವೀನ್‌ಚಂದ್ರ ಡಿ. ಸುವರ್ಣ, ಮಾಜಿ ಸಚಿವ ವಿನಯ ಕುಮಾರ್ ಸೊರಕೆ, ಕುದ್ರೋಳಿ ದೇವಸ್ಥಾನದ ಅಧ್ಯಕ್ಷ ಜೈರಾಜ್ ಸೋಮಸುಂದರ್, ಉಪಾಧ್ಯಕ್ಷೆ ಊರ್ಮಿಳಾ ರಮೇಶ್ ಕುಮಾರ್, ಕೋಶಾಧಿಕಾರಿ ಪದ್ಮರಾಜ್ ಆರ್., ಟ್ರಸ್ಟಿಗಳಾದ ಸಂತೋಷ್ ಕುಮಾರ್, ಕೃತಿನ್ ಡಿ. ಅಮೀನ್, ಕುದ್ರೋಳಿ ದೇವಳ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಾ.ಬಿ. ಸುವರ್ಣ, ಸದಸ್ಯರಾದ ಹರಿಕೃಷ್ಣ ಬಂಟ್ವಾಳ್, ಸೂರ್ಯಕಾಂತ್ ಜೆ. ಸುವರ್ಣ, ಹರೀಶ್ ಕುಮಾರ್, ಗೌರವಿ ರಾಜಶೇಖರ್, ಲೀಲಾಕ್ಷ ಕರ್ಕೇರ, ಭಾರತ್ ಬ್ಯಾಂಕ್ ನಿರ್ದೇಶಕ ಗಂಗಾಧರ ಪೂಜಾರಿ, ಮುಖಂಡರಾದ ಶಶಿಧರ್ ಹೆಗ್ಡೆ, ಅಪ್ಪಿ ಮತ್ತಿತರರು ಭಾಗವಹಿಸಿದ್ದರು.

ಸಹಸ್ರಾರು ಮಂದಿ ಭಾಗಿ

ಮಂಗಳೂರಿನ ಸೆಂಟ್ರಲ್ ರೈಲು ನಿಲ್ದಾಣದಿಂದ ಬೆಳಗ್ಗೆ ಹೊರಟ ತೀರ್ಥಾಟನೆ ಪುರಭವನ, ಕ್ಲಾಕ್‌ಟವರ್, ನವಭಾರತ ಸರ್ಕಲ್, ಪಿವಿಎಸ್, ಎಂಜಿ ರಸ್ತೆ, ನಾರಾಯಣಗುರು ವೃತ್ತದ ಮೂಲಕ ಸಾಗಿ ಸುಮಾರು 7 ಕಿ.ಮೀ.ಗಳ ನಡಿಗೆಯ ಮೂಲಕ ಕುದ್ರೋಳಿ ಕ್ಷೇತ್ರಕ್ಕೆ ತಲುಪಿತು. ಗುರುಗಳ ಜ್ಞಾನದ ಸಂಕೇತವಾದ ಹಳದಿ ವಸ್ತ್ರಧಾರಣೆಯೊಂದಿಗೆ ಗುರು ಸಂದೇಶದ ಫಲಕ, 'ಓಂ ಶ್ರೀ ನಾರಾಯಣ ಪರಮ ಗುರುವೇ ನಮ:' ಎಂಬ ಮಂತ್ರೋಚ್ಚಾರಣೆ ಯೊಂದಿಗೆ ನಡಿಗೆ ನೆರವೇರಿತು. ಸಹಸ್ರಾರು ಮಂದಿ ಭಾಗವಹಿಸಿದ್ದರು.

ಎಂಎಸ್‌ಇಝೆಡ್‌ನಲ್ಲಿ ಎಂಐಆರ್ ಉತ್ಪಾದನಾ ಘಟಕ

ಮಂಗಳೂರಿಗೆ ಇನ್ನಷ್ಟು ಕಂಪೆನಿಗಳು ಬರಲಿ : ಸಂಸದ ಕ್ಯಾ.ಬ್ರಿಜೇಶ್ ಚೌಟ



ಮಂಗಳೂರು: ಮಂಗಳೂರಿನ ಎಂಎಸ್‌ಇಝೆಡ್ ಕೈಗಾರಿಕಾ ಪ್ರದೇಶದಲ್ಲಿ ಇಟಲಿಯ ಎಂಐಆರ್ ಗ್ರೂಪ್ ತನ್ನ ಉತ್ಪಾದನಾ ಘಟಕ ಆರಂಭಿಸುತ್ತಿದ್ದು, ಶನಿವಾರ ಭೂಮಿಪೂಜೆ ನೆರವೇರಿತು.

ಮಂಗಳೂರು ಕ್ರೈಸ್ತ ಧರ್ಮ ಪ್ರಾಂತ್ಯದ ಬಿಷಪ್ ಡಾ.ಪೀಟರ್ ಪೌಲ್ ಸಲ್ದಾನ ಭೂಮಿ ಪೂಜೆ ನೆರವೇರಿಸಿ ಆಶೀರ್ವಚನ ನೀಡಿದರು.

ಈ ಸಂಧರ್ಭದಲ್ಲಿ ಮಾತನಾಡಿದ ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು, ಸತತ ಪ್ರಯತ್ನ ದಿಂದ ಇಂದು ಎಂಐ ಆರ್ ಗ್ರೂಪ್ ಮೂಲಕ ನೂತನ ಘಟಕವೊಂದು ಆರಂಭವಾಗುತ್ತಿದೆ. ಅಭಿವೃದ್ಧಿಗೆ ಇದೊಂದು ಮಹತ್ವದ ಮೈಲಿಗಲ್ಲಾಗಲಿದೆ. ಇಲ್ಲಿ ಕಟ್ಟಡ ನಿರ್ಮಾಣ ನಡೆದು ಉತ್ಪಾದನೆ ಮಾಡುವವರೆಗೆ ನಮ್ಮೆಲ್ಲರ ಸಹಕಾರವಿದೆ. ಮಂಗಳೂರಿಗೆ ಇನ್ನಷ್ಟು ವಿದೇಶಿ ಕಂಪೆನಿಗಳು ಬರುವಂತಾಗಬೇಕು ಎಂದರು.

ಶಾಸಕ ಉಮಾನಾಥ್ ಕೋಟ್ಯಾನ್ ಮಾತನಾಡಿ, ನಮ್ಮೂರಿನ ಹುಡುಗ ಇಟಲಿಯ ಕಂಪನಿಯನ್ನು ಜಿಲ್ಲೆಯಲ್ಲಿ ಸ್ಥಾಪಿಸಲು ಬಯಸಿದಕ್ಕೆ ಅಭಿನಂದನೆಗಳು ಎಂದರು. ಸಿಇಒ ಆರ್ಕಿಟೆಕ್ಟ್ ರಫೇಲೆ ಮರಾಝೂ ಮಾತನಾಡಿ, ಮಂಗಳೂರಿನಲ್ಲಿ ಉದ್ಯಮ ಆರಂಭಿಸಲು ಸಂತೋಷವಾಗುತ್ತಿದೆ. ಭಾರತದಲ್ಲಿ ಪ್ರಪಥಮ ಬಾರಿಗೆ ನಮ್ಮ ಸಂಸ್ಥೆ ಕಾರ್ಯಾಚರಿಸಲು ಅವಕಾಶ ನೀಡಿದಕ್ಕೂ ಅಭಿನಂದನೆಗಳು ಎಂದರು.

ಎಂಐಆರ್ ಗ್ರೂಪ್ ಕಾರ್ಯ ನಿರ್ವಾಹಕ ನಿರ್ದೇಶಕ ನಿತಿಕ್ ರತ್ನಾಕರ್, ಇಮ್ಮಾನುಯೆಲ್ ಪಿನಾ, ಗಜ್ಮೆಂಡ್ ಲುಜಿ, ಸುನಜೆ, ಪ್ರಮೋದ್ ಪಿಂಟೋ ಕಮರ್ಷಿಯಲ್ ಡೈರೆಕ್ಟರ್, ಸೂರ್ಯ ನಾರಾಯಣ್ ಸಿಇಓ ಎಂ ಎಸ್ ಈ ಝೆಡ್,ಸುನಿಲ್ ಆಚಾರ್, ಸಂಜಯ್ ಪ್ರಭು, ರತ್ನಾಕರ್ ಮತ್ತಿತರರು ಉಪಸ್ಥಿತರಿದ್ದರು.

ಸಿಇಟಿ ದಿಕ್ಸೂಚಿ ಸಾಮಾನ್ಯ ಪ್ರವೇಶ ಪರೀಕ್ಷೆ ಕೈಪಿಡಿಯಲ್ಲಿ ಲೋಪ

ಶಿಕ್ಷಣ ಸಚಿವರಿಗೆ ನಿಯೋಗ ಮನವಿ

ಮಂಗಳೂರು: ಬೆಂಗಳೂರಿನಲ್ಲಿ ಫೆ. 19ರಂದು ರಾಜ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪನವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿಇಟಿ ದಿಕ್ಸೂಚಿ ಸಾಮಾನ್ಯ ಪ್ರವೇಶ ಪರೀಕ್ಷೆ -2026 ಕ್ಕೆ ಸಂಬಂಧಿಸಿದಂತೆ ಕೈಪಿಡಿಯಲ್ಲಿ 22 ನೇ ಪುಟದಲ್ಲಿ 19ನೇ ವಿಷಯದಲ್ಲಿ Linguistic Minority (For Medical & Dental only) ಎಂಬುದರಲ್ಲಿ ಭಾಷಾ ಅಲ್ಪಸಂಖ್ಯಾತರು (ತಮಿಳು, ತೆಲುಗು, ಕೊಡವ ಹಾಗೂ ತುಳು) ಕರ್ನಾಟಕದ ರಾಜ್ಯದ ವಿದ್ಯಾರ್ಥಿಗಳಿಗೆಮಾತ್ರ ಅನ್ವಯಿಸುವ ನಿಯಮದಲ್ಲಿ ಆತ/ಅವಳು ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ 10 ವರ್ಷಗಳ ಕಾಲ ಭಾಷಾ ಅಲ್ಪಸಂಖ್ಯಾತರಾಗಿದ್ದರೆ ಅಂತವರಿಗೆ Annexure-5Aಗೆ ಕಾಲೇಜಿನ ಪ್ರಾಂಶುಪಾಲರ ದೃಢೀಕರಣ ದೊಂದಿಗೆ ಕೊಡಬಹುದೆಂದು ತಿಳಿಸಲಾಗಿದೆ.

ಮನವಿ ಸಲ್ಲಿಕೆ

ಪಮೂ ಹಂತದಲ್ಲಿ ಇದನ್ನು ಪ್ರಾಂಶುಪಾಲರಿಗೆ ದೃಢೀಕರಿಸಲು ಸ್ಪಷ್ಟವಾದ ನಿರ್ದೇಶನವು ಪಮೂ ಕಾಲೇಜಿನ ಮಾರ್ಗಸೂಚಿ (ಶೈಕ್ಷಣಿಕ ವಿಭಾಗ) 2025-26ರಲ್ಲಿ ತಿಳಿಸಿಲ್ಲ. 10ನೇ ತರಗತಿಯ ಶಾಲೆಯಿಂದ SATS ನಿಂದ ಮುದ್ರಿತ ವರ್ಗಾವಣೆ ಪ್ರಮಾಣ ಪತ್ರ (ಟಿಸಿ)ಯಲ್ಲಿ ಭಾಷಾ ಅಲ್ಪಸಂಖ್ಯಾತ ಕಾಲಂ ಇರುವುದಿಲ್ಲ. ಪ್ರಥಮ ಪಿಯುಸಿಗೆ ದಾಖಲಾತಿ ಅರ್ಜಿಯಲ್ಲಿಯೂ ಈ ಕಾಲಂನ್ನು



ನಮೂದಿಸದಿರುವುದರಿಂದ ಇದು ಕೊನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಿಇಟಿ ದಿಕ್ಸೂಚಿ ಸಾಮಾನ್ಯ ಪ್ರವೇಶ ಪರೀಕ್ಷೆ-2026 ನ್ನು ಪರಿಗಣಿಸಲು ಕಷ್ಟವಾಗುತ್ತಿರುವುದರಿಂದ ನಮ್ಮ ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿರುವ ಭಾಷಾ ಅಲ್ಪಸಂಖ್ಯಾತ (ತಮಿಳು, ತೆಲುಗು, ಕೊಡವ ಹಾಗೂ ತುಳು) ವಿದ್ಯಾರ್ಥಿಗಳಿಗೆ ಫೆ. 22ರಂದು ಸಿಇಟಿ ಅರ್ಜಿ ತುಂಬಲು ಕೊನೆಯ ದಿನಾಂಕವಾಗಿರುವುದರಿಂದ ಇವರು ಈ ಕೋಟಾದಲ್ಲಿ ವಂಚಿತರಾಗುವ ಸಾಧ್ಯತೆ ಇರುವುದರಿಂದ ತಕ್ಷಣಕ್ಕೆ ತಾವು ಸ್ಪಷ್ಟ ನಿರ್ದೇಶನವನ್ನು ಜಿಲ್ಲೆಯ ಪಪೂ ಉಪನಿರ್ದೇಶಕರ ಮೂಲಕ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಪಪೂ ಕಾಲೇಜಿನ ಪ್ರಾಂಶುಪಾಲರಿಗೆ ನೀಡಬೇಕಾಗಿ ಮನವಿ ಸಲ್ಲಿಸಲಾಯಿತು.

ತಕ್ಷಣ ಮನವಿಗೆ ಸ್ಪಂದಿಸಿದ ಸಚಿವರು ಶಾಲಾ ಶಿಕ್ಷಣ (ಪದವಿ ಪೂರ್ವ) ನಿರ್ದೇಶಕರಾದ ಭರತ್ ಹಾಗೂ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಜಿ.ಟಿ ನಿಟ್ಟಾಲಿ ಅವರಲ್ಲಿ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವಂತೆ ಕುಪ್ಮ ನಿಯೋಗದೊಂದಿಗೆ ಚರ್ಚಿಸಲು ಸೂಚಿಸಿದರು.

ನಂತರ ಶಾಲಾ ಶಿಕ್ಷಣ ಪದವಿಪೂರ್ವ ನಿರ್ದೇಶಕರ ಕಚೇರಿಯಲ್ಲಿ ಈ ವಿಷಯದ ಕುರಿತಂತೆ ಚರ್ಚೆ ನಡೆದು ಕೆಇಎ ಮೂಲಕ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು. ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ್ ಜಿ. ಟಿ. ನಿಟ್ಟಾಲಿ ಅವರು ಮನವಿ ಸ್ವೀಕರಿಸಿ ಸಕಾರಾತ್ಮಕವಾದ ಸ್ಪಂದನೆಯನ್ನು ನೀಡಿದರು.

ತಕ್ಷಣಕ್ಕೆ ಸ್ಪಂದಿಸಿದ ಕೆಇಎ

Annexure-5Aಯ ಬದಲಿಗೆ ಕ್ಷೇತ್ರ ಶಿಕ್ಷಣಾಧಿಕಾರಿಯವರ ಸಹಿ ಇರುವ Annexure-5 ನ್ನು ಸಿಇಟಿ ಅರ್ಜಿಯಲ್ಲಿ ಸಲ್ಲಿಸಲು ಕೆಇಎ ಒಪ್ಪಿಗೆ ಸೂಚಿಸಿ ಒಂದು ವಾರಗಳ ಕಾಲ ಸಿಇಟಿಗೆ ಅರ್ಜಿಸಲ್ಲಿಸುವ ದಿನಾಂಕವನ್ನು ಮುಂದೂಡುವುದಾಗಿ ತಿಳಿಸಿದೆ.

ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಉನ್ನತ ಶಿಕ್ಷಣ ಸಚಿವ ಡಾ. ಸುಧಾಕರ್ ಕುಪ್ಮದ ನ್ಯಾಯಯುತ ಬೇಡಿಕೆಗೆ ಸ್ಪಂದಿಸುವಂತೆ ಸೂಚಿಸಿರುವುದು ಭಾಷಾ ಅಲ್ಪಸಂಖ್ಯಾತ ಕೋಟದಿಂದ ವಂಚಿತರಾಗುವ ವಿದ್ಯಾರ್ಥಿಗಳಿಗೆ ವರದಾನವಾಗಿದೆ.

ನಿಯೋಗದ ನೇತೃತ್ವವನ್ನು ಕುಪ್ಮ ರಾಜ್ಯ ಕಾರ್ಯದರ್ಶಿ ಪ್ರೊ. ನರೇಂದ್ರ ಎಲ್. ನಾಯಕ್, ರಾಜ್ಯಉಪಾಧ್ಯಕ್ಷ ಯುವರಾಜ್ ಜೈನ್, ಬೆಂಗಳೂರು ಅಧ್ಯಕ್ಷ ಡಾ. ದೇವರಾಜ್, ಕೋಶಾಧಿಕಾರಿ ರಮೇಶ್ ಕೆ, ರಾಜ್ಯ ಸಮಿತಿ ಸದಸ್ಯ ಕೀರ್ತನ್ ಬೆಂಗಳೂರು ವಹಿಸಿದ್ದರು.

ಪುತ್ತೂರಿನ ವಿವೇಕಾನಂದ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಉದ್ಯೋಗ ಮೇಳ । 132 ಕಂಪೆನಿಗಳು, ಆರು ಸಾವಿರಕ್ಕೂ ಮಿಕ್ಕಿ ಮಂದಿ ಭಾಗಿ

ಪಠ್ಯದ ಕಲಿಕೆಯ ಜೊತೆಗೆ ಕೌಶಲ್ಯ, ಪ್ರತಿಭೆಗಳು ಕೂಡಾ ಬೆಳಗಲಿ: ಸಂಸದ ಕ್ಯಾ.ಚೌಟ

ಪುತ್ತೂರು: ಉದ್ಯೋಗದ ಸಂದರ್ಶನ ಎಂದರೆ ಅದು ಒಂದು ಕಲಿಕೆಯ ಭಾಗವೇ. ಒಮ್ಮೆ ಹಿನ್ನಡೆಯಾದರೂ ಬದುಕು ಅಲ್ಲಿಗೆ ಮುಗಿಯುವುದಿಲ್ಲ. ಪಠ್ಯದ ಕಲಿಕೆಯ ಜತೆಗೆ ಕೌಶಲ್ಯ ಹಾಗೂ ಪ್ರತಿಭೆಗಳನ್ನು ಬೆಳೆಸಿಕೊಂಡು ಸರ್ವಾಂಗೀಣ ಪ್ರಗತಿ ಹೊಂದಬೇಕು. ವಿಕಸಿತ ಭಾರತದ ಆಶಾಕಿರಣವಾಗಿರುವ ಯುವ ಸಮುದಾಯ ದೇಶಕ್ಕೆ ಮಹತ್ವದ ಕೊಡುಗೆ ನೀಡಬೇಕು ಎಂದು ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಪುತ್ತೂರಿನ ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯದ ಸಾವರ್ಕರ್ ಸಭಾಂಗಣದಲ್ಲಿ ಭಾರತ ಸರಕಾರದ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯಯೋಜನೆ, ದೀನ್ ದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ-ಸಂಜೀವಿನಿ, ಕೆ.ಎಸ್.ಆರ್.ಎಲ್.ಪಿ.ಎಸ್. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ದ.ಕ. ಜಿಲ್ಲಾ ಪಂಚಾಯತ್, ವಿವೇಕಾನಂದ ವಿದ್ಯಾವರ್ಧಕ ಸಂಘದ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಡೆದ ದ.ಕ. ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉದ್ಯೋಗ ಹಾಗೂ ಇನ್ನಿತರ ಅವಕಾಶಗಳ ಬಗ್ಗೆ ನಾವು ಜಾಗೃತರಾಗಬೇಕು. ಹಾಗೂ ಇತರರಿಗೆ ಆ ಬಗ್ಗೆ ಅರಿವು ಮೂಡಿಸಬೇಕು. ಗುಡಿ ಕೈಗಾರಿಕೆಗಳಿಗೆ ಮಾರುಕಟ್ಟೆ ಒದಗಿಸುತ್ತಿರುವ ಸರಸ್ ಮೇಳದಂತಹ ಮೇಳಗಳು ಗ್ರಾಮೀಣಾಭಿವೃದ್ಧಿಗೆ ಸಹಕಾರಿಯಾಗಿದ್ದು, ಇಂದು ರಾಜಧಾನಿಯಿಂದ ಜಿಲ್ಲಾ ಮಟ್ಟದಲ್ಲಿ ನಡೆಯುತ್ತಿವೆ. ಎಲ್ಲಾ ರೀತಿಯ ಅವಕಾಶಗಳನ್ನು ಬಳಸಿಕೊಳ್ಳುವ ಜಾಣ್ಮೆ, ಶ್ರದ್ಧೆ ವಿದ್ಯಾರ್ಥಿಗಳಲ್ಲಿರಬೇಕು ಎಂದು ಹೇಳಿದರು.

ಉದ್ಯೋಗಕ್ಕೆ ಕೊರತೆಯಿಲ್ಲ

ವಿವೇಕಾನಂದ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಕಲ್ಲಡ್ಕ ಡಾ. ಪ್ರಭಾಕರ ಭಟ್ ಮಾತನಾಡಿ, ಜಗತ್ತು ಪರಿವರ್ತನಶೀಲವಾದುದು. ನಾವು ಅದರ ಜೊತೆಗೆ ಹೋಗುವ ಚಾಕಚಕ್ಯತೆ ಬೆಳೆಸಿಕೊಳ್ಳಬೇಕು. ತಂತ್ರಜ್ಞಾನ ಎಷ್ಟೇ ಬದಲಾದರೂ ಉದ್ಯೋಗಕ್ಕೆ ಕೊರತೆ ಉಂಟಾಗಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಉದ್ಯೋಗ ಹುಡುಕಿಕೊಂಡು ಬರುತ್ತಿದೆ. ಎಷ್ಟೇ ಹೊಸತನ ಬಂದರೂ ಅದರಲ್ಲಿ ಕಲಿತುಕೊಳ್ಳಲು ಬಹಳಷ್ಟು ಇದೆ. ಎಐ ತಂತ್ರಜ್ಞಾನ ಸೇರಿದಂತೆ ಪ್ರತಿಯೊಂದು ಮಾನವನ ಮಿದುಳಿನ ಶಕ್ತಿಯಿಂದ ನಿರ್ಮಿತವಾಗಿದ್ದು ಉದ್ಯೋಗಕ್ಕೆ ಕೊರತೆ ಉಂಟಾಗಲು ಸಾಧ್ಯವಿಲ್ಲ ಎಂದು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಪುತ್ತೂರಿನ ಶಾಸಕ ಅಶೋಕ್ ಕುಮಾರ್ ರೈ, ಉದ್ಯೋಗದಸಂದರ್ಶನದಲ್ಲಿಅನಗತ್ಯ ಭಯ ಬೇಡ. ಅನುಭವದ ಮೂಲಕ ಬದುಕನ್ನು ರೂಪಿಸಿಕೊಳ್ಳಬೇಕು. ಪಠ್ಯದ ಕಲಿಕೆಯೊಂದಿಗೆ ಪ್ರಾಯೋಗಿಕ ಜ್ಞಾನವೂ ಜೀವನದಲ್ಲಿ ಅತ್ಯಗತ್ಯ. ಸಾಧನೆ ಮಾಡುವತ್ತ ಮುಂದುವರಿದವರನ್ನು ಪ್ರಶಂಸಿಸಬೇಕು. ನಮ್ಮ ಜಿಲ್ಲೆಗಳಲ್ಲಿಯೇ ಉದ್ಯೋಗ ನಿರ್ಮಾಣ ಮಾಡಿ ಅಭಿವೃದ್ಧಿಆಗುವಂತೆ ಕ್ರಮ ಕೈಗೊಳ್ಳುವ ಅನಿವಾರ್ಯತೆ ಇದೆ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಪುತ್ತೂರು ಮಾತನಾಡಿ, ಉದ್ಯೋಗ ದೇಶದ ಭದ್ರ ಬುನಾದಿಗೆ ಶಕ್ತಿ ನೀಡುತ್ತಿದೆ. ವಿವಿಧ ಹುದ್ದೆಗೆ ಆಯ್ಕೆಯಾಗುವ ಉದ್ಯೋಗ ಆಕಾಂಕ್ಷಿಗಳು ತಮ್ಮ ಸಂಪಾದನೆಯ ಜೊತೆಗೆ ಸಂಸ್ಥೆಯ ಅಭಿವೃದ್ಧಿಗೆ ಜೋಡಿಸುವ ಮೂಲಕ ಭಾರತವನ್ನು ಬಲಿಷ್ಠ ಆರ್ಥಿಕ ಶಕ್ತಿಯನ್ನಾಗಿಸುವಲ್ಲಿ ಕೊಡುಗೆ ನೀಡಬೇಕು. ರಾಜ್ಯ ಸರಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು 2.84 ಲಕ್ಷ ಹುದ್ದೆ ಖಾಲಿಯಿದ್ದು ಎಂಬ ಮಾಹಿತಿ ಅಧಿವೇಶನದಲ್ಲಿ ದೊರೆತಿದ್ದು, ಇದನ್ನು ಭರ್ತಿ ಮಾಡುವಂತೆ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಿದ್ದೇವೆ. ಇದು ಭರ್ತಿಯಾದಾಗ ಯುವಕರಿಗೆ ಉದ್ಯೋಗ ದೊರೆಯಲಿದೆ ಎಂದು ಹೇಳಿದರು.

ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಅಧ್ಯಕ್ಷ ಟಿ.ಎಂ. ಶಹೀದ್ ತೆಕ್ಕಿಲ್ ಮಾತನಾಡಿದರು. ದ.ಕ. ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಜಯರಾಮ ಕೆ.ಇ., ಎನ್‌ಆರ್‌ಎಲ್‌ಎಂನ ಬೆಂಗಳೂರು ಕೇಂದ್ರ ಕಚೇರಿಯ ಉಪ ನಿರ್ದೇಶಕ ಜಗನ್ನಾಥ, ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದ.ಕ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನರ್ವಡೆ ವಿನಾಯಕ ಕರ್ಭಾರಿ ಪ್ರಾಸ್ತಾವಿಸಿದರು. ಪುತ್ತೂರು ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ನವೀನ್ ಭಂಡಾರಿ ಸ್ವಾಗತಿಸಿ, ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಮಹೇಶ್ ಪ್ರಸನ್ನ ವಂದಿಸಿದರು. ವಿವೇಕಾನಂದ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಮುಖ್ಯಸ್ಥೆ ಡಾ. ವಿದ್ಯಾ ಎಸ್. ಕಾರ್ಯಕ್ರಮ ನಿರ್ವಹಿಸಿದರು.

ಹೆಣ್ಣುಮಕ್ಕಳೇ ಅಧಿಕ

132 ಕಂಪೆನಿಗಳು ಆಗಮಿಸಿ ಉದ್ಯೋಗ ಸಂದರ್ಶನ ನಡೆಸಿದವು. 2700 ಹುಡುಗರು ಹಾಗೂ 1300 ಹುಡುಗಿಯರು ಉದ್ಯೋಗ ಮೇಳದ ಆನ್‌ಲೈನ್ ನೋಂದಾವಣೆ ಮಾಡಿಕೊಂಡಿದ್ದು, 2 ಸಾವಿರಕ್ಕೂ ಮಿಕ್ಕಿ ಮಂದಿ ಶನಿವಾರ ಸ್ಥಳದಲ್ಲೇ ನೋಂದಣಿ ಮಾಡಿಕೊಂಡರು. ಮಹಿಳಾ ಉದ್ಯೋಗ ಆಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು, ವಿಶೇಷವಾಗಿತ್ತು. ಎಲ್ಲರಿಗೂ ಊಟ, ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಇಂದಿನ ಪಂದ್ಯ

ಇಂಗ್ಲೆಂಡ್ VS ಶ್ರೀಲಂಕಾ
ಮಧ್ಯಾಹ್ನ 3 (ಪಲ್ಲೆಕೆಲೆ)

ಭಾರತ VS ದ. ಆಫ್ರಿಕಾ
ಸಂಜೆ 7 (ಅಹಮದಾಬಾದ್)

ಭಾರತಕ್ಕಿಂದು ಮೊದಲ ಪಂದ್ಯ | ಅಭಿಷೇಕ್‌ಗೆ ಲಯದ ಚಿಂತೆ | ವಿಶ್ವಾಸದಲ್ಲಿ ದ. ಆಫ್ರಿಕಾ

ಅಜೇಯ ಭಾರತಕ್ಕೆ ಆಫ್ರಿಕಾ ಸವಾಲು

ಅಹಮದಾಬಾದ್: ಶನಿವಾರದಂದು ಆರಂಭಗೊಂಡಿರುವ ಸೂಪರ್-8 ಪಂದ್ಯಗಳಿಗಾಗಿ ಹಾಲಿ ಚಾಂಪಿಯನ್ಸ್, ಈ ಬಾರಿಯ ಫೇವರಿಟ್ಸ್ ಭಾರತೀಯರು ಅಣಿಯಾಗುತ್ತಿದ್ದಾರೆ. ಯುಎಸ್ಎ, ನಮೀಬಿಯಾ, ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿ ಗೆಲುವಿನ ನಾಗಾಲೋಟ ಮುಂದುವರಿಸಿರುವ ಸೂರ್ಯಕುಮಾರ್ ಯಾದವ್ ಪಡೆಗೆ ಹಂತದ ಮೊದಲ ಪಂದ್ಯದಲ್ಲಿ ಹಾಲಿ ರನ್ನರ್-ಅಪ್ ದಕ್ಷಿಣ ಆಫ್ರಿಕಾ ಎದುರಾಗುತ್ತಿದೆ.

ಫೈನಲ್ ಸೋಲಿನ ಹೊರತಾಗ್ಯೂ ಕಳೆದ ಎರಡು ವರ್ಷಗಳಲ್ಲಿ ಭಾರತದೊಂದಿಗೆ ಸೋತ ಸರಣಿಗಳ ಸೇಡು ತೀರಿಸಿಕೊಳ್ಳುವುದಕ್ಕೆ ಚಡಪಡಿಸುತ್ತಿದೆ ದ.ಆಫ್ರಿಕಾ ಪಡೆ. ಇತ್ತ ಸೋಲಿಲ್ಲದ ಸರದಾರನಂತೆ ಬಂದ ತಂಡಗಳನ್ನೆಲ್ಲಾ ಮಟ್ಟಹಾಕಿ ಮುನ್ನುಗ್ಗಿರುವ ಭಾರತ ಆತ್ಮವಿಶ್ವಾಸದೊಂದಿಗೆ ಸಿದ್ಧವಾಗಿದೆ. ಸೂಪರ್-8ರ ಈ ಪಂದ್ಯವು ಸೆಮಿ ಹಾದಿ ತೋರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ.

ಗೆಲುವು ಅನಿವಾರ್ಯ: ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಂಡಿವೆ. ಎಂಟು ತಂಡಗಳು ತೀವ್ರ ಪೈಪೋಟಿಗಾಗಿ ಸಿದ್ಧವಾಗಿವೆ. ಒಂದು ಗುಂಪಿನಲ್ಲಿ 4 ತಂಡಗಳಿವೆ, ಎರಡು ತಂಡಗಳು ಸೆಮಿಗೆ ಮುನ್ನಡೆಯಲಿವೆ. ಅಂದರೆ ಒಂದು ತಂಡಕ್ಕೆ ಮೂರು ಪಂದ್ಯಗಳನ್ನು ಗೆಲ್ಲುವ ಅವಕಾಶವಿದೆ. ಒಂದು ತಂಡ ಎರಡು ಪಂದ್ಯಗಳನ್ನು ಗೆದ್ದು ಮುನ್ನಡೆಯಲಿದೆ. ಇದೇ ವೇಳೆ ಭಾರತ ಇರುವ ಗುಂಪಿನಲ್ಲಿ ವೆಸ್ಟ್ ಇಂಡೀಸ್ ಮತ್ತು ದ.ಆಫ್ರಿಕಾದೊಂದಿಗೆ ಬಲಿಷ್ಠ ಜಿಂಬಾಬ್ವೆ ತಂಡವನ್ನೂ ಭಾರತ ಎದುರಿಸಬೇಕಿದೆ. ಈ ನಿಟ್ಟಿನಲ್ಲಿ ಸೆಮಿಗಾಗಿ ಮೊದಲಿನಿಂದಲೂ ಗೆಲ್ಲುವುದು ಅನಿವಾರ್ಯವಾಗಿದೆ.

ಇಶಾನ್ ಕಿಶನ್ ದೊಡ್ಡ ಪಾತ್ರ ವಹಿಸುತ್ತಿದ್ದಾರೆ. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳಲು ಅವರನ್ನು ಬಿಟ್ಟರೆ ಮುಂದಿನ ಪಂದ್ಯದಲ್ಲಿ ಅವರು ಆಡಿದ್ದೇ ಆಟ!. ಸ್ಫೋಟಕ ಬ್ಯಾಟಿಂಗ್‌ಗೆ ತತ್ತರಿಸಿ ಹೋದ ತಂಡಗಳು ಸೋಲೇ ಕಂಡಿವೆ. ಮೂರನೇ ಕ್ರಮಾಂಕದಲ್ಲಿ ಬರುವ ತಿಲಕ್ ವರ್ಮಾ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಸ್ಟ್ರೈಕ್‌ರೇಟ್‌ನಲ್ಲಿ ಹಿಂದುಳಿದಿದ್ದಾರೆ. ಸೂರ್ಯ ಕೂಡ ಅನುಭವಿಸುತ್ತಿದ್ದದ್ದು ಅದೇ. ಸೆಟ್ ಆದರೆ ದೊಡ್ಡ ದೊಡ್ಡ ತಂಡಗಳನ್ನು ದಂಡಿಸಬಹುದಾದ ಆಟಗಾರರಾದರೂ ಸ್ಟ್ರೈಕ್‌ರೇಟ್ ಸಮಸ್ಯೆ ಎದುರಿಸುತ್ತಿದ್ದಾರೆ ಮಧ್ಯಮ ಕ್ರಮಾಂಕಿತ ಈ ಇಬ್ಬರು ಬ್ಯಾಟಿಗರು. ತಂಡಕ್ಕೆ ಆನೆ ಬಲ ತಂದಿರುವ ಶಿವಂ ದುಬೆ ತಮ್ಮ ಸ್ಥಾನದಲ್ಲಿ ನೀಡಬೇಕಾದ ಎಲ್ಲಾ ಕೊಡುಗೆಗಳನ್ನು ನೀಡಿದ್ದಾರೆ. ಒಮ್ಮೆ ಬೌಲರ್ ಆಗಿ, ಒಮ್ಮೆ ಫೀಲ್ಡರ್ ಆಗಿ, ಬ್ಯಾಟಿಂಗ್‌ನಲ್ಲೂ ಎರಡು ತರಹದ ಬ್ಯಾಟಿಂಗ್. ಒಂದು ಕಡೆ ಫಿನಿಶರ್, ಒಂದು ಕಡೆಯ ಜವಾಬ್ದಾರಿಯಿಂದ ಆಡಿ ಆಸರೆಯಾಗುತ್ತಿದ್ದಾರೆ. ಮುಂದೆ ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್... ಭಾರತೀಯರ ಸರಹದ್ದೇ ಮುಗಿಯಲ್ಲ. 8 ವಿಕೆಟ್ ಬಿದ್ದರೂ ಬ್ಯಾಟಿಂಗ್ ಬಲವೇ ಕುಗ್ಗಲ್ಲ. ಬೌಲಿಂಗ್ ವಿಚಾರದಲ್ಲೂ ಅದೇ. ಬೂಮ್ರಾ ಲಯಕ್ಕೆ ಮರಳಿದ್ದಾರೆ. ಹಾರ್ದಿಕ್ ಪಾಂಡ್ಯ ತಮ್ಮ ಆಕ್ರಮಣಕಾರಿ ಬೌಲಿಂಗ್‌ನೊಂದಿಗೆ ಭರವಸೆಯನ್ನಿಟ್ಟಿದ್ದಾರೆ. ಇನ್ನು ಲಯದಲ್ಲಿರುವ ವರುಣ್ ಚಕ್ರವರ್ತಿ ಮ್ಯಾಜಿಕ್ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್ ಕೂಡ ಇದ್ದಾರಲ್ಲ. ಅವರ ಬೌಲಿಂಗ್ ಕೂಡ ವಿಶ್ವಾಸ ಹೆಚ್ಚಿಸಿದೆ.

ದ.ಆಫ್ರಿಕಾಗೆ ಸೇಡಿನ ತವಕ: ಕೈಗೆ ಬಂದ ತುತ್ತು ಬಾಯಿಗೆ ಸಿಗಲೇ ಇಲ್ಲ ಎಂಬಂತೆ ಕಳೆದ ಬಾರಿ ವಿಶ್ವಕಪ್ ಫೈನಲ್‌ನಲ್ಲಿ ದ.ಆಫ್ರಿಕಾ ಬಾಯಿಯಿಂದ ಟ್ರೋಫಿ ಕಸಿದುಕೊಂಡಿತ್ತು ಭಾರತ. ಅಂತಿಮ ಕ್ಷಣದಲ್ಲಿ ಅಂದರೆ ಇನ್ನೇನು ಪಂದ್ಯವನ್ನು ಗೆದ್ದುಬಿಟ್ಟೇವು ಅನ್ನುವಷ್ಟರಲ್ಲಿ ಪಂದ್ಯ ಹೊಳ್ಳಿಸಿ ಗೆದ್ದು ನೀಡಬಾರದ ಆಘಾತ ಭಾರತ ನೀಡಿತ್ತು. ಇದಕ್ಕಾಗಿ ಪ್ರತಿರೋಧಿಸುವ ಹೆಜ್ಜೆಯಲ್ಲಿ ಆಫ್ರಿಕಾ ಅದೇ ವರ್ಷ ಭಾರತದೊಂದಿಗೆ ಸರಣಿಯಾಡಿತ್ತು, ಟಿ20ಯಲ್ಲೇ. ಅಲ್ಲಿಂದ ಶುರುವಾಯಿತು. ಅಭಿಷೇಕ್ ಶರ್ಮ ಅಬ್ಬರ. ಅವರ ಆಟಕ್ಕೆ ಆ ಸರಣಿಯನ್ನು ಭಾರತ ಗೆದ್ದು ಬೀಗಿತ್ತು. ಇದೆಲ್ಲವೂ ಪರಿಗಣನೆಗೆ ತೆಗೆದುಕೊಂಡಿರುವ ದ.ಆಫ್ರಿಕಾ ಭಾರತದೊಂದಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿದೆ, ಉತ್ಸಾಹದಲ್ಲಿದೆ.



ಪಿಚ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ಬ್ಯಾಟಿಗರಿಗೆ ಲಾಭ ತರುವ ಕ್ರೀಡಾಂಗಣವೆಂದು ಹೇಳಲಾಗುತ್ತದೆ. ಹೆಚ್ಚಿನ ಬೌನ್ಸ್ ಇದೆ. ಸ್ವಿಂಗ್ ಸಿಕ್ಕರೂ ತಿಳಿದುಕೊಂಡು ಬ್ಯಾಟಿಂಗ್ ಮಾಡಬಹುದು. ಆದರೆ ಸ್ಪಿನ್ನರ್‌ಗಳಿಗೆ ಅಕ್ಷರಶಃ ಬೆಂಬಲ ನೀಡುತ್ತದೆ ಅಹಮದಾಬಾದ್. ಬ್ಯಾಟಿಂಗ್ ಮಾಡಬಹುದಾದ ಭರವಸೆಯೊಂದಿಗೆ ಇಬ್ಬನಿ ಕೂಡ ಪಾತ್ರ ವಹಿಸಲಿದೆ, ಹೀಗಾಗಿ ಬೌಲಿಂಗ್ ಆಯ್ಕೆಯೇ ಬೆಸ್ಟ್ ಅನ್ನುತ್ತಾರೆ ಎಕ್ಸಪರ್ಟ್ಸ್.

ತಂಡಗಳು

ಭಾರತ: ಇಶಾನ್ ಕಿಶನ್, ಅಭಿಷೇಕ್ ಶರ್ಮ, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅರ್ಷದೀಪ್. ವಾಷಿಂಗ್ಟನ್ ಸುಂದರ್.

ದ.ಆಫ್ರಿಕಾ: ಏಡೆನ್ ಮಾರ್ಕ್ರಾಮ್ (ನಾಯಕ), ಕ್ವಿಂಟನ್ ಡಿ ಕಾಕ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್, ಮಾರ್ಕೊ ಜಾನ್ಸೆನ್, ಕೇಶವ ಮಹಾರಾಜ್, ಕಗಿಸೊ ರಬಾಡ, ಕ್ವೆನಾ ಮಫಕಾ, ಲುಂಗಿ ಎನ್ಗಿಡಿ, ಜೇಸನ್ ಸ್ಮಿತ್, ಜಾರ್ಜ್ ಲಿಂಡೆ, ಕಾರ್ಬಿನ್ ಬಾಷ್, ಆನ್ರಿಚ್ ನೋಕಿಯೆ, ಟ್ರಿಸ್ಟಾನ್ ಸ್ಟಬ್ಸ್, ರ್‍ಯಾನ್ ರಿಕೆಲ್ಟನ್

ಇಂಗ್ಲೆಂಡ್-ಶ್ರೀಲಂಕಾ ಪಂದ್ಯ

ಭಾರತ ಮತ್ತು ದ.ಆಫ್ರಿಕಾ ತಂಡಗಳು ಕದನಕ್ಕೆ ಪ್ರವೇಶಿಸುವ ಮುನ್ನವೇ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡವನ್ನು ಮುಖಾಮುಖಿಯಾಗಲಿವೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಉಭಯ ತಂಡಗಳು ಉತ್ತಮ ಪ್ರದರ್ಶನ ನೀಡಿವೆ. ಭರವಸೆಯಲ್ಲಿವೆ. ಪಲ್ಲೆಕೆಲೆ ಕ್ರೀಡಾಂಗಣ ಈ ಪಂದ್ಯಕ್ಕೆ ಆತಿಥ್ಯ ನೀಡಲಿದೆ.

ಕಿರುಸುದ್ದಿ

ತಿಲಕ್ ನಮಗೆ ಬೇಕಾದಂತೆ ಆಡುತ್ತಿದ್ದಾರೆ: ಸೂರ್ಯ

ಅಹಮದಾಬಾದ್: ತಿಲಕ್ ವರ್ಮಾ ಅವರಿಗೆ ನಿಧಾನವಾಗಿ ಬ್ಯಾಟಿಂಗ್ ಮಾಡಲು ಹೇಳಿದ್ದೇ ನಾವು. ಮ್ಯಾನೇಜ್ಮೆಂಟ್ ಅವರಿಗೆ ಹೇಳಿದ ರೀತಿಯಲ್ಲಿ ಆಡುತ್ತಿದ್ದಾರೆ ಎಂದು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಿಳಿಸಿದರು.

ದ.ಆಫ್ರಿಕಾ ವಿರುದ್ಧದ ಸೂಪರ್-8ರ ಪಂದ್ಯಕ್ಕೂ ಮುನ್ನ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಪಿಚ್‌ಗಳು ಸ್ಥಿತಿಗಳು ಬೇರೆಯಾಗಿವೆ. ದೊಡ್ಡ ದೊಡ್ಡ ಸ್ಕೋರ್‌ಗಳು ಪೇರಿಸುವು ಅಷ್ಟೊಂದು ಸುಲಭವಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ತಿಲಕ್ ವರ್ಮಾ ಅವರಿಗೆ ನಾವೇ ಹಾಗೆ ಆಡಲು ಹೇಳಿದ್ದೇವೆ. ಪವರ್‌ಪ್ಲೇನಲ್ಲೇ ಅವರಿಗೆ ಬ್ಯಾಟಿಂಗ್ ಸಿಕ್ಕರೆ ಅವರು ತಮಗೆ ಬೇಕಾದಂತೆ ಆಡಲಿ.



ಆದರೆ ಎರಡು ವಿಕೆಟ್‌ಗಳು ಬೇಗನೇ ಬಿದ್ದರೆ ವಿಕೆಟ್ ಉಳಿಸಿಕೊಂಡು ಜೊತೆಯಾಟ ನಿರ್ಮಿಸುವ ಕೆಲಸ ಅವರಿಗೆ ನೀಡಲಾಗಿದೆ. ಅದರ ಪ್ರಕಾರವೇ ಅವರು ಆಡುತ್ತಿದ್ದಾರೆ ಎಂದರು. ಅಭಿಷೇಕ್ ಶರ್ಮ ಅವರ ಲಯದ ಬಗ್ಗೆ ಮಾತನಾಡುತ್ತಾ, ಅಭಿ ನಮ್ಮ ತಂಡಕ್ಕಾಗಿ ಏನು ಮಾಡಿದ್ದಾರೆ ಎಂಬುದು ಹೇಳಿ ತಿಳಿಸಬೇಕಾಗಿಲ್ಲ. ಒಂದೆರಡು ಪಂದ್ಯದಲ್ಲಿ ಲಯದಲ್ಲಿ ಕಾಣಿಸಿಕೊಳ್ಳದೆ ಹೋದರೆ ಅವರ ಅವಕಾಶ ಕಸಿದಕೊಳ್ಳಬೇಕಾಗಿಲ್ಲ. ಅವರ ಆಟದ ಮೇಲೆ ನಮಗೆ ಭರವಸೆಯಿದೆ ಎಂದರು. ಸಂಜುಗೆ ಅವಕಾಶ ಸಿಗಲಿದೆಯೇ ಎಂಬ ಪ್ರಶ್ನೆಗೆ, ಯಾರ ಬದಲಿಗೆ? ತಿಲಕ್ ಅವರ ಬದಲಿಗೆ ಆಡಿಸಲಾಗುವುದೇ ಎಂದು ನಕ್ಕ ಅವರು, ಅವಕಾಶ ನೀಡಲಾಗಲ್ಲ ಎಂಬ ವಿಷಯ ತಿಳಿಸಿದರು.

ಹಾಕಿ: ಭಾರತಕ್ಕೆ ಮತ್ತೊಂದು ಸೋಲು

ಹೊಸದಿಲ್ಲಿ: ಎಫ್‌ಐಎಚ್ ಪ್ರೋ ಲೀಗ್ ಪಂದ್ಯಾವಳಿಯಲ್ಲಿ ಭಾರತದ ನೀರಸ ಪ್ರದರ್ಶನ ಸ್ಪೇನ್ ಪಂದ್ಯದ ವರೆಗೂ ವಿಸ್ತಾರಗೊಂಡಿದ್ದು, 0-2ದಿಂದ ಸೋಲು ಕಂಡಿದೆ. ಮೊದಲ ಲೆಗ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತ ಹೊಸ ವರ್ಷ ಹೊಸ ಪ್ರದರ್ಶನದೊಂದಿಗೆ ಮುನ್ನಡೆ ಸಾಧಿಸುವ ಪ್ರಯತ್ನದಲ್ಲಿತ್ತು. ಆದರೆ ಸತತ ಮೂರನೇ ಪಂದ್ಯದಲ್ಲೂ ತೀರಾ ಹಿನ್ನಡೆ ಅನುಭವಿಸಿದೆ. ಶನಿವಾರದ ಪಂದ್ಯದಲ್ಲಿ ಮೊದಲಿನಿಂದಲೂ ಸಿಕ್ಕ ಅವಕಾಶ ಬಳಸಿಕೊಳ್ಳದೆ, ಹೆಣಗಾಡಿದ ಹರ್ಮನ್‌ಪ್ರೀತ್ ಪಡೆ ಎರಡು ಬಾರಿ ಗೋಲನ್ನು ಬಿಟ್ಟುಕೊಟ್ಟಿತು. ಗೋಲುಪೆಟ್ಟಿಗೆಗೆ ಚೆಂಡನ್ನು ನೂಕಿದ ಸ್ಪೇನ್ ಮುಂದಿನ ಪಂದ್ಯದಲ್ಲಿ ರಕ್ಷಣಾತ್ಮಕ ಆಟದೊಂದಿಗೆ ಮಿಂಚಿತು. ಸ್ಪೇನ್ ಪರ ಸ್ಟ್ರೈಕರ್ ಇಗ್ನಾಶಿಯೋ ಅಬಾಜೊ ಮತ್ತು ಇಗ್ನಾಶಿಯೋ ಕೊಬೊಸ್ ತಲಾ ಒಂದು ಗೋಲು ಗಳಿಸಿದರು. ಮೊದಲ ಕ್ವಾರ್ಟರ್‌ನಲ್ಲಿ ಮೊದಲ ಗೋಲು ಮೂಡಿ ಬಂದರೆ ಮೂರನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಗೋಲು ಮೂಡಿ ಬಂತು. ಮಧ್ಯದಲ್ಲಿ ಹತ್ತಾರು ಅವಕಾಶ ಪಡೆದರೂ ಕೈಚೆಲ್ಲಿತು ಭಾರತ.

ಫುಟ್‌ಬಾಲ್: ಬಂಗಾಳಕ್ಕೆ ಗೆಲುವು

ಕೊಲ್ಕತ್ತಾ: ಇಲ್ಲಿ ನಡೆಯುತ್ತಿರುವ ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಈಸ್ಟ್ ಬಂಗಾಳ ಎಫ್‌ಸಿ ತಂಡವು ಸ್ಪೋರ್ಟಿಂಗ್ ಕ್ಲಬ್ ದಿಲ್ಲಿ ವಿರುದ್ಧ ವಿರುದ್ಧ 4-1 ಅಂಕಗಳ ಭರ್ಜರಿ ಗೆಲುವು ಸಾಧಿಸಿ. ಸಾಲ್ಟ್ ಲೇಕ್ ಸ್ಟೇಡಿಯಂನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಯೂಸಫ್ ಎಜ್ಜೆಜ್ಜಾರಿ ಎರಡು ಗೋಲು ಹೊಡೆದು ಗೆಲುವಿನ ಹೀರೋ ಎನಿಸಿದರು.ಪಂದ್ಯದ ನಾಲ್ಕನೇ ನಿಮಿಷದಲ್ಲೇ ಆಗಸ್ಟಿನ್ ಲೋಲ್ರೋಚನಾ ಆತಿಥಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಮೂರು ನಿಮಿಷಗಳಲ್ಲೇ ಎಡ್ಮಂಡ್ ಲಾಲ್ರಿಂದಿಕಾ ಸಮಬಲ ಸಾಧಿಸಿ ಈಸ್ಟ್ ಬೆಂಗಾಲ್‌ಗೆ ಆತ್ಮವಿಶ್ವಾಸ ತುಂಬಿದರು. 12ನೇ ನಿಮಿಷದಲ್ಲಿ ಸ್ಪೇನ್ ಆಟಗಾರ ಯೂಸೂಫ್ ಪೆನಾಲ್ಟಿ ಮೂಲಕ ತಂಡಕ್ಕೆ ಮುನ್ನಡೆ ತಂದರು. ಮೊದಲಾರ್ಧ ಅಂತ್ಯಕ್ಕೆ ಐದು ನಿಮಿಷ ಬಾಕಿ ಇರುವಾಗ ಮತ್ತೊಮ್ಮೆ ಗೋಲು ದಾಖಲಿಸಿ 3-1 ಮುನ್ನಡೆ ಸಾಧಿಸಿದರು. ಈ ಜಯದೊಂದಿಗೆ ಈಸ್ಟ್ ಬೆಂಗಾಲ್ ಎರಡು ಪಂದ್ಯಗಳಲ್ಲಿ ಎರಡು ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

3ನೇ ಪಂದ್ಯ: ಭಾರತಕ್ಕೆ ಜಯ | ಮಂಧಾನ ಆಟಕ್ಕೆ ಬೆಚ್ಚಿದ ಆಸೀಸ್

10 ವರ್ಷ ಬಳಿಕ ಸರಣಿ ವಶ

ಅಡಿಲೇಡ್(ಆಸ್ಟ್ರೇಲಿಯಾ): ಮಹಿಳೆಯರ ಕ್ರಿಕೆಟ್ ಇತಿಹಾಸವೇ ನೆನಪಿಡುವಂತಹ ಪಂದ್ಯದಲ್ಲಿ ಭಾರತ ತಂಡದ ಉಪನಾಯಕಿ ಸ್ಮೃತಿ ಮಂಧಾನ ತಮ್ಮ ತಂಡವನ್ನು ಆಸ್ಟ್ರೇಲಿಯಾ ಮಣ್ಣಲ್ಲಿ ಗೆಲ್ಲಿಸಿದರು.

ಪುರುಷರ ವಿಶ್ವಕಪ್ ಮಧ್ಯೆ ಭಾರತ ಹಾಗೂ ಆಸ್ಟ್ರೇಲಿಯಾ ತಂಡದ ಮಹಿಳಯರು ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಮುಖಾಮುಖಿಯಾಗಿದ್ದರು. ಈ ಮೂರು ಪಂದ್ಯಗಳ ಪೈಕಿ ಮೊದಲನೇಯದ್ದನ್ನು ಭಾರತ ಗೆದ್ದರೆ ಎರಡನೇ ಪಂದ್ಯವನ್ನು ಆಸ್ಟ್ರೇಲಿಯಾ ತಂಡ ಗೆದ್ದು ಸರಣಿಯನ್ನು ಕುತೂಹಲಕಾರಿ ನಿರ್ಣಾಯಕ ಹಂತಕ್ಕೆ ಕೊಂಡೊಯ್ದಿದ್ದರು. ಶನಿವಾರ ನಡೆದ ಪಂದ್ಯದಲ್ಲಿ ಭಾರತ 17 ರನ್‌ನಿಂದ ಗೆದ್ದು ಬೀಗಿತು. ಇದರೊಂದಿಗೆ 10 ವರ್ಷ ಬಳಿಕ ಆಸ್ಟ್ರೇಲಿಯಾ ಮಣ್ಣಲ್ಲಿ ಸರಣಿ ಗೆದ್ದು ಮೆರೆದಾಡಿತು.

ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತ್ತು. ದೊಡ್ಡ ಸವಾಲೊಂದನ್ನು ಬೆನ್ನತ್ತಿದ ಆಸ್ಟ್ರೇಲಿಯಾ 9 ವಿಕೆಟ್ ಕಳೆದುಕೊಂಡು 159 ರನ್‌ಗಳಿಸಿ ಸೋಲೊಪ್ಪಿಕೊಂಡಿತು. ಸರಣಿ ಬಿಟ್ಟುಕೊಟ್ಟಿತು.

ಮಂಧಾನ ಭಾರತ ಪರ ಭರ್ಜರಿ ಬ್ಯಾಟಿಂಗ್ ಮಾಡಿ ಮಿಂಚಿದರು. ಪಂದ್ಯದ ರೂವಾರಿ ಎನಿಸಿಕೊಂಡರು. ಆಸ್ಟ್ರೇಲಿಯಾದಲ್ಲಿ ಭಾರತ ಆಟಗಾರ್ತಿಯರು ಮಾಡದ ದಾಖಲೆಯೊಂದನ್ನು ಮಾಡಿ ಸಂಭ್ರಮಪಟ್ಟರು. ಇದಕ್ಕಾಗಿ ಪಂದ್ಯ ಶ್ರೇಷ್ಠ ಪ್ರಶಸ್ತಿ ದೊರೆಯಿತು. ಶ್ರೇಯಾಂಕಾ ಪಾಟೀಲ್ 3 ವಿಕೆಟ್ ಪಡೆದು ಗೆಲುವಿನಲ್ಲಿ ಮಿಂಚಿದರು.

ಮಂಧಾನ ಮಿಂಚಿನಾಟ: ಬ್ಯಾಟಿಂಗ್‌ಗಿಳಿದ ಭಾರತಕ್ಕೆ ಭರ್ಜರಿ ಆರಂಭ ಸಿಕ್ಕಿತು. ಅಸಾಮಾನ್ಯ ಬ್ಯಾಟಿಂಗ್ ಮಾಡಿದ ಮಂಧಾನ ಆಸ್ಟ್ರೇಲಿಯಾ ಬೌಲರ್‌ಗಳ ಕಿವಿ ಹಿಂಡಿದರು. ಆದರೆ ಮತ್ತೊಂದು ಬದಿಯಲ್ಲಿ ಶಫಾಲಿ 7 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಜಮೀಮಾ ರಾಡ್ರಿಗ್ಸ್ ಮಂಧಾನ ಆಟಕ್ಕೆ ತಕ್ಕ ಸಾಥ್ ನೀಡುವ ಜವಾಬ್ದಾರಿ ಮೈಗೆತ್ತಿಕೊಂಡರು. ಸೆಟ್ ಆಗುವ ಔಪಚಾರಿಕತೆ ಪೂರೈಸಿಕೊಂಡ ಮಂಧಾನ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. 8 ಬೌಂಡರಿ, 3 ಸಿಕ್ಸರ್ ಬಾರಿಸಿದರು ಮಂಧಾನ. ಅವರ ಬ್ಯಾಟಿಂಗ್ ಜತೆಗೆ ಆಸ್ಟ್ರೇಲಿಯಾಗೆ ರಾಡ್ರಿಗ್ಸ್ ಆಟ ತಡೆಯುವುದೂ ತೀರಾ ಕಷ್ಟ ಅನ್ನಿಸಿತು. ನಿಧಾನವಾಗಿ ಬ್ಯಾಟಿಂಗ್ ಮಾಡಿದ ಅವರು, ಮಂಧಾನಗೆ ಬೌಂಡರಿ ಬಾರಿಸುವ ಜವಾಬ್ದಾರಿ ಇಟ್ಟು ತಾವು ಸಿಂಗಲ್‌ಗಳ ಪ್ರವಾಹ ಹರಿಸಿದರು. ಇತ್ತ ಮಂಧಾನ 55 ಬಾಲ್‌ಗಳಲ್ಲಿ 82 ರನ್‌ಗಳಿಸಿ ಅರ್ಹಶತಕ ತಪ್ಪಿಸಿಕೊಂಡರು. ರಾಡ್ರಿಗ್ಸ್ 59 ರನ್‌ಗೆ ಆಟ ನಿಲ್ಲಿಸಿದರು.

ಗುರಿ ಬೆನ್ನತ್ತಿದ ಆಸೀಸ್ ನಲುಗಿತು. ಯಾರೊಬ್ಬರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸುವ ಬ್ಯಾಟಿಂಗ್ ಮಾಡಲಿಲ್ಲ. ಆದಾಗ್ಯೂ ಆಸ್ಟ್ರೇಲಿಯಾದ ಹೋಪ್ ಉಳಿಸಿದ ಗಾರ್ಡನರ್ ಮಧ್ಯಮ ಕ್ರಮಾಂಕದಲ್ಲಿ 57 ರನ್‌ಗಳನ್ನು ಬಾರಿಸಿದರು. ಭಾರತ ಪರ ಶ್ರೀ ಚಾರಣಿ, ಶ್ರೇಯಾಂಕಾ ಪಾಟೀಲ್ ಮೂರು ವಿಕೆಟ್ ಪಡೆದರೆ, ರೆಡ್ಡಿ 2, ಠಾಕೂರ್ ಒಂದು ವಿಕೆಟ್ ಪಡೆದರು.



ಭಾರತ ದಾಖಲೆ

ಈ ಸರಣಿ ಗೆಲುವಿನೊಂದಿಗೆ ಭಾರತ ಎರಡನೇ ಬಾರಿಗೆ ಆಸ್ಟ್ರೇಲಿಯಾ ತಂಡವನ್ನು ಆಸ್ಟ್ರೇಲಿಯಾ ಮಣ್ಣಲ್ಲೇ ಸೋಲಿಸಿದರು. ಈ ಹಿಂದೆ 2016ರಲ್ಲಿ ಭಾರತ ಈ ಸಾಧನೆ ಮಾಡಿತ್ತು. 10 ವರ್ಷ ಬಳಿಕ ಮತ್ತೊಮ್ಮೆ ಇತಿಹಾಸವಾಯಿತು.

ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 176/6: ಮಂಧಾನ 82, ರಾಡ್ರಿಗ್ಸ್ 59; ಅನಾಬೆಲ್ 34/2
ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 159/9: ಗಾರ್ಡನರ್ 57; ಶ್ರೇಯಾಂಕಾ 22/3, ಚಾರಣಿ 32/3

ಮಳೆಯಲ್ಲಿ ಮುಳುಗಿದ ಪಾಕ್-ಕಿವೀಸ್ ಪಂದ್ಯ

ಕೊಲಂಬೋ: ಶ್ರೀಲಂಕಾದಲ್ಲಿ ನಡೆಯುಬೇಕಿದ್ದ ನ್ಯೂಜಿಲೆಂಡ್ ಹಾಗೂ ಪಾಕಿಸ್ತಾನ ನಡುವಿನ ಸೂಪರ್-8ರ ಮೊದಲ ಪಂದ್ಯ ನಡೆಸದಲು ಮಳೆ ಅಪ್ಪಣೆ ನೀಡಲಿಲ್ಲ. ಈ ಬಾರಿಯ ವಿಶ್ವಕಪ್ ಪಂದ್ಯಾವಳಿಯಲ್ಲಿ ಎರಡನೇ ಬಾರಿಗೆ ಪಂದ್ಯವೊಂದು ರದ್ದಾಯಿತು.

ಲೀಗ್ ಹಂತದ ಪಂದ್ಯಗಳ ಮುಕ್ತಾಯಗೊಂಡ ನಂತರ ಸೂಪರ್-8ರ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಬೇಕಿದ್ದವು. ಆದರೆ ಶ್ರೀಲಂಕಾದ ಕೊಲಂಬೋದಲ್ಲಿ ಬೆಳಗ್ಗೆಯಿಂದಲೇ ಅಲ್ಪ ಮಳೆ, ಮಳೆಯ ವಾತಾವರಣ ಕಾಣಿಸಿಕೊಂಡಿತ್ತು. ಸಂಜೆಯಾದ ತಕ್ಷಣ ಮಳೆ ಬರುವ ಸಂಭವ ಹೆಚ್ಚಿಸಿತು. ಅಷ್ಟೊತ್ತಿಗಾಗಲೇ ಪಂದ್ಯವನ್ನು ನೋಡಲಿಕೆ ಬಂದ ಸಹಸ್ರಾರು ಅಭಿಮಾನಿಗಳು ತಮ್ಮ ಚೇರ್‌ಗಳಲ್ಲಿ ಕೂತಿದ್ದರು. ಟಾಸ್ ಮಾಡಲಾಯಿತು. ಜನರು ಖುಷಿಯಾದರು. ಇನ್ನೇನು ಪಂದ್ಯ ಆರಂಭವಾಯಿತು ಎನ್ನುವಷ್ಟರಲ್ಲಿ ಮಳೆಯ ಆಟ ಶುರುವಾಯಿತು. ಮಳೆಯ ರಬಸಕ್ಕೆ ಪಂದ್ಯವೇ ತತ್ತರಿಸಿ ಹೋಯಿತು.

ಮೊದಲಿಗೆ ಪಂದ್ಯದ ಓವರ್ ಕಡಿತ ಆರಂಭಕ್ಕೆ 8:15 ಸಮಯ ಕೊಟ್ಟು ಪಂದ್ಯಕ್ಕಾಗಿ ಕಾಯಲಾಯಿತು. ಕನಿಷ್ಠ 5 ಓವರ್ ಪಂದ್ಯಕ್ಕಾಗಿ ರಾತ್ರಿ 10:16ಕ್ಕೆ ಕೊನೆ ಸಮಯ ನೀಡಲಾಗಿತ್ತು. ಆದರೆ ಬಿಟ್ಟೂಬಿಡದ ಮಳೆ ಪಂದ್ಯವನ್ನು ತೊಯ್ಸಿತು. ತಂಡಗಳನ್ನು ಒತ್ತಡಕ್ಕೆ ದೂಗಿತು. ಅಭಿಮಾನಿಗಳಿಗೆ ನಿರಾಸೆ ಮೂಡಿಸಿತು.

ಇಬ್ಬರಿಗೂ ಒಂದು ಅಂಕ: ಸೂಪರ್-8ರ ಮೊದಲ ಪಂದ್ಯವೇ ರದ್ದಾಗಿದೆ. ಈ ಬೆನ್ನಲ್ಲೇ ನ್ಯೂಜಿಲೆಂಡ್ ಮತ್ತು ಪಾಕ್ ತಂಡಗಳಿಗೆ ತಲಾ ಒಂದು ಅಂಕ ನೀಡಲಾಯಿತು. ಎರಡನೇ ಗುಂಪಿನಲ್ಲಿ ಉಭಯ ತಂಡಗಳು ಒಂದು ಪಂದ್ಯ ಗೆಲ್ಲುವ ಅವಕಾಶ ಕಳೆದುಕೊಂಡಿವೆ. ಆದರೆ ಒಂದು ಹಂತದಲ್ಲಿ ಮುನ್ನಡೆಯನ್ನೂ ಸಾಧಿಸಿವೆ.



ಕತಾರ್ ಓಪನ್: ಫೈನಲ್‌ಗೆ ಅಲ್ಕರಾಜ್

ದೋಹಾ: ವಿಶ್ವ ನಂ.1 ಟೆನಿಸ್ ಆಟಗಾರ ಆಸ್ಟ್ರೇಲಿಯಾ ಓಪನ್ ವಿಜೇತ ಕಾರ್ಲೋಸ್ ಅಲ್ಕರಾಜ್ ತನ್ನ ಅಜೇಯ ಸರಣಿಯನ್ನು ಮುಂದುವರಿಸಿ, ಹಾಲಿ ಚಾಂಪಿಯನ್ ಆಂಡ್ರೆ ರುಬ್ಲೆವ್ ವಿರುದ್ಧ 7-6(3), 6-4 ಅಂಕಗಳ ಗೆಲುವು ಸಾಧಿಸಿ ಕತಾರ್ ಓಪನ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಕಳೆದ 13 ಟೂರ್ನಿಗಳಲ್ಲಿ ಇದು ಅವರ 12ನೇ ಫೈನಲ್ ಪ್ರವೇಶವಾಗಿದೆ.

ಮೊದಲ ಸೆಟ್‌ನಲ್ಲಿ ರುಬ್ಲೆವ್ 14 ಅನಾಯಾಸ ಬ್ಯಾಕ್‌ಹ್ಯಾಂಡ್ ದೋಷಗಳನ್ನು ಮಾಡಿದ್ದರೂ, ನಿಖರ ಫೋರ್‌ಹ್ಯಾಂಡ್ ಹೊಡೆತಗಳಿಂದ ಸೆಟ್‌ನ್ನು ಟೈಬ್ರೇಕ್‌ಗೆ ಕೊಂಡೊಯ್ದರು. ಆದರೆ ಟೈಬ್ರೇಕ್‌ನಲ್ಲಿ ಅಲ್ಕರಾಜ್ 6-3 ಮುನ್ನಡೆ ಸಾಧಿಸಿ ಶಾಂತ ಮನಸ್ಸಿನಿಂದ ಸೆಟ್ ಕಬಳಿಸಿದರು. ನಿರಾಶರಾದ ರುಬ್ಲೆವ್ ಕೋಪದಲ್ಲಿ ರಾಕೆಟ್ ನೆಲಕ್ಕೆ ಬಡಿದು ಸ್ಟ್ರಿಂಗ್ ಮುರಿದ ಘಟನೆ ಗಮನಸೆಳೆದಿತು. ಎರಡನೇ ಸೆಟ್‌ನಲ್ಲಿ ಅಲ್ಕರಾಜ್ 5-3 ಮುನ್ನಡೆ ಪಡೆದು ಪಂದ್ಯ ಸರ್ವ್ ಮಾಡಲು ಬಂದಾಗ, ವಿಶ್ವ ನಂ.14 ರುಬ್ಲೆವ್ ಮೂರು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿ ಬ್ರೇಕ್ ಹಿಂದಕ್ಕೆ ಪಡೆದರು. ಆದರೂ ಮುಂದಿನ ಗೇಮ್‌ನಲ್ಲಿ ಮತ್ತೆ ಬ್ರೇಕ್ ಸಾಧಿಸಿದ ಅಲ್ಕರಾಜ್, ಒಟ್ಟು ಆರನೇ ಮ್ಯಾಚ್ ಪಾಯಿಂಟ್‌ನಲ್ಲಿ ರುಬ್ಲೆವ್ ಬ್ಯಾಕ್‌ಹ್ಯಾಂಡ್ ಔಟ್ ಆಗುತ್ತಿದ್ದಂತೆ ಜಯವನ್ನು ಖಚಿತಪಡಿಸಿದರು. 22 ವರ್ಷದ ಅಲ್ಕರಾಜ್ ಈ ಸೀಸನ್‌ನಲ್ಲಿ 11ನೇ ನಿರಂತರ ಜಯ ದಾಖಲಿಸಿದ್ದಾರೆ. ಇತ್ತೀಚಿನ ನಾಲ್ಕು ಗ್ರ್ಯಾಂಡ್ ಸ್ಲ್ಯಾಮ್‌ಗಳಲ್ಲಿ ಫೈನಲ್ ಪ್ರವೇಶಿಸಿ ಮೂರನ್ನು ಗೆದ್ದಿರುವ ಅವರು, ಪ್ರತಿ ಪಂದ್ಯಕ್ಕೂ ನಾನು ಸಿದ್ಧವಾಗಿ ಇಳಿಯುತ್ತೇನೆ. ನನ್ನ ಆಟದ ಮೇಲಿನ ಗಮನ ಮತ್ತು ಪರಿಶ್ರಮ ಫಲ ನೀಡುತ್ತಿದೆ, ಎಂದು ಹೇಳಿದ್ದಾರೆ.

ಏಷ್ಯಾಕಪ್ ಫೈನಲ್‌ನಲ್ಲಿಂದು ಭಾರತ-ಬಾಂಗ್ಲಾ

ಬ್ಯಾಂಕಾಕ್: ಪುರುಷರ ವಿಶ್ವಕಪ್ ವಿಚಾರಕ್ಕೆ ಸಂಬಂಧಿಸಿದಂತೆ ಭಾರತ ಹಾಗೂ ಬಾಂಗ್ಲಾ ನಡುವೆ ಉದ್ವೇಗ ಸೃಷ್ಟಿಯಾಗಿರುವ ಬೆನ್ನಲ್ಲೇ ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಮಹಿಳೆಯರ ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಶ್ರೀಲಂಕಾದೊಂದಿಗಿನ ಪಂದ್ಯದಲ್ಲಿ ಆಲ್‌ರೌಂಡ್ ಆಟ ಪ್ರದರ್ಶಿಸಿರುವ ಭಾರತ ಸೆಮಿನಲ್ಲಿ ಭರ್ಜರಿ ಗೆಲುವು ಸಾಧಿಸಿದೆ. ಇದರೊಂದಿಗೆ ಫೈನಲ್‌ಗಾಗಿ ಕಾಯುತ್ತಿದ್ದ ಬಾಂಗ್ಲಾದೊಂದಿಗಿನ ಪಂದ್ಯಕ್ಕೆ ಅಣಿಯಾಗಿದೆ. ಒಂದು ಕಡೆ ಭಾರತ ಹಾಗೂ ಬಾಂಗ್ಲಾ ಕ್ರಿಕೆಟ್ ಸಂಸ್ಥೆಗಳ ನಡುವೆ ಭಾರೀ ಪೈಪೋಟಿ ಎದ್ದಿದೆ. ಪುರುಷರ ವಿಶ್ವಕಪ್‌ನಲ್ಲಿ ಬಾಂಗ್ಲಾ ತಂಡವನ್ನು ಹೊರಹಾಕಲಾಗಿದೆ. ಇದೇ ವೇಳೆ ಈ ಎರಡೂ ತಂಡಗಳು ಮುಖಾಮುಖಿಯಾಗಲಿರುವುದು ಕುತೂಹಲ ಮೂಡಿಸಿದೆ. ಪೂರ್ಣ ಪಂದ್ಯಾವಳಿ ಬ್ಯಾಂಕಾಕ್‌ನಲ್ಲೇ ನಡೆಯುತ್ತಿದ್ದು, ಫೈನಲ್ ಪಂದ್ಯ ಕೂಡ ಬ್ಯಾಂಕಾಕ್‌ನಲ್ಲೇ ಜರುಗಲಿದೆ.

ಇತಿಹಾಸ ನಿರ್ಮಿಸಿದ ವೈಷ್ಣವಿ ಅಡ್ಕರ್

ಬೆಂಗಳೂರು: ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಬೆಂಗಳೂರು 2026 ಟೂರ್ನಿಯಲ್ಲಿ ವೈಷ್ಣವಿ ಅಡ್ಕರ್ ಐತಿಹಾಸಿಕ ಸಾಧನೆ ಮಾಡಿದ್ದಾರೆ. ತಮ್ಮ ಅಸಾಧಾರಣ ಪ್ರದರ್ಶನದೊಂದಿಗೆ ಎಲ್ಲರನ್ನೂ ಬೆಚ್ಚಿಬೀಳಿಸಿರುವ ಅವರು, 100 ಡಬ್ಲ್ಯು 100 ಮಟ್ಟದ ಐಟಿಎಫ್ ಟೂರ್ನಿಯ ಫೈನಲ್‌ಗೆ ಪ್ರವೇಶಿಸಿದ ಮೊದಲ ಭಾರತೀಯ ಮಹಿಳೆ ಎಂಬ ಗೌರವ ಪಡೆದಿದ್ದಾರೆ. ಬೆಂಗಳೂರು ಅಥವಾ ಅದಕ್ಕಿಂತ ಮೇಲಿನ ಐಟಿಎಫ್ ಸಿಂಗಲ್ಸ್ ಫೈನಲ್‌ಗೆ ಪ್ರವೇಶಿಸಿದ ಮೊದಲ ಭಾರತೀಯ ಆಟಗಾರ್ತಿಯಾಗಿ ಅವರು ಗುರುತಿಸಿಕೊಂಡಿದ್ದಾರೆ.

ಪುಣೆ ಮೂಲದ 21 ವರ್ಷದ ಅಡ್ಕರ್, ವೈಲ್ಡ್‌ಕಾರ್ಡ್ ಮೂಲಕ ಸ್ಪರ್ಧಿಸಿದ್ದರು, ಸೆಮಿಫೈನಲ್‌ನಲ್ಲಿ ವಿಶ್ವ ಕ್ರಮಾಂಕ 126 ಮತ್ತು ದ್ವಿತೀಯ ಸೀಡ್ ಲಾನ್‌ಲಾನಾ ಟರಾರುಡಿ (ಥೈಲ್ಯಾಂಡ್) ಅವರನ್ನು 6-3, 6-3 ಅಂತರದಲ್ಲಿ ಮಣಿಸಿ ಫೈನಲ್ ಟಿಕೆಟ್ ಪಡೆದರು.

ಸಾನಿಯಾ ನಂತರ ವೈಷ್ಣವಿಯಿಂದ ಸಾಧನೆ: 2009ರಲ್ಲಿ ಪಟಾಯಾದಲ್ಲಿ ನಡೆದ ಡಬ್ಲ್ಯುಟಿಎ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಸಾನಿಯಾ ಮಿರ್ಜಾ ಫೈನಲ್ ಪ್ರವೇಶಿಸಿದ್ದರ ನಂತರ ಈ ಸಾಧನೆ ಮತ್ತೊಬ್ಬ ಭಾರತೀಯರಿಂದ ಆಗಿರಲಿಲ್ಲ. ಬೆಂಗಳೂರಿನ ಈ ಟೂರ್ನಿಯಲ್ಲಿ ಅಡ್ಕರ್ ಎರಡು ಟಾಪ್ 150 ಮತ್ತು ಒಂದು ಟಾಪ್ 250 ಆಟಗಾರ್ತಿಯರನ್ನು ಸೋಲಿಸಿ ಫೈನಲ್‌ಗೆ ತಲುಪಿರುವುದು ವಿಶೇಷ.



ಸೆಮಿಫೈನಲ್ ಪಂದ್ಯ ವಿವರ: ಆರಂಭದಿಂದಲೇ ಇಬ್ಬರು ಆಟಗಾರ್ತಿಯರೂ ಸಮಬಲದ ಪ್ರದರ್ಶನ ನೀಡಿದರು. ಒಂದು ಡಬಲ್ ಫಾಲ್ಟ್ ಸಹಿತ ಬ್ರೇಕ್ ಪಡೆದ ಅಡ್ಕರ್ 6-3 ಅಂತರದಲ್ಲಿ ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನಲ್ಲೂ ಅಡ್ಕರ್ ಅದೇ ವೇಗ ಮುಂದುವರಿಸಿದರು. ಟರಾರುಡಿ ಬ್ರೇಕ್‌ಬ್ಯಾಕ್ ಮಾಡಿದರೂ, ಆರನೇ ಗೇಮ್‌ನಲ್ಲಿ ಎರಡು ಅದ್ಭುತ ಬ್ಯಾಕ್‌ಹ್ಯಾಂಡ್ ವಿನರ್ಸ್ ಮೂಲಕ ಅಡ್ಕರ್ ಮತ್ತೆ ಮುನ್ನಡೆ ಪಡೆದರು. ಒತ್ತಡದ ಕ್ಷಣದಲ್ಲಿ ಶಾಂತ ಮನೋಭಾವ ತೋರಿದ ಅವರು 6-3 ಅಂತರದಲ್ಲಿ ಪಂದ್ಯವನ್ನು ಮುಗಿಸಿದರು.

ಮತ್ತೊಂದು ಸೆಮಿನಲ್ಲಿ: ಇನ್ನೊಂದು ಸೆಮಿಫೈನಲ್‌ನಲ್ಲಿ ಮೂರನೇ ಸೀಡ್ ಹ್ಯಾನ್ನೆ ವಾಂಡೆವಿಂಕೆಲ್ (ಬೆಲ್ಜಿಯಂ) ಐದನೇ ಸೀಡ್ ಪೊಲಿನಾ ಇಯಾತ್ಸೆಂಕೊ ಅವರನ್ನು 6-4, 7-6(5) ಅಂತರದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದರು. ಫೈನಲ್‌ನಲ್ಲಿ ಅಡ್ಕರ್ ಮತ್ತು ವಾಂಡೆವಿಂಕೆಲ್ ಮುಖಾಮುಖಿಯಾಗಲಿದ್ದಾರೆ.

ಪದಬಂಧ 5903

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ಅರಿ-ಮರ ಒಳಗೊಂಡ ಅನುಮಾನ (5)
5.ಮಂಚದ ಕಡೆಯಲ್ಲಿ ಅಂಗ ಸೇರಿದೆ (3)
6.ಮೊಳಕೆಯೊಡೆಯುವಿಕೆ-ಚಿಗುರು (3)
7.ಕಂಡ ಕನಸು ದಿಟವಾಗುವಿಕೆ (4)
9.ದಿನಟ ಅಶುಭ ಸಮಯ (4)
10.ಸೊಗಸಿನಿಂದ ಕೂಡಿದ್ದು-ಸುಂದರವಾದುದು (4)
11.ಅಜ್ಞಾನವೆಂಬ ಸ್ವಭಾವ ತಿರುಗಿದೆ (4)
13. ಗಾಡಿಯ ನಡುವೆ ಇಂದ್ರಜಾಲ ವಿದ್ಯೆಯಿದೆ (3)
15.ಆಶೀರ್ವಾದ ಸಂಕಲ್ಪ (3)
16.ಕಣ್ತಪ್ಪಿಸಿ ತಿರುಗಾಡು (5)

ಮೇಲಿನಿಂದ ಕೆಳಕ್ಕೆ
1.ಕಷ್ಟಕಾಲಕ್ಕೆ ಇರಲೆಂದು ತೆಗೆದಿಟ್ಟ ಹಣ (4)
2.ಅಂಗದನು ಏರಿದ ಬೆಟ್ಟ (2)
3.ಹತೋಟಿ ತಲೆಕೆಳಗಾಗಿದೆ (2)
4.ಬಲದ ನಡುವೆ ಕ್ಷಾಮವಡಗಿದೆ (4)
8.ಬಟ್ಟೆಯ ತಾತ್ಕಾಲಿಕ ವಸತಿ (3)
9.ಗಟ್ಟಿಯಾದ ಕೂಗು ಎಂಬರ್ಥದ ರಾಕ್ಷಸ ರಾಜ (3)
10.ಮೀನು ಸಂಗ್ರಹಣೆಯ ಆಗರ (4)
12.ಬುದ್ಧಿ ವಿಕಲ್ಪವಾಗು (4)
14.ತಕ್ಕಡಿಯಲ್ಲಿ ಕುದುರೆ ಜೀನನ್ನು ಉಲ್ಟಾ ಇಟ್ಟಿದ್ದಾರೆ (2)
15.ಹರಸು ಎಂದು ಬೇಡಿಕೊಂಡದ್ದು ಈ ಅಕಳನ್ನು (2)

5902 ಉತ್ತರ

ಎಡದಿಂದ ಬಲಕ್ಕೆ:
2.ಮಹಾಭಾರತ
5.ಶಿಬಿರ 7.ಅಂಬರ
9.ತಾಂಡವ 11.ಕಡೆಗಾಲ
13.ವಿನಾಯಿಸು
16.ನಗೆಗಾರ 17.ಕಾಕಸ್ನಾನ

ಮೇಲಿನಿಂದ ಕೆಳಕ್ಕೆ:
1.ಕಾಶಿ 2.ಮರ 3.ಅಂತ
4.ಧೀರ 6.ಬಿಡುಗಡೆ
8.ಬಡಪಾಯಿ 9.ತಾಂಬೂಲ
10.ವಿಭವ 11.ಕಡಲತೀರ
12.ನಾಗುಗುಪ್ಪಿಗೆ
14.ನಾಶಕಾರಕ
15.ಸುರಸಂತಾನ

ಉಡುಪಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮತ್ಸ್ಯ ಸಂಪದ ಯೋಜನೆ ಆಯ್ಕೆ ಸಮಿತಿ ಸಭೆ

ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ

ಉಡುಪಿ: ಸರಕಾರ ಮೀನುಗಾರರ ಅಭಿವೃದ್ಧಿಗೆ ಅನೇಕ ಯೋಜನೆಗಳು ಹಾಗೂ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಜಿಲ್ಲೆಯಲ್ಲಿ ಹೆಚ್ಚು ಫಲಾನುಭವಿಗಳು ಇರುವ ಹಿನ್ನೆಲೆ, ಹೆಚ್ಚುವರಿ ಅನುದಾನಕ್ಕೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಲ್ಪೆಯು ಸರ್ವಋತು ಬಂದರಾಗಿದ್ದು, ಜಿಲ್ಲೆಯಲ್ಲಿ ಎರಡು ಲಕ್ಷಕ್ಕೂ ಅಧಿಕ ಮೀನುಗಾರರು ಮೀನುಗಾರಿಕೆ ಹಾಗೂ ಪೂರಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ಅವರುಗಳಿಗೆ ಸರ್ಕಾರದಿಂದ ವಿವಿಧ ಯೋಜನೆಯಡಿ ನೀಡಲಾಗುವ ಆರ್ಥಿಕ ಸೌಲಭ್ಯ, ಸಹಾಯಧನಗಳ ಕುರಿತ ಮಾಹಿತಿಯನ್ನು ತಲುಪಿಸುವುದರೊಂದಿಗೆ ಯೋಜನೆಯ ಫಲಾನುಭವಿಗಳನ್ನಾಗಿ, ಸ್ವಾವಲಂಬಿ ಜೀವನ ನಡೆಸಲು ಅನುವು ಮಾಡಿಕೊಡಬೇಕು. ಪ್ರಸ್ತುತ ನಿಗದಿಪಡಿಸಿರುವ ಸೌಲಭ್ಯಗಳು ಹೆಚ್ಚಿನ ಜನರಿಗೆ ತಲುಪಿಸಲು ಆಗುತ್ತಿಲ್ಲ. ಈ ಹಿನ್ನೆಲೆ, ಸರಕಾರಕ್ಕೆ ಹೆಚ್ಚುವರಿ ಅನುದಾನ ಹಾಗೂ ಗುರಿ ನೀಡಲು ಪ್ರಸ್ತಾವನೆ ಸಲ್ಲಿಸಬೇಕಿದೆ ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕ ಕುಮಾರಸ್ವಾಮಿ ಬಿ.ವಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಹರೀಶ್, ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ್, ಆಯ್ಕೆ ಸಮಿತಿಯ ಸದಸ್ಯರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.



₹200 ಲಕ್ಷ ಸಹಾಯಧನ ವಿತರಣೆ

ಪ್ರಸಕ್ತ ಸಾಲಿನಲ್ಲಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ವಿವಿಧ ಘಟಕಗಳ ಸ್ಥಾಪನೆಗೆ ಜಿಲ್ಲೆಯ 6 ಫಲಾನುಭವಿಗಳಿಗೆ ಸುಮಾರು 200 ಲಕ್ಷ ರೂ. ಸಹಾಯಧನ ಸೌಲಭ್ಯ ಒದಗಿಸಲಾಗಿದೆ ಎಂದ ಅವರು, ಕಳೆದ ಸಾಲಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಆಳ ಸಮುದ್ರ ಮೀನುಗಾರಿಕಾ ಯಾಂತ್ರೀಕೃತ ದೋಣಿ ನಿರ್ಮಿಸಲು ಸಹಾಯ ಯೋಜನೆಯಡಿ ಜಿಲ್ಲೆಗೆ ಸಾಮಾನ್ಯ ವರ್ಗದಡಿ 8 ಗುರಿ ನಿಗದಿಪಡಿಸಿದ್ದು, 9 ಅರ್ಜಿಗಳು ಸಲ್ಲಿಕೆಯಾಗಿವೆ. ಲಾಟರಿ ಮೂಲಕ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದರು.

8,500 ಬೋಟ್‌ಗಳಿಂದ ಮೀನುಗಾರಿಕೆ

ಜಿಲ್ಲೆಯಲ್ಲಿ 5598 ಮೋಟಾರೀಕೃತ ನಾಡದೋಣಿಗಳು, 2017 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಹಾಗೂ 447 ಸಾಂಪ್ರದಾಯಿಕ ನಾಡದೋಣಿಗಳು ಕಾರ್ಯಾಚರಿಸುತ್ತಿವೆ ಎಂದ ಅವರು, ಕಳೆದ ಸಾಲಿನಲ್ಲಿ ಪಿ.ಎಂ.ಎಂ.ಎಸ್. ವೈ ಯೋಜನೆಯಡಿ ಪಚ್ಚಿಲೆ ಕೃಷಿ ಮಸೆಲ್ಸ್, ಕಲ್ಲ, ಕ್ಲಾಮ್ಸ್, ಮುತ್ತು ಇತ್ಯಾದಿ ಕಾರ್ಯಕ್ರಮಗಳ ಪ್ರತಿಶತಃ ನೂರರಷ್ಟು ಪ್ರಗತಿ ಸಾಧಿಸಬೇಕು ಎಂದರು.

ಲೂಡೊ ಪ್ಲಾಸ್ಟಿಕ್ ಕೋನ್ ನುಂಗಿ 8ರ ಬಾಲಕಿ ಸಾವು

ಉಳ್ಳಾಲ: ಸಹೋದರ, ಸಹೋದರಿಯೊಂದಿಗೆ ಮನೆಯಲ್ಲಿ ಲೂಡ ಆಟದಲ್ಲಿ ತೊಡಗಿದ್ದ ಎಂಟು ವರ್ಷದ ಹೆಣ್ಣು ಮಗುವೊಂದು ಆಟದ ಪ್ಲಾಸ್ಟಿಕ್ ಕೋನ (ಕಾಯಿನ್)ನ್ನು ನುಂಗಿ ಉಸಿರುಗಟ್ಟಿ ಸಾವನ್ನಪ್ಪಿರುವ ದಾರುಣ ಘಟನೆ ತೊಕ್ಕೊಟ್ಟು ಸಮೀಪದ ಕೊಲ್ಯ ಎಂಬಲ್ಲಿ ಶನಿವಾರ ಮಧ್ಯಾಹ್ನ ನಡೆದಿದೆ.



ಮೂಲತ: ಕಾಸರಗೋಡು ಜಿಲ್ಲೆಯ ಮಧೂರು ಉಳಿಯತಡ್ಕ ನಿವಾಸಿ ರಾಜೇಶ್ ಗಟ್ಟಿ ಮತ್ತು ರಾಜೇಶ್ವರಿ ದಂಪತಿಯ ಎರಡನೇ ಪುತ್ರಿ ತನುಷ್ಕ (8) ಮೃತ ದುರ್ದೈವಿ.

ತನುಷ್ಕ ಅವರ ತಾಯಿ ಉಳ್ಳಾಲದ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದು ಉದ್ಯೋಗಕ್ಕೆ ತೆರಳಲು ಹತ್ತಿರವಾಗಲು ಕುಟುಂಬ ಸಮೇತ ಕೊಲ್ಯದ ಬಾಡಿಗೆ ಮನೆಯೊಂದರಲ್ಲಿ ನೆಲೆಸಿದ್ದರು. ಶನಿವಾರ ಮಧ್ಯಾಹ್ನ ಶಾಲೆಗೆ ರಜೆ ಇದ್ದ ಕಾರಣ ರಾಜೇಶ್ವರಿ ಅವರ ಎರಡನೇ ಮಗಳು ತನುಷ್ಕ ತನ್ನ ಅಣ್ಣ ಮತ್ತು ತಂಗಿಯ ಜತೆ ಲೂಡೊ ಆಟದಲ್ಲಿ ತೊಡಗಿದ್ದಳಂತೆ. ಈ ವೇಳೆ ತನುಷ್ಕ ಲೂಡೊ ಆಟದಲ್ಲಿ ಬಳಸಲಾಗುವ ಹೊಸ ಕೋನ್ ಮಾದರಿಯ ಪ್ಲಾಸ್ಟಿಕ್ ಕಾಯಿನ್ ಅನ್ನು ನುಂಗಿ ಏಕಾಏಕಿ ಉಸಿರುಗಟ್ಟಿದ ಸ್ಥಿತಿಯಲ್ಲಿ ಗಂಭೀರಗೊಂಡಿದ್ದು ಗಾಭರಿಗೊಂಡ ಆಕೆಯ ತಾಯಿ ನೆರೆಹೊರೆಯವರ ಸಹಾಯದಿಂದ ತೊಕ್ಕೊಟ್ಟಿನ ಖಾಸಗಿ ಆಸ್ಪತ್ರೆಗೆ ಆಕೆಯನ್ನು ಚಿಕಿತ್ಸೆಗೆ ಒಯ್ದಿದ್ದಾರೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆಂದು ದೇರಳಕಟ್ಟೆಯ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿನ ವೈದ್ಯರು ತನುಷ್ಕ ಮೃತ ಪಟ್ಟಿರುವುದಾಗಿ ಘೋಷಿಸಿದ್ದಾರೆ.

ಬಾಲಕಿಯ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿದಾಗ ಆಕೆಯ ಶ್ವಾಸಕೋಶದಲ್ಲಿ ಪ್ಲಾಸ್ಟಿಕ್ ಕೋನ್ ಆಟಿಕೆ ಲಭಿಸಿದೆ.

ಮೃತ ತನುಷ್ಕ ತೊಕ್ಕೊಟ್ಟುವಿನ ಸಂತ ಸೆಬೆಸ್ಟಿಯನ್ ಹೈಸ್ಕೂಲ್‌ನ ಎರಡನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದಳು. ಆಕೆಯ ದಿಢೀರ್ ಸಾವಿನಿಂದ ಪೋಷಕರು ಸೇರಿದಂತೆ ಇಡೀ ಕುಟುಂಬವೇ ಆಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ ಸೇರಿದ್ದರು.



▸▸ ಮೃತ ತನುಷ್ಕ ತೊಕ್ಕೊಟ್ಟುವಿನ ಸಂತ ಸೆಬೆಸ್ಟಿಯನ್ ಹೈಸ್ಕೂಲ್‌ನ ಎರಡನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿನಿ

ಕಿರುಸುದ್ದಿ

ಇಂದು ಸಿಎಂರಿಂದ ಮುದ್ರಣ ಇಲಾಖೆಯಡಿ ಕಾಸರಗೋಡು ಜಿಲ್ಲೆಯ ಕೃಷಿ ಕಚೇರಿ ಆನ್‌ಲೈನ್‌ನಲ್ಲಿ ಉದ್ಘಾಟನೆ

ಕಾಸರಗೋಡು: ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಫೆ.22ರಂದು ಬೆಳಗ್ಗೆ 10 ಗಂಟೆಗೆ ಮುದ್ರಣ ಇಲಾಖೆಯಡಿ ಜಿಲ್ಲಾ ಕೃಷಿ (ಫಾರ್ಮ್) ಕಚೇರಿಯನ್ನು ಆನ್‌ಲೈನ್ ಮೂಲಕ ಉದ್ಘಾಟಿಸಲಿದ್ದಾರೆ. ಅದರಂತೆ ಕಾಸರಗೋಡು ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ, ಅರಣ್ಯ ಮತ್ತು ವನ್ಯಜೀವಿ ಇಲಾಖೆ ಸಚಿವ ಎ.ಕೆ.ಶಶೀಂದ್ರನ್ ಅಧ್ಯಕ್ಷತೆ ವಹಿಸಲಿದ್ದಾರೆ.



ಶಾಸಕ ಎನ್.ಎ.ನೆಲ್ಲಿಕುನ್ನು ವಿಶೇಷ ಅತಿಥಿಯಾಗಿ ಭಾಗವಹಿಸುವರು. ಜಿಲ್ಲಾಧಿಕಾರಿ ಕೆ.ಇನ್ಬಶೇಖರ್, ಮುದ್ರಣ ಇಲಾಖೆಯ ನಿರ್ದೇಶಕ ಅಮೀರ್ ಸಿ.ಎ., ಸರಕಾರಿ ಮುದ್ರಣಾಲಯಗಳ ಸೂಪರಿಂಟೆಂಡೆಂಟ್ ಟಿ.ವೀರನ್, ಫಾರ್ಮ್ ನಿಯಂತ್ರಕ ಪ್ರಶಾಂತ್ ಕುಮಾರ್, ವಿವಿಧ ಕಾರ್ಮಿಕ ಸಂಘಗಳ ಮುಖಂಡರು ಮತ್ತು ಸೇವಾ ಸಂಘಟನೆಯ ಮುಖಂಡರು ಪಾಲ್ಗೊಳ್ಳುವರು.

ಫಾರ್ಮ್ ಕಚೇರಿಯು ವಿದ್ಯಾನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಸರಗೋಡು ಕಲೆಕ್ಟರೇಟ್‌ನ ಸಿ ಮತ್ತು ಡಿ ಬ್ಲಾಕ್‌ನ ಎರಡನೇ ಮಹಡಿಯಲ್ಲಿ ಕಾರ್ಯನಿರ್ವಹಿಸಲಿದೆ.

ಕಾಸರಗೋಡು ಜಿಲ್ಲೆಯಾದ್ಯಂತ ವಾರೆಂಟ್ ಆರೋಪಿಗಳ ಪತ್ತೆ ಕಾರ್ಯಾಚರಣೆ

ಕಾಸರಗೋಡು: ಅಪರಾಧ ಕೃತ್ಯಗಳನ್ನು ತಡೆಯುವುದಕ್ಕಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ವಿ.ವಿಜಯ್‌ಭರತ್ ರೆಡ್ಡಿಯವರ ನಿರ್ದೇಶ ಪ್ರಕಾರ ನಡೆಸಿದ ದಾಳಿಯಲ್ಲಿ ತಲೆಮರೆಸಿಕೊಂಡ ಹಲವಾರು ಮಂದಿ ವಾರಂಟ್ ಆರೋಪಿಗಳನ್ನು ಸೆರೆಹಿಡಿಯಲಾಗಿದೆ.

ಮಂಜೇಶ್ವರದಲ್ಲಿ 12ಕ್ಕಿಂತಲೂ ಹೆಚ್ಚು ಮಂದಿ ವಾರಂಟ್ ಆರೋಪಿಗಳನ್ನು ಬಂಧಿಸಲಾಗಿದೆ. ಅಲ್ಲದೆ ಓರ್ವ ಕೊಲೆಯತ್ನ ಪ್ರಕರಣದ ಆರೋಪಿಯಾಗಿದ್ದು, ತಲೆಮರೆಸಿಕೊಂಡವನೆಂದು ಘೋಷಿಸಿದ ಉಪ್ಪಳ ಪ್ರತಾಪನಗರದಲ್ಲಿ ವಾಸಿಸುವ ಮುಹಮ್ಮದ್ ಆಶಿಕ್ (22) ಎಂಬಾತನನ್ನು ಸೆರೆ ಹಿಡಿಯಲಾಗಿದ್ದು, ನ್ಯಾಯಲಯದಲ್ಲಿ ಹಾಜರುಪಡಿಸಲಾಯಿತು. ನ್ಯಾಯಾಲಯವು ನ್ಯಾಯಾಂಗ ವಿಧಿಸಿದೆ. ಕುಂಬಳೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 10ರಷ್ಟು ಮಂದಿ ವಾರಂಟ್ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಪರವಾನಗಿರಹಿತವೂ, ಪ್ರಾಯಪೂರ್ತಿಯಾಗದೆಯೂ ವಾಹನ ಚಲಾಯಿಸಿದ ನಾಲ್ಕು ಮಂದಿಯ ವಿರುದ್ಧ ಕೇಸು ದಾಖಲಿಸಲಾಗಿದೆ. ಬೇಕಲ, ಮೇಲ್ಪರಂಬ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಹಲವಾರು ಮಂದಿ ವಾರಂಟ್ ಆರೋಪಿಗಳು ಸೆರೆಯಾಗಿದ್ದು, ಇತರ ಠಾಣೆಗಳ ವ್ಯಾಪ್ತಿಗಳ ವಾರಂಟ್ ಆರೋಪಿಗಳ ಕುರಿತು ಪತ್ತೆಹಚ್ಚಲಾಗುತ್ತಿದೆ.

ಚಲಿಸುತ್ತಿದ್ದ ಕಾರಿಗೆ ಹಿಂಭಾಗದಿಂದ ಗುದ್ದಿದ ಕಾರು: ಓರ್ವ ಗಂಭೀರ

ಸುಳ್ಯ: ಸುಳ್ಯ ಚಲಿಸುತ್ತಿದ್ದ ಕಾರಿಗೆ ಹಿಂಭಾಗದಿಂದ ಬಂದ ಕಾರೊಂದು ಡಿಕ್ಕಿಯಾಗಿ ಓರ್ವ ಗಂಭೀರ ಗಾಯಗೊಂಡ ಘಟನೆ ಸುಳ್ಯದ ಬೊಳುಬೈಲಿನಲ್ಲಿ ನಡೆದಿದೆ.

ತನ್ನ ಗೃಹಪ್ರವೇಶ ಹಿನ್ನಲೆಯಲ್ಲಿ ಬಟ್ಟೆಖರೀದಿಸಲು ಕುಟುಂಬ ಸಮೇತರಾಗಿ ವಸಂತ ತೆರಳುತ್ತಿದ್ದ ವೇಳೆಯಲ್ಲಿ ಹಿಂಬದಿಯಿಂದ ಬಂದ ಮದ್ಯಪಾನಿಗಳು ಚಲಾಯಿಸುತ್ತಿದ್ದ ಕಾರು ಮುಂಭಾಗದಲ್ಲಿ ತೆರಳುತ್ತಿದ್ದ ಕಾರಿಗೆ ಡಿಕ್ಕಿಯಾಗಿದ್ದು ಕಾರಿನಲ್ಲಿ ಸಂಚರಿಸುತ್ತಿದ್ದ ವಸಂತ ಯಾನೆ ಚಂದ್ರಶೇಖರ ಎಂಬವರಿಗೆ ಗಂಭೀರವಾಗಿ ಗಾಯಗೊಂಡಿದ್ದು ಜೊತೆಗೆ ನಾದಿನಿ ರಶ್ಮಿ ಹಾಗೂ ಮಕ್ಕಳಾದ ಆದ್ವಿ ಮತ್ತು ಆಶ್ವಿತ್ ಸಣ್ಣಪುಟ್ಟ ಗಾಯಗಳೊಂದಿಗೆ ಕೆವಿಜಿ ಆಸ್ಪತ್ರೆಗೆ ದಾಖಲಾದರೆ, ಗಂಭೀರ ಗಾಯಗೊಂಡ ವಸಂತರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಕುರಿತು ಮಿಥುನ್ ನೂಜಿಬೆಟ್ಟು ದೇಲಂಪಾಡಿ ನೀಡಿದ ದೂರಿನಂತೆ ಕಾರು ಚಾಲಕ ಮಂಜುನಾಥ್ ಹಾಗೂ ಜಯರಾಮ ಎಂಬವರ ವಿರುದ್ಧ ಸುಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

11,12,500 ರೂ. ಮೌಲ್ಯದ 22.250 ಕೆ.ಜಿ ಗಾಂಜಾ ವಶ

ನಾಲ್ಕು ಮಂದಿ ಅಂತಾರಾಜ್ಯ ಗಾಂಜಾ ಮಾರಾಟಗಾರರು ಪೊಲೀಸ್ ಬಲೆಗೆ

ಮಂಗಳೂರು: ಅಕ್ರಮವಾಗಿ ಗಾಂಜಾವನ್ನು ತಂದು ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ಕು ಮಂದಿ ಅಂತಾರಾಜ್ಯ ಗಾಂಜಾ ಮಾರಾಟಗಾರರನ್ನು ಪೊಲೀಸರು ಬಂಧಿಸಿದ್ದು, 22 ಕೆ.ಜಿ. 250 ಗ್ರಾಂ. ತೂಕದ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ಮಹಾರಾಷ್ಟ್ರದ ಜಲಗಾಂ ಜಿಲ್ಲೆಯ ಚೊಪ್ಪಡ ತಾಲೂಕಿನ ಸಮತಾ ನಗರದ ನಿವಾಸಿ ಕರಣ್ ಬಾಬು ರಾಂ ಜಾದವ್ (27), ಮಧ್ಯಪ್ರದೇಶದ ದೇವಾಸ್ ಜಿಲ್ಲೆಯ ಚಪಡ ನಿವಾಸಿ ಸಮೀರ್ ಶಾ (19), ಉಡುಪಿ ಜಿಲ್ಲೆಯ ಹೆಜಮಾಡಿ ಗ್ರಾಮದ ನಿವಾಸಿ ಎಂ.ಹೆಚ್. ಮಯ್ಯದಿ (48), ಮಂಗಳೂರಿನ ಕುದ್ರೋಳಿಯ ನಿವಾಸಿ ಇಬ್ರಾಹಿಂ ಕಲೀಲ್ (47) ಎಂದು ಗುರುತಿಸಲಾಗಿದೆ.

ಬಂಧಿತರಿಂದ 22 ಕೆ.ಜಿ 250 ಗ್ರಾಂ. ಗಾಂಜಾ, (11,12,500 ರೂ.) ಮತ್ತು 6 ಮೊಬೈಲ್ ಫೋನ್ (18,000 ರೂ.) ಹಾಗೂ ಗಾಂಜಾ ಸಾಗಿಸಲು ಬಳಸಿದ 2 ಸ್ಕೂಟರ್‌ಗಳನ್ನು (1,00,000 ರೂ.) ವಶಪಡಿಸಿಕೊಳ್ಳಲಾಗಿದ್ದು, ಒಟ್ಟು ಮೌಲ್ಯ ಅಂದಾಜು 12,30,500 ರೂ. ಎಂದು ಅಂದಾಜಿಸಲಾಗಿದೆ.

ಫೆ.21 ರಂದು ಪಣಂಬೂರು ಪೊಲೀಸ್ ಠಾಣಾ ವ್ಯಾಪ್ತಿಯ, ಜೋಕಟ್ಟೆ ಕ್ರಾಸ್ ರೈಲ್ವೇ ಬ್ರಿಡ್ಜ್ ಬಳಿ ಗಾಂಜಾವನ್ನು ಮಾರಾಟ ಮಾಡಲು ಹೊರ ರಾಜ್ಯದಿಂದ ತಂದಿರುವ ಬಗ್ಗೆ ಮಾಹಿತಿ ಪಡೆದು ಉತ್ತರ ಉಪ ವಿಭಾಗದ ಎ.ಸಿ.ಪಿ. ಅವರು ಮತ್ತು ಅವರ ತಂಡದ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೂ ಪಣಂಬೂರು ಠಾಣಾ ಪಿ.ಎಸ್.ಐ ಮತ್ತು ಸಿಬ್ಬಂದಿಗಳ ನೇತೃತ್ವದಲ್ಲಿ ದಾಳಿ ನಡೆಸಿ ಬಂಧಿಸಿದ್ದಾರೆ.

ಆರೋಪಿಗಳಾದ ಕರಣ್ ಬಾಬು ರಾಂ ಜಾದವ್ ಮತ್ತು ಸಮೀರ್ ಶಾ ಎಂಬವರು ಗಾಂಜಾವನ್ನು ಮಹಾರಾಷ್ಟ್ರ ಮಯ್ಯದಿ ಹಾಗೂ ಮಧ್ಯ ಪ್ರದೇಶ ಶಾರೂಕ್ ಎಂಬವರಿಂದ ಪಡೆದು ತಂದು ಉಡುಪಿ ಹೆಜಮಾಡಿ ಕೋಡಿಯ ಎಂ.ಹೆಚ್. ಮಯ್ಯದಿ ಮತ್ತು ಮಂಗಳೂರಿನ ಇಬ್ರಾಹಿಂ ಕಲೀಲ್ ಅವರಿಗೆ ನೀಡುತ್ತಿದ್ದು, ಈ ಇಬ್ಬರು ಗಾಂಜಾವನ್ನು ಉಡುಪಿ, ಮಲ್ಪೆ, ಕಾರ್ಕಳ, ಮುಲ್ಕಿ, ಸುರತ್ಕಲ್, ಪಣಂಬೂರು, ಹಾಗೂ ಮಂಗಳೂರು ನಗರದ ಪ್ರಮುಖ ಸ್ಥಳಗಳಲ್ಲಿ ಮಾರಾಟ ಮಾಡುತ್ತಿದ್ದುದಾಗಿ ತಿಳಿದು ಬಂದಿದ್ದು, ಈ ಹಿಂದೆ ಕೂಡಾ ಹಲವು ಭಾರಿ ಗಾಂಜಾವನ್ನು ಅಕ್ರಮವಾಗಿ ತಂದು ಉಡುಪಿ ಜಿಲ್ಲೆ ಮತ್ತು ಮಂಗಳೂರು ನಗರದಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ.

ಈ ಬಗ್ಗೆ ಪಣಂಬೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



▸▸ ನಾಲ್ಕು ಮಂದಿ ಅಂತಾರಾಜ್ಯ ಗಾಂಜಾ ಮಾರಾಟಗಾರರನ್ನು ಪೊಲೀಸರು ಬಂಧಿಸಿದ್ದಾರೆ.

▸▸ ಬಂಧಿತರಿಂದ 22 ಕೆ.ಜಿ 250 ಗ್ರಾಂ. ಗಾಂಜಾ, 6 ಮೊಬೈಲ್ ಫೋನ್ ಹಾಗೂ ಗಾಂಜಾ ಸಾಗಿಸಲು ಬಳಸಿದ 2 ಸ್ಕೂಟರ್‌ಗಳು ವಶಕ್ಕೆ

▸▸ ಒಟ್ಟು ಮೌಲ್ಯ ಅಂದಾಜು 12,30,500 ರೂ. ಎಂದು ಅಂದಾಜಿಸಲಾಗಿದೆ.

ಐರ್ಲೆಂಡಿನಲ್ಲಿ ಸಾವನ್ನಪ್ಪಿದ ಕಡಬದ ಯುವಕ ಸ್ಯಾಂಜೋ ಸುನಿಲ್

ನಾಳೆ ಮೃತನ ಪಾರ್ಥಿವ ಶರೀರ ಸ್ವಗ್ರಾಮಕ್ಕೆ ಆಗಮನದ ನಿರೀಕ್ಷೆ

ಕಡಬ: ಐರ್ಲೆಂಡ್‌ನಲ್ಲಿ ಮೃತಪಟ್ಟಿರುವ ಕಡಬ ತಾಲೂಕಿನ ಕುಟ್ರುಪಾಡಿ ಗ್ರಾಮದ ವಿಮಲಗಿರಿ ನಿವಾಸಿ ಕೃಷಿಕ ಸುನಿಲ್ ಅವರ ಪುತ್ರ ಸ್ಯಾಂಜೋ ಸುನಿಲ್ (31) ಅವರ ಪಾರ್ಥಿವ ಶರೀರವು ಫೆ.23ರಂದು ಸ್ವಗ್ರಾಮಕ್ಕೆ ತಲುಪುವ ನಿರೀಕ್ಷೆ ಇದೆ ಎಂದು ಅವರ ಕುಟುಂಬ ಮೂಲಗಳು ತಿಳಿಸಿವೆ.



ಐರ್ಲೆಂಡ್‌ನ ಡಬ್ಲಿನ್ ನಗರದ ಫಿಂಗ್ಲಾಸ್‌ನ ಚಾರ್ಲ್ಸ್ ಟೌನ್ ಪ್ರದೇಶದಲ್ಲಿ ತನ್ನ ಪತ್ನಿಯ ಜೊತೆಗೆ ವಾಸವಾಗಿದ್ದ ಸ್ಯಾಂಜೋ ಸುನಿಲ್ ಅವರ ಶವವು ಅವರು ವಾಸ್ತವ್ಯವಿದ್ದ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಸುದ್ದಿ ತಿಳಿದ ಕೂಡಲೇ ಸ್ಥಳಕ್ಕೆ ಧಾವಿಸಿದ ಐರಿಶ್ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಪ್ರಾಥಮಿಕ ತನಿಖೆ ನಡೆಸಿದ್ದಾರೆ. ಮೇಲ್ನೋಟಕ್ಕೆ ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದ್ದರೂ, ಸಾವಿನ ನಿಖರ ಕಾರಣ ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕವಷ್ಟೇ ತಿಳಿದು ಬರಬೇಕಿದೆ. ಅಗತ್ಯ ಬಿದ್ದರೆ ಭಾರತದಲ್ಲಿ ಮತ್ತೊಮ್ಮೆ ಮರಣೋತ್ತರ ಪರೀಕ್ಷೆ ನಡೆಸುವ ಸಾಧ್ಯತೆಗಳಿವೆ ಎನ್ನುವ ಮಾಹಿತಿಗಳಿವೆ.

ಮರಣೋತ್ತರ ಪರೀಕ್ಷೆ ಪೂರ್ಣ

ಮೃತರ ಮರಣೋತ್ತರ ಪರೀಕ್ಷೆಯು ಫೆ.20ರಂದು ನಡೆದಿದ್ದು, 23ರಂದು ಮರಣೋತ್ತರ ಪರೀಕ್ಷೆಯ ವರದಿ ಪೊಲೀಸರ ಕೈ ಸೇರಲಿದೆ ಎಂದು ತಿಳಿದು ಬಂದಿದೆ. ಪ್ರಸ್ತುತ ಐರಿಶ್ ಪೊಲೀಸರು ಮುಂದಿನ ಕಾನೂನು ಪ್ರಕ್ರಿಯೆಗಳನ್ನು ನಡೆಸುತ್ತಿದ್ದಾರೆ. ಮೃತದೇಹವನ್ನು ಭಾರತಕ್ಕೆ ತರುವ ಕುರಿತು ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಐರ್ಲೆಂಡ್‌ನ ಭಾರತೀಯ ರಾಯಭಾರ ಕಚೇರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅಗತ್ಯ ಸೂಚನೆ ನೀಡಿದ್ದಾರೆ ಎಂದು ಸಂಸದರ ಕಚೇರಿ ಮೂಲಗಳು ತಿಳಿಸಿವೆ. ಜೊತೆಗೆ ಐರ್ಲೆಂಡ್‌ನಲ್ಲಿ ಉದ್ಯೋಗದಲ್ಲಿರುವ ಕಡಬ ಮೂಲದ ಯುವಕರು ಕೂಡ ಅಲ್ಲಿನ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಅಗತ್ಯ ಸಹಕಾರ ನೀಡುತ್ತಿದ್ದಾರೆ ಎಂದು ಮೃತರ ಮನೆಯವರು ತಿಳಿಸಿದ್ದಾರೆ.

ಕೊಡಗಿನಲ್ಲಿ ಮತ್ತೆ ಕಾಡಾನೆ ದಾಳಿ: ಕಾರ್ಮಿಕ ಮಹಿಳೆ ಗಂಭೀರ ಗಾಯ

ಮಡಿಕೇರಿ: ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಮೇಲೆ ಕಾಡಾನೆ ದಾಳಿ ನಡೆಸಿದ ಘಟನೆ ವೀರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ತಟ್ಟಳ್ಳಿಯಲ್ಲಿ ನಡೆದಿದೆ.

ಘಟನೆಯಲ್ಲಿ ಕಾರ್ಮಿಕ ಮಹಿಳೆ ಸುನೀತಾ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಮಾಲ್ದಾರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬಳಿಕ ಸಿದ್ದಾಪುರ ಆಸ್ಪತ್ರೆಗೆ ದಾಖಲಿ ಸಲ್ಪಟ್ಟಿದ್ದಾರೆ. ಮಧ್ಯಾಹ್ನದ ವೇಳೆ ಕಾಫಿ ತೋಟದಿಂದ ಏಕಾಏಕಿ ಹೊರಬಂದ ಕಾಡಾನೆ ಕಾರ್ಮಿಕರತ್ತ ದಾಳಿ ನಡೆಸಲು ಯತ್ನಿಸಿದಾಗ ಇತರ ಕಾರ್ಮಿಕರು ಪ್ರಾಣ ಭಯದಿಂದ ಓಡಿ ಪಾರಾಗಿದ್ದಾರೆ.

ಘಟನಾ ಸ್ಥಳಕ್ಕೆ ತಕ್ಷಣ ಆಗಮಿಸಿದ ಆರ್ ಆರ್‌ಟಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಆನೆಯನ್ನು ಕಾಡಿಗಟ್ಟಲು ಮುಂದಾದರು. ಈ ನಡುವೆ ಕಲ್ಲಳ-ತಟ್ಟಳ್ಳಿ ಮಾರ್ಗದಲ್ಲಿ ನಿಲ್ಲಿಸಿದ್ದ ಪ್ರವೀಣ ಎಂಬವರಿಗೆ ಸೇರಿದ ಜೀಪಿನ ಮೇಲೆ ಕಾಡಾನೆ ದಾಳಿ ನಡೆಸಿ ವಾಹನವನ್ನು ಜಖಂಗೊಳಿಸಿದೆ.

ಆನೆಯನ್ನು ಅಟ್ಟಲು ತೆರಳಿದ ಅರಣ್ಯ ಇಲಾಖೆ ಸಿಬ್ಬಂದಿಗಳ ಮೇಲೂ ದಾಳಿ ಮಾಡಲು ಯತ್ನಿಸಿದ್ದು, ಇಬ್ಬರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ನಂತರ ಆನೆಯನ್ನು ಕಾಡಿಗಟ್ಟುವಲ್ಲಿ ಸಿಬ್ಬಂದಿ ಯಶಸ್ವಿಯಾದರು.

ಕಳೆದ ಕೆಲವು ದಿನಗಳಿಂದ ಈ ಭಾಗದಲ್ಲಿ ನಿರಂತರವಾಗಿ ಕಾಡಾನೆಗಳು ಕಾಣಿಸಿಕೊಳ್ಳುತ್ತಿದ್ದು, ಕಾರ್ಮಿಕರಲ್ಲಿ ಆತಂಕ ಹೆಚ್ಚಾಗಿದೆ. ಆತಂಕ ಸೃಷ್ಟಿಸುತ್ತಿರುವ ಕಾಡಾನೆಯನ್ನು ಸೆರೆಹಿಡಿದು ಸ್ಥಳಾಂತರಿಸಬೇಕೆಂದು ಕಾರ್ಮಿಕ ಮುಖಂಡ ಮಣಿ ಒತ್ತಾಯಿಸಿದ್ದಾರೆ.



▸▸ ಕಾರ್ಮಿಕ ಮಹಿಳೆ ಸುನೀತಾ ಎಂಬವರು ಗಂಭೀರವಾಗಿ ಗಾಯಗೊಂಡಿದ್ದು, ಮಾಲ್ದಾರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬಳಿಕ ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಲ್ಪಟ್ಟಿದ್ದಾರೆ.

ಕೆಎಸ್ಸಾರ್ಟಿಸಿ ಬಸ್-ಕಾರು ಡಿಕ್ಕಿ: ತಂದೆಯ ಸಾವು, ಪುತ್ರ ಗಂಭೀರ

ಕಾಸರಗೋಡು: ಕರ್ನಾಟಕ ಆರ್‌ಟಿಸಿ ಬಸ್ ಮತ್ತು ಕಾರು ಡಿಕ್ಕಿ ಹೊಡೆದ ಭೀಕರ ಅಪಘಾತದಲ್ಲಿ ತಂದೆ ಸಾವನ್ನಪ್ಪಿ ಪುತ್ರ ಗಂಭೀರ ಗಾಯಗೊಂಡ ಘಟನೆ ನೆಲ್ಲಿಕಟ್ಟೆಯಲ್ಲಿ ಶನಿವಾರ ನಡೆದಿದೆ.



ಪೈಕ ಮೂಲದ ನೆಲ್ಲಿಕಟ್ಟೆ ನಿವಾಸಿ ಹಾಗೂ ಗಲ್ಫ್ ಉದ್ಯೋಗಿ ಶಂಸುದ್ದೀನ್ (62) ಸಾವನ್ನಪ್ಪಿದವರು. ಅವರ ಪುತ್ರ ಸಲ್ಮಾನ್ ಹ್ಯಾರಿಸ್ (22) ಗಂಭೀರ ಗಾಯಗಳೊಂದಿಗೆ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ.

ಶನಿವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ನೆಲ್ಲಿಕಟ್ಟೆ ಪೇಟೆಯ ಜುಮಾ ಮಸೀದಿ ಬಳಿ ಅಪಘಾತ ಸಂಭವಿಸಿದೆ. ನೆಲ್ಲಿಕಟ್ಟೆ ಮಸೀದಿಯಿಂದ ಪ್ರಾರ್ಥನೆ ಸಲ್ಲಿಸಿದ ಬಳಿಕ ಕಾರಿನಲ್ಲಿ ತೆರಳುತ್ತಿದ್ದಾಗ ಕಾಸರಗೋಡಿನಿಂದ ಪುತ್ತೂರಿಗೆ ತೆರಳುತ್ತಿದ್ದ ಕರ್ನಾಟಕ ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಅಪಘಾತ ಉಂಟಾಗಿದೆ.

ಕಾರು ಸಂಪೂರ್ಣ ನಜ್ಜುಗುಜ್ಜು

ಅಪಘಾತದಲ್ಲಿ ಕಾರು ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿ ಸಿಲುಕಿದ್ದ ಶಂಸುದ್ದೀನ್ ಅವರನ್ನು ಸ್ಥಳೀಯರು ಸೇರಿ ಹೊರಕ್ಕೆ ತೆಗೆದರು. ತಕ್ಷಣ ಚೆರ್ಕಳದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಆದರೆ ಅವರ ಜೀವ ಉಳಿಸಲಾಗಲಿಲ್ಲ. ವಿದ್ಯಾನಗರ ಪೊಲೀಸರು ತನಿಖೆ ಕೈಗೊಂಡರು. ಸೌದಿ ಅರೇಬಿಯಾದಲ್ಲಿ ದೀರ್ಘಕಾಲ ಕೆಲಸ ಮಾಡಿದ್ದ ಶಂಸುದ್ದೀನ್, ನೆಲ್ಲಿಕ್ಕಟ್ಟೆ ಜುಮಾ ಮಸೀದಿ ಸಮಿತಿಯ ಸದಸ್ಯರಾಗಿದ್ದಾರೆ. ಅವರು ಹಲವು ವರ್ಷಗಳ ಹಿಂದೆ ಪೈಕದಿಂದ ನೆಲ್ಲಿಕ್ಕಟ್ಟೆಗೆ ಬಂದು ನೆಲೆಸಿದ್ದರು. ಮೃತರು ಪತ್ನಿ ರಹೀಮಾ, ಮಕ್ಕಳಾದ ರಾಶಿದ್, ಅರಾಫತ್, ಸಹದ್, ಫಾತಿಮಾ ಅವರನ್ನು ಅಗಲಿದ್ದಾರೆ.





ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯಕ್ಕೆ ಒಳಪಟ್ಟ ಕ್ರಿಸ್ತರಾಜ ದೇವಾಲಯ ನೆಲಸಮ | ಚರ್ಚ್‌ನ ಮಾಜಿ ಉಪಾಧ್ಯಕ್ಷರ ಆಕ್ರೋಶ

ಬಿಷಪ್ ನಿವಾಸದ ಮುಂದೆ ತೀವ್ರ ಪ್ರತಿಭಟನೆಯ ಎಚ್ಚರಿಕೆ

ಮಂಗಳೂರು: ಕಾಸರಗೋಡು ಜಿಲ್ಲೆಯ ಕಯ್ಯಾರದಲ್ಲಿದ್ದ ಮಂಗಳೂರು ಕ್ರೈಸ್ತ ಧರ್ಮಪ್ರಾಂತ್ಯಕ್ಕೆ ಒಳಪಟ್ಟ ಕ್ರಿಸ್ತರಾಜ ದೇವಾಲಯವನ್ನು ಕೆಡಹುವ ಮೂಲಕ ಭಕ್ತರ ಧಾರ್ಮಿಕ ಭಾವನೆಯನ್ನು ಘಾಸಿಗೊಳಿಸಲಾಗಿದೆ ಎಂದು ಚರ್ಚ್‌ನ ಮಾಜಿ ಉಪಾಧ್ಯಕ್ಷ ಜಾನ್ ಡಿಸೋಜ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1953ರಲ್ಲಿ ಫಾ.ಲಾರೆನ್ಸ್ ಎಸ್. ಪಾಯ್ಸ್ ಅವರ ನೇತೃತ್ವದಲ್ಲಿ ರೋಮನ್ ಗೋಥಿಕ್ ಶೈಲಿಯಲ್ಲಿ ಅತ್ಯಂತ ಕಲಾತ್ಮಕವಾಗಿ ರಚನೆಗೊಂಡಿತ್ತು. ಇದನ್ನು ಕೆಡಹುವ ಬದಲು ಅದನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬಹುದಿತ್ತು. ಶಿಲುಬೆ ಇರುವಾಗಲೇ ದೇವಾಲಯವನ್ನು ನೆಲಸಮ ಮಾಡಿರುವುದು ಭಕ್ತರಿಗೆ ನೋವನ್ನುಂಟು ಮಾಡಿದೆ ಎಂದರು.

ಪ್ರಸ್ತುತ ಇರುವ ಪಾದ್ರಿ ವಿಶಾಲ್ ಮೋನಿಸ್ ಅವರ ನೇತೃತ್ವದಲ್ಲಿ ಈಗಾಗಲೇ ಹೊಸ ದೇವಾಲಯದ ನಿರ್ಮಾಣ ಕಾರ್ಯ ಬೇರೆ ಸ್ಥಳದಲ್ಲಿ ನಡೆಯುತ್ತಿದೆ. ಹೊಸ ಕಟ್ಟಡಕ್ಕೆ ಹಳೆಯ ಭವ್ಯ ಕಟ್ಟಡದಿಂದ ಯಾವುದೇ ತೊಡಕು ಇರಲಿಲ್ಲ. ಆದರೆ ಸಮಿತಿಯ ಸ್ವಾರ್ಥದಿಂದಾಗಿ ಭವ್ಯವಾದ ಅತ್ಯಂತ ಪುರಾತನ ದೇವಾಲಯವನ್ನು ನೆಲಸಮ ಮಾಡಲಾಗಿದೆ. ಇದರೊಂದಿಗೆ ಅದ್ಭುತ ವಾಸ್ತುಶೈಲಿಯ, ಕಲಾತ್ಮಕ ಮಂದಿರ ಧರೆಗುರುಳಿದೆ ಇದನ್ನು ತೀವ್ರವಾಗಿ ಖಂಡಿಸುವುದಾಗಿ ಹೇಳಿದರು.



ಚರ್ಚ್ ಕಟ್ಟಡವು ಉರುಳಿಸಿದ ರೀತಿಯೂ ಆಘಾತಕಾರಿಯಾದುದು. ಶಿಲುಬೆ ಕ್ರೈಸ್ತರ ಬಹುಮುಖ್ಯ ಪವಿತ್ರ ಧಾರ್ಮಿಕ ಗುರುತಾಗಿದ್ದು, ಅದಕ್ಕೆ ಕನಿಷ್ಠ ಗೌರವವನ್ನೂ ಕೊಡದೆ ಉರಿಳಿಸಿದ ರೀತಿ ನೋವನ್ನುಂಟು ಮಾಡಿದೆ. ಇದಕ್ಕೆ ಚರ್ಚ್ ಸಮಿತಿ ಹಾಗೂ ಮಂಗಳೂರು ಬಿಷಪರು ಉತ್ತರ ನೀಡಬೇಕು. ಇಲ್ಲವಾದಲ್ಲಿ ಬಿಷಪ್ ನಿವಾಸದ ತೀವ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ವಿಲ್ಸನ್ ಜೆ.ಪಿ ಡಿಸೋಜ, ಅನೀಶ್ ಸುವಾರಿಸ್, ಆನ್‌ಸ್ಟನ್ ಸುವಾರಿಸ್, ಆಸ್ವಾಲ್ಡ್ ಡಿಸೋಜ, ಪ್ರಕಾಶ್ ನೊರೊನ್ಹಾ ಉಪಸ್ಥಿತರಿದ್ದರು.

ಆಡಳಿತ ಮಂಡಳಿ ಸ್ಪಷ್ಟನೆ

ಕಯ್ಯಾರ ಕ್ರಿಸ್ತರಾಜ ದೇವಾಲಯವನ್ನು ಸರ್ಕಾರಿ ಆದೇಶದಂತೆಯೇ ಕೆಡವಲಾಗಿದೆ. ಪೈವಳಿಕೆ ಪಂಚಾಯತ್‌ಗೆ ಚರ್ಚಿನ ಹಳೆ ಕಟ್ಟಡವನ್ನು ಪರಿಶೀಲಿಸಿ ಫಿಟ್‌ನೆಸ್ ರಿಪೋರ್ಟ್ ಕೇಳಿದ್ದೆವು. ಆದರೆ ಕಟ್ಟಡಕ್ಕೆ ಯಾವುದೇ ರೀತಿಯ ಸಕಾರಾತ್ಮಕ ವರದಿ ನೀಡಲು ಸಾಧ್ಯವಿಲ್ಲ; ಕಟ್ಟಡ ಶಿಥಿಲಗೊಂಡಿದ್ದು, ತೆರವುಗೊಳಿಸಲು ನಿರಪೇಕ್ಷಣಾ ಪ್ರಮಾಣ ಪತ್ರ ನೀಡಿದ್ದರು. ಕಟ್ಟಡ ತೀವ್ರ ಶಿಥಿಲಾವಸ್ಥೆಯಲ್ಲಿದ್ದ ಕಾರಣ ಶಿಲುಬೆ ತೆಗೆಯಲು ಸರ್ವ ಪ್ರಯತ್ನ ಮಾಡಿದ್ದರೂ ಸಾಧ್ಯವಾಗಿರಲಿಲ್ಲ. ಆದರೆ ಸಾಮಾಜಿಕ ಜಾಲತಾಣದಲ್ಲಿ ಶಿಲುಬೆ ಕೆಳಗೆ ಬೀಳುವುದರ ಬಗ್ಗೆ ವೀಡಿಯೋ ಹರಿದಾಡುತ್ತಿರುವುದು ವಿಷಾದನೀಯ. ಧರ್ಮಗುರುಗಳನ್ನು ತಪ್ಪಿತಸ್ಥರನ್ನಾಗಿ ಬಿಂಬಿಸುವ ಪ್ರಯತ್ನ ನಡೆದಿದೆ ಎಂದು ಚರ್ಚ್ ಆರ್ಥಿಕ ಸಮಿತಿ ಮತ್ತು ಪಾಲನಾ ಮಂಡಳಿಯ ಉಪಾಧ್ಯಕ್ಷ ರೋಶನ್ ಡಿಸೋಜ ಹಾಗೂ ಕಾರ್ಯದರ್ಶಿ ಜೋಸ್ವಿರ್ ಡಿಸೋಜ ಸ್ಪಷ್ಟೀಕರಣ ನೀಡಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 24° | ಉಡುಪಿ 31° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 22, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 3

ಅಪೆಮಿಡಿಗೆ ಸಿಕಿದೆ ಕರಾವಳಿ ಮಾರುಕಟ್ಟೆಯಲ್ಲಿ ಭರ್ಜರಿ ಬೇಡಿಕೆ



ಪುಟ 6

ಮುನಿಯಾಲಿನಲ್ಲಿ ಶ್ರೀ ಮನ್ನಾಗಮಂಡಲ ಸರ್ವ ಸಂಪನ್ನ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ವಾಮಂಜೂರು ತಿರುವೈಲುಗುತ್ತು ಸಂಕುಪೂಂಜ-ದೇವುಪೂಂಜ ಜೋಡುಕರೆಯಲ್ಲಿ ಕಂಡಿತು ಕಂಬಳದ ಜೋಶ್!



ಜೋಡುಕರೆ ಕಂಬಳ ಟ್ರಸ್ಟ್ ವಾಮಂಜೂರು ತಿರುವೈಲುಗುತ್ತು ವತಿಯಿಂದ ಶನಿವಾರ ನಡೆದ 14ನೇ ವರ್ಷದ ಸಂಕುಪೂಂಜ -ದೇವುಪೂಂಜ ಜೋಡುಕರೆ ಕಂಬಳದಲ್ಲಿ ಕೋಣಗಳ ಓಟ ಕಂಬಳ ಪ್ರಿಯರಿಗೆ ಭರಪೂರ ಮನರಂಜನೆ ನೀಡಿತು. ಈ ಕಂಬಳ ವೀಕ್ಷಿಸಲು ಊರು ಪರವೂರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಇಲ್ಲಿ ನೆರೆದಿದ್ದರು.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಇನ್ನೆರಡು ದಿನಗಳ ಕಾಲ ಮಳೆಯ ಸಾಧ್ಯತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದ ಜಿಲ್ಲೆಗಳ ವಿವಿಧ ಭಾಗಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಇನ್ನಷ್ಟು ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರದ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂದುವರಿದ ಸುಡು ಬಿಸಿಲು

ಈ ನಡುವೆ ಕರಾವಳಿ ಭಾಗದಲ್ಲಿ ಬಿಸಿಲಿನ ಪ್ರಖರತೆ ಶನಿವಾರ ಮತ್ತಷ್ಟು ಹೆಚ್ಚಳವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 36 ಡಿಗ್ರಿ ಸೆಲ್ಸಿಯೆಸ್ ಇದ್ದರೆ ಉಡುಪಿ ಜಿಲ್ಲೆಯಲ್ಲಿ 32 ಹಾಗೂ ಕಾಸರಗೋಡು ಜಿಲ್ಲೆಯಲ್ಲಿ 31 ಡಿಗ್ರಿ ಸೆಲ್ಸಿಯೆಸ್ ದಾಖಲಾಗಿತ್ತು. ತಾಪಮಾನ ಹೆಚ್ಚಳ ಹಿನ್ನೆಲೆಯಲ್ಲಿ ಕೆಮ್ಮು, ಶೀತ, ಜ್ವರ ಪ್ರಕರಣ ಹೆಚ್ಚಳವಾಗುತ್ತಿವೆ.

ದಕ್ಷಿಣ ಕನ್ನಡ, ಉಡುಪಿಯ ವಿವಿಧ ಕಡೆ ವರ್ಷಧಾರೆ
ಇಳೆಗೆ ತಂಪೆರೆದ ಮಳೆ
ಸುಬ್ರಹ್ಮಣ್ಯ ಪರಿಸರದಲ್ಲಿ ಗುಡುಗು ಮಿಂಚು ಸಾಥ್

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಕೆಲವು ಕಡೆ ಶನಿವಾರ ಸಂಜೆಯ ಬಳಿಕ ಭಾರೀ ಮಳೆಯಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ಪರಿಸರದಲ್ಲಿ ಮಳೆಗೆ ಗುಡುಗು ಮಿಂಚುಗಳು ಸಾಥ್ ನೀಡಿತ್ತು. ಬಹುತೇಕ ಕಡೆ ಸಂಜೆ ಆರು ಗಂಟೆ ಬಳಿಕ ಆರಂಭವಾದ ಮಳೆ, ಸುಮಾರು ಒಂದು ತಾಸು ಎಡೆಬಿಡದೆ ಸುರಿದಿದೆ.

ಅಚಾನಕ್ ಸುರಿದ ಮಳೆಯಿಂದ ಕೆಲವು ಕಡೆ ಅಂಗಳದಲ್ಲಿ ಹಾಕಿದ್ದ ಅಡಿಕೆ ಸಹಿತ ಕೃಷಿ ಉತ್ಪನ್ನ ಮಳೆಗೆ ಒದ್ದೆಯಾಗಿ ಸಂಕಷ್ಟ ತಂದಿತ್ತು. ಬೆಳ್ತಂಗಡಿ, ಸುಳ್ಯ, ಕಡಬದ ಕೆಲವು ಭಾಗಗಳಲ್ಲಿ ಮಳೆ ಹಲವು ಸಂಕಷ್ಟ ನಿರ್ಮಾಣವಾಗಿದೆ. »ಪುಟ 6



ಕಾರ್ಕಳದ ಹಲವೆಡೆ ವರ್ಷದ ಮೊದಲ ಮಳೆ

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಬಜಗೋಳಿ, ಮಾಳ, ನಲ್ಲೂರು ಮತ್ತು ಸಾಣೂರು ಗ್ರಾಮಗಳಲ್ಲಿ ಈ ವರ್ಷದ ಮೊದಲ ಅಕಾಲಿಕ ಮಳೆ ಸುರಿದಿದೆ. ಬಿರು ಬಿಸಿಲಿನಿಂದ ಸುಡುತ್ತಿದ್ದ ಇಳೆಗೆ ಮಳೆ ತಂಪನ್ನು ಎರೆದಿದೆ.

ನಾಡಿನ ಗಮನ ಸೆಳೆದಿದ್ದಾರೆ ಕೈಪಂಗಳ
ಜನಜಾಗೃತಿಗೆ ಏಕಾಂಗಿ 30 ಕಿಮೀ ಪಾದಯಾತ್ರೆ

ಮತದಾನ ಹಕ್ಕಿಗಾಗಿ ಸಾಗಿದ ಕೃಷಿಕನ ಹೆಜ್ಜೆ

ಪ್ರಜ್ಞಾವಂತ ನಾಗರಿಕರೊಬ್ಬರು ಜನಜಾಗೃತಿ ಮೂಡಿಸುವ ಸಲುವಾಗಿ ಪ್ರತಿಯೋರ್ವರಿಗೂ ಮತದಾನದ ಹಕ್ಕಿಗಾಗಿ ಪಾದಯಾತ್ರೆ ಎಂಬ ಸಮಗ್ರ ಉದ್ದೇಶದೊಂದಿಗೆ ತಮ್ಮ ಊರಿನಿಂದ ಕಾಸರಗೋಡು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಕಚೇರಿಗೆ ಏಕಾಂಗಿಯಾಗಿ 30 ಕಿಲೋ ಮೀಟರ್ ಪಾದಯಾತ್ರೆ ನಡೆಸಿದ್ದಾರೆ.

ಸಮಗ್ರ ವರದಿ ಪುಟ 5



ಸುತ್ತಮುತ್ತ

ಮಾ.2-7: ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನ ಜಾತ್ರೆ

ಮುಲ್ಕಿ: ಪಡುಪಣಂಬೂರು ಸಮೀಪದ ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದಲ್ಲಿ ಶ್ರೀ ವೀರಭದ್ರ ಮಹಾಗಣಪತಿ ದೇವರ ವಾರ್ಷಿಕ ಜಾತ್ರೆ ಮತ್ತು ಶ್ರೀ ಮಹಮ್ಮಾಯಿ ಅಮ್ಮನವರ ಮಾರಿಪೂಜೆ ಬ್ರಹ್ಮಶ್ರೀ ಶಿಬರೂರು ಶ್ರೀ ವೇದವ್ಯಾಸ ತಂತ್ರಿಗಳವರ ನೇತೃತ್ವದಲ್ಲಿ ಮಾ. 2ರಿಂದ 7 ರ ವರೆಗೆ ನಡೆಯಲಿದೆ. ಮಾ. 2ರಂದು ಸಂಜೆ ತೋರಣ ಮುಹೂರ್ತ, ಉಗ್ರಾಣ ಮುಹೂರ್ತ, 3ರ ಬೆಳಿಗ್ಗೆ ಗಣಹೋಮ,, ಧ್ವಜಾರೋಹಣ, ಬಲಿ, ಮಹಾಪೂಜೆ, ರಾತ್ರಿ ಮಹಾಪೂಜೆ, ರಂಗಪೂಜೆ, ಉತ್ಸವ ಬಲಿ ಚಂದ್ರಗ್ರಹಣ ನಿಮಿತ್ತ ರಾತ್ರಿ ಅನ್ನಸಂತರ್ಪಣೆ, 4ರಂದು ಬೆಳಿಗ್ಗೆ ಶ್ರೀ ವೀರಭದ್ರ ದೇವರಿಗೆ ಮಹಾಪೂಜೆ, ಸಂಜೆ ಸಾಮೂಹಿಕ ಹೂವಿನ ಪೂಜೆ,ರಾತ್ರಿ ಮಹಾಪೂಜೆ, ಉತ್ಸವ ಬಲಿ, 5 ರ ಬೆಳಿಗ್ಗೆ: ಶ್ರೀ ವೀರಭದ್ರ ದೇವರಿಗೆ ಮಹಾಪೂಜೆ ಮಧ್ಯಾಹ್ನ ಪಲ್ಲಪೂಜೆ, ಸಂಜೆ ಮಹಾಪೂಜೆ, ಉತ್ಸವ ಬಲಿ, ಕಟ್ಟೆಪೂಜೆ ಶ್ರೀ ರುದ್ರ ಪುಷ್ಕರಣಿಯಲ್ಲಿ ಶ್ರೀ ಸ್ವಾಮಿಯ ಅವಭೃತ ಸ್ನಾನ, ಧೂಮಾವತಿ ಬಂಟ ದೈವಗಳ ಭೇಟಿ, ಧ್ವಜಾವರೋಹಣ, ಪ್ರಸಾದ ವಿತರಣೆ, 6ರ ಬೆಳಿಗ್ಗೆ ಗಣಹೋಮ, ಶ್ರೀ ನಾಗದೇವರಿಗೆ ತಂಬಿಲ, ಶ್ರೀ ದೇವಿ ಕಲಶ ಪ್ರತಿಷ್ಠೆ ತುಲಾಭಾರ ಸೇವೆ, ಪೂರ್ಣಾಹುತಿ, ಮಹಾಪೂಜೆ, ಮಹಾಮಂತ್ರಾಕ್ಷತೆ, ಶ್ರೀ ದೇವಿ ದರ್ಶನ.,ಮಧ್ಯಾಹ್ನ ಪಲ್ಲಪೂಜೆ, ಮಹಾ ಅನ್ನಸಂತರ್ಪಣೆ, ಸಂಜೆ ಶ್ರೀ ಧೂಮಾವತಿ ಬಂಟ ಪರಿವಾರ ದೈವಗಳ ಭಂಡಾರ ಆಗಮನ,ರಾತ್ರಿ ಪರಿವಾರ ದೈವಗಳ ನೇಮೋತ್ಸವ,ಶ್ರೀ ವೀರಭದ್ರ ದೇವರ ಸನ್ನಿಧಿಯಲ್ಲಿ ಮಹಾಪೂಜೆ, ರಂಗಪೂಜೆ ಶ್ರೀ ಮಹಾಗಣಪತಿ ದೇವರ ಸನ್ನಿಧಿಯಲ್ಲಿ ಮಹಾಪೂಜೆ, ಶ್ರೀ ಧೂಮಾವತಿ ಬಂಟ ದೈವಗಳ ನೇಮೋತ್ಸವ,ರಾತ್ರಿ ಶ್ರೀ ದೇವಿ ಸನ್ನಿಧಿಯಲ್ಲಿ ಮಹಾಪೂಜೆ ಶ್ರೀ ದೇವಿ ದರ್ಶನ, 7 ರ ಬೆಳಿಗ್ಗೆ ಶ್ರೀ ಧೂಮಾವತಿ ಬಂಟ ದೈವಗಳ ಭಂಡಾರ ನಿರ್ಗಮನ, ಮಧ್ಯಾಹ್ನ ಮಹಾಪೂಜೆ, ಶ್ರೀ ದೇವಿ ದರ್ಶನ, ಹರಕೆ, ಕಲಶ ವಿಸರ್ಜನೆ, ಪ್ರಸಾದ ವಿತರಣೆ ನಡೆಯಲಿದೆಯೆಂದು ಪ್ರಕಟಣೆ ತಿಳಿಸಿದೆ.

ಫೆ.25: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪ್ರವಾಸ

ಮಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಫೆ.25ರಂದು ಬೆಳಿಗ್ಗೆ 9.30ಕ್ಕೆ ಸುಳ್ಯ ಕುರುಂಜಿಬಾಗ್ ನೆಹರೂ ಮೆಮೋರಿಯಲ್ ಕಾಲೇಜಿನ ಸಭಾಭವನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಹಿರಿಯ ವಿದ್ಯಾರ್ಥಿ ಸಂಘ, ನೆಹರೂ ಮೆಮೋರಿಯಲ್ ಕಾಲೇಜು, ಸುಳ್ಯ ಇವರ ಸಹಯೋಗದಲ್ಲಿ 'ಒಂದು ದಿನದ ವಿಚಾರ ಗೋಷ್ಠಿ' ಕಾರ್ಯಕ್ರಮ ಪಾಲ್ಗೊಳ್ಳುವರು.

ಫೆ. 26ರಂದು ಬೆಳಿಗ್ಗೆ 10ರಂದು ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘ ಇವರ ಸಹಯೋಗದಲ್ಲಿ ಆಯೋಜಿಸಲಾಗಿರುವ 'ಕಾಸರಗೋಡಿನಲ್ಲಿ ಕನ್ನಡ ಅಸ್ಮಿತೆ ಯುವಶಕ್ತಿ ಮತ್ತು ಭವಿಷ್ಯ ವಿಚಾರ ಸಂಕಿರಣ ಕಾರ್ಯಕ್ರಮ'ದಲ್ಲಿ ಪಾಲ್ಗೊಳ್ಳುವರು. ಫೆ. 27ರಂದು ಸುಳ್ಯದಿಂದ ಬೆಂಗಳೂರಿಗೆ ತೆರಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯಾರಶ್ಮಿ ಕಾಲೇಜಿನಲ್ಲಿ ಗರ್ಭಾಶಯ ಕ್ಯಾನ್ಸರ್ ಜಾಗೃತಿ

ಸವಣೂರು: ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಿಳಾ ದೌರ್ಜನ್ಯ ವಿರೋಧಿ ಘಟಕದ ಸಹಯೋಗದಲ್ಲಿ ಗರ್ಭಾಶಯ ಕ್ಯಾನ್ಸರ್ ಜಾಗೃತಿ ನಡೆಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ. ರಾಜಲಕ್ಷ್ಮೀ ಎಸ್. ರೈ ಉದ್ಘಾಟಿಸಿ, ಮಹಿಳೆಯ ಆರೋಗ್ಯದ ಬಗ್ಗೆ ಜಾಗೃತಿ ಅತ್ಯಂತ ಮುಖ್ಯ ಎಂದು ಹೇಳಿದರು. ಮುಖ್ಯ ಅತಿಥಿಯಾಗಿದ್ದ ಕೇರ್ ಎಂಡ್ ಸೇಫ್ ಆಫ್ ಇಂಡಿಯಾದ ಅಮಿತ ನಾಯಕ್ ಅವರು, ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸುವುದರಿಂದ ಆಗುವಂತಹ ದುಷ್ಪರಿಣಾಮಗಳ ಬಗ್ಗೆ ತಿಳಿ ಹೇಳಿದರು.

ಕಾಲೇಜಿನ ಮಹಿಳಾ ದೌರ್ಜನ್ಯ ವಿರೋ ಘಟಕದ ಸಂಯೋಜಕಿ ಪ್ರತಿಭಾ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಗಳಾದ ತೇಜಸ್ವಿನಿ ಮತ್ತು ತಂಡದವರ ಪ್ರಾರ್ಥಿಸಿದರು. ವಿದ್ಯಾರ್ಥಿ ಸಂಯೋಜಕಿ ಅಂಕಿತಾ ಸ್ವಾಗತಿಸಿ, ಅಸ್ಮಿತಾ ವಂದಿಸಿದರು.

ಕಲ್ಪನಾ ಕಾರ್ಯಕ್ರಮ ನಿರ್ವಹಿಸಿದರು.

ನ್ಯಾಯಾಲಯ ನಿರ್ಮಾಣಕ್ಕೆ ಮೀಸಲಿಟ್ಟ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಿದ್ಧತೆ | ತಹಸೀಲ್ದಾರ್ ಅವರಿಂದ ತಡೆ

ನ್ಯಾಯ ನೀಡದಿದ್ದರೆ ಆತ್ಮಹತ್ಯೆ: ಪ್ರತಿಭಟನಾನಿರತನ ಅಳಲು

ಕಡಬ: ತಾಲೂಕು ಕೇಂದ್ರವಾಗಿರುವ ಕಡಬದಲ್ಲಿ ನ್ಯಾಯಾಲಯ ಪ್ರಾರಂಭಿಸಲು ಪ್ರಕ್ರಿಯೆಗಳು ನಡೆಯುತ್ತಿರುವಾಗಲೇ ನ್ಯಾಯಾಲಯ ನಿರ್ಮಾಣಕ್ಕೆಂದು ಮೀಸಲಿಟ್ಟಿದ್ದು, ಎಂದು ಹೇಳಲಾದ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ಕಡಬ ತಹಶೀಲ್ದಾರ್ ಜೆಸಿಬಿ ಕೆಲಸಕ್ಕೆ ತಡೆ ನೀಡಿದ ಘಟನೆ ಶುಕ್ರವಾರ ನಡೆದಿದೆ.

ಕಡಬ ತಹಶೀಲ್ದಾರ್ ಕಚೇರಿ ಪಕ್ಕದಲ್ಲಿ ಸ.ನಂ. 78/3ಎ1ಸಿ1ರಲ್ಲಿ 1.77 ಎಕ್ರೆ ಹಾಗೂ ಸ.ನಂ. 130/1ಎ1 ರಲ್ಲಿ 1,23 ಎಕ್ರೆ ಒಟ್ಟು ಮೂರು ಎಕ್ರೆ ಜಾಗವನ್ನು 2023-24ರಲ್ಲಿ ನ್ಯಾಯಾಲಯ ನಿರ್ಮಾಣಕ್ಕಾಗಿ ಮೀಸಲಿಟ್ಟು ಪಹಣಿ ಮಾಡಲಾಗಿದೆ. ಈ ಜಾಗವನ್ನು ಅಕ್ರಮಿಸಿ ಪಡೆದಿರುವ ಹಕ್ಕುಪತ್ರಗಳನ್ನು ರದ್ದುಗೊಳಿಸಲಾಗಿದೆ ಎಂದು ಹೇಳಲಾಗಿದೆ. ಇದೇ ಜಾಗದಲ್ಲಿ 94 ಸಿ ಯಲ್ಲಿ ಹಕ್ಕು ಪತ್ರ ಪಡೆದು ಸಣ್ಣ ಮನೆ ನಿರ್ಮಿಸಿಕೊಂಡಿರುವ ಯಮುನಾ ನಾಗೇಶ್ ಅವರ ಜಾಗ ಕೂಡಾ ಇತ್ತು. ಆದರೆ, ಅವರು ನಿರ್ಮಿಸಿರುವ ಶೆಡ್‌ಗಳು ಹಾಗೂ ಮನೆಗಳು ಮಾತ್ರ ತೆರವುಗೊಂಡಿಲ್ಲ ಎಂದು



ಹೇಳುವ ಅಧಿಕಾರಿಗಳು, ಹಕ್ಕುಪತ್ರ ರದ್ದಾಗಿರುವ ವಿಚಾರ ಯಮುನಾ ನಾಗೇಶ್ ಅವರಿಗೆ ತಿಳಿಯದೆ ಮನೆ ನಿರ್ಮಾಣ ಮಾಡಲು ಹೊರಟಿದ್ದರು. ಅದು ಗಮನಕ್ಕೆ ಬಂದಾಗ ಕೆಲಸ ಕಾರ್ಯಗಳಿಗೆ ತಡೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ತಾಲೂಕು ಕಚೇರಿ ಎದುರು ಪ್ರತಿಭಟನೆ

ಅಡಿಪಾಯ ಕೆಲಸಕ್ಕೆ ತಡೆ ನೀಡಿದ ತಕ್ಷಣ ಯಮುನಾ ಹಾಗೂ ಅವರ ಪತಿ ನಾಗೇಶ್ ಅವರು ಕಡಬ ತಾಲೂಕು ಕಚೇರಿ ಎದುರು ಬಂದು ಪ್ರತಿಭಟಿಸಿದರು. ನನಗೆ 94 ಸಿ ಅಡಿಯಲ್ಲಿ ಮಂಜೂರಾದ ಜಾಗದಲ್ಲಿ ನಾನು ಮಣ್ಣು ತೆಗೆಯುತ್ತಿದ್ದಾಗ ತಹಶೀಲ್ದಾರರು ಬಂದು ಕೆಲಸಕ್ಕೆ ತಡೆ ನೀಡಿರುವುದು ಮಾತ್ರವಲ್ಲದೆ ನಮ್ಮ ಹಕ್ಕು ಪತ್ರವನ್ನು ರದ್ದು ಮಾಡಿದ್ದಾರೆ ಎಂದು ಆರೋಪಿಸಿದರು. ನನಗೆ ನ್ಯಾಯ ಕೊಡಿ ಇಲ್ಲದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದರು. ಕಡಬದಲ್ಲಿ ಚಾಲಕರಾಗಿ ಕೆಲಸ ಮಾಡುತ್ತಿದ್ದು ಪ್ರಸ್ತುತ ಸಕ್ಕರೆ ಕಾಯಿಲೆಯಿಂದಾಗಿ ತೀವ್ರ ಅನಾರೋಗ್ಯ ಪೀಡಿತರಾಗಿ ತನ್ನ ಒಂದು ಕಾಲನ್ನು ಕಳೆದುಕೊಂಡು ದುಡಿಯಲು ಶಕ್ತಿ ಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿರುವ ನಾಗೇಶ್ ಅವರಿಗೆ ನ್ಯಾಯ ಒಗಿಸುವ ಭರವಸೆ ದೊರೆಯಿತು.

ಸ್ಥಳಕ್ಕಾಗಮಿಸಿದ ಗ್ಯಾರಂಟಿ ಯೋಜನೆಗಳು ಅನುಷ್ಠಾನ ಸಮಿತಿಯ ಕಡಬ ತಾಲೂಕು ಅಧ್ಯಕ್ಷ ಸುಧೀರ್ ಕುಮಾರ್ ಶೆಟ್ಟಿ ಅವರು, ನಾಗೇಶ್ ಅನಾರೋಗ್ಯ ಪೀಡಿತರಾಗಿ ಸಂಕಷ್ಟದಲ್ಲಿದ್ದಾರೆ. ಇಂತಹ ಪರಿಸ್ಥಿಯಲ್ಲಿ ಅವರಿಗೆ ಅನ್ಯಾಯವಾಗಬಾರದು. ಅವರಿಗೆ ನ್ಯಾಯ ಒದಗಿಸಕೊಡಬೇಕು ಎಂದು ಆಗ್ರಹಿಸಿದರು. ನಾಗೇಶ್ ಅವರನ್ನು ಪ್ರತಿಭಟನೆ ಕೈಬಿಡುವಂತೆ ಮನವೊಲಿಸಿ ಅವರಿಗೆ ನ್ಯಾಯ ವ್ಯವಸ್ಥೆ ಮಾಡಿಸಿಕೊಡವಲ್ಲಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಮಾನವೀಯ ದೃಷ್ಟಿ ಮುಖ್ಯ

ಯಮುನಾ ನಾಗೇಶ್ ಅವರಿಗೆ ಯಾವುದೇ ನೋಟೀಸ್ ನೀಡದೆ ಮಣ್ಣು ಅಗೆತದ ಕೆಲಸಗಳಿಗೆ ತಡೆ ನೀಡಿರುವುದು ಸರಿಯಲ್ಲ. ಕಾನೂನಾತ್ಮಕವಾಗಿ ಅವರ ಹಕ್ಕು ಪತ್ರ ರದ್ದಾಗಿದ್ದರೂ, ಮಾನವೀಯ ದೃಷ್ಟಿಯಿಂದ ನಾಗೇಶ್ ಕುಟುಂಬಕ್ಕೆ ಬೇರೆ ಜಾಗ ಗುರುತಿಸಿ ಕೊಡಬೇಕಾಗಿದೆ. ತಹಶೀಲ್ದಾರರು ಬೇರೆ ಕಡೆ ಜಾಗ ನೀಡುವ ಭರವಸೆ ನೀಡಿದ್ದಾರೆ. ಅದು ಈಡೇರದಿದ್ದಲ್ಲಿ ಮುಂದೆ ಹೋರಾಟ ನಡೆಸಲಾಗುವುದು.

● - ಸುಧೀರ್ ಕುಮಾರ್ ಶೆಟ್ಟಿ, ಅಧ್ಯಕ್ಷರು, ಗ್ಯಾರಂಟಿ ಯೋಜನೆಗಳು ಕಡಬ ತಾಲೂಕು ಅನುಷ್ಠಾನ ಸಮಿತಿ

ಪರ್ಯಾಯ ವ್ಯವಸ್ಥೆ

ಯಮುನಾ ನಾಗೇಶ್‌ಗೆ 94 ಸಿಯಲ್ಲಿ ಮಂಜೂರಾದ ಹಕ್ಕು ಪತ್ರ 2016ರಲ್ಲಿ ರದ್ದಾಗಿದೆ. ಈ ವಿಚಾರದಲ್ಲಿ ಅವರು ಕಾನೂನಾತ್ಮಕ ಹೋರಾಟ ಮಾಡಿಲ್ಲ. ಆ ಜಾಗವನ್ನು ಈಗಾಗಲೇ ನ್ಯಾಯಾಲಯ ನಿರ್ಮಾಣಕ್ಕೆ ಮೀಸಲಿರಿಸಲಾಗಿದೆ. ಅದರಲ್ಲಿ ಅವರು ಮನೆ ನಿರ್ಮಾಣ ಮಾಡಲು ತಯಾರಿ ನಡೆಸಿದ ಬಗ್ಗೆ ಮಾಹಿತಿ ಸಿಕ್ಕ ಹಿನ್ನೆಲೆಯಲ್ಲಿ ಕೆಲಸ ಕಾರ್ಯ ನಿಲ್ಲಿಸಲು ಸೂಚಿಸಲಾಗಿದೆ. ನಾಗೇಶ್ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಬೇರೆ ಸರಕಾರಿ ಜಾಗದ ಗುರುತಿಸಿಕೊಡಲಾಗುವುದು.

● ಪ್ರಭಾಕರ ಖಜೂರೆ, ತಹಶೀಲ್ದಾರರು, ಕಡಬ

ಪಾವಂಜೆ ದೇವಸ್ಥಾನದಲ್ಲಿ ವಿಜೃಂಭಣೆಯ ಹಗಲು ರಥೋತ್ಸವ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ ಪ್ರಯುಕ್ತ ಹಗಲು ರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಕ್ಷೇತ್ರದತಂತ್ರಿಗಳಾದಕೊಡವೂರುರಾಧಾಕೃಷ್ಣ ಉಪಾಧ್ಯಾಯ ಮಾರ್ಗದರ್ಶನದಲ್ಲಿ ಅರ್ಚಕ ವಾಸುದೇವ ಭಟ್ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ಬೆಳಿಗ್ಗೆ 9.45 ಕ್ಕೆ ಮಹಾಪೂಜೆ, ಬಳಿಕ ಪಲ್ಲಕ್ಕಿಯಲ್ಲಿ ಶ್ರೀ ದೇವರು ವಿರಾಜಮಾನರಾಗಿ ಶ್ರೀ ದೇವರ ಬಲಿ ಹೊರಟು ಬಾಕಿಮಾರ್ ಗದ್ದೆಯಲ್ಲಿ ಶ್ರೀ ದೇವರ ರಥಾರೋಹಣ ನಡೆಯಿತು, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಹೂವಿನ ಪೂಜೆ, ರಾತ್ರಿ 8.30ಕ್ಕೆ ಬಯನ ಬಲಿ, ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಕಟ್ಟೆ ಪೂಜೆ, ಮೆಟ್ಲು ದೀಪ, ಶ್ರೀ ಭೂತ ಬಲಿ, ಕವಾಟ ಬಂಧನ ನಡೆಯಿತು.

ಈ ಸಂದರ್ಭ ವಿದ್ವಾನ್ ಕೃಷ್ಣ ಭಟ್ ಪಾವಂಜೆ, ದೇವಸ್ಥಾನದ ಆಡಳಿತ ಮೊಕ್ತೇಸರ ಸೂರ್ಯ ಕುಮಾರ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುವೈಲು, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಡಾ.ಶಿವಾನಂದ ಪ್ರಭು, ಯಾದವ ದೇವಾಡಿಗ, ಸುಭಾಷ್ ಕೋಟ್ಯಾನ್,ಜಯ ಕೃಷ್ಣ ಕೋಟ್ಯಾನ್, ಸಿ ಸುಕುಮಾರ್, ತನುಜಾ ಶೆಟ್ಟಿ ರತ್ನ ಎಸ್ ಕೋಟ್ಯಾನ್, ಎಸ್ಕೆಪಿಎ ವಿವಿಧೋದ್ದೇಶ ಸಹಕಾರಿ ಸಂಘದ ಸದಸ್ಯ ಮೋಹನ್ ರಾವ್ ಇದ್ದರು

ಫೆ. 22ಕ್ಕೆ ಮಹಾರಥೋತ್ಸವ

ಶ್ರೀ ಕ್ಷೇತ್ರದ ಜಾತ್ರಾ ಮಹೋತ್ಸವದ ಅಂಗವಾಗಿ ಫೆ. 22ರಂದು ಬೆಳಿಗ್ಗೆ 7ಕ್ಕೆ ಕವಾಟೋದ್ಘಾಟನೆ, ತುಲಾಭಾರ ಸೇವೆ, ರಾತ್ರಿ ಮಹಾ ರಥೋತ್ಸವ, ತೆಪ್ಪೋತ್ಸವ ಧ್ವಜಾವರೋಹಣ ನಡೆಯಲಿದೆ.

ದಾನಿಗಳ ನೆರವಿನಿಂದ ನಿರ್ಮಿಸಿದ ಹೊಸ ಮನೆ ಸೀತಮ್ಮಗೆ ಹಸ್ತಾಂತರ



ಸುಳ್ಯ: ಆರ್ಥಿಕವಾಗಿ ಹಿಂದುಳಿದ ಅಮರಮುಡ್ನೂರು ಗ್ರಾಮದ ಹೊನ್ನೆಕಡ್ಪು ಸೀತಮ್ಮ ಮತ್ತು ಮಕ್ಕಳಿಗೆ ದಾನಿಗಳ ನೆರವಿನಿಂದ ನಿರ್ಮಿಸಿದ ಮನೆ ಹಸ್ತಾಂತರ ಶನಿವಾರ ನಡೆಯಿತು.

ನೂತನವಾಗಿ ನಿರ್ಮಿಸಿದ ಮನೆಯನ್ನು ಜೆಎಂಜೆ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ. ಮಾತನಾಡಿ, ಮನೆ, ಶೌಚಾಲಯ ಇಲ್ಲದ ಕುಟುಂಬಗಳು ಈಗಲೂ ಇರುವುದು ವಿಷಾದನೀಯ. ಸಮಾಜದ ಅಶಕ್ತ ಕುಟುಂಬಕ್ಕೆ ನೆರವಾಗುವುದು ಎಲ್ಲರ ಕರ್ತವ್ಯ. ಎಲ್ಲರ ಪ್ರಯತ್ನ ಮತ್ತು ದುಡಿಮೆಯಿಂದ ಮನೆ ನಿರ್ಮಾಣ ಸಾಧ್ಯವಾಗಿದೆ. ಎಷ್ಟೇ ಹಣ ಇದ್ದರೂ ಹಲವರಿಗೆ ಕೊಡುವ ಮನಸ್ಸು ಇರುವುದಿಲ್ಲ. ಆರ್ಥಿಕವಾಗಿ ಸಬಲರಾದವರು ಆದಾಯದ ಒಂದಿಷ್ಟು ಮೊತ್ತವನ್ನು ಸಮಾಜದ ಕಡು ಬಡವರ ಏಳಿಗೆಗಾಗಿ ವ್ಯಯಿಸಬೇಕು. ಜೊತೆಗೆ ಅಶಕ್ತರ ನೆರವಿಗೆ ಆರ್ಥಿಕವಾಗಿ ಶಕ್ತರಾದವರು ಶ್ರಮಿಸಬೇಕು ಎಂದರು.

ವೇದಿಕೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಅಶೋಕ್ ನೆಕ್ರಾಜೆ, ಸುಳ್ಯ ತಾಲೂಕು ಮರಾಟಿ ಸೇವಾ ಸಂಘದ ಅಧ್ಯಕ್ಷ ಬಾಲಕೃಷ್ಣ ನಾಯ್ಕ್ ಅಜ್ಜಾವರ, ಪತ್ರಕರ್ತ ಹರೀಶ್ ಬಂಟ್ವಾಳ್, ಪತ್ರಕರ್ತ ಈಶ್ವರ ವಾರಣಾಸಿ, ಪದ್ಮನಾಭ ಬೀಡು, ಗ್ರಾ.ಪಂ. ಮಾಜಿ ಸದಸ್ಯೆ ದಿವ್ಯಾ ಮಡಪ್ಪಾಡಿ, ಕೊರಗಪ್ಪ ಕುರುಂಬುಡೇಲು, ಪ್ರದೀಪ್ ಉಬರಡ್ಕ, ಗೋಪಾಲಕೃಷ್ಣ ಪೊಸವಳಿಗೆ, ಕೇಶವ ಗೌಡ ಪರಿವಾರ, ಮಾಯಿಲಪ್ಪ ಸಂಕೇಶ ಇದ್ದರು. ಸೀತಮ್ಮ ಅವರ ಕುಟುಂಬದ ಸ್ಥಿತಿಗತಿಗಳನ್ನು ಕಂಡು ಈಶ್ವರ ವಾರಣಾಸಿ, ಕೊರಗಪ್ಪ ನಾಯ್ಕ ಕುರುಂಬಡೇಲು, ತೀರ್ಥರಾಮ ಮಣಿಮಜಲು, ಮಾಧವ ಗೌಡ ಕಜಿ ಮೂಲೆ, ಆನಂದ ಆಲೆಟ್ಟಿ, ಕೇಶವ ಪರಿವಾರ ಅವರ ನೇತೃತ್ವದಲ್ಲಿ ದಾನಿಗಳ ನೆರವಿನಿಂದ ಮನೆ ನಿರ್ಮಿಸಿ ನೀಡಲಾಯಿತು. ಅಲ್ಲದೆ, ವಿದ್ಯುತ್ ಸಂಪರ್ಕವನ್ನು ಉಚಿತವಾಗಿ ದಾನಿಯೋರ್ವರು ನೀಡಿದ್ದಾರೆ.

ಕಲಾವಿದ ಲಕ್ಷ್ಮಣ ಶೆಟ್ಟಿ ತಾರೆಮಾರ್‌ಗೆ ಶಂಭೂರಲ್ಲಿ ಬೊಂಡಾಲ ಪ್ರಶಸ್ತಿ ಪ್ರದಾನ



ಬಂಟ್ವಾಳ: ಹಳೆ ತಲೆಮಾರಿನ ಅರ್ಥಧಾರಿ, ಶಿಕ್ಷಕ ಮತ್ತು ಶಂಭೂರು ಗ್ರಾಮದ ಪಟೇಲ ದಿ. ಬೊಂಡಾಲ ಜನಾರ್ಧನ ಶೆಟ್ಟಿ ಮತ್ತು ಅವರ ಪುತ್ರ ಹವ್ಯಾಸಿ ಯಕ್ಷಗಾನ ಕಲಾವಿದ, ನಿವೃತ್ತ ಭೂಮಾಪನ ಅಧಿಕಾರಿ ದಿ. ಬೊಂಡಾಲ ರಾಮಣ್ಣ ಶೆಟ್ಟರ ಹೆಸರಿನಲ್ಲಿ ನೀಡಲಾಗುವ 'ಬೊಂಡಾಲ ಪ್ರಶಸ್ತಿ'ಯನ್ನು ಕಟೀಲು ಮೇಳದ ಹಿರಿಯ ವೇಷಧಾರಿ ಲಕ್ಷ್ಮಣ ಶೆಟ್ಟಿ ತಾರೆಮಾರ್ ಅವರಿಗೆ ಶುಕ್ರವಾರ ರಾತ್ರಿ ಬಂಟ್ವಾಳ ತಾಲೂಕು ಶಂಭೂರು ಗ್ರಾಮದ ಬೊಂಡಾಲದಲ್ಲಿ ನಡೆದ ಯಕ್ಷಗಾನ ಬಯಲಾಟ ವೇದಿಕೆಯಲ್ಲಿ ಬೊಂಡಾಲ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನೀಡಿ ಗೌರವಿಸಲಾಯಿತು.

ಮಾಜಿ ಸಚಿವ ಬಿ. ರಮಾನಾಥ ರೈ ಅಧ್ಯಕ್ಷತೆ ವಹಿಸಿದ್ದರು. ಕಟೀಲು ಕ್ಷೇತ್ರದ ಆನುವಂಶಿಕ ಅರ್ಚಕ ವೇ. ಮೂ. ಲಕ್ಷ್ಮೀನಾರಾಯಣ ಆಸ್ರಣ್ಣ ಮಾತನಾಡಿ, ಕಟೀಲು ಏಳನೇ ಮೇಳ ಆರಂಭವಾಗಿರುವುದು ಜನರಲ್ಲಿ ಯಕ್ಷಗಾನದ ಮೇಲೆ ಪ್ರೀತಿ, ಕ್ಷೇತ್ರದ ಮೇಲಿನ ನಂಬಿಕೆಗೆ ಸಾಕ್ಷಿಯಾಗಿದೆ. ಧಾರ್ಮಿಕ ಪ್ರಜ್ಞೆ ಯಕ್ಷಗಾನದಿಂದ ಸಿಗುತ್ತದೆ, ಜನರೆಲ್ಲ ಸತ್ಯಮಾರ್ಗದಲ್ಲಿ ನಡೆಯಲು ಯಕ್ಷಗಾನ ಪ್ರೇರಣೆಯಾಗಿದೆ ಎಂದರು.

ಕಟೀಲು ಕ್ಷೇತ್ರದ ಆನುವಂಶಿಕ ಅರ್ಚಕ ವೇ.ಮೂ.ಅನಂತಪದ್ಮನಾಭ ಆಸ್ರಣ್ಣ ಮಾತನಾಡಿ ಹಿರಿಯರು ಹಾಕಿದ ಮಾರ್ಗವನ್ನು ಬೊಂಡಾಲ ಬಂಧುಗಳು ಮುಂದುವರೆಸುತ್ತಿದ್ದಾರೆ ಎಂದರು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಶುಭ ಹಾರೈಸಿ ಯಕ್ಷಗಾನ ಕ್ಷೇತ್ರಕ್ಕೆ ಬೊಂಡಾಲ ಕುಟುಂಬದವರು ನೀಡುವ ಕೊಡುಗೆಯನ್ನು ಶ್ಲಾಘಿಸಿದರು.

ಬಂಟ್ವಾಳ ಬಂಟರ ಸಂಘದ ಕೋಶಾಧಿಕಾರಿ ಲೋಕೇಶ್ ಶೆಟ್ಟಿ ಕುಳ, ಧಾರ್ಮಿಕ ಪರಿಷತ್ ನಾಮನಿರ್ದೇಶಿತ ಸದಸ್ಯ ಬಡಾಜೆಗುತ್ತು ರವಿಶಂಕರ ಶೆಟ್ಟಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಬೊಂಡಾಲ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬೊಂಡಾಲ ಸಚ್ಚಿದಾನಂದ ಶೆಟ್ಟಿ ಸ್ವಾಗತಿಸಿದರು. ಸುನಾದ್ ರಾಜ್ ಶೆಟ್ಟಿ ಸನ್ಮಾನಪತ್ರ ವಾಚಿಸಿದರು. ಆಯ್ಕೆ ಸಮಿತಿ ಸಂಚಾಲಕ ಕರ್ನಾಟಕ ಜಾನಪದ, ಯಕ್ಷಗಾನ ಮತ್ತು ತುಳು ಸಾಹಿತ್ಯ ಅಕಾಡೆಮಿ ಮಾಜಿ ಸದಸ್ಯ ಪ್ರೊ.ಭಾಸ್ಕರ ರೈ ಕುಕ್ಕುವಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಟ್ರಸ್ಟ್ ಅಧ್ಯಕ್ಷ ಬೊಂಡಾಲ ಸೀತಾರಾಮ ಶೆಟ್ಟಿ ವಂದಿಸಿದರು. ಗುರುವಾರ ರಾತ್ರಿ ಶ್ರೀ ದುರ್ಗಾಪರಮೇಶ್ವರಿ ಬಯಲಾಟ ಸೇವಾ ಸಮಿತಿ ಮತ್ತು ಹತ್ತು ಸಮಸ್ತರ ವತಿಯಿಂದ 'ಕಲಿ ಕೀಚಕ' ಹಾಗೂ ಶುಕ್ರವಾರ ಬೊಂಡಾಲ ಚಾರಿಟೇಬಲ್ ಟ್ರಸ್ಟ್ ವತಿಯಿಂದ 'ಶ್ರೀದೇವಿ ಮಹಾತ್ಮೆ' ಸೇವಾ ಬಯಲಾಟಗಳು ನಡೆಯಿತು.

ರೋಮನ್-ಕ್ಯಾಥರಿನ್ ಲೋಬೊ ದೃಷ್ಟಿ ಮಾಂದ್ಯ ಮಕ್ಕಳ ಶಾಲೆಯಲ್ಲಿ ವಿಜ್ಞಾನ ಮೇಳ



ಮಂಗಳೂರು: ಮಂಗಳೂರು ಸೇವಾ ಭಾರತಿ ಅಂಗಸಂಸ್ಥೆ ರೋಮನ್ ಮತ್ತು ಕ್ಯಾಥರಿನ್ ಲೋಬೊ ದೃಷ್ಟಿಮಾಂದ್ಯ ಮಕ್ಕಳ ವಸತಿಯುತ ಶಾಲೆಯಲ್ಲಿ ಶುಕ್ರವಾರ ವಿಜ್ಞಾನ ಮೇಳವನ್ನು ಆಯೋಜಿಸಲಾಯಿತು.

ಬೆಂಗಳೂರಿನ ವಿಷನ್‌ಎಂಪವರ್ ಸಂಸ್ಥೆ ಸಹಯೋಗದೊಂದಿಗೆ ನಡೆದ ಈ ಪ್ರದರ್ಶನದಲ್ಲಿ ದೃಷ್ಟಿರಹಿತ ವಿದ್ಯಾರ್ಥಿಗಳಿಂದ ವಿವಿಧ ರೀತಿಯ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಜೇಮ್ಸ್ ಕುಟ್ಟಿನಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಅವರು, ಇಂತಹ ಮಕ್ಕಳಲ್ಲಿ ಇರುವ ವಿಶೇಷ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಕೊಂಡಾಡಿದರು. ಈ ರೀತಿಯ ಪ್ರದರ್ಶನಗಳು ಮುಂದಿನ ದಿವಸಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ನಡೆಯಲೆಂದು ಹಾರೈಸಿದರು.

ಸೇವಾ ಭಾರತಿ ಸಂಸ್ಥೆಯ ವಿಶ್ವಸ್ಥ ಗಜಾನನ ಪೈ ಶುಭ ಹಾರೈಸಿದರು. ದೃಶ್ಯ ಮಾಧ್ಯಮ ನಿರೂಪಕಿ ಸುಮತಿ ಉಪಸ್ಥಿತರಿದ್ದರು. ಶಿಕ್ಷಕ ರಘುರಾಮ್ ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಶಿಕ್ಷಕ ಮತ್ತು ಶಿಕ್ಷಕೇತರರು, ವಿದ್ಯಾರ್ಥಿಗಳು, ಪೋಷಕರು, ಸ್ವಯಂಸೇವಕರು, ಹಿತೈಷಿಗಳು ಹಾಜರಿದ್ದರು. ವಿಜ್ಞಾನ ಮೇಳದ ವೀಕ್ಷಣೆಗೆ ಹಲವು ಶಾಲೆಗಳಿಂದ ವಿದ್ಯಾರ್ಥಿಗಳು ಆಗಮಿಸಿದ್ದರು.

ಏಳಿಂಜೆ ನವಚೇತನ ಯುವಕ ಮಂಡಲ ವಾರ್ಷಿಕೋತ್ಸವ, ಸನ್ಮಾನ



ಕಿನ್ನಿಗೋಳಿ: ಸಂಘ ಸಂಸ್ಥೆಗಳು ಗ್ರಾಮದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಏಳಿಂಜೆ ಶ್ರೀಲಕ್ಷ್ಮೀಜನಾರ್ದನ ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರ ಏಳಿಂಜೆ ಕೊಂಜಾಲಗುತ್ತು ಪ್ರಭಾಕರ ಶೆಟ್ಟಿ ಹೇಳಿದರು. ಅವರು ಏಳಿಂಜೆ ದೇವಸ್ಥಾನದ ವಠಾರದಲ್ಲಿ ಏಳಿಂಜೆ ನವಚೇತನ ಯುವಕ ಮಂಡಲದ 40ನೇ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ, ನವ ಪದಪದವೀಧರರ ಸಮ್ಮಿಲನದಲ್ಲಿ ಮಾತನಾಡಿದರು. ಧಾರ್ಮಿಕ ಕ್ಷೇತ್ರದಲ್ಲಿನ ಸಾಧಕ ಸದಾನಂದ ಎಂ. ಶೆಟ್ಟಿ ಭಂಡಸಾಲೆ ಏಳಿಂಜೆ, ಕೃಷಿ ಹಾಗೂ ಹೈನುಗಾರಿಕಾ ಕ್ಷೇತ್ರದ ಸಾಧಕ ಸುಧಿರ್ ಶೆಟ್ಟಿ ಹೊಯಿಗೆ ಮಾರ್, ವೈಷ್ಣವಿ ಆಚಾರ್ಯ, ವೈಷ್ಣವಿ ಶೆಟ್ಟಿ, ಸುಧಾಕರ ಸಾಲ್ಯಾನ್, ರೇಷಾಂ ಮತ್ತು ಗೀರೀಶ್ ಶೆಟ್ಟಿ ಕೊಲೊಟ್ಟು ಸನ್ಮಾನಿಸಲಾಯಿತು. ದಿ.ಅಕ್ಕಿ ಶಂಭು ಶೆಟ್ಟಿ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ದಿವಾಕರ ಶೆಟ್ಟಿ ಕೊಂಜಾಲುಗುತ್ತು, ಭುವನಾಭಿರಾಮ ಉಡುಪ, ಕಿನ್ನಿಗೋಳಿ ರೋಟರಿ ಅಧ್ಯಕ್ಷ ಸಾಯಿನಾಥ ಶೆಟ್ಟಿ, ಸೀತಾರಾಮ ಶೆಟ್ಟಿ ತಾವಡೆ ಬಾಳಿಕೆ, ಮುಂಬೈ ಉದ್ಯಮಿ ಸದಾಶಿವ ಲಕ್ಷ್ಮಣ್ ಪೂಜಾರಿ, ನೇತ್ರಾವತಿ ಸಂಜೀವ ಶೆಟ್ಟಿ, ಶ್ರೀ ದೇವಿಮಹಿಳಾ ಮಂಡಲದ ಅಧ್ಯಕ್ಷೆ ಪ್ರಮೀಳಾ, ಜಯಲಕ್ಷ್ಮಿ ಪುಜಾರಿ, ಸಂಸ್ಥೆ ಗೌರವಾಧ್ಯಕ್ಷ ಅನಿಲ್ ಶೆಟ್ಟಿ ಕೊಂಜಾಲಗುತ್ತು, ಕಾರ್ಯದರ್ಶಿ ಹರೀಶ್ ಶೆಟ್ಟಿತಾಮಣೆಗುತ್ತು, ಸಂಸ್ಥೆ ಅಧ್ಯಕ್ಷ ಪ್ರಭಾಕರ ಆಚಾರ್ಯ ಕಾಂತಪಾಲ್, ದೀವಾಕರ ಶೆಟ್ಟಿಕೊಂಜಾಲಗುತ್ತು, ಅರ್ಚಕ ಗಣೇಶ್ ಭಟ್, ಏಳಿಂಜೆ ಕೊಂಜಾಲಗುತ್ತು ದಯಾನಂದ ಶೆಟ್ಟಿ, ಸುಧಾಕರ ಶೆಟ್ಟಿಏಳಿಂಜೆ ಕೊಂಜಾಲಗುತ್ತು ಇದ್ದರು. ಹರೀಶ್ ಶೆಟ್ಟಿ ತಾಮಣೆಗುತ್ತು ವರದಿ ವಾಚಿಸಿದರು. ಲಕ್ಷಣ್ ಬಿ.ಬಿ. ಏಳಿಂಜೆ ಸ್ವಾಗತಿಸಿ ದೇವಿಪ್ರಸಾದ್ ಶೆಟ್ಟಿ ವಂದಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಜಪೆ ಯೋಜನಾ ಕಚೇರಿ ವ್ಯಾಪ್ತಿಯ ಜ್ಞಾನ ವಿಕಾಸ ಕಾರ್ಯಕ್ರಮದಡಿ ಕಾವೂರು ವಲಯದ ಶಾಂತಿನಗರ ಕಾರ್ಯಕ್ಷೇತ್ರದಲ್ಲಿ ವಾತ್ಸಲ್ಯ ಸದಸ್ಯೆ ಮಾಲತಿ ಅವರಿಗೆ ಕ್ಷೇತ್ರದಿಂದ ತಿಂಗಳಿಗೆ 1000 ರೂ. ಮಾಶಾಸನ ನೀಡುತ್ತಿದ್ದು ಅವರಿಗೆ ದಿನ ಬಳಕೆಯ ವಸ್ತುಗಳ ವಾತ್ಸಲ್ಯ ಕಿಟ್‌ಅ ನ್ನು ತಾಲೂಕಿನ ಯೋಜನಾಧಿಕಾರಿ ಗಿರೀಶ್ ಎಂ., ನಗರ ಪಂಚಾಯತ್ ಸದಸ್ಯ ರಣದೀಪ್ ಕಾಂಚನ್, ಸ್ತ್ರೀ ಜಾಗೃತಿ ಸಮನ್ವಯಧಿಕಾರಿ ಶಂಶಾದ್, ತಾಲೂಕು ಜ್ಞಾನ ವಿಕಾಸ ಸಮನ್ವಯಧಿಕಾರಿ ಶೋಭಾ ಹಾಗೂ ಸೇವಾಪ್ರತಿನಿಧಿ ಸಂಗೀತ ಪದಾಧಿಕಾರಿ ಮಹಾಬಲ ಇದ್ದರು. ಈ ವೇಳೆ ರಣದೀಪ್ ಕಾಂಚನ್ ವೈಯಕ್ತಿಕ ಧನ ಸಹಾಯ ನೀಡಿದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇಗುಲದಲ್ಲಿ ಜೀರ್ಣೋದ್ಧಾರ, ಅಭಿವೃದ್ಧಿ ಕಾರ್ಯಕ್ಕೆ ಶಿಲಾನ್ಯಾಸ

ಪುತ್ತೂರು: ಇತಿಹಾಸ ಪ್ರಸಿದ್ಧ ಮತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪುನರ್ ನಿರ್ಮಾಣಗೊಂಡು 13 ವರ್ಷಗಳ ಬಳಿಕ ಮತ್ತೆ ಬ್ರಹ್ಮಕಲಶೋತ್ಸವಕ್ಕೆ ಪೂರ್ವಭಾವಿಯಾಗಿ ಜೀರ್ಣೋದ್ಧಾರ ಅಭಿವೃದ್ಧಿ ಕಾರ್ಯಗಳಿಗೆ ಶನಿವಾರ ಶಿಲಾನ್ಯಾಸ ನೆರವೇರಿಸಲಾಯಿತು.

ರಾಜಾಂಗಣದ ಸುತ್ತಲಿನ 4 ಕಟ್ಟೆಗಳು, ಕೆರೆ ಕಟ್ಟೆ, ಅಶ್ವತ್ಥ ಕಟ್ಟೆ, ಅಯ್ಯಪ್ಪ ಗುಡಿ, ಕೆರೆ ಜೀರ್ಣೋದ್ಧಾರಗಳಿಗೆ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿಯವರ ಹಾಗೂ ವಾಸ್ತುಶಿಲ್ಪಿ ಎಸ್.ಎಂ. ಪ್ರಸಾದ್ ಮುನಿಯಂಗಳ ಅವರ ನೇತೃತ್ವದಲ್ಲಿ ಪೂಜಾ ವಿಧಿ ವಿಧಾನಗಳೊಂದಿಗೆ ಚಾಲನೆ ನೀಡಲಾಯಿತು.

2 ವರ್ಷದಲ್ಲಿ ಪೂರ್ಣ

ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರೂ ಆದ ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ, ಮುಂದಿನ ಒಂದೂವರೆ, ಎರಡು ವರ್ಷದಲ್ಲಿ ಜೀರ್ಣೋದ್ಧಾರ ಪೂರ್ತಿಗೊಳಿಸುವ ಉದ್ದೇಶ ಹೊಂದಲಾಗಿದೆ. ಅಭಿವೃದ್ಧಿಯ ಸಂದರ್ಭದಲ್ಲಿ ಎಲ್ಲರ ಅಭಿಪ್ರಾಯ, ಸಲಹೆಗಳನ್ನೂ



ಕೇಳುತ್ತೇವೆ. ಭಕ್ತ ಜನರು ಆಶೀರ್ವಾದ, ಸಹಕಾರ, ಮಾರ್ಗದರ್ಶನ ಮಾಡಬೇಕು ಎಂದರು.

ದೇವಾಲಯ ಗದ್ದೆಯ ತುದಿಯಲ್ಲಿ 40 ಸೆಂಟ್ಸ್ ಜಾಗವನ್ನು ಈಗಾಗಲೇ ಖರೀದಿಸಲಾಗಿದ್ದು, ಇನ್ನೂ 1 ಎಕ್ರೆ ಜಾಗ ಖರೀದಿಸಲು ಮಾತುಕತೆ ನಡೆಸಲಾಗುತ್ತಿದೆ. 4 ಕಟ್ಟೆಗಳ ಅಭಿವೃದ್ಧಿಗೆ ಭಕ್ತರು ಅವರೇ ಬಂದು ತಲಾ ರೂ.25 ಲಕ್ಷ ದೇಣಿಗೆ ನೀಡುವ ವಾಗ್ದಾನ ಮಾಡಿದ್ದಾರೆ. ಅವರನ್ನು ಮಹಾಲಿಂಗೇಶ್ವರನೇ ಹುಡುಕಿ ಕಳುಹಿಸಿದ್ದಾರೆ. ಕಮರ್ಶಿಯಲ್ ಕಟ್ಟಡ ನಿರ್ಮಾಣದ ಮೂಲಕ ತಿಂಗಳಿಗೆ 5-6 ಲಕ್ಷ ಆದಾಯ ನಿರೀಕ್ಷೆ ಮಾಡಲಾಗಿದೆ. ದೇವಾಲಯ ಪ್ರವೇಶ ದ್ವಾರದ ಬಳಿ ಹಾಲ್ ಸಹಿತ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುವುದು. ಮುಂದಿನ ದಿನಗಳಲ್ಲಿ ಪೂಜಾ ಸೇವೆಗಳನ್ನು ಮಾಡಿಸುವವರಿಗೆ ಆನ್‌ಲೈನ್ ಬುಕಿಂಗ್ ವ್ಯವಸ್ಥೆ, ಪ್ರಸಾದ ತಲುಪಿಸುವ ವ್ಯವಸ್ಥೆಗಳನ್ನು ಮಾಡಲಾಗುವುದು ಎಂದರು.

ಅಭಿವೃದ್ಧಿಯ ದಾನಿಗಳು

ರೇವತಿ ಟೀಚರ್, ಕೇಶವ ಭಟ್ ಕೂವೆತ್ತೋಟ, ಸತೀಶ್ ನಾಯಕ್ ಉಡುಪಿ, ನಾಗೇಶ್ ರಾವ್ ಅತ್ತಾಳ ಅವರು ಗುಡಿಗಳ ನಿರ್ಮಾಣಕ್ಕೆ, ಗೋಪಾಲಕೃಷ್ಣ ಭಟ್ ದ್ವಾರಕ ಅವರು ಕೆರೆ ಕಟ್ಟೆ, ನಾಗೇಶ್ ಪೈ ಮಹಾಲಸ ಅವರು ಅಶ್ವತ್ಥ ಕಟ್ಟೆ ಅಭಿವೃದ್ಧಿಗೆ, ಬಿಂದು ಸಂಸ್ಥೆಯ ಸತ್ಯಶಂಕರ್ ಅವರು ಪುಷ್ಕರಣಿ ಅಭಿವೃದ್ಧಿಗೆ, ಅಯ್ಯಪ್ಪಗುಡಿಗೆ ಬಲರಾಮ ಆಚಾರ್ಯ ಅವರು ದಾನಿಗಳಾಗಿದ್ದಾರೆ.

ಶಾಸಕರಿಂದ 1 ಕೋಟಿ

ಈ ಸಂದರ್ಭ 40 ಸೆಂಟ್ಸ್ ಜಾಗವನ್ನು ದೇವಾಲಯಕ್ಕೆ ನೀಡಿದ ದಿವಾಕರ್ ಅವರಿಗೆ ಮುಂಗಡ ರೂ.10 ಲಕ್ಷದ ಚೆಕ್ ನೀಡಲಾಯಿತು. ಶಾಸಕ ಅಶೋಕ್ ರೈ ಅವರು ಜೀರ್ಣೋದ್ಧಾರ ಕಾರ್ಯಗಳಿಗೆ ರೂ.1 ಕೋಟಿ ದೇಣಿಗೆ ನೀಡುವ ಘೋಷಣೆ ಮಾಡಿ ಆರಂಭಿಕ ರೂ. 10 ಲಕ್ಷದ ರಶೀದಿ ಮಾಡಿಸಿದರು.

8 ಎಕರೆ ಮರುಸ್ವಾಧೀನ

ವ್ಯವಸ್ಥಾಪನಾ ಸಮಿತಿ ಅಸ್ತಿತ್ವಕ್ಕೆ ಬಂದ 1 ವರ್ಷ 2 ತಿಂಗಳಲ್ಲಿ ಬಹಳಷ್ಟು ಬದಲಾವಣೆ, ಅಭಿವೃದ್ಧಿ ದೇವರು ನಮ್ಮಲ್ಲಿ ಮಾಡಿಸಿದ್ದಾರೆ. ದೇವಾಲಯದ ಜಾಗ ಸೌಹಾರ್ದವಾಗಿ ಮರು ಸ್ವಾಧೀನ ಮಾಡಲಾಗುತ್ತಿದ್ದು, 20 ಮನೆಗಳನ್ನು ತೆರವು ಮಾಡಲಾಗಿದೆ. ಆ ಮೂಲಕ 8 ಎಕರೆ ಜಾಗ ಮರು ಸ್ವಾಧೀನವಾಗಿದೆ. ನೆಲ್ಲಿಕಟ್ಟೆ ಭಾಗದಲ್ಲಿ 2-3 ಮನೆಯವರು ಒಂದಷ್ಟು ಸಮಯಾವಕಾಶ ಕೇಳಿದ್ದಾರೆ ಎಂದು ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಹೇಳಿದರು.

ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ, ಜಿಲ್ಲಾ ಸದಸ್ಯ ಶಿವನಾಥ ರೈ ಮೇಗಿನಗುತ್ತು, ಜೀರ್ಣೋದ್ಧಾರ ಸಮಿತಿಯ ಪ್ರಮುಖರಾದ ಸಂತೋಷ್ ರೈ ನಳೀಲು, ಎ. ಹೇಮನಾಥ ಶೆಟ್ಟಿ, ಶಿವಪ್ರಸಾದ್, ಶಿವರಾಮ ರೈ, ಪ್ರಸಾದ್ ಕೌಶಲ್ ಶೆಟ್ಟಿ, ರಾಜರಾಮ ಶೆಟ್ಟಿ ಕೋಲ್ಪೆ, ರಾಮದಾಸ್ ಗೌಡ, ರವೀಂದ್ರನಾಥ ರೈ, ದೇವಳದ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಕೃಷ್ಣವೇಣಿ, ಮಹಾಬಲ ರೈ ವಳತ್ತಡ್ಕ, ಈಶ್ವರ ಬೆಡೇಕರ್, ಸುಭಾಶ್ ರೈ ಬೆಳ್ಳಿಪ್ಪಾಡಿ, ನಳಿನಿ ಪಿ. ಶೆಟ್ಟಿ, ಜಾನು ನಾಯ್ಕ್, ಪ್ರಧಾನ ಅರ್ಚಕ ವೇ. ಮೂ. ವಸಂತ ಕೆದಿಲಾಯ, ಕಾರ್ಯ ನಿರ್ವಹಣಾಧಿಕಾರಿ ಕೆ.ವಿ. ಶ್ರೀನಿವಾಸ್, ವ್ಯವಸ್ಥಾಪಕ ಹರೀಶ್ ಉಪಸ್ಥಿತರಿದ್ದರು. ಪಿ.ಜಿ. ಜಗನ್ನಿವಾಸ್ ರಾವ್, ಚಂದ್ರಶೇಖರ ರಾವ್, ಉಲ್ಲಾಸ್ ಕೋಟ್ಯಾನ್, ಚಿದಾನಂದ ಬೈಲಾಡಿ, ಪದ್ಮನಾಭ ಶೆಟ್ಟಿ, ಸತೀಶ್ ರೈ ಕಟ್ಟಾವು ಸೇರಿದಂತೆ ದಾನಿಗಳು, ಭಕ್ತರು ಶಿಲಾನ್ಯಾಸ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವರುಣ್ ಕಾರ್ಯಕ್ರಮ ನಿರ್ವಹಿಸಿದರು.

ಹೊಸ ಕಂಬಳ ಕರೆ

ಇದೇ ಸಂದರ್ಭದಲ್ಲಿ ದೇವಾಲಯದ ಎಡಭಾಗದಲ್ಲಿದ್ದ ಸೇವಾ ಕೌಂಟರ್‌ನ್ನು ಬಲ ಭಾಗಕ್ಕೆ ಸ್ಥಳಾಂತರಿಸಿ ಚಾಲನೆ ನೀಡಲಾಯಿತು. ಹೊಸದಾಗಿ ಕಂಬಳ ಕರೆ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು.

ಸುತ್ತಮುತ್ತ

ಅಂಬಲಪ್ಪುರ ಗ್ರಾಮ ಪಂಚಾಯತ್: ಇಂದು ಉದ್ಯೋಗ ಮೇಳ

ಕಾಸರಗೋಡು: ಅಂಬಲಪ್ಪುರ ಗ್ರಾ.ಪಂ. ಮತ್ತು ಪಾಲಕ್ಕಾಡ್‌ನ ಎಎಸ್‌ಎಪಿ ಕೇರಳ ಆಯೋಜಿಸಿರುವ ಉದ್ಯೋಗ ಮೇಳ ಫೆ.22ರಂದು ಬೆಳಿಗ್ಗೆ 9.30 ರಿಂದ ಅಂಬಲಪ್ಪುರ ಗ್ರಾಮ ಪಂಚಾಯತ್ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಎಸ್ಸೆಸ್ಸೆಲ್ಸಿಯಿಂದ ಎಂಬಿಎ (ಐಟಿಐ, ಡಿಪ್ಲೊಮಾ, ಪದವಿ ಸೇರಿದಂತೆ) ವಿದ್ಯಾರ್ಹತೆಯಾಗಿದೆ.

ಕಳಿಯೂರು ಶಾಲೆಯಲ್ಲಿ ಇಂದು ವೈದ್ಯಕೀಯ ಶಿಬಿರ

ಮಂಜೇಶ್ವರ: ವರ್ಕಾಡಿ ಸೇವಾ ಸಹಕಾರಿ ಬ್ಯಾಂಕ್ ನಿಯಮಿತ ಮತ್ತು ಕೆ.ಎ.ಪೂಜಾರಿ ಸೇವಾ ಟ್ರಸ್ಟ್ ಕಳಿಯೂರು ಇವುಗಳ ಜಂಟಿ ಆಶ್ರಯದಲ್ಲಿ ಉಚಿತ ವೈದ್ಯಕೀಯ ಶಿಬಿರ ಮತ್ತು ರಕ್ತದಾನ ಶಿಬಿರವು ಫೆ.22ರಂದು ಬೆಳಗ್ಗೆ 9 ರಿಂದ ಕಳಿಯೂರು ಸಂತ ಜೋಸೆಫರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರಗಲಿದೆ. ಕಣ್ಣು, ಎಲುಬು, ಚರ್ಮ ರೋಗ ತಜ್ಞರು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಸಕ್ತರು ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಕಡೆಗೋಳಿಯಲ್ಲಿಂದು ಶ್ರೀ ಕೊರಗಜ್ಜ ದೈವದ ವಾರ್ಷಿಕ ಕೋಲ

ಬಂಟ್ವಾಳ: ಶ್ರೀ ಕೊರಗಜ್ಜ ಸೇವಾ ಸಮಿತಿ ಕಡೆಗೋಳಿ ತುಂಬೆ – ಪುದು ಇದರ ಆಶ್ರಯದಲ್ಲಿ ಕಡೆಗೋಳಿ ಶ್ರೀ ಕೊರಗಜ್ಜ ಸನ್ನಿಧಿಯಲ್ಲಿ ಸ್ವಾಮಿ ಕೊರಗಜ್ಜ ದೈವದ ವಾರ್ಷಿಕ ಕೋಲ ಫೆ.22ರಂದು ನಡೆಯಲಿದೆ.
ಅಂದು ಸ್ವಾಮಿ ಕೊರಗಜ್ಜ ದೈವದ ಶಿಲಾಮಯ ಮೂರ್ತಿಗೆ ಪಂಚಾಮೃತ ಅಭಿಷೇಕ, ಮಧ್ಯಾಹ್ನ 12.30ಕ್ಕೆ ಪ್ರಸಾದ ವಿತರಣೆ, ಅನ್ನ ಸಂತರ್ಪಣೆ, ಸಂಜೆ 7ರಿಂದ ಕೊರಗಜ್ಜ ದೈವದ ಕೋಲ ಸೇವೆ, ಸಾಮೂಹಿಕ ಅಗೇಲು ಸೇವೆ, ಪ್ರಸಾದ ವಿತರಣೆ, ರಾತ್ರಿ10ರಿಂದ ಕೊರಗಜ್ಜ ದೈವಕ್ಕೆ ಹರಕೆಯ ಕೋಲ ಸೇವೆ ನಡೆಯಲಿದೆ ಎಂದು ಆಡಳಿತ ಮೊಕ್ತೇಸರ ಭಾಸ್ಕರ ಚೌಟ ಕುಮ್ಡೇಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಕಾನೂನು ಸೇವೆಗಳ ಸಮಿತಿ ಉದ್ಘಾಟನೆ

ಮೂಡುಬಿದಿರೆ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ದ.ಕ.ಜಿಲ್ಲೆ ಮಂಗಳೂರು, ನ್ಯಾಯಾಂಗ ಇಲಾಖೆ, ಮೂಡುಬಿದಿರೆ ವಕೀಲರ ಸಂಘ ಮೂಡುಬಿದಿರೆ ಇವರ ಜಂಟಿ ಆಶ್ರಯದಲ್ಲಿ ನೂತನ ತಾಲೂಕು ಕಾನೂನು ಸೇವೆಗಳ ಸಮಿತಿ ಇದರ ಉದ್ಘಾಟನಾ ಸಮಾರಂಭ ಫೆ.23ರಂದು ಮೂಡುಬಿದಿರೆ ವಕೀಲರ ಸಂಘದ ಅಧ್ಯಕ್ಷ ಹರೀಶ್ ಪಿ. ಅಧ್ಯಕ್ಷತೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ನಡೆಯಲಿದೆ ಎಂದು ಮೂಡುಬಿದಿರೆ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಜಯಪ್ರಕಾಶ್ ಭಂಡಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಮಟ್ಟದ ಕವ್ವಾಲಿ ಸ್ಪರ್ಧೆ: ಬಂಟ್ವಾಳಕ್ಕೆ ಪ್ರಥಮ ಸ್ಥಾನ

ಬಂಟ್ವಾಳ: ಎಸ್.ವಿ.ಎಸ್.ದೇವಳ ಆಂಗ್ಲಮಾಧ್ಯಮ ಶಾಲೆ ಬಂಟ್ವಾಳ ಇಲ್ಲಿನ14 ರ ವಯೋಮಾನ ಮತ್ತು 17ರ ವಯೋಮಾನದ ಬಾಲಕ ಮತ್ತು ಬಾಲಕಿಯರ ವಿಭಾಗದ ಹಾವೇರಿಯಲ್ಲಿ ನಡೆದ ರಾಜ್ಯಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾಟದಲ್ಲಿ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ಮತ್ತು ಕೊಪ್ಪಳದಲ್ಲಿ ನಡೆದ ರಾಜ್ಯ ಮಟ್ಟದ ಪ್ರತಿಭಾ ಕಲೋತ್ಸವದಲ್ಲಿ ಪ್ರೌಢ ಶಾಲಾ ವಿಭಾಗ ಕವ್ವಾಲಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಮತ್ತುಶಿಕ್ಷಕ ರಕ್ಷಕ ಸಂಘದ ವತಿಯಿಂದ ಅಭಿಮಂದಿಸಲಾಯಿತು. ಶಾಲಾ ಸಂಚಾಲಕ ಸುರೇಶ ಬಾಳಿಗರವರು ವಿದ್ಯಾರ್ಥಿಗಳನ್ನು ಅಭಿನಂದಿಸಿ ಸನ್ಮಾನಿಸಿದರು.

ಮೂಲ್ಕಿ ನ.ಪಂ. ವ್ಯಾಪ್ತಿಯಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧ

ಮುಲ್ಕಿ: ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು/ ಮಾರಾಟವನ್ನು/ದಾಸ್ತಾನುವನ್ನು ಸಂಪೂರ್ಣ ನಿಷೇಧಿಸಿದೆ. ಎಲ್ಲಾ ವ್ಯಾಪಾರಸ್ಥರು ತಮ್ಮಲ್ಲಿ ಈಗಾಗಲೇ ದಾಸ್ತಾನು ಇರುವ ವಿವಿಧ ತರಹದ ಏಕ ಬಳಕೆ ಪ್ಲಾಸ್ಟಿಕ್‌ಗಳನ್ನು ಮಾರ್ಚ್15ರೊಳಗೆ ಬಳಕೆ ಮಾಡಲು ಅವಕಾಶ ನೀಡಲಾಗಿದ್ದು, ಆ ಬಳಿಕ ಏಕ ಬಳಕೆ ಪ್ಲಾಸ್ಟಿಕ್ ಅನ್ನು ಬಳಕೆ/ ಮಾರಾಟ/ ದಾಸ್ತಾನು ಮಾಡಿದ್ದಲ್ಲಿ ಮೊದಲನೇ ಅಪರಾಧಕ್ಕೆ ರೂ. 100, 2ನೇ ಅಪರಾಧಕ್ಕೆ ರೂ. 200 ಮತ್ತು 3ನೇ ಅಪರಾಧಕ್ಕೆ ಉದ್ದಿಮೆ ಪರವಾನಿಗೆ ರದ್ದುಗೊಳಿಸಲಾಗುವುದು ಎಂದು ಮೂಲ್ಕಿ ನ.ಪಂ. ಮುಖ್ಯಾಧಿಕಾರಿ ಮಧುಕರ್ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡು ಹೆಚ್ಚುವರಿ ನ್ಯಾಯಾಲಯ ಸಂಕೀರ್ಣಕ್ಕೆ ನ್ಯಾ.ಕೌಸರ್ ಎಡಪಗ್ಗತ್‌ರಿಂದ ಶಿಲಾನ್ಯಾಸ

ನ್ಯಾಯಕ್ಕೆ ಹೋರಾಡುವವರ ವಿಶ್ವಾಸಾರ್ಹ ತಾಣ ನ್ಯಾಯಾಲಯ

ಕಾಸರಗೋಡು: ಎಲ್ಲಿಯೂ ನ್ಯಾಯ ಸಿಗದಿದ್ದಾಗ ನ್ಯಾಯಕ್ಕಾಗಿ ಹೋರಾಡುವ ಸಾಮಾನ್ಯ ಮನುಷ್ಯನ ಕೊನೆಯ ವಿಶ್ವಾಸಾರ್ಹ ಆಶ್ರಯ ತಾಣ ನ್ಯಾಯಾಲಯಗಳು ಎಂದು ನ್ಯಾಯಮೂರ್ತಿ ಕೌಸರ್ ಎಡಪಗ್ಗತ್ ಹೇಳಿದ್ದಾರೆ.
ಕಾಸರಗೋಡು ಜಿಲ್ಲಾ ನ್ಯಾಯಾಂಗದ ಉಸ್ತುವಾರಿ ಹೊಂದಿರುವ ಅವರು ಕಾಸರಗೋಡು ಹೆಚ್ಚುವರಿ ನ್ಯಾಯಾಲಯ ಸಂಕೀರ್ಣದ ಶಿಲಾನ್ಯಾಸ ಕಾರ್ಯಕ್ರಮವನ್ನು ಶನಿವಾರ ನೆರವೇರಿಸಿ ಮಾತನಾಡಿದರು.

ಒಟ್ಟಾಗಿ ಕೆಲಸ ಮಾಡಬೇಕು

ನ್ಯಾಯದ ಆಡಳಿತವು ನ್ಯಾಯಾಧೀಶರಿಗೆ ಮಾತ್ರ ಸೇರಿದ್ದಲ್ಲ, ನ್ಯಾಯದ ಆಡಳಿತವನ್ನು ಸುಲಭಗೊಳಿಸಲು ವಕೀಲರು, ನ್ಯಾಯಾಲಯದ ಸಿಬ್ಬಂದಿಗಳು ಮತ್ತು ವಕೀಲರ ಗುಮಾಸ್ತರು ಒಟ್ಟಾಗಿ ಕೆಲಸ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಅಭಿವೃದ್ಧಿಪಡಿಸಬೇಕಾಗಿದ

ನ್ಯಾಯಾಂಗ ವ್ಯವಸ್ಥೆಯು ಉತ್ತಮವಾಗಬೇಕಾದರೆ ನ್ಯಾಯಾಲಯದ ಕಟ್ಟಡಗಳ ಮೂಲಭೂತ ಸೌಕರ್ಯಗಳನ್ನು ಅಗತ್ಯಕ್ಕನುಗುಣವಾಗಿ



ಅಭಿವೃದ್ಧಿಪಡಿಸಬೇಕಾಗಿದೆ. ಪೋಕ್ಸೋ ಪ್ರಕರಣಗಳು ಮತ್ತು ಮಹಿಳೆಯರ ಮೇಲಿನ ಅಪರಾಧಗಳನ್ನು ನಿರ್ವಹಿಸುವಾಗಲೂ ವಿಶೇಷ ಕೊಠಡಿಗಳು ಬೇಕಾಗುತ್ತವೆ. ಹೆಚ್ಚುವರಿ ನ್ಯಾಯಾಲಯ ಸಂಕೀರ್ಣವನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಲು ಸಾಧ್ಯವಾದರೆ ಅದು ಕಾಸರಗೋಡು ಜಿಲ್ಲಾ ನ್ಯಾಯಾಂಗ ವ್ಯವಸ್ಥೆಯ ಒಂದು ದೊಡ್ಡ ಸಾಧನೆಯಾಗುತ್ತದೆ ಎಂದು ನುಡಿದರು.
ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಸಾನು ಎಸ್. ಪಣಿಕ್ಕರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹೈಕೋರ್ಟ್ ನ್ಯಾಯಾಧೀಶ ಎ.ಎ.ಜಿಯಾದ್ ರೆಹಮಾನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾಸರಗೋಡು ಲೋಕೋಪಯೋಗಿ ಕಾರ್ಯನಿರ್ವಾಹಕ ಇಂಜಿನಿಯರ್ ಎಂ.ಜಗದೀಶ್ ವರದಿ ಮಂಡಿಸಿದರು.
ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಶಾಸಕ ಎನ್.ಎ.ನೆಲ್ಲಿಕುನ್ನು, ಕಾಸರಗೋಡು ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ವೇಣುಗೋಪಾಲನ್ ನಾಯರ್, ಕಾಸರಗೋಡು ಬಾರ್ ಅಸೋಸಿಯೇಶನ್ ಅಧ್ಯಕ್ಷ ಎ.ಗೋಪಾಲನ್ ನಾಯರ್, ಹೊಸದುರ್ಗ ಬಾರ್ ಅಸೋಸಿಯೇಶನ್ ಅಧ್ಯಕ್ಷ ಪಿ.ನಾರಾಯಣನ್, ಕಾಸರಗೋಡು ಅಡ್ವೋಕೇಟ್ ಕ್ಲರ್ಕ್ ಅಸೋಸಿಯೇಶನ್ ಅಧ್ಯಕ್ಷ ಜಯರಾಮ ಶೆಟ್ಟಿ ಮೊದಲಾದವರು ಮಾತನಾಡಿದರು.
ಕಾಸರಗೋಡು ಬಾರ್ ಅಸೋಸಿಯೇಶನ್ ಕಾರ್ಯದರ್ಶಿ ಪ್ರದೀಪ್ ರಾವ್ ಮೇಪೋಡು ಸ್ವಾಗತಿಸಿ, ಕಾಸರಗೋಡು ಬಾರ್ ಅಸೋಸಿಯೇಶನ್ ಉಪಾಧ್ಯಕ್ಷ ಕೆ.ವಿನೋದ್ ಕುಮಾರ್ ವಂದಿಸಿದರು.

ತೊಡಕುಗಳಿಗೆ ಕಾರಣ

ಅಂತಾರಾಷ್ಟ್ರೀಯ ಅಧ್ಯಯನ ವರದಿಗಳು ಸಹ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಬಲದ ಬಗ್ಗೆ ಮಾತನಾಡುತ್ತವೆ. ಆದರೆ ಭಾರತೀಯ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳು ನ್ಯಾಯ ವಿತರಣೆಯಲ್ಲಿನ ವಿಳಂಬ ಮತ್ತು ತೊಡಕುಗಳಿಗೆ ಕಾರಣವಾಗುತ್ತಿವೆ.
● ಕೌಸರ್ ಎಡಪಗ್ಗತ್ ನ್ಯಾಯಮೂರ್ತಿ

ಉಳ್ಳಾಲ ತಾಲೂಕು ಕಚೇರಿಯಲ್ಲಿ ಸಂತ ಕವಿ ಸರ್ವಜ್ಞ ಜಯಂತಿ ಆಚರಣೆ



ಕೊಣಾಜೆ: ತಾಲೂಕು ಆಡಳಿತ ಉಳ್ಳಾಲ ತಾಲೂಕು ವತಿಯಿಂದ ಸಂತ ಕವಿ ಸರ್ವಜ್ಞ ಜಯಂತಿ ಆಚರಣೆಯನ್ನು ನಾಟೆಕಲ್ ಉಳ್ಳಾಲ ತಾಲೂಕು ಕಚೇರಿಯಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯ ಕುಲಾಲ ಕುಂಬಾರ ಯುವ ವೇದಿಕೆ ಮತ್ತು ಮಹಿಳಾ ಸಂಘಟನೆಗಳ ಒಕ್ಕೂಟ ಮಂಗಳೂರು ವಿಧಾನಸಭಾ ಕ್ಷೇತ್ರ ಸಮಿತಿ ಸಹಭಾಗಿತ್ವದಲ್ಲಿ ಆಚರಿಸಲಾಯಿತು.
ಉಳ್ಳಾಲ ತಾಲೂಕು ಉಪ ತಹಶೀಲ್ದಾರ್ ವಿಜಯ ವಿಕ್ರಮ, ನಾಡಕಚೇರಿ ಉಪತಹಶೀಲ್ದಾರ್ ವಿನಯ ಕರ್ನಾಟಕ ರಾಜ್ಯ ಕುಲಾಲ ಕುಂಬಾರ ಯುವವೇದಿಕೆಯ ಮಂಗಳೂರು ವಿಧಾನಸಭಾ ಕ್ಷೇತ್ರ ಸಮಿತಿ ಅಧ್ಯಕ್ಷ ನವೀನ್ ಪಿದಮಲೆ ದೀಪ ಪ್ರಜ್ವಲಿಸುವುದರೊಂದಿಗೆ ಸರ್ವಜ್ಞ ಜಯಂತಿ ಆಚರಿಸಲಾಯಿತು.
ಉಳ್ಳಾಲ ತಾಲೂಕು ತಹಶೀಲ್ದಾರರು ಪ್ರಶಾಂತ ವಿ. ಪಾಟೀಲ ಸರ್ವಜ್ಞನ ಭಾವಚಿತ್ರಕ್ಕೆ ಪುಷ್ಪಾರ್ಚನೆಗೈದರು.
ಉಪ ತಹಸೀಲ್ದಾರ್ ವಿಜಯ ವಿಕ್ರಮ ಮಾತನಾಡಿ, ಅತ್ಯಂತ ಸರಳವಾದ ಸರ್ವಜ್ಞನ ತ್ರಿಪದಿಗಳು ಯಾವುದೇ ಜಾತಿ ಮತ ಧರ್ಮ ಭೇದವಿಲ್ಲದೆ ಎಲ್ಲರ ಜೀವನದಲ್ಲೂ ಅಳವಡಿಸಬಹುದಾದಂತಹ ತ್ರಿಪದಿಗಳು, ಬದುಕಿನ ಜಂಜಾಟದ ಮಾನಸಿಕ ಒತ್ತಡ ನಿವಾರಣೆಗೊಳಿಸಲು ಸರ್ವಜ್ಞನ ತ್ರಿಪದಿಗಳನ್ನು ಓದಿದರೆ ಉತ್ತಮ ಎಂದು ತನ್ನ ಅನುಭವವನ್ನು ಹಂಚಿಕೊಂಡರು.
ತಾಲೂಕು ಕಚೇರಿ ಅಧಿಕಾರಿ ಕಿರಣ್, ಯುವ ವೇದಿಕೆ ತಾಲೂಕು ಉಪಾಧ್ಯಕ್ಷ ಹರೀಶ್ ಮುಳೂರು, ಸುಂದರ್ ಕೊಡಕ್ಕಲ್, ಯಶವಂತ ಮುಡಿಪು, ರೋಹಿತ್ ಮಿತ್ತಕೋಡಿ ಉಪಸ್ಥಿತರಿದ್ದರು. ವೇದಿಕೆ ಜಿಲ್ಲಾ ಸಮಿತಿ ಸದಸ್ಯ ಹರೀಶ್ ಮಜಲ್ ಸರ್ವಜ್ಞನ ವಚನ ವಾಚಿಸಿದರು ಜಯಂತ್ ಸಂಕೋಳಿಗೆ ಪ್ರಸ್ತಾವನೆಗೈದು, ವಂದಿಸಿದರು.

ಕವಿ ಸರ್ವಜ್ಞನ ಚಿಂತನೆಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ



ಪುತ್ತೂರು: ಬದುಕಿನಲ್ಲಿ ಜಾತಿ ಕಂದಾಚಾರಗಳನ್ನು ದೂರ ಇಡಬೇಕಾದ ಅಗತ್ಯತೆಗಳನ್ನು ಸಮಾಜಕ್ಕೆ ತಿಳಿಸಿಕೊಟ್ಟ ಮಹಾಮೇಧಾವಿ ತತ್ವಜ್ಞಾನಿ ದಾರ್ಶನಿಕ ಸರ್ವಜ್ಞನ ಚಿಂತನೆಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಇಂದಿನ ಅಗತ್ಯ ಎಂದು ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ ಹೇಳಿದ್ದಾರೆ.
ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಕುಲಾಲ ಸಮಾಜ ಸೇವಾ ಸಂಘದ ಸಹಯೋಗದಲ್ಲಿ ಪುತ್ತೂರು ಆಡಳಿತ ಸೌಧದ ಸಭಾಂಗಣದಲ್ಲಿ ನಡೆದ ಸಂತ ಕವಿ ಸರ್ವಜ್ಞ ಜಯಂತಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಪುಡಾ ಅಧ್ಯಕ್ಷ ಅಮಳ ರಾಮಚಂದ್ರ ಮಾತನಾಡಿ, ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ, ಸಮಾಜಕ್ಕೆ ಕೊಟ್ಟ ನೀತಿ ಮೂಲಕ ಸಮಾಜದ ಸರ್ವಜನಾಂಗಕ್ಕೂ ತಿಳುವಳಿಕೆ ನೀಡಿದ ದಾರ್ಶನಿಕ ಸರ್ವಜ್ಞ. ಅವರ ಪ್ರತಿಯೊಂದು ತ್ರಿಪದಿಗಳೂ ಹೃದಯಕ್ಕೆ ಅತ್ಯಂತ ಸಮೀಪವಾಗಿದೆ ಎಂದರು.
ಸಂತ ಫಿಲೋಮಿನಾ ಕಾಲೇಜಿನ ಪ್ರಾಧ್ಯಾಪಕ ಡಾ. ಚಂದ್ರಶೇಖರ್ ಸಂಸ್ಮರಣಾ ಮಾತುಗಳನ್ನಾಡಿದರು. ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸಂಚಾಲಕ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್, ಕುಲಾಲ ಸೇವಾ ಸಂಘದ ಅಧ್ಯಕ್ಷ ಸೇಸಪ್ಪ ಕುಲಾಲ್, ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ ಉಪಸ್ಥಿತರಿದ್ದರು. ಕಂದಾಯ ಇಲಾಖೆ ಯ ಶಿವಾನಂದ ನಾಟೇಕರ್, ರಮೇಶ್, ಜಯಪ್ರಕಾಶ್, ಸರ್ವೆ ಇಲಾಖೆ ಮೋಹನ್, ಪ್ರಮೋದ್ ಹಾಗೂ ಆಹಾರ ಇಲಾಖೆ ಜಿತೇಶ್, ಸಿಡಿಪಿಒ ಹರೀಶ್ ಕುಮಾರ್, ಉಪತಹಶೀಲ್ದಾರ್ ಸುಲೋಚನಾ ಮತ್ತಿತರರಿದ್ದರು. ಉಪತಹಶೀಲ್ದಾರ್ ರವಿ ಕುಮಾರ್ ನಾಡಗೀತೆಹಾಡಿದರು. ಕಂದಾಯ ಇಲಾಖೆಯ ದಯಾನಂದ ಡಿ.ಟಿ. ಸ್ವಾಗತಿಸಿ, ಶ್ರೀಕಲಾ ಕಾರ್ಯಕ್ರಮ ನಿರೂಪಿಸಿದರು.

ಬಿ.ಸಿ.ರೋಡ್ ಆಡಳಿತ ಸೌಧದಲ್ಲಿ ಕವಿ ಸರ್ವಜ್ಞ ಜಯಂತಿ ಆಚರಣೆ



ಬಂಟ್ವಾಳ: ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಕರ್ನಾಟಕ ರಾಜ್ಯ ಕುಲಾಲ ಕುಂಬಾರರ ಯುವ ವೇದಿಕೆ ಮತ್ತು ಮಹಿಳಾ ಸಂಘಟನೆಗಳ ಒಕ್ಕೂಟ ಸಹಯೋಗದಲ್ಲಿ ಬಿ.ಸಿ.ರೋಡಿನಲ್ಲಿರುವ ಬಂಟ್ವಾಳ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಶುಕ್ರವಾರ ಸರ್ವಜ್ಞ ಜಯಂತಿ ಆಚರಿಸಲಾಯಿತು.
ಫರಂಗಿಪೇಟೆ– ಅರ್ಕುಳದ ಶ್ರೀರಾಮ ವಿದ್ಯಾಸಂಸ್ಥೆಗಳ ಮುಖ್ಯಸ್ಥರಾದ ದೇವದಾಸ್ ಕೊಡ್ಯಾನ್ ಈ ಸಂದರ್ಭಉಪನ್ಯಾಸ ನೀಡಿ, ಸರ್ವಜ್ಞನ ಜೀವನಚರಿತ್ರೆಯನ್ನು ವಿವರಿಸಿದರು.
ತಹಸೀಲ್ದಾರ್ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಬಂಟ್ವಾಳ ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಬೇಬಿ ಕುಂದರ್ ಮಾತನಾಡಿ, ನಾಲ್ಕು ಗೋಡೆಗಳ ಮಧ್ಯೆ ನಡೆಸುವ ಬದಲು ಎಲ್ಲರನ್ನೂ ಒಗ್ಗೂಡಿಸಿ ಕಾರ್ಯಕ್ರಮ ನಡೆಸುವಂತೆ ಸಲಹೆ ನೀಡಿದರು.
ಬಂಟ್ವಾಳ ತಾಲೂಕು ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶೇಷಪ್ಪ ಮಾಸ್ತರ್ ಶುಭ ಹಾರೈಸಿದರು. ಬಂಟ್ವಾಳ ತಾಲೂಕು ಕುಲಾಲ ಸುಧಾರಕ ಸಂಘ ಅಧ್ಯಕ್ಷ ರಮೇಶ್ ಸಾಲ್ಯಾನ್ ಸಂಚಯಗಿರಿ, ರಾಜ್ಯ ಕುಲಾಲರ ಕುಂಬಾರರ ಮಹಿಳಾ ಸಂಘದ ಬಂಟ್ವಾಳ ಅಧ್ಯಕ್ಷೆ ವಸಂತಿ ಭೋಜ ಸಾಲ್ಯಾನ್, ಕುಲಾಲ ಯುವ ವೇದಿಕೆ ಬಂಟ್ವಾಳ ಅಧ್ಯಕ್ಷ ಸುಮಿತ್ ಸಾಲ್ಯಾನ್ ಸೊರ್ನಾಡ್, ಮಹಿಳಾ ಸಂಚಾಲಕಿ ದುರ್ಗಾಶ್ರೀ ಪ್ರದೀಪ್, ಧಾರ್ಮಿಕ ಪರಿಷತ್ ಸದಸ್ಯ ದೇವಪ್ಪ ಕುಲಾಲ್ ಪಂಜಿಕಲ್ಲು, ವಿವಿ ಸಿಂಡಿಕೇಟ್ ಸದಸ್ಯಸುರೇಶ್ ಕುಮಾರ್ ನಾವೂರು, ಬುಡಾ ಸದಸ್ಯ ಮನೋಹರ ನೇರಂಬೋಳು, ಕೇಂದ್ರ ಸ್ಥಾನಿಯ ಉಪತಹಸೀಲ್ದಾರ್ ನರೇಂದ್ರ ನಾಥ್ ಮಿತ್ತೂರು, ಉಪತಹಸೀಲ್ದಾರ್ ದಿವಾಕರ ಮುಗುಳಿಯ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವಿಷಯ ನಿರ್ವಾಹಕ ವಿಶುಕುಮಾರ್ ಉಪಸ್ಥಿತರಿದ್ದರು. .
ಗ್ರಾಮ ಸಹಾಯಕ ಜನಾರ್ದನ ಸ್ವಾಗತಿಸಿ, ಸುಕುಮಾರ್ ಬಂಟ್ವಾಳ ವಂದಿಸಿದರು. ಉಪತಹಸೀಲ್ದಾರ್ ನವೀನ್ ಕುಮಾರ್ ಬೆಂಜನಪದವು ನಿರ್ವಹಿಸಿದರು.

ಮನವಿ ಸಲ್ಲಿಕೆ

ಈ ಸಂದರ್ಭ ಕರ್ನಾಟಕ ರಾಜ್ಯ ಕುಲಾಲ ಕುಂಬಾರರ ಯುವ ವೇದಿಕೆ ವಿಭಾಗೀಯ ಅಧ್ಯಕ್ಷ ಸುಕುಮಾರ್ ಬಂಟ್ವಾಳ ಅವರು ಶ್ರೀ ರಕ್ತೇಶ್ವರಿ ದೇವಳದಿಂದ ಕೈಕುಂಜದವರೆಗೆ ಸರ್ವಜ್ಞ ರಸ್ತೆ ಎಂದು ನಾಮಕರಣ ಮಾಡುವಂತೆ ಬುಡಾ ಅಧ್ಯಕ್ಷರ ಹಾಗೂ ತಹಶೀಲ್ದಾರರ ಬಳಿ ಮನವಿ ಮಾಡಿದರು.

ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ



ಮಂಗಳೂರು: ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್ ಇದರ ವತಿಯಿಂದ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ನಗರದ ಬಂಟ್ಸ್ ಹಾಸ್ಟೆಲ್‌ನ ಗೀತಾ ಎಸ್.ಎಂ.ಶೆಟ್ಟಿ ಸಭಾಂಗಣದಲ್ಲಿ ನಡೆಯಿತು.
ಅತಿಥಿಯಾಗಿದ್ದ ವಿಶ್ವ ಬಂಟ ಪ್ರತಿಷ್ಠಾನದ ಮಾಜಿ ಅಧ್ಯಕ್ಷ ಡಾ.ಎಂ.ಶಾಂತಾರಾಮ ಶೆಟ್ಟಿ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸಲಾಗುತ್ತಿದೆ. ಶಿಕ್ಷಣದ ಜತೆಗೆ ಉನ್ನತ ಗುರಿ ಸಾಧಿಸಲು ಪ್ರೇರಣೆ ನೀಡಲಾಗುತ್ತಿದೆ' ಎಂದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಕುಶಾಲ್ ಎಸ್. ಹೆಗ್ಡೆ ಮಾತನಾಡಿ, ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನಿಂದ ಇದುವರೆಗೆ 6 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ನೆರವು ನೀಡಿ ಅವರ ಆಯ್ಕೆಯ ಅಧ್ಯಯನಕ್ಕೆ ಪ್ರೋತ್ಸಾಹ ನೀಡಲಾಗಿದೆ ಎಂದರು.
ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನ ಕಾರ್ಯದರ್ಶಿ ಡಾ.ಸಚ್ಚಿದಾನಂದ ರೈ, ಉಪಾಧ್ಯಕ್ಷರಾದ ಸಿಎ ಸುಧೀರ್‌ಕುಮಾರ್ ಶೆಟ್ಟಿ, ಟಿ.ಸುಬ್ಬಯ್ಯ ಶೆಟ್ಟಿ, ಜ್ಯೋತಿ ಆಳ್ವ, ಖಜಾಂಚಿ ಸಿಎ ಪ್ರವೀಣ್ ಕುಮಾರ್ ಶೆಟ್ಟಿ, ಯೋಜನಾ ನಿರ್ದೇಶಕ ಡಾ.ಬಿ. ಸಂಜೀವ ರೈ ಮೊದಲಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿ ವೇತನ

ವೈದ್ಯಕೀಯ, ಇಂಜಿನಿಯರಿಂಗ್, ಪ್ಯಾರಾ ಮೆಡಿಕಲ್, ಸ್ನಾತಕೋತ್ತರ ಅಧ್ಯಯನ, ಪದವಿ , ಡಿಪ್ಲೊಮಾ ಕಲಿಯುತ್ತಿರುವ 150 ವಿದ್ಯಾರ್ಥಿಗಳಿಗೆ 41 ಲಕ್ಷ ರೂ. ಅಧಿಕ ಮೊತ್ತದ ವಿದ್ಯಾರ್ಥಿ ವೇತನ ವಿತರಿಸಲಾಯಿತು.

ಜಾತೀಯತೆ, ಮೂಡ ನಂಬಿಕೆ ತೊಡೆದು ಹಾಕುವಲ್ಲಿ ಸರ್ವಜ್ಞರ ಪ್ರಯತ್ನ ಶ್ಲಾಘನೀಯ



ಕಾರ್ಕಳ: ಕನ್ನಡ –ಸಂಸ್ಕೃತಿ ಇಲಾಖೆ, ತಾಲೂಕು ಆಡಳಿತ ಕಾರ್ಕಳ ಇದರ ಆಶ್ರಯದಲ್ಲಿ ಸರ್ವಜ್ಞ ಜಯಂತಿ ಕಾರ್ಕಳ ತಾ.ಪಂ. ಸಭಾಂಗಣದಲ್ಲಿ ನಡೆಯಿತು.
ಅಧ್ಯಕ್ಷತೆಯನ್ನು ತಹಸೀಲ್ದಾರ್ ಪ್ರದೀಪ್ ವಹಿಸಿದ್ದರು. ಬಾಲಕಿ ಮನಸ್ವಿ ಕುಲಾಲ್ ಈ ಸಂದರ್ಭ ಸರ್ವಜ್ಞರ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಸಮಾಜದಲ್ಲಿ ಗತಿಸಿ ಹೋದ ನೂರಾರು ಮಹನೀಯರು ಸಮಾಜದಲ್ಲಿ ಮಾಡಿದ ಕ್ರಾಂತಿ ಎಲ್ಲರಿಗೂ ಆದರ್ಶ ಪ್ರಾಯವಾದುದು. ಬಹಳಷ್ಟು ಸಂಕಷ್ಟಗಳಲ್ಲಿ, ದೌರ್ಜನ್ಯಗಳಲ್ಲಿ ಮಿಂದೆದ್ದವರಿಂದ ಮಾತ್ರ ಸಮಾಜದ ಸುಧಾರಣೆ ಆಗಬಲ್ಲುದು ಎಂದು ಹೇಳಿದರು.
ಕಾರ್ಕಳಕುಲಾಲಸಂಘದಅಧ್ಯಕ್ಷಹರೀಶ್ಚಂದ್ರ ಕುಲಾಲ್, ಸಮಾಜದಲ್ಲಿ ಜಾತೀಯತೆ, ಮೂಡ ನಂಬಿಕೆ ತೊಡೆದು ಹಾಕುವಲ್ಲಿ ಕವಿ ಸರ್ವಜ್ಞರು ಮಾಡಿದ್ದಾರೆಂದರು.
ಕಾರ್ಕಳದಲ್ಲಿ ಸರ್ವಜ್ಞ ಮೂರ್ತಿ ಯನ್ನು ನಿರ್ಮಾಣ ಮಾಡಿದ್ದರಿಂದಾಗಿ ಸರ್ವಜ್ಞರ ಬಗ್ಗೆ ಎಲ್ಲರೂ ತಿಳಿದು ಕೊಳ್ಳುವಂತಾಯಿತು ಎಂದು ಅವರು ಹೇಳಿದರು.
ತಹಸೀಲ್ದಾರ್‌ರಾದ ಪ್ರದೀಪ್ ಮಾತನಾಡಿ, ತ್ರಿಪದಿ ಬ್ರಹ್ಮ ಎಂದೇ ಸರ್ವಜ್ಞರು ಬಣ್ಣಿಸಲ್ಪಟ್ಟಿದ್ದಾರೆ ಎಂದರು. ರಿಯಾಜ್ ಕಾರ್ಯಕ್ರಮ ನಿರೂಪಿಸಿದರು.

ಸರ್ವಜ್ಞರು ಶ್ರೇಷ್ಠ ವ್ಯಕ್ತಿ

ಬದುಕು ಹಾಗೂ ಸಾಮಾಜಿಕವಾದ ಎಲ್ಲಾ ವಿಚಾರಗಳನ್ನು ಕೂಡಾ ವಚನಗಳ ಮೂಲಕ ತಿಳಿಸ ಹೊರಟು ಅಂದಿನ ದಿನಗಳಲ್ಲೇ ಸಮಾಜದ ಸುಧಾರಣೆ ಮಾಡಲು ಪ್ರಯತ್ನ ಮಾಡಿದ ಸರ್ವಜ್ಞರು ಶ್ರೇಷ್ಠ ವ್ಯಕ್ತಿ.
● ಪ್ರದೀಪ್ , ತಹಶೀಲ್ದಾರ್

ಪೆರ್ವೋಡಿ ಕುಳಿಯಾರ್ ಪ್ರದೇಶದಲ್ಲಿ ತ್ಯಾಜ್ಯಗಳಿಗೆ ಬೆಂಕಿ: ಹೊಗೆಯಿಂದ ಸಮಸ್ಯೆ



ಉಪ್ಪಳ: ಪೈವಳಿಕೆ ಪಂಚಾಯತ್‌ನ 7ನೇವಾರ್ಡ್ ಪೆರ್ವೋಡಿಕುಳಿಯಾರ್ ಪರಿಸರದಲ್ಲಿ ತ್ಯಾಜ್ಯ ವಸ್ತುಗಳನ್ನು ನಿರ್ಜನ ಪ್ರದೇಶದಲ್ಲಿ ತಂದು ಹಾಕಿ ಬೆಂಕಿ ಹಚ್ಚಿ ಸುಡಲಾಗುತ್ತಿದ್ದು ಇದರಿಂದ ಪರಿಸರವಿಡೀ ದುರ್ವಾಸನೆಯಿಂದ ಕೂಡಿದೆ. ತ್ಯಾಜ್ಯವನ್ನು ಜನವಾಸವಿರುವ ಪ್ರದೇಶದಲ್ಲಿ ನಿರ್ಲಕ್ಷಿಸಿ ಉರಿಸುವುದರಿಂದ ಪರಿಸರ ನಿವಾಸಿಗಳಿಗೆ ಸಮಸ್ಯೆಯಾಗುತ್ತಿದೆ.

ವಾರ್ಡ್ ಸದಸ್ಯರ ಭೇಟಿ, ಪರಿಶೀಲನೆ

ಶುಕ್ರವಾರ ವಾರ್ಡ್ ಸದಸ್ಯ ರಾಮ ಏದಾರ್ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದು, ತ್ಯಾಜ್ಯ ಸುಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಒತ್ತಾಯಿಸಿದ್ದಾರೆ. ಇಲ್ಲದಿದ್ದಲ್ಲಿ ಮೇಲಧಿಕಾರಿಗಳ ಸಂಪರ್ಕಿಸುವುದಾಗಿ ವಾರ್ಡ್ ಸದಸ್ಯರು ಎಚ್ಚರಿಕೆ ನೀಡಿದ್ದಾರೆ.

ಕರಾವಳಿಯಲ್ಲಿ ಗುಣಮಟ್ಟದ ಆಧಾರದಲ್ಲಿ ದರ ನಿಗದಿ

ಅಪ್ಪೆಮಿಡಿಗೆ ಮಾರುಕಟ್ಟೆಯಲ್ಲಿ ಭರ್ಜರಿ ಬೇಡಿಕೆ

ಉಡುಪಿ: ಕರಾವಳಿ ಭಾಗದಲ್ಲಿ ಹೆಚ್ಚಾಗಿ ಉಪ್ಪಿನಕಾಯಿ ತಯಾರಿಸಲು ಬಳಸುವ ಕಾಡು ಮಾವಿನ ಸಣ್ಣ ಮಿಡಿ ಅಪ್ಪೆಮಿಡಿಗೆ ಮಾರುಕಟ್ಟೆಯಲ್ಲಿ ಭರ್ಜರಿ ಬೇಡಿಕೆ ಕಂಡುಬಂದಿದೆ.
ಡಿಸೆಂಬರ್, ಜನವರಿ ಅವಧಿಯಲ್ಲಿ ಈ ಬಾರಿ ಕಾಡು ಮಾವಿನ ಮರದಲ್ಲಿ ಬಹುತೇಕ ಕಡೆ ಚೆನ್ನಾಗಿ ಹೂವು ಬಿಟ್ಟಿದ್ದವು. ಆದರೆ ಚಳಿ ಹಾಗೂ ವಿಪರೀತ ಬಿಸಿಲಿನ ವಾತಾವರಣ ಪರಿಣಾಮ ಕೆಲವೆಡೆ ಹೂವು ಕರಟಿ ಇಳುವರಿ ಕುಂಠಿತವಾಗಿದೆ. ಮಾವು ಹೂವು ಬಿಡುವ ವೇಳೆ ಹೆಚ್ಚು ಮಂಜು ಬೀಳುತ್ತಿರುವುದು ಹಾಗೂ



ಫಂಗಸ್ ದಾಳಿ ಮಾಡಿ ಕಾಯಿಕಚ್ಚದಂತೆ ಮಾಡಿವೆ.

ಕೆ.ಜಿಗೆ 200, 300

ಪ್ರಸ್ತುತ ಅಪ್ಪೆಮಿಡಿ ಕೆ.ಜಿ. 200–300 ರೂಪಾಯಿವರೆಗೆ ಇದ್ದು ಗುಣಮಟ್ಟದ ಆಧಾರದಲ್ಲಿ ದರ ನಿಗದಿ ಮಾಡಲಾಗುತ್ತಿದೆ.
ಉಡುಪಿ, ಕುಂದಾಪುರ, ಹೆಬ್ರಿ, ಬಂಟ್ವಾಳ, ಪುತ್ತೂರು, ಸುಳ್ಯ, ಕಾಸರಗೋಡು ಕಡೆಗಳಲ್ಲಿ ಈ ಮಾವಿನ ಮಿಡಿ ಕೊಯ್ಯುವ ಪ್ರಕ್ರಿಯೆ ಆರಂಭವಾಗಿದೆ. ದಟ್ಟಾರಣ್ಯ, ನದಿ ಪಾತ್ರದಲ್ಲಿ ಸಹಜವಾಗಿ ಬೆಳೆಯುವ ಅಪ್ಪೆ ಮಾವು ರುಚಿ ಮತ್ತು ಸುವಾಸನೆ ಹೊಂದಿವೆ.

ಹೋಲ್‌ಸೇಲ್ ಮಾರಾಟ

ಉಪ್ಪಿನಲ್ಲಿ ಹಾಕಿಟ್ಟರೆ ಸುಮಾರು ಎರಡು ವರ್ಷ ಹಾಳಾಗದೇ ಉಳಿಯುವ ವಿಶಿಷ್ಟ ಕಾರಣಕ್ಕೆ ಇಲ್ಲಿನ ಸಣ್ಣಪ್ಪೆ, ಜೀರಿಗೆ ಅಪ್ಪೆ, ಚಾಲ್ತಿ ಅಪ್ಪೆ ತಳಿಗಳು ಬಹುಬೇಡಿಕೆ ಹೊಂದಿವೆ. ಬೃಹತ್ ಗಾತ್ರದ ಮರಗಳಿಗೆ ಹತ್ತಿ ಮಿಡಿ ಇಳಿಸಿ ಅದನ್ನು ಕ್ವಿಂಟಾಲ್, ಟನ್ ಲೆಕ್ಕದಲ್ಲಿ ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುವ ಒಂದು ವರ್ಗವೇ ಕರಾವಳಿ ಭಾಗದಲ್ಲಿದೆ.

ಹೆಬ್ಬಾಲೆಯಲ್ಲಿ ಅದ್ದೂರಿಯ ಹಿಂದೂ ಸಂಗಮ ಶೋಭಾಯಾತ್ರೆ

ಕುಶಾಲನಗರ: ಕುಶಾಲನಗರ ತಾಲೂಕಿನ ಹಿಂದೂ ಸಂಗಮ ಆಯೋಜನಾ ಸಮಿತಿಯ ಹೆಬ್ಬಾಲೆ ಮಂಡಲದ ವತಿಯಿಂದ ಹೆಬ್ಬಾಲೆಯಲ್ಲಿ ಹಿಂದೂ ಸಂಗಮ ಶೋಭಾಯಾತ್ರೆ ನಡೆಯಿತು.
ಹಿಂದೂ ಬಾಂಧವರು ಕೇಸರಿ ಶಲ್ಯ ಧರಿಸಿ ಬಾವುಟ ಹಿಡಿದು ಕಣಿವೆ ಶ್ರೀ ರಾಮಲಿಂಗೇಶ್ವರ ದೇವಾಲಯ ಬಳಿಯಿಂದ ಹೆಬ್ಬಾಲೆಯ ಬನಶಂಕರಿ ಸಭಾಂಗಣದವರೆಗೆ ಮೆರವಣಿಗೆಯಲ್ಲಿ ಸಾಗಿಬಂದರು. ಚಂಡೆವಾದ್ಯ, ವೀರಗಾಸೆ ಸಮ್ಮುಖದಲ್ಲಿ ಕಳಶ ಹೊತ್ತು ಮಹಿಳೆಯರು ಮೆರವಣಿಗೆಯಲ್ಲಿ ಭಾಗಿಯಾದರು.
ಭಾರತಾಂಬೆಯ ಭಾವಚಿತ್ರ ಹೊತ್ತ ಬೆಳ್ಳಿರಥದಲ್ಲಿ ವಿವಿಧ ವೇಷಧಾರಿ ಶಾಲಾ ವಿದ್ಯಾರ್ಥಿಗಳು ಗಮನ ಸೆಳೆದರು. ಮೆರವಣಿಗೆಯಲ್ಲಿ ಸಾಗಿಬಂದ ಹಿಂದೂ ಬಾಂಧವರಿಗೆ ಮಜ್ಜಿಗೆ, ತಂಪು ಪಾನೀಯ ವಿತರಣೆ ಮಾಡಲಾಯಿತು.
ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಸುಳ್ಯದ ಡಾ.ಮನೋಜ್ ದಿಕ್ಸೂಚಿ ಭಾಷಣ ಮಾಡಿದರು.



ದಿವ್ಯ ಸಾನಿಧ್ಯ ವಹಿಸಿದ್ದ ಕೊಡ್ಲಿಪೇಟೆ ಕಿರಿಕೊಡ್ಲಿ ಮಠಾಧೀಶ ಸದಾಶಿವ ಸ್ವಾಮೀಜಿ, ತೊರೆನೂರು ವಿರಕ್ತ ಮಠದ ಶ್ರೀ ಮಲ್ಲೇಶ ಸ್ವಾಮೀಜಿ ಆಶೀರ್ವಚನ ನೀಡಿದರು. ಕಾರ್ಯಕ್ರಮ ಸಂಯೋಜಕರಾದ ಜಿ.ಪಂ. ಮಾಜಿ ಸದಸ್ಯ ಶ್ರೀನಿವಾಸ್ ಮಾತನಾಡಿದರು.
ಈ ಸಂದರ್ಭ ಕುಶಾಲನಗರ ತಾಲೂಕು ಹಿಂದೂ ಸಂಗಮ ಆಯೋಜನಾ ಸಮಿತಿ ಸಂಯೋಜಕ ದೇವಿಪ್ರಸಾದ್, ಹೆಬ್ಬಾಲೆ ಗ್ರಾ.ಪಂ. ಮಾಜಿ ಅಧ್ಯಕ್ಷೆ ಅರುಣಕುಮಾರಿ, ಜಿ.ಪಂ.ಮಾಜಿ ಅಧ್ಯಕ್ಷ ಹೆಚ್.ಎಸ್. ಅಶೋಕ್, ಗ್ರಾ.ಪಂ. ಸದಸ್ಯರಾದ ಮಂಜುನಾಥ್, ಪರಮೇಶ್, ಹೆಚ್.ಎಸ್.ರಘು, ಕಣಿವೆ ಶ್ರೀ ರಾಮಲಿಂಗೇಶ್ವರ ದೇವಳ ಸಮಿತಿ ಅಧ್ಯಕ್ಷ ಸುರೇಶ್, ನಿವೃತ್ತ ಶಿಕ್ಷಕ ಲೋಕೇಶ್, ಹೆಬ್ಬಾಲೆ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷ ಎಚ್.ಎಲ್.ಮಂಜುನಾಥ್ ಮುಖಂಡರಾದ ಎಚ್.ಟಿ.ಮಂಜುನಾಥ್, ಪುಟ್ಟ ಟಿ.ಬಿ.ಜಗದೀಶ್, ಚಂದ್ರಶೇಖರ್ ಹೇರೂರು, ಭರತ್ ಮಾಚಯ್ಯ, ಹರೀಶ್, ನವನೀತ್, ಸಾಮಾಜಿಕ ಕಾರ್ಯಕರ್ತ ಮೋಹನ್ ಮತ್ತಿತರರು ಇದ್ದರು.

ಸುತ್ತಮುತ್ತ

ನಾಥಪಂಥ ಅಲೆಮಾರಿ ಜೋಗಿ ಮಹಿಳಾ ವೇದಿಕೆ ಅಧ್ಯಕ್ಷರಾಗಿ ಆಯ್ಕೆ

ಕೋಟ: ನಾಥಪಂಥ ಅಲೆಮಾರಿ ಜೋಗಿ ಮಹಿಳಾ ವೇದಿಕೆ ಉಡುಪಿ ಜಿಲ್ಲೆ ಇದರ ವಾರ್ಷಿಕ ಮಹಾಸಭೆಯನ್ನು ಹಿಂದಿ ಪ್ರಚಾರ ಸಭಾಂಗಣ ಉಡುಪಿ ಇಲ್ಲಿ ಜರಗಿತು. ಇದೇ ವೇಳೆ 2026ನೇ ಸಾಲಿನ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ನೂತನ ಅಧ್ಯಕ್ಷರಾಗಿ ಅನುಷಮಾ ಎಂ ಜೋಗಿ ಗುಂಡಿಬೈಲ್. ಗೌರವಾಧ್ಯಕ್ಷರಾಗಿ ರಜನಿಜೋಗಿ, ಪ್ರಧಾನ ಕಾರ್ಯದರ್ಶಿಯಾಗಿ ಯೋಗಿನಿ ಜೋಗಿ,



ಉಪಾಧ್ಯಕ್ಷರಾಗಿ ಆರತಿ ಜೋಗಿ, ರಜನಿ ಎಸ್ ಜೋಗಿ, ಭಾರತಿ ದೇವರಾಜ್ ಜೋಗಿ, ಕೋಶಾಧಿಕಾರಿಯಾಗಿ ಮಮತಾ ಜೋಗಿ , ಸಂಸ್ಕೃತಿಕ ಕಾರ್ಯದರ್ಶಿಯಾಗಿ ಸುರ್ವರ್ಣ ಜೋಗಿ ,ಕ್ರೀಡಾ ಕಾರ್ಯದರ್ಶಿಯಾಗಿ ಭಾರತಿ ಜೋಗಿ ,ಜೊತೆ ಕಾರ್ಯದರ್ಶಿಯಾಗಿ ಪ್ರಮೋದ ಜೋಗಿ ಅದೇ ರೀತಿ 20 ಸದಸ್ಯರನ್ನು ಒಳಗೊಂಡ ನೂತನ ಕಾರ್ಯ ಸಮಿತಿಯನ್ನು ರಚಿಸಲಾಯಿತು.

ಕುಂದಾಪುರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಆಯ್ಕೆ

ಕುಂದಾಪುರ: ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕುಂದಾಪುರ ತಾಲೂಕು ಘಟಕದ 2025–28ನೇ ಸಾಲಿನ ನೂತನ ಅಧ್ಯಕ್ಷರಾಗಿ ಯು ಚಾನೆಲ್ ನ ನಾಗರಾಜ ರಾಯಪ್ಪನಮಠ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ವಿಜಯ ಕರ್ನಾಟಕದ ಗಣೇಶ್ ಬೀಜಾಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿರುವ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಆಸ್ಟ್ರೋ ಮೋಹನ್ ಅಧ್ಯಕ್ಷತೆಯಲ್ಲಿ ಕುಂದಾಪುರದ ಕೋಟೇಶ್ವರದ ಹಾರ್ ಕಾಲ್ ನಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ಈ ಆಯ್ಕೆ ಮಾಡಲಾಯಿತು.





ಉಪಾಧ್ಯಕ್ಷರಾಗಿ ಉದಯವಾಣಿಯ ಸತೀಶ್ ಆಚಾರ್ ಮತ್ತು ಕುಂದಪ್ರಭದ ಸಂತೋಷ್ ಕುಂದೇಶ್ವರ, ಕೋಶಾಧಿಕಾರಿಯಾಗಿ ಕನ್ನಡ ಪ್ರಭದ ಶ್ರೀಕಾಂತ್ ಹೆಮ್ಮಾಡಿ, ಕಾರ್ಯದರ್ಶಿಗಳಾಗಿ ವಿಜಯವಾಣಿಯ ಮಂಜುನಾಥ ಶೆಟ್ಟಿ ಜನ್ನಾಡಿ ಹಾಗೂ ದಾಯ್ಜಿ ವರ್ಲ್ಡ್ ನ ರಾಘವೇಂದ್ರ. ಬಿ. ಮತ್ತು ಕಾರ್ಯಕಾರಿಣಿ ಸಮಿತಿ ಸದಸ್ಯರುಗಳಾಗಿ ಪ್ರಶಾಂತ್ ಪಾದೆ, ನಾಗರಾಜ ವಂಡ್ಸೆ, ಶ್ರೀಧರ್ ಎಸ್., ಸತೀಶ್ ಎಂ.ಬಿ., ವಿಜಯ ಪಾಯಸ್, ಎಂ.ನಿತ್ಯಾನಂದ, ಸಂತೋಷ್ ಶೆಟ್ಟಿ ಜನನೀ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾ ಪ್ರಕ್ರಿಯೆಯಲ್ಲಿ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಸಹಕರಿಸಿದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಲೋಕೇಶ್ ಆಚಾರ್ಯ ಕಕ್ಕುಂಜೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಿ.ರಾಘವೇಂದ್ರ ಪೈ, ಚಂದ್ರಶೇಖರ ಬಾಲಕೃಷ್ಣ ಯೋಗೀಶ್ ಕುಂಭಾಶಿ ಉಪಸ್ಥಿತರಿದ್ದರು.

ನಾಗಬ್ರಹ್ಮ ಭಜನಾ ಮಂಡಳಿ ಅಧ್ಯಕ್ಷರಾಗಿ ವಿಶ್ವನಾಥ್ ಆಯ್ಕೆ

ಕೋಟ: ನಾಗಬ್ರಹ್ಮ ಭಜನಾ ಮಂಡಳಿ ಪಟ್ಟೋರಿ ಕೋಣಾಜೆ ಇದರ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.
ನೂತನ ಅಧ್ಯಕ್ಷರಾದ ವಿಶ್ವನಾಥ ಕುಲಾಲ್ ಪಟ್ಟೋರಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಗಂಗಾಧರ ಎಮ್ ಪಟ್ಟೋರಿ ಅವರು ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾಗಿ ಸತ್ಯನಾರಾಯಣ ಭಟ್ ಕೋಣಾಜೆ ಬೀಡು, ದಿವಾಕರ ಭಂಡಾರಿ ಯಾನೆ ತಿಮ್ಮಯ್ಯ



ಕಾವಲ ಪಟ್ಟೋರಿ, ಗೌರವ ಸಲಹೆಗಾರರಾಗಿ ಕರುಣಾಕರ ಕಾಪ, ಕೃಷ್ಣಪ್ಪ ಕೆ ಕೆ ಎಸ್, ಸುರೇಶ್ ಪೂಜಾರಿ ದೊಡ್ಡುಗುಳಿ, ಉಪಾಧ್ಯಕ್ಷರುಗಳಾಗಿ ಮೋಹನ್ ಕಾಟು ಕೋಡಿ, ನಾರಾಯಣ ಮೇಲಿನ ಮನೆ ಪಟ್ಟೋರಿ, ವಸಂತ ದೊಡ್ಡುಗುಳಿ, ಜೊತೆ ಕಾರ್ಯದರ್ಶಿಯಾಗಿ ಶೌರಿ ಪಟ್ಟೋರಿ, ಪವನ್ ಕಲಾಯ, ಕೋಶಾಧಿಕಾರಿಯಾಗಿ ಪ್ರವೀಣ್ ಕುಮಾರ್ ಪಟ್ಟೋರಿ, ಭಜನಾ ಸಂಚಾಲಕರಾಗಿ ಯತೀಶ್ ಮಡಕ, ಯಜ್ಞೇಶ್ ಕಾಪ, ಮನ್ಮಥ ಸಂಚಾಲಕರಾಗಿ ಡಾ.ಸತೀಶ್ ಕೋಣಾಜೆ, ಕ್ರೀಡಾ ಸಂಚಾಲಕರಾಗಿ ರಕ್ಷಿತ್ ಕಾಟುಕೋಡಿ,ಸುದೀಪ್ ಗಟ್ಟಿ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ರಕ್ಷಿತ್ ಕೆ ಕೆ ಪಟ್ಟೋರಿ ಹಾಗೂ ಸದಸ್ಯರು ಆಯ್ಕೆಯಾದರು.

ಮಾನ್ಯತೆ ಪಡೆದ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಆಹ್ವಾನ

ಕಾಸರಗೋಡು: ಯೋಜನಾ ಅನುಷ್ಠಾನ ಘಟಕದ (ಪಿಐಯು, ಪಿಎಂಜಿಎಸ್‌ವೈ) ಕಾರ್ಯನಿರ್ವಾಹಕ ಇಂಜಿನಿಯರ್ ಕಚೇರಿಯಲ್ಲಿ ಮಾನ್ಯತೆ ಪಡೆದ ಮೇಲ್ವಿಚಾರಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ, ಕನಿಷ್ಠ ಅನುಭವ ವಿದ್ಯಾರ್ಹತೆಯಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಬಯೋಡಾಟಾ ಮತ್ತು ಅರ್ಹತೆಗಳನ್ನು ಸಾಬೀತುಪಡಿಸುವ ಪ್ರಮಾಣಪತ್ರಗಳೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಪಿಐಯು, ಪಿಎಂಜಿಎಸ್‌ವೈ, ಜಿಲ್ಲಾ ಪಂಚಾಯತ್ ಕಟ್ಟಡ, ವಿದ್ಯಾನಗರ, ಕಾಸರಗೋಡು, 671123 ಈ ವಿಳಾಸಕ್ಕೆ ಫೆ.28 ರಂದು ಸಂಜೆ 4 ಗಂಟೆಯೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕಾಗಿದೆ.

ಮುಲ್ಕಿ ನಗರ ಪಂಚಾಯತ್ ಆಯವ್ಯಯ ಮಂಡನೆ ಪೂರ್ವಭಾವಿ ಸಮಾಲೋಚನಾ ಸಭೆಯಲ್ಲಿ ಸೂಚನೆ

ಮಾ.15ರ ಬಳಿಕ ಏಕಬಳಕೆ ಪ್ಲಾಸ್ಟಿಕ್ ನಿಷೇಧ ಸಂಪೂರ್ಣ ಜಾರಿ

ಮುಲ್ಕಿ: ಮುಲ್ಕಿ ನಗರ ಪಂಚಾಯತ್ 2026–27ನೇ ಸಾಲಿನ ಆಯವ್ಯಯದ ಪೂರ್ವಭಾವಿ ಸಮಾಲೋಚನಾ ಸಭೆಯು ಕಾರ್ನಾಡ್ ಸಮುದಾಯ ಭವನದಲ್ಲಿ ನಗರ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಮುಖ್ಯಾಧಿಕಾರಿ ಮಧುಕರ್ ನೇತೃತ್ವದಲ್ಲಿ ನಡೆಯಿತು
ಸಭೆಯಲ್ಲಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಯ ನಡುವೆ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್ ಕೆ. ಅನುದಾನಗಳ ಜೋಡಣೆಯೊಂದಿಗೆ ಸಮಸ್ಯೆಗಳಿಗೆ ಪರಿಹಾರದ ಭರವಸೆ ನೀಡಿದರು
ಸಭೆಯಲ್ಲಿ ನಗರ ಪಂಚಾಯತ್ ಲೆಕ್ಕಾಧಿಕಾರಿ ಸ್ವಾತಿ ಪೈ ಆಯವ್ಯಯದ ಲೆಕ್ಕಾಚಾರ ಮಂಡಿಸಿ ಸಮಾಲೋಚನೆಗೆ ಮನವಿ ಮಾಡಿದಾಗ ಹಲವರು ಸಮಸ್ಯೆಗಳ ಹಾಗೂ ಪರಿಹಾರ ಕಲ್ಪಿಸಲು ಒತ್ತಾಯಿಸಿದರು.



ಸಭೆಯಲ್ಲಿ ಪ್ಲಾಸ್ಟಿಕ್ ನಿಷೇಧ ಸ್ಪಷ್ಟನೆಗೆ ಆಗ್ರಹ
ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ನಿಷೇಧ ಬಾಲಚಂದ್ರ ಕಾಮತ್ ಕೇಳಿದ ಪ್ರಶ್ನೆಗೆ ನಗರ ವ್ಯಾಪ್ತಿಯಲ್ಲಿ ಮಾ.15ರ ಬಳಿಕ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಜಾರಿಯಾಗಲಿದೆ. ಅಷ್ಟರೊಳಗೆ ವ್ಯಾಪಾರಸ್ಥರಲ್ಲಿ ಇರುವ ಪ್ಲಾಸ್ಟಿಕ್‌ಗಳನ್ನು ವಿಲೇವಾರಿ ಮಾಡುವಂತೆ ತಿಳಿಸಲಾಗಿದೆ. ಬಳಿಕ ನಗರದ ಎಲ್ಲಾ ಕಡೆ ಏಕಬಳಕೆ ಪ್ಲಾಸ್ಟಿಕ್ ನಿಷೇಧ ಜಾರಿಯಾಗಲಿದೆ ಎಂದು ಹೇಳಿದರು.

ನೀರಿನ ಸಮಸ್ಯೆ ನಿವಾರಣೆಗೆ ಆಗ್ರಹ
ಸಭೆಯಲ್ಲಿ ನಗರ ಪಂಚಾಯತ್ ಮಾಜೀ ಸದಸ್ಯ ಭೀಮಾಶಂಕರ್ ಆರ್ ಕೆ ಮಾತನಾಡಿ, ಜನ ನಿಬಿಡ ಲಿಂಗಪ್ಪಯ್ಯಕಾಡಿಗೆ ನೀರು ವಿತರಣೆಯಲ್ಲಿ ತಾರತಮ್ಯ ನಡೆಸುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ನಿತ್ಯ ನೀರು ವಿತರಣೆಗೆ ಆಗ್ರಹಿಸಿದರು.
ಇದಕ್ಕೆ ಪೂರಕವಾಗಿ ಮಾಜೀ ಸದಸ್ಯ ಸುಭಾಷ್ ಶೆಟ್ಟಿ ಮಾತನಾಡಿ ಟ್ಯಾಂಕರ್ ಮೂಲಕ ಕುಡಿಯುವ ನೀರಿನ ವಿತರಣೆಗೆ ಏನು ಕ್ರಮಕೈಗೊಂಡಿದ್ದೀರಿ? ಎಂದು ಸುಭಾಷ್ ಶೆಟ್ಟಿ ಮಾಹಿತಿ ಬಯಸಿದರು.

ಸೂಕ್ತಕ್ರಮ: ಇಒ ಭರವಸೆ
ಇದಕ್ಕೆ ಮುಖ್ಯಾಧಿಕಾರಿ ಉತ್ತರಿಸಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿದ್ದು ನೀರು ವಿತರಣೆಯಲ್ಲಿ ಸಮರ್ಪಕ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು

ಮನೆ ದುರಸ್ತಿ ಅನುದಾನ ಸಿಕ್ಕಿಲ್ಲ
ನಗರ ಪಂಚಾಯತ್ ಮಾಜಿ ಸದಸ್ಯ ಪುತ್ತುಬಾವ ಮಾತನಾಡಿ, ನಗರೋತ್ಥಾನ ಇಲಾಖೆಯಿಂದ ಮನೆ ದುರಸ್ತಿಗೆ ಸಿಗಬೇಕಾದ ಅನುದಾನ 4 ವರ್ಷ ಕಳೆದರೂ ಸಿಗದಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು
ಈ ಬಗ್ಗೆ ಸೂಕ್ತ ವಿಚಾರಣೆ ನಡೆಸಿ ಅನುದಾನ ಜೋಡಣೆಗಳ ಬಳಿಕ ಅನುದಾನ ಬಿಡುಗಡೆಯ ಭರವಸೆ ದೊರೆಯಿತು. ಬೀದಿ ನಾಯಿ ಹಾವಳಿಗೆ ತಡೆ: ನಗರ ವ್ಯಾಪ್ತಿಯಲ್ಲಿ 100 ಬೀದಿನಾಯಿಗಳಿದ್ದು, ಸರಕಾರದ ನಿರ್ದೇಶನದಂತೆ ಸಂತಾನಹರಣ ಚಿಕಿತ್ಸೆ ಮತ್ತು ಆಂಟಿ ರ್‍ಯಾಬೀಸ್ ಲಸಿಕೆ ನೀಡಲು ಮುಂದಿನ ತಿಂಗಳಿಂದ ಕ್ರಮಕೈಗೊಳ್ಳಲಾಗುವುದು ಎಂದು ಮುಖ್ಯಾಧಿಕಾರಿ ಹೇಳಿದರು.

ಕಾಲುವೆ, ಚರಂಡಿ ದುರಸ್ತಿ ಮಾಡಿ
ನಗರದ ಮಡಿವಾಳಕೆರೆ, ಧರ್ಮಸ್ಥಾನ, ಕುದ್ರಪಲ್ಲಗಳಲ್ಲಿ ರಸ್ತೆ ನಿರ್ಮಾಣಕ್ಕೆ ಅನುದಾನ ಒದಗಿಸುವಂತೆ ಪುತ್ತುಬಾವ ಆಗ್ರಹಿಸಿದರು. 15ನೇ ಹಣಕಾಸು ಯೋಜನೆಯಲ್ಲಿ ರಸ್ತೆ ನಿರ್ಮಾಣದ ಭರವಸೆ ದೊರೆಯಿತು. ಮಳೆಗಾಲ ಆರಂಭಕ್ಕೆ ಮುನ್ನ ನಗರದ ಕಾಲುವೆ, ಚರಂಡಿ, ತೋಡುಗಳ ಹೂಳೆತ್ತುವಂತೆ ಮಾಜಿ ಅಧ್ಯಕ್ಷ ಸುಭಾಷ್ ಶೆಟ್ಟಿ ಮಾಜಿ ಸದಸ್ಯ ಬಾಲಚಂದ್ರ ಕಾಮತ್ ಒತ್ತಾಯಿಸಿದರು.

ಅಧಿಕ ಅನುದಾನಕ್ಕೆ ಪ್ರಯತ್ನ
ನಗರ ಪಂಚಾಯತ್ ವ್ಯಾಪ್ತಿಯ ಲಿಂಗಪ್ಪಯ್ಯ ಕಾಡುವಿನ ಚರಂಡಿ ದುರಸ್ತಿಗೆ ಭೀಮಾಶಂಕರ್ ಆಗ್ರಹಿಸಿದರು. ಈ ಪ್ರದೇಶವು ಸ್ಲಂ ಪರಿವರ್ತಿತವಾಗಿರುವುದರಿಂದ ಸ್ಲಂ ಬೋರ್ಡ್ ಮೂಲಕ ಅಧಿಕ ಅನುದಾನ ಪಡೆಯಲು ಪ್ರಯತ್ನಿಸಲಾಗುವುದು. ಅಲ್ಲಿನ ಸಮಗ್ರ ಅಭಿವೃದ್ಧಿಗೆ 10 ಕೋಟಿ ಅನುದಾನದ ಅಗತ್ಯವಿದೆ ಎಂದು ಮಧುಕರ್ ಉತ್ತರಿಸಿದರು. ಮಾಜಿ ಅಧ್ಯಕ್ಷ ಸತೀಶ್ ಅಂಚನ್, ವಿಎ ಯಸೀನಾ, ಎಂಜಿನಿಯರ್ ತುಳಸೀದಾಸ್, ಸ್ವಸಹಾಯ ಸಂಘಗಳ ಪದಾಧಿಕಾರಿಗಳು, ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಿದ್ದರು. ಭರತಾಂಜಲಿ ವಂದಿಸಿದರು.

ಪುತ್ತೂರು ನರೇಂದ್ರ ಪದವಿ ಪೂರ್ವ ಕಾಲೇಜಿನಲ್ಲಿ ದೀಪ ಪ್ರದಾನ ಕಾರ್ಯಕ್ರಮ



ಪುತ್ತೂರು: ವಿದ್ಯಾರ್ಥಿ ಜೀವನದಲ್ಲಿ ಮೌಲ್ಯ ಶಿಕ್ಷಣವು ಕೇವಲ ಜ್ಞಾನಾರ್ಜನೆಯಲ್ಲ, ಬದಲಾಗಿ ನೈತಿಕತೆ, ಶಿಸ್ತು, ಸಹಾನುಭೂತಿ ಮತ್ತು ಪ್ರಾಮಾಣಿಕತೆಯಂತಹ ಗುಣಗಳನ್ನು ಬೆಳೆಸುವ ಸಮಗ್ರ ಪ್ರಕ್ರಿಯೆಯಾಗಿದೆ. ಇದು ವ್ಯಕ್ತಿತ್ವವನ್ನು ರೂಪಿಸಿ, ಸರಿ–ತಪ್ಪುಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ ಕೊಡುತ್ತದೆ ಮತ್ತು ಜವಾಬ್ದಾರಿಯುತ, ಸಕಾರಾತ್ಮಕ ನಾಗರಿಕರಾಗಿ ಸಮಾಜಕ್ಕೆ ಕೊಡುಗೆ ನೀಡಲು ಸಹಾಯ ಮಾಡುತ್ತದೆ ಎಂದು ಕಲ್ಲಡ್ಕದ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್ ಕಲ್ಲಡ್ಕ ಹೇಳಿದರು.
ನರೇಂದ್ರ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ದೀಪ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವಿವೇಕಾನಂದ ಇನ್ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯುಟಿಕಲ್ ಸೈನ್ಸ್‌ನ ಪ್ರಾಂಶುಪಾಲ ಡಾ. ಗುರುರಾಜ ಎಂ.ಪಿ. ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿಗಳ ಪರಿಶ್ರಮವೇ ಅವರ ಮುಂದಿನ ಗುರಿಗೆ ಉತ್ತಮ ಮಾರ್ಗ ಕಲ್ಪಿಸುತ್ತದೆ ಎಂದು ಹೇಳಿದರು.
ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯೆ ಮೋಹಿನಿ ದಿವಾಕರ, ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಉಮೇಶ್ ನಾಯಕ್ ಶುಭ ಹಾರೈಸಿದರು. ಐಟಿ ಕ್ಲಬ್ ವತಿಯಿಂದ ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ನಡೆಸಿದ 'ಡಿಜಿಟಲ್ ಕ್ಲಾಸ್" ಕಂಪ್ಯೂಟರ್ ಬೇಸಿಕ್ ಟ್ರೈನಿಂಗ್ ಪ್ರೋಗ್ರಾಮ್‌ನಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಸರ್ಟಿಫಿಕೇಟ್‌ಗಳನ್ನು ನೀಡಿ ಅಭಿನಂದಿಸಲಾಯಿತು. ಹಿಂದಿ ಭಾಷಾ ಪ್ರವೀಣ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ದ್ವಿತೀಯ ವಿಜ್ಞಾನ ವಿಭಾಗದ ಮೋಕ್ಷಾ ಸಿ.ಕೆ. ಅವರನ್ನು ಅಭಿನಂದಿಸಲಾಯಿತು. ಪ್ರಾಂಶುಪಾಲ ಪ್ರಸಾದ್ ಶ್ಯಾನಭಾಗ್ ಸ್ವಾಗತಿಸಿ, ಪ್ರಥಮ ವಿಜ್ಞಾನ ವಿಭಾಗದ ವಿದಿಶಾ ವಂದಿಸಿದರು. ಪ್ರಥಮ ವಾಣಿಜ್ಯ ವಿಭಾಗದ ರೋಚನಾ, ಪ್ರಥಮ ವಿಜ್ಞಾನ ವಿಭಾಗದ ಜೀವಿತಾ ಕಾರ್ಯಕ್ರಮ ನಿರ್ವಹಿಸಿದರು.

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ನೌಕರರ ಪ್ರೀಮಿಯರ್ ಲೀಗ್ ಕ್ರಿಕೆಟ್



ಸುಬ್ರಹ್ಮಣ್ಯ: ಕ್ರೀಡೆಯು ಸ್ನೇಹ ಮತ್ತು ಒಗ್ಗಟ್ಟನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ. ನೌಕರರೊಳಗೆ ಸೌಹಾರ್ದತೆ ದ್ವಿಗುಣವಾಗಲು ಪಂದ್ಯಾಟಗಳು ಅಡಿಗಲ್ಲಾಗಲಿದೆ. 500ಕ್ಕೂ ಅಧಿಕ ನೌಕರರನ್ನು ಹೊಂದಿರುವ ಶ್ರೀ ದೇವಳದಲ್ಲಿ ದಿನನಿತ್ಯ ದೂರ ದೂರಗಳಿಂದ ಬರುವ ಭಕ್ತಾದಿಗಳನ್ನ ನಿಯಂತ್ರಿಸುವುದು ಹಾಗೂ ಸುಗಮ ದರ್ಶನ, ಪ್ರಸಾದ ಸೇವೆಯನ್ನು ಮಾಡುವಲ್ಲಿ ನೌಕರರು ಶ್ರಮಿಸುತ್ತಿದ್ದಾರೆ. ಒತ್ತಡದಿಂದ ಕಾರ್ಯ ನಿರ್ವಹಿಸುತ್ತಿದ್ದ ಇವರಿಗೆ ಏಕಾದಶಿ ದಿನ ಸ್ವಲ್ಪ ಬಿಡುವಿದ್ದು ಆರಾಮವಾಗಿ ಪಂದ್ಯಾಟವನ್ನು ಆಡಲು ಹಾಗೂ ಆನಂದಿಸಲು ಸಮಯ ಒದಗಿ ಬಂದಿದೆ ಎಂದು ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಅರವಿಂದ ಅಯ್ಯಪ್ಪ ಸುತಗುಂಡಿ ಹೇಳಿದರು.
ಸುಬ್ರಹ್ಮಣ್ಯದ ಎಸ್‌ಎಸ್‌ಪಿಯು ಕಾಲೇಜಿನ ಕುಮಾರಧಾರ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ನೌಕರರ ಟೆಂಪಲ್ ಸ್ಟಾಫ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟ ಉದ್ಘಾಟಿಸಿ ಅವರು ಮಾತನಾಡಿದರು.
ಶ್ರೀ ದೇವಳದ ಸಹಾಯಕ ಕಾರ್ಯ ನಿರ್ವಹಣಾಧಿಕಾರಿ ಎಸ್.ಜೆ.ವೈ. ರಾಜ್, ಮಾಸ್ಟರ್ ಪ್ಲಾನ್ ಸಮಿತಿ ಸದಸ್ಯ ಲೋಲಾಕ್ಷ ಕೈಕಂಬ, ಕುಲ್ಕುಂದ ಬಸವೇಶ್ವರ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಗಿರಿಧರ ಸ್ಕಂದ, ಮೆಸ್ಕಾಂ ಸಹಾಯಕ ಇಂಜಿನಿಯರ್ ಹರಿಕೃಷ್ಣ ಹಾಗೂ ಪಂದ್ಯಾಟದ ಸಂಯೋಜಕ ಮಹೇಶ್ ಕುಮಾರ್ ಎಸ್. ಅಗ್ರಹಾರ, ಭದ್ರತಾ ಸಿಬ್ಬಂದಿ ವ್ಯವಸ್ಥೆಯ ಮುಖ್ಯಸ್ಥ ದಾಮೋದರ ನಾಯರ್ ವೇದಿಕೆಯಲ್ಲಿದ್ದರು.
ಕ್ರಿಕೆಟ್ ಪಂದ್ಯಾಟದಲ್ಲಿ ಏಳು ತಂಡಗಳು ಭಾಗವಹಿಸಿದ್ದವು. ಟೀಮ್ ಕಾರ್ತಿಕೇಯ ಪ್ರಥಮ ಸ್ಥಾನ ಪಡೆದು ರೂ.10 ಸಾವಿರ ನಗದು ಹಾಗೂ ಶಾಶ್ವತ ಫಲಕ ಪಡೆದರೆ, ದ್ವಿತೀಯ ಸ್ಥಾನಿ ಷಣ್ಮುಖ ಕ್ರಿಕೆಟರ್ಸ್ ರೂ.7 ಸಾವಿರ ನಗದು ಹಾಗೂ ಶಾಶ್ವತ ಫಲಕ ಪಡೆದುಕೊಂಡಿತು.

ಕಜೆಕಾರು ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನ: ದ್ವಾದಶ ಜ್ಯೋತಿರ್ಲಿಂಗ ದರ್ಶನ



ಬಂಟ್ವಾಳ: ತಾಲೂಕಿನ ಕಜೆಕಾರು ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನದ ವಠಾರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವತಿಯಿಂದ ಪ್ರಸಿದ್ಧ ದ್ವಾದಶ ಜ್ಯೋತಿರ್ಲಿಂಗ ದರ್ಶನಕ್ಕೆ ಗುರುವಾರ ಚಾಲನೆ ನೀಡಲಾಯಿತು.
ಫೆ. 23ರವರೆಗೆ ನಡೆಯಲಿರುವ ದ್ವಾದಶ ಜ್ಯೋತಿರ್ಲಿಂಗ ದರ್ಶನವನ್ನು ಕಾವಳಕಟ್ಟೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಾಜಯೋಗಿನಿ ಬ್ರಹ್ಮಕುಮಾರಿ ಸರೋಜಿನಿ ಅವರು ಉದ್ಘಾಟಿಸಿ ಮಾತನಾಡಿ, ಒಂದು ಜನ್ಮದಲ್ಲಿ 12 ಜ್ಯೋತಿರ್ಲಿಂಗ ದರ್ಶಿಸುವುದು ಕಷ್ಟಸಾಧ್ಯ, ಭಕ್ತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅದರ ಪ್ರತಿರೂಪಗಳನ್ನು ದರ್ಶನಕ್ಕೆ ಇರಿಸಲಾಗಿದೆ. ಪರಮಾತ್ಮ ಜ್ಞಾನೇಶ್ವರ ಜ್ಞಾನಗಮ್ಯ ಅವನ ದಿವ್ಯ ಜ್ಞಾನವನ್ನು ತಿಳಿದು ನೆನಪು ಮಾಡಿದರೆ ಸಕಲ ಪಾಪ ಪರಿಹಾರವಾಗುವುದು ಎಂದು ಅವರು ಹೇಳಿದರು.
ಕಜೆಕಾರಿನ ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ಯಶೋಧರ ಕಜೆಕಾರ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗುಣಶೇಖರ ಕೊಡಂಗೆ,ಮಾಜಿ ಅಧ್ಯಕ್ಷ ಎಂ.ಮೋನಪ್ಪ ಪೂಜಾರಿ ಕಂಡೆಕ್ಕಾರು, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಸಂಜೀವ ಪೂಜಾರಿ,ಸ್ಥಳೀಯ ಪ್ರಮುಖರಾದ ರೋಹಿನಾಥ ಪೂಜಾರಿ ಕಂರ್ಬಡ್ಕ,ಗಂಗಾಧರ ಪೂಜಾರಿ ಅಂಬಡೆಮಾರು,ರವಿಕಿರಣ್ ಶೆಟ್ಟಿ ಕಜೆಕಾರ್ ರಾಜಯೋಗಿ ಬ್ರಹ್ಮಕುಮಾರ್ ಪ್ರಕಾಶ್ ರಾಜಯೋಗಿ ಬ್ರಹ್ಮಕುಮಾರ್ ಮಂಜುನಾಥ, ರಾಜೀವಿ ಕೊಕ್ಕೇಲು, ರಶ್ಮಿ ಪೆರುವಾರ್ ಉಪಸ್ಥಿತರಿದ್ದರು.
ಸೋಮನಾಥ, ಮಲ್ಲಿಕಾರ್ಜುನ, ಮಹಾಕಾಲೇಶ್ವರ, ಓಂಕಾರೇಶ್ವರ, ವೈದ್ಯನಾಥ, ಭೀಮಾಶಂಕರ, ರಾಮೇಶ್ವರ, ನಾಗೇಶ್ವರ, ವಿಶ್ವನಾಥ, ತ್ರಯಂಬಕೇಶ್ವರ, ಕೇದಾರನಾಥ ಮತ್ತು ಗ್ರೀಷ್ಮೇಶ್ವರ ಲಿಂಗಗಳ ದರ್ಶನದಲ್ಲಿರಿಸಲಾಗಿದೆ.

ಕರ್ನಾಟಕ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗಾಗಿ ಸ್ವಚ್ಛತೆ ಅರಿವು



ಬಂಟ್ವಾಳ: ಸ್ವಚ್ಛ ಭಾರತ ಅಭಿಯಾನ ಮಾದರಿ ಗ್ರಾಮಾಭಿವೃದ್ಧಿ ಆಂದೋಲನದ ಅಂಗವಾಗಿ ನಿರ್ಮಲ ಗ್ರಾಮ ಪ್ರಶಸ್ತಿ ಪುರಸ್ಕೃತ ಜನ ಶಿಕ್ಷಣ ಟ್ರಸ್ಟ್ – ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಗ್ರಾಮ ಆರೋಗ್ಯ – ಸ್ವಚ್ಛತೆ – ಪೌಷ್ಟಿಕ ಸಮಿತಿ ಗ್ರಾಮ ಪಂಚಾಯತ್ ಮಾಣಿ – ಇವುಗಳ ಸಹಯೋಗದಲ್ಲಿ ಕರ್ನಾಟಕ ಪ್ರೌಢ ಶಾಲೆ ಮತ್ತು ಕರ್ನಾಟಕ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿಗಳಿಗಾಗಿ 'ಸ್ವಚ್ಛತೆ ಅರಿವು'' ಕಾರ್ಯಕ್ರಮ ಶಾಂತಲಾ ಸಭಾಭವನದಲ್ಲಿ ನಡೆಯಿತು.
ದಕ್ಷಿಣ ಕನ್ನಡ ಜಿಲ್ಲಾ ಸ್ವಚ್ಛತಾ ರಾಯಭಾರಿ ಹಾಗೂ ಮಾಜಿ ಓಂಬುಡ್ಸ್‌ಮನ್ ಶೀನ ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ವಿದ್ಯಾರ್ಥಿಗಳಲ್ಲಿ ಬಾಲ್ಯದಿಂದಲೇ ಸ್ವಚ್ಛತೆಯ ಅರಿವು, ಸಮರ್ಪಕ ಕಸ ವಿಲೇವಾರಿ, ವೈಜ್ಞಾನಿಕ ಸಂಸ್ಕರಣೆ, ಸ್ವಚ್ಛತಾ ಘೋಷ ಮತ್ತು ಶಾಲೆಯನ್ನು ಸ್ವಚ್ಛತಾ ರಾಯಭಾರಿ ಮಾದರಿ ಶಾಲೆಯಾಗಿ ರೂಪುಗೊಳಿಸುವ ನಿಟ್ಟಿನಲ್ಲಿ ಮಾಹಿತಿ ನೀಡಿದರು.
ಜನ ಶಿಕ್ಷಣ ಟ್ರಸ್ಟ್ ನಿರ್ದೇಶಕರಾದ ಕೃಷ್ಣ ಮೂಲ್ಯ 'ಮಕ್ಕಳು ಸ್ವಚ್ಛತೆಯ ಯೋಧರಾಗಬೇಕೆಂದರು.
ಮಾಣಿ ಗ್ರಾಮ ಪಂಚಾಯತ್ ನ ಮಾಜಿ ಅಧ್ಯಕ್ಷ ಲ ಬಾಲಕೃಷ್ಣ ಆಳ್ವ ಕೊಡಾಜೆ ಅಧ್ಯಕ್ಷತೆ ವಹಿಸಿದ್ದರು.
ವ ಗ್ರಾಮ ಪಂಚಾಯತ್ ಸದಸ್ಯರುಗಳಾದ ಹಾಜಿ ಇಬ್ರಾಹಿಂ ಕೆ., ಸುದೀಪ್ ಕುಮಾರ್ ಶೆಟ್ಟಿ, ಮೇಲ್ವಿನ್ ಕಿಶೋರ್ ಮಾರ್ಟಿಸ್, ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ವಿದ್ಯಾ ಮತ್ತಿತರರು ಉಪಸ್ಥಿತರಿದ್ದರು.
ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಎಸ್. ಚೆನ್ನಪ್ಪ ಗೌಡ ಸ್ವಾಗತಿಸಿದರು. ಮಾಣಿಕ್ಯ ಸಂಜೀವಿನಿ ಒಕ್ಕೂಟದ ಎಲ್ ಸಿ ಆರ್ ಪಿ ಲೈಲಾಬಿ ವಂದಿಸಿದರು. ಶಿಕ್ಷಕರಾದ ಜಯರಾಮ ಕಾಂಚನ ಕಾರ್ಯಕ್ರಮ ನಿರೂಪಿಸಿದರು, ವಿದ್ಯಾರ್ಥಿನಿಯರಾದ ಮೈತ್ರಿ ಮತ್ತು ತಂಡ ಪ್ರಾರ್ಥಿಸಿ, ಸಂಜೀವಿನಿ ಒಕ್ಕೂಟದ ಸದಸ್ಯೆಯರಾದ ಸ್ವಾತಿ, ಕವಿತಾ, ಚೈತ್ರಾ ದಾಕ್ಷಾಯಿಣಿ ಸಹಕರಿಸಿದರು

ಸಂತ ಫಿಲೋಮಿನಾ ಕಾಲೇಜಿನಲ್ಲಿ 'ಒರಿಗಾಮಿ' ಗಣಿತ ಕಾರ್ಯಾಗಾರ



ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ಗಣಿತ ವಿಭಾಗದ ವತಿಯಿಂದ 'ಒರಿಗಾಮಿ: ಕಲೆಯ ಹಿಂದೆ ಇರುವ ಗಣಿತ' ಎಂಬ ಕಾರ್ಯಾಗಾರವನ್ನು ಆಯೋಜಿಸಲಾಯಿತು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಫಾ.ಡಾ ಆಂಟೋನಿ ಪ್ರಕಾಶ್ ಮೊಂತೆರೋ, ಗಣಿತದ ಪರಿಕಲ್ಪನೆಗಳನ್ನು ಪ್ರಾಯೋಗಿಕ ಕಲಿಕೆಯೊಂದಿಗೆ ಸಂಪರ್ಕಿಸುವಂತಹ ಅರ್ಥಪೂರ್ಣ ಮತ್ತು ಸೃಜನಾತ್ಮಕ ಶೈಕ್ಷಣಿಕ ಕಾರ್ಯಕ್ರಮವನ್ನು ಗಣಿತ ವಿಭಾಗ ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು.
ಸಂಪನ್ಮೂಲ ವ್ಯಕ್ತಿಯಾಗಿದ್ದ ಡಾ. ಅಡೆಲೆಡ್ ಸಲ್ದಾನ ಅವರು 'ಒರಿಗಾಮಿ' ಕಲೆಯ ಹಿಂದೆ ಅಡಗಿರುವ ಗಣಿತದ ತತ್ವಗಳನ್ನು ಸುಂದರವಾಗಿ ವಿವರಿಸಿದರು. ಸಮಮಿತಿ, ರೇಖಾಗಣಿತ, ಕೋನಗಳು, ಪರಿವರ್ತನೆಗಳು ಮುಂತಾದ ಗಣಿತದ ಅಂಶಗಳನ್ನು ಒರಿಗಾಮಿ ಮೂಲಕ ಹೇಗೆ ಅರ್ಥೈಸಬಹುದು ಎಂಬುದನ್ನು ಸ್ಪಷ್ಟಪಡಿಸಿ, ಸರಳ ಕಾಗದ ಮಡಿಕೆಗಳೊಳಗೆ ಅಡಗಿರುವ ಗಣಿತದ ಸೌಂದರ್ಯ ಮತ್ತು ಶೈಲಿಯನ್ನು ವಿವರಿಸಿದರು. ವೇದಿಕೆಯಲ್ಲಿ ಗಣಿತ ವಿಭಾಗದ ಮುಖ್ಯಸ್ಥೆ ತನುಜಾ ಎನ್.ಪಿ. ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಮಾನಸ ಮತ್ತು ಅಪರ್ಣ ಪ್ರಾರ್ಥಿಸಿದರು. ದ್ವಿತೀಯ ಬಿಎಸ್ಸಿ ಆಯುಷ್ ಜಬೀನಾ ಸ್ವಾಗತಿಸಿ, ಸುಷ್ಮಾ ವಾಗ್ಲೆ ವಂದಿಸಿದರು. ಪ್ರಥಮ ಬಿಎಸ್ಸಿ ವಿದ್ಯಾರ್ಥಿನಿ ಶ್ರೀವಿದ್ಯಾ ಎನ್. ಕಾರ್ಯಕ್ರಮ ನಿರ್ವಹಿಸಿದರು.

ಪಾಣೇರು ಜಿನ ಚೈತ್ಯಾಲಯದಲ್ಲಿ ಏಕಶಿಲಾ ಮಾನಸ್ತಂಭದ ಸ್ಥಾಪನೆ



ಬಂಟ್ವಾಳ: ಶ್ರೀ ಕ್ಷೇತ್ರ ಪಾಣೇರು ಭ.1008 ಶ್ರೀ ಅನಂತನಾಥ ತೀರ್ಥಂಕರರ ಜಿನ ಚೈತ್ಯಾಲಯದಲ್ಲಿ ಭವ್ಯ ಏಕಶಿಲಾ ಮಾನಸ್ತಂಭದ ಸ್ಥಾಪನಾ ಕಾರ್ಯಕ್ರಮವು ಶುಕ್ರವಾರ ವಿದ್ಯುಕ್ತವಾಗಿ ನೆರವೇರಿತು. ಮುನಿ ಶ್ರೀ 108 ಚಂದ್ರಸಾಗರ ಮಹಾರಾಜರ ಪುಣ್ಯ ಸ್ಮರಣೆ ಯೊಂದಿಗೆ, ಮುನಿ ಶ್ರೀ 108 ಪರಮ ಸಾಗರ ಮಹಾರಾಜರು, ಮುನಿ ಶ್ರೀ 108 ಶ್ರೀ ವೀರ ಸಾಗರ ಮಹಾರಾಜರ ಹಾಗೂ ಸೀಮೆಯ ಗುರುಗಳಾದ ಮೂಡುಬಿದಿರೆ ಶ್ರೀ ಜೈನ ಮಠದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಪಂಡಿತಾಚಾರ್ಯವರ್ಯ ಮಹಾ ಸ್ವಾಮೀಜಿ ಅವರ ಆಶೀರ್ವಾದದೊಂದಿಗೆ, ಬೆಂಗಳೂರು ಶಶಿಕಲಾ ಮತ್ತು ಸಂಪತ್ ಕುಮಾರ್ ಹಾಗೂ ಮಕ್ಕಳ ಸಹಕಾರದಿಂದ ಏಕಶಿಲಾ ಮಾನಸ್ತಂಭದ ಸ್ಥಾಪನಾ ಕಾರ್ಯಕ್ರಮವು ಪಾಣೆಮಂಗಳೂರು ಬಸದಿಯಲ್ಲಿ ಧಾರ್ಮಿಕ ವಿಧಿ ವಿಧಾನ ಪೂರ್ವಕವಾಗಿ ಸ್ಥಾಪಿಸಲಾಯಿತು.
ಶ್ರೀ ಕ್ಷೇತ್ರ ಪಾಣೇರು ಬಸದಿಯ ಸಮಿತಿಯ ಅಧ್ಯಕ್ಷ ಸಂಪತ್ ಕುಮಾರ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಮೋಹನ್ ರಾಜ್ ಚೌಟ, ಕಾರ್ಯದರ್ಶಿಗಳಾದ ಭುವನೇಂದ್ರ ಇಂದ್ರ, ಪ್ರಶಾಂತ್ ಜೈನ್, ಕಾರ್ಯನಿರ್ವಾಹಕರಾದ ಧರಣೇಂದ್ರ ಇಂದ್ರರು ಮತ್ತು ಸಮಿತಿಯ ಸರ್ವ ಸದಸ್ಯರು, ಗಣ್ಯರು, ಶ್ರಾವಕರು ಉಪಸ್ಥಿತರಿದ್ದರು.

ಫೆ. 23ರಂದು ಮಹಿಳೆಯರಿಗಾಗಿ ರಕ್ತದಾನ ಶಿಬಿರ, ಕೃತಕ ಕೈಕಾಲು ಜೋಡಣೆ

ಮಡಿಕೇರಿ: ರೋಟರಿ ದಿನಾಚರಣೆ ಅಂಗವಾಗಿ ಮಡಿಕೇರಿಯಲ್ಲಿ ರೋಟರಿ ಮಿಸ್ಟಿ ಹಿಲ್ಸ್ ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಫೆ.23ರಂದು ಮಹಿಳೆಯರಿಗಾಗಿ ರಕ್ತದಾನ ಶಿಬಿರ ಹಾಗೂ ಕೃತಕ ಕೈಕಾಲು ಜೋಡಣಾ ಶಿಬಿರ ನಡೆಯಲಿದೆ.
ನಗರದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ರೋಟರಿ ಮಿಸ್ಟಿ ಹಿಲ್ಸ್‌ನ ವೃತ್ತಿ ಸೇವಾ ಯೋಜನಾ ನಿರ್ದೇಶಕ ಡಾ. ಚೆರಿಯಮನೆ ಪ್ರಶಾಂತ್, ಮಹಿಳೆಯರೂ ರಕ್ತದಾನ ಮಾಡಬಹುದು ಎಂದು ಸ್ತ್ರೀಯರನ್ನು ರಕ್ತದಾನಕ್ಕೆ ಪ್ರೇರೇಪಿಸುವ ನಿಟ್ಟಿನಲ್ಲಿ ಮಹಿಳೆಯರಿಗಾಗಿಯೇ ವಿಶೇಷವಾಗಿ ರಕ್ತದಾನ ಶಿಬಿರವನ್ನು ಮಿಸ್ಟಿ ಹಿಲ್ಸ್ ವತಿಯಿಂದ ಆಯೋಜಿಸಲಾಗಿದೆ. ಅಂತೆಯೇ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ಸಹಭಾಗಿತ್ವದಲ್ಲಿ 22 ಮಂದಿಗೆ ಕೃತಕವಾದ ಕೈ ಮತ್ತು ಕಾಲು ಜೋಡಣಾ ಶಿಬಿರವನ್ನು ರೋಟರಿ ದಿನಾಚರಣೆ ಸಂದರ್ಭ ಫೆ.23ರಂದು ನಗರದ ರೋಟರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.
ರೋಟರಿ ಜಿಲ್ಲೆ 3092ರ ಮಾಜಿ ಗವರ್ನರ್ ನಾಗೇಂದ್ರ ಪ್ರಸಾದ್, ಕೊಡಗು ವೈದ್ಯಕೀಯ ಕಾಲೇಜಿನ ರಕ್ತ ನಿಧಿ ಕೇಂದ್ರದ ಅಧಿಕಾರಿ ಡಾ.ಕರುಂಬಯ್ಯ, ರೋಟರಿ ಜಿಲ್ಲಾ ಸಹಾಯಕ ಗವರ್ನರ್ ದಿಲನ್ ಚಂಗಪ್ಪ ವಲಯ ಸೇನಾನಿ ಕಾರ್ಯಪ್ಪ ಸೇರಿದಂತೆ ರೋಟರಿ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದೂ ಡಾ. ಪ್ರಶಾಂತ್ ಮಾಹಿತಿ ನೀಡಿದರು.
ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ರತ್ನಾಕರ್ ರೈ ಮಾತನಾಡಿ, ರೋಟರಿ ಜಿಲ್ಲಾ ಯೋಜನೆ ಅಂಗವಾಗಿ ಮಿಸ್ಟಿ ಹಿಲ್ಸ್‌ನಿಂದ 2.50 ಲಕ್ಷ ರೂ. ವೆಚ್ಚದಲ್ಲಿ ಕೃತಕ ಕೈ ಮತ್ತು ಕಾಲು ಜೋಡಣಾ ಶಿಬಿರ ಹಮ್ಮಿಕೊಳ್ಳಲಾಗಿದ್ದು ಈಗಾಗಲೇ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯಿಂದ ಗುರುತಿಸಲಾದ ಫಲಾನುಭವಿಗಳಿಗೆ ಸೋಮವಾರ ಕೈ ಮತ್ತು ಕಾಲು ಜೋಡಣೆ ನಡೆಯಲಿದೆ ಎಂದರು.

ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ
ಫೆ.22 ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಮಡಿಕೇರಿಯ ರೋಟರಿ ಸಭಾಂಗಣದಲ್ಲಿ ಅರೆಭಾಷೆ ಗೌಡ ವಿಕಾಸ ವೇದಿಕೆಯ ಪ್ರಹ್ಲಾದ್ ಅಪ್ಪಾಜಿ ಅವರ ಸಹಯೋಗದಲ್ಲಿ ಕೊಡಗು ಜಿಲ್ಲೆಯ ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ. 15 ತಂಡಗಳು ನೋಂದಾಯಿಸಿಕೊಂಡಿದ್ದು ಪ್ರಥಮ ಬಹುಮಾನವಾಗಿ 10 ಸಾವಿರ, ದ್ವಿತೀಯ ಬಹುಮಾನವಾಗಿ 6 ಸಾವಿರ ಮತ್ತು ತೃತೀಯ ಬಹುಮಾನವಾಗಿ 3 ಸಾವಿರ ರೂ. ನಗದು ಮತ್ತು ಟ್ರೋಫಿ ನೀಡಲಾಗುತ್ತದೆ ಎಂದೂ ರತ್ನಾಕರ್ ರೈ ತಿಳಿಸಿದರು.
ಮಹಿಳಾ ರಕ್ತದಾನ ಶಿಬಿರದ ಸಂಚಾಲಕಿ ರಶ್ಮಿದೀಪಾ ಮಾತನಾಡಿ, ಅನೀಮಿಯಾ ಮತ್ತು ರಕ್ತದಾನದ ಪ್ರಯೋಜನದ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಮಿಸ್ಟಿ ಹಿಲ್ಸ್ ವತಿಯಿಂದ ಮಹಿಳೆಯರೇ ರಕ್ತದಾನ ಮಾಡುವಂತಹ ವಿನೂತನ ಶಿಬಿರ ಆಯೋಜಿಸಲ್ಪಟ್ಟಿದೆ ಎಂದರು.

ರಕ್ತದಾನದ ಬಗ್ಗೆ ತಪ್ಪು ತಿಳಿವಳಿಕೆ
ರೋಟರಿ ಮಿಸ್ಟಿ ಹಿಲ್ಸ್ ಮುಂದಿನ ಸಾಲಿನ ಕಾರ್ಯದರ್ಶಿ ಡಾ.ಚೇತನ್ ಮಾತನಾಡಿ, ಶೇ. 5 ರಷ್ಟು ಪ್ರಮಾಣದಲ್ಲಿ ಮಾತ್ರ ಮಹಿಳೆಯರು ರಕ್ತದಾನ ಮಾಡಲು ಮುಂದಾಗುತ್ತಿದ್ದಾರೆ. ಸಾಕಷ್ಟು ತಪ್ಪು ತಿಳುವಳಿಕೆಗಳು ಇರುವುದೇ ಮಹಿಳೆಯರಲ್ಲಿ ರಕ್ತದಾನದ ಹಿಂಜರಿಕೆಗೆ ಕಾರಣವಾಗಿದೆ ಎಂದರು.
ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಕೊಡಗು ಸಂಚಾಲಕ ಅಂಕಾಚಾರಿ ಮಾತನಾಡಿ, ಕೃತಕ ಕೈಕಾಲು ಜೋಡಣೆ ಶಿಬಿರದ ಮೂಲಕ 21 ಮಂದಿಗೆ ಹೊಸ ಜೀವನ ನೀಡುವ ಪ್ರಯತ್ನ ಮಾಡಲಾಗಿದೆ ಎಂದೂ ಅಂಕಾಚಾರಿ ನುಡಿದರು.
ರೋಟರಿ ಜಿಲ್ಲಾ ಪಬ್ಲಿಕ್ ಇಮೇಜ್ ಸಮಿತಿ ಉಪಾಧ್ಯಕ್ಷ ಅನಿಲ್ ಎಚ್.ಟಿ. ಮಾತನಾಡಿ, ರೋಟರಿ ಸೇವಾ ಸಂಸ್ಥೆಯು ಅಮೆರಿಕಾ ಮೂಲದ ಪೌಲ್ ಹ್ಯಾರಿಸ್ ಅವರಿಂದ ಸ್ಥಾಪನೆಯಾಗಿ 121 ವರ್ಷಗಳಾದ ದಿನವನ್ನೇ ರೋಟರಿ ದಿನವನ್ನಾಗಿ ಫೆ.23 ರಂದು ಆಚರಿಸಲಾಗುತ್ತಿದೆ. ವಿಶ್ವದಲ್ಲಿಯೇ ಸಾಮಾಜಿಕ ಸೇವಾ ಚಟುವಟಿಕೆಗಳಲ್ಲಿ ರೋಟರಿ ಮೊದಲ ಸ್ಥಾನ ಪಡೆದಿದ್ದು ಫೆ.23 ರಂದು ವಿಭಿನ್ನ ಮತ್ತು ಜನರಿಗೆ ಸೇವಾ ಯೋಜನೆಯಂತಹ ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ ರೋಟರಿ ದಿನಾಚರಣೆ ಆಯೋಜಿಸಲ್ಪಟ್ಟಿದೆ ಎಂದು ನುಡಿದರು. ರಕ್ತದಾನ ಮಾಡಲು ಇಚ್ಚಿಸುವ ಮಹಿಳೆಯರು ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 7760841544ನ್ನು ಸಂಪರ್ಕಿಸಬಹುದಾಗಿದೆ.

ಸುತ್ತ ಮುತ್ತ

ಇಂದು ಕುಂಬ್ಡಾಜೆ ಪಂಚಾಯತ್ ಹಿಂದು ಸಮಾಜೋತ್ಸವ

ಮುಳ್ಳೇರಿಯ: ಕುಂಬ್ಡಾಜೆ ಪಂಚಾಯತ್ ಮಟ್ಟದ ಹಿಂದು ಸಮಾಜೋತ್ಸವ ಸಮಿತಿಯ ನೇತೃತ್ವದಲ್ಲಿ ಹಿಂದು ಸಮಾಜೋತ್ಸವವು ಫೆ.22ರಂದು ಜಯನಗರ ಮೈದಾನದಲ್ಲಿ ಜರಗಲಿದೆ. ಅಪರಾಹ್ನ 3 ಗಂಟೆಗೆ ನೃತ್ಯ ಭಜನೆ, ತಿರುವಾದಿರ, ಸಂಜೆ 5 ಗಂಟೆಗೆ ನಡೆಯುವ ಸಾರ್ವಜನಿಕ ಸಭೆಯನ್ನು ಪ್ರಧಾನ ರಕ್ಷಾಧಿಕಾರಿ ಬ್ರಹ್ಮಶ್ರೀ ವೇದಮೂರ್ತಿ ಗಣೇಶ ತಂತ್ರಿ ಕುಂಟಾರು ಉದ್ಘಾಟಿಸಲಿದ್ದಾರೆ. ಹಿಂದೂ ಸಮಾಜೋತ್ಸವ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ಗಾಡಿಗುಡ್ಡೆ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ವಿಹಿಂಪ ಪ್ರಧಾನ ಕಾರ್ಯದರ್ಶಿ ಭಜರಂಗ್ ಲಾಲ್ ಭಾಗಡೆ ಪಾಲ್ಗೊಳ್ಳಲಿದ್ದಾರೆ. ವಿಶ್ವ ಹಿಂದು ಪರಿಷತ್‌ನ ದಕ್ಷಿಣ ಕರ್ನಾಟಕ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹಾಗೂ ಬಜರಂಗ ದಳ ಕ್ಷೇತ್ರೀಯ ಸಂಯೋಜಕ ಜಿಜೇಶ್ ಪಟ್ಟೇರಿ ಮುಖ್ಯ ಭಾಷಣ ಮಾಡುವರು. ರಕ್ಷಾಧಿಕಾರಿ ಹರಿನಾರಾಯಣ ಶಿರಂತಡ್ಕ, ಗೌರವಾಧ್ಯಕ್ಷ ರಾಮಚಂದ್ರ ಮಾರ್ಪನಡ್ಕ, ಮಾತೃಸಮಿತಿ ಅಧ್ಯಕ್ಷೆ ಲಾವಣ್ಯ ಗಿರೀಶ್, ವಿದ್ಯಾಲಕ್ಷ್ಮೀ ಮೈಲ್ತೊಟ್ಟಿ, ಪ್ರಧಾನ ಸಂಚಾಲಕ ಹರಿಪ್ರಸಾದ್ ಪುತ್ರಕಳ, ಮಾತೃ ಸಮಿತಿ ಪ್ರಧಾನ ಕಾರ್ಯದರ್ಶಿ ರೋಶಿನಿ ಜನಾರ್ದನ ಉಪಸ್ಥಿತರಿರುವರು.

ಇಂದಿನಿಂದ ಮೀಪುಗುರಿ ಶ್ರೀ ದೇವಸ್ಥಾನದಲ್ಲಿ ವಾರ್ಷಿಕ ಮಹೋತ್ಸವ

ಕಾಸರಗೋಡು: ಮೀಪುಗುರಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಮಹೋತ್ಸವ ಫೆ.22ರಿಂದ 25ರ ತನಕ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಫೆ.22ರಂದು ಸಂಜೆ 5 ಕ್ಕೆ ತಂತ್ರಿವರ್ಯರಿಗೆ ಮತ್ತು ಋತ್ವಿಜರಿಗೆ ಸ್ವಾಗತ, ಆಚಾರ್ಯವರಣ, ತೋರಣ ಪ್ರತಿಷ್ಠೆ ಶ್ರೀ ಕ್ಷೇತ್ರದ ಸಂಪ್ರದಾಯದಂತೆ ದೇವತಾ ಪ್ರಾರ್ಥನೆ, ವಿವಿಧ ವೈದಿಕ ಕಾರ್ಯಕ್ರಮಗಳು, ರಾತ್ರಿ 7.30ಕ್ಕೆ ಸ್ಥಳೀಯ ಮಕ್ಕಳಿಂದ ನೃತ್ಯ ಕಾರ್ಯಕ್ರಮ ಜರಗಲಿದೆ. ಫೆ.23ರಂದು 8 ಗಂಟೆಗೆ ನಿತ್ಯಪೂಜೆ, ನವಕಪ್ರದಾನ ಯಜ್ಞಾರಂಭ, 10 ಗಂಟೆಗೆ ಭಗವದ್ಗೀತಾ ಪಾರಾಯಣ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ 6ಕ್ಕೆ ನೃತ್ಯ ಸಿಂಚನ, ರಾತ್ರಿ 7 ಗಂಟೆಗೆ ಶ್ರೀ ದೇವರ ಬಲಿ ಉತ್ಸವ, ಮಹಾಪೂಜೆ, ಭೂತಬಲಿ ಉತ್ಸವ ಜರಗಲಿದೆ. ಫೆ.24ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮಗಳು, ತುಲಾಭಾರ ಸೇವೆ, ಮಧ್ಯಾಹ್ನ ಶ್ರೀ ದೇವರ ಬಲಿ ಉತ್ಸವ, ರಾತ್ರಿ 7 ಗಂಟೆಗೆ ಶ್ರೀ ದೇವರ ಬಲಿ ಉತ್ಸವ, ಶ್ರೀಭೂತ ಬಲಿ ಉತ್ಸವ ನಡೆಯಲಿದೆ.

ಫೆ.25ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮಗಳು, ಮಧ್ಯಾಹ್ನ ಶ್ರೀ ದೇವರ ಮಹೋತ್ಸವ, ಓಕುಳಿ ಸ್ನಾನ, ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ 7 ಕ್ಕೆ ಶ್ರೀ ದೇವಿಗೆ ಮತ್ತು ಶ್ರೀ ಗಣಪತಿ ದೇವರಿಗೆ ರಂಗಪೂಜೆ, ಸತ್ಯದೇವತೆ, ಗುಳಿಗ ದೈವಕ್ಕೆ ತಂಬಿಲ, 7.30ರಿಂದ ಭಕ್ತಿಗಾನ ವೈಭವ, ರಾತ್ರಿ 10 ಗಂಟೆಗೆ ಶ್ರೀ ಸತ್ಯದೇವತೆ, ಶ್ರೀ ಗುಳಿಗ ದೈವಗಳ ನೇಮ ನಡೆಯಲಿದೆ.

ಹೆದ್ದಾರಿ ಫುಟ್ ಓವರ್ ಬ್ರಿಡ್ಜ್ ಅನುಮತಿ: ಬಿಜೆಪಿ ಶ್ರಮಕ್ಕೆ ಅಭಿನಂದನೆ

ಮಂಜೇಶ್ವರ: ಹೊಸಂಗಡಿ ಕನಿಲ, ಮಂಜೇಶ್ವರ ಗೋವಿಂದ ಪೈ ಕಾಲೇಜ್ ಕ್ರಾಸ್, ಐಲ, ಉಪ್ಪಳ, ಸಿಪಿಐಆರ್‌ಐ, ಮೊಗ್ರಾಲ್ ಕುನ್ನು ಪ್ರದೇಶಗಳಲ್ಲಿ ಪ್ರದೇಶದ ಜನರ ಪ್ರಮುಖ ಬೇಡಿಕೆ ಯಾದ ಹೆದ್ದಾರಿ ಫುಟ್ ಓವರ್ ಬ್ರಿಡ್ಜ್ ಮಂಜೂರುಗೊಳಿಸಿದ ನಿತೀನ್ ಗಡ್ಕರಿ ಅವರಿಗೆ ಹಾಗೂ ಅಗತ್ಯ ಫುಟ್ ಓವರ್ ಬ್ರಿಡ್ಜ್ ಬೇಡಿಕೆಯನ್ನು ಕೇಂದ್ರ ಸಚಿವರಿಗೆ ತಿಳಿಸಿ ಅನುಮತಿ ನೀಡುವಲ್ಲಿ ಶ್ರಮಿಸಿದ ನೇತಾರ ವಿಜಯ್‌ಕುಮಾರ್ ರೈ, ಮಂಗಳೂರು ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಹಾಗೂ ಜಿಲ್ಲಾ, ಮಂಡಲ ನೇತಾರರಿಗೆ ಬಿಜೆಪಿ ಮಂಜೇಶ್ವರ ಮಂಡಲ ಸಮಿತಿ ಅಭಿನಂದನೆ ಸಲ್ಲಿಸಿದೆ. ಮಂಜೇಶ್ವರ ಮಾಡ ಪರಿಸರ ಹಾಗೂ ವಾಮಂಜೂರು ಚೆಕ್‌ಪೋಸ್ಟ್ ಸಮೀಪ ಫುಟ್ ಓವರ್ ಬ್ರಿಡ್ಜ್ ಅನುಮತಿಗಾಗಿ ನೀಡಲಾಗಿದ್ದ ಹೆದ್ದಾರಿ ಇಲಾಖೆಯ ಅನುಮತಿ ಶೀಘ್ರವೇ ನೀಡುವಂತೆ ಕೇಂದ್ರ ಮಂತ್ರಿ ಅವರಿಗೆ ಮನವಿ ನೀಡಲಾಗಿದೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಆದರ್ಶ್ ಬಿ.ಎಂ. ತಿಳಿಸಿದರು.

ಕನಡ ಪತ್ರಕರ್ತರ ಸಂಘದ ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

ಕಾಸರಗೋಡು: ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘವು ಕೊಡಮಾಡುವ ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗೆ ಕನ್ನಡ ಪತ್ರಕರ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ಶ್ರೇಷ್ಠ ತನಿಖಾತ್ಮಕ ವರದಿ, ಸಾಮಾಜಿಕ ಸ್ಪಂದನದ ವರದಿ, ಸಾಹಸ ವರದಿ, ಜನಪರ ಕಾಳಜಿಯ ವರದಿ, ಸಾಮಾಜಿಕ ಅನಾಚಾರ ವಿರುದ್ಧ ವರದಿ, ಇವಲ್ಲದೆ ಶ್ರೇಷ್ಠ ಫೋಟೋ ಜರ್ನಲಿಸ್ಟ್, ಪತ್ರಿಕಾ ರಂಗದ ಧಾರ್ಮಿಕ ಕೊಡುಗೆ, ಪತ್ರಿಕಾ ರಂಗದ ಒಟ್ಟು ಸಾಧನೆ ಎಂಬೀ ವಿಭಾಗಗಳಲ್ಲಿ ಒಟ್ಟು 12 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು. ವರದಿಯು 2025ರ ಜನವರಿ ಒಂದರಿಂದ ಡಿಸೆಂಬರ್ 31ರೊಳಗೆ ದಿನ, ವಾರ ಯಾ ಮಾಸಪತ್ರಿಕೆಗಳಲ್ಲಿ ಪ್ರಕಟವಾಗಿರಬೇಕು. ಸ್ಮರಣ ಸಂಚಿಕೆ ಬರಹಗಳು ಪರಿಗಣಿಸಲ್ಪಡುವುದಿಲ್ಲ. ಪ್ರಶಸ್ತಿ ಪ್ರತೀ ವಿಭಾಗದಲ್ಲಿ 10000 ರೂ. ನಗದು, ಪ್ರಶಸ್ತಿ ಪತ್ರ, ಫಲಕ ಎಂಬಿವುಗಳನ್ನು ಒಳಗೊಂಡಿರುತ್ತದೆ. ಅರ್ಹ ಪತ್ರಕರ್ತರು 2026ರ ಮಾರ್ಚ್ 10 ರ ಒಳಗಾಗಿ ತಮ್ಮ ಪೂರ್ಣ ಮಾಹಿತಿ, ಲೇಖನ ಬರಹಗಳನ್ನು ಒಳಗೊಂಡು ಅರ್ಜಿ ಸಲ್ಲಿಸಬಹುದು. ತಜ್ಞ ಆಯ್ಕೆ ಸಮಿತಿ ಪ್ರಶಸ್ತಿ ವಿಜೇತರನ್ನು ಗುರುತಿಸಲಿದೆ. ಮೇ ತಿಂಗಳಿನಲ್ಲಿ ಪ್ರಶಸ್ತಿ ವಿತರಣಾ ಸಮಾರಂಭ ಜರಗಲಿದೆ. ಅರ್ಜಿ ಕಳುಹಿಸಬೇಕಾದ ವಿಳಾಸ ಅಧ್ಯಕ್ಷರು, ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘ, ಬಿ.ಕೆ.ಟವರ್ಸ್, ಸುಬ್ಬಯ್ಯಕಟ್ಟೆ, ಅಂಚೆ-ಕುಡಾಲುಮೇರ್ಕಳ, ಕಾಸರಗೋಡು ಜಿಲ್ಲೆ ಎಂಬೀ ವಿಳಾಸಕ್ಕೆ ಅಥವಾ 9446395295, 9995945394 ನಂಬ್ರಕ್ಕೆ ವಾಟ್ಸ್ಆ್ಯಪ್ ಮೂಲಕ ಕಳುಹಿಸಬಹುದು.

ಆನ್‌ಲೈನ್ ಮೂಲಕ ಕಾಸರಗೋಡು ಜಿ.ಪಂ.ಅಭಿವೃದ್ಧಿ ವಿಚಾರ ಸಂಕಿರಣ ಉದ್ಘಾಟನೆ

ಅಭಿವೃದ್ಧಿಯಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳ ಪಾತ್ರ ಮಹತ್ತರ

ಕಾಸರಗೋಡು: ಸ್ಥಳೀಯಾಡಳಿತ ಸಂಸ್ಥೆಗಳು ನಾಡಿನ ಅಭಿವೃದ್ಧಿ ಸಾಧನೆಗಳು, ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ. ಆದ್ದರಿಂದ ಸ್ಥಳೀಯಾಡಳಿತ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಬೇಕಾಗಿದೆ ಎಂದು ಕೇರಳ ಸ್ಥಳೀಯಾಡಳಿತ ಹಾಗೂ ಅಬಕಾರಿ ಇಲಾಖೆ ಸಚಿವ ಎಂ.ಬಿ.ರಾಜೇಶ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲಾ ಪಂಚಾಯತ್ ಅಭಿವೃದ್ಧಿ ವಿಚಾರ ಸಂಕಿರಣವನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.



ಪ್ರಾಮುಖ್ಯತೆ ನೀಡಬೇಕು

ಜಿ.ಪಂ.ಗಳು ತ್ರಿಸ್ತರ ಪಂಚಾಯತ್‌ಗಳೊಂದಿಗೆ ಜಂಟಿ ಯೋಜನೆಗಳನ್ನು ರೂಪಿಸಲು ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿರುವ ಕೇರಳದ ಎಲ್ಲಾ ಸಾಧನೆಗಳಿಗೆ ಸ್ಥಳೀಯಾಡಳಿತ ಸಂಸ್ಥೆಗಳು ಅಪಾರ ಕೊಡುಗೆ ನೀಡಿವೆ. ಕಡುಬಡತನ ನಿರ್ಮೂಲನೆಯಲ್ಲಿನ ಶ್ರೇಷ್ಠತೆ ಹೆಸರಿನಲ್ಲಿ ಪ್ರಶಸ್ತಿಗಳು ಸೇರಿದಂತೆ ವಿದೇಶಿ ಪತ್ರಿಕೆಗಳು ಕೇರಳವನ್ನು ಭಾರತದ ಅಭಿವೃದ್ಧಿ ಚಾಂಪಿಯನ್ ಎಂದು ಬಣ್ಣಿಸಿವೆ. 240 ವರ್ಷಗಳಷ್ಟು ಹಳೆಯದಾದ ಲಂಡನ್ ಟೈಮ್ಸ್ ಸಹಿತ ಹಲವು ಮಾಧ್ಯಮಗಳು ಕೇರಳವು ಕಡುಬಡತನವನ್ನು ಇತಿಹಾಸದ ಪುಟಗಳಿಗೆ ಇಳಿಸಿದೆ ಎಂದು ಕೊಂಡಾಡಿವೆ. ಸಾಮಾಜಿಕ ಕಲ್ಯಾಣದ ವಿಷಯದಲ್ಲಿ ಭಾರತವು ಕೇರಳದಿಂದ ಕಲಿಯಬೇಕಾದ ಕೆಲವು ಪಾಠಗಳನ್ನು ಹೊಂದಿದೆ ಎಂದು ಅಂತಾರಾಷ್ಟ್ರೀಯ ಮಾಧ್ಯಮಗಳು ಗಮನ ಸೆಳೆದಿವೆ ಎಂದು ಅವರು ವಿವರಿಸಿದರು.

ಕಡುಬಡತನ ನಿರ್ಮೂಲನೆಯಲ್ಲಿನ ಈ ಸಾಧನೆಯನ್ನು ಇತ್ತೀಚೆಗೆ ಸಂಸತ್ತಿನಲ್ಲಿ ಮಂಡಿಸಲಾದ ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ. ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಮತ್ತು ಸರಕಾರದೊಂದಿಗೆ ಈ ಸಾಧನೆ ಸಾಧಿಸುವಲ್ಲಿ ಸ್ಥಳೀಯ ಸಂಸ್ಥೆಗಳು ನಿರ್ಣಾಯಕವಾಗಿವೆ ಎಂದರು.

ಕೇರಳ ಹೆಚ್ಚು ಕೊಡುಗೆ ನೀಡುವ ರಾಜ್ಯ

ಲೈಫ್ ಯೋಜನೆಯ ಮೂಲಕ 5 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ಖರ್ಚು ಮಾಡಿದ 20,000 ಕೋಟಿ ರೂ.ಗಳಲ್ಲಿ 18,400 ಕೋಟಿ ರೂ.ಗಳು ರಾಜ್ಯದ ಪಾಲು ಆಗಿದೆ. ವಸತಿ ನಿರ್ಮಾಣಕ್ಕೆ ಕೇರಳವು ಅತಿ ಹೆಚ್ಚು ಕೊಡುಗೆ ನೀಡುವ ರಾಜ್ಯವಾಗಿದೆ ಎಂದು ಸಚಿವರು ಇದೇ ಸಂದರ್ಭ ಮಾಹಿತಿ ನೀಡಿದರು.

ಸಮಾರಂಭದಲ್ಲಿ ಜಿ.ಪಂ. ಅಧ್ಯಕ್ಷ ಸಾಬು ಅಬ್ರಹಾಂ ಅಧ್ಯಕ್ಷತೆ ವಹಿಸಿದ್ದರು. ಅಭಿವೃದ್ಧಿ ಸ್ಥಾಯಿ ಸಮಿತಿಯ ಅಧ್ಯಕ್ಷೆ ಇರ್ಫಾನಾ ಇಕ್ಬಾಲ್ ವರದಿ ಮಂಡಿಸಿದರು. ಲೋಕೋಪಯೋಗಿ ಸ್ಥಾಯೀ ಸಮಿತಿ ಅಧ್ಯಕ್ಷ ಕೆ.ಕೃಷ್ಣನ್, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಮನು, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ರೀನಾ ಥೋಮಸ್, ಜಿ.ಪಂ. ಯೋಜನಾ ಸಮಿತಿ ಉಪಾಧ್ಯಕ್ಷ ಡಾ.ವಿ.ಬಾಲಕೃಷ್ಣನ್, ಜಿಲ್ಲಾ ಯೋಜನಾಧಿಕಾರಿ ಟಿ. ರಾಜೇಶ್, ಬ್ಲಾಕ್ ಪಂಚಾಯತ್ ಅಧ್ಯಕ್ಷರಾದ ಸಿ.ಎಂ.ಮೀನಾಕುಮಾರಿ, ಬಿಂದು ಕೃಷ್ಣನ್, ಕೆ.ಸುಜಾತ, ಸ್ಥಳೀಯಾಡಳಿತ ಇಲಾಖೆಯ ಉಪ ನಿರ್ದೇಶಕ ಕೆ.ವಿ.ಹರಿದಾಸ್, ಜಿ.ಪಂ. ಸದಸ್ಯರು ಮತ್ತಿತರರಿದ್ದರು. ಜಿ.ಪಂ. ಉಪಾಧ್ಯಕ್ಷೆ ಕೆ.ಕೆ.ಸೋಯಾ ಸ್ವಾಗತಿಸಿ, ಜಿ.ಪಂ. ಕಾರ್ಯದರ್ಶಿ ಎಸ್. ಬಿಜು ವಂದಿಸಿದರು.

ಅಭಿವೃದ್ಧಿ ಸೆಮಿನಾರ್‌ನಲ್ಲಿ ಸಮಗ್ರ ಚರ್ಚೆ

ಜಿ.ಪಂ.ನ 14ನೇ ಪಂಚವಾರ್ಷಿಕ ಯೋಜನೆ ಎಲ್ಲಾ ವಲಯಗಳಲ್ಲಿ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಅದರ ಆಧಾರದಲ್ಲಿ ಚರ್ಚಿಸಲು ಅಭಿವೃದ್ಧಿ ವಿಚಾರ ಸಂಕಿರಣ ನಡೆಸಲಾಯಿತು. ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಅಭಿವೃದ್ಧಿ ದಾಖಲೆ ವಿಶ್ವಸಂಸ್ಥೆಯ 17 ಸುಸ್ಥಿರ ಅಭಿವೃದ್ಧಿ ಗುರಿಗಳ ಆಧರಿಸಿ 2030ರ ವೇಳೆಗೆ ಸಾಧಿಸಬೇಕಾದ ಸಮಗ್ರ ಅಭಿವೃದ್ಧಿ ಸಾಧನೆ ರೂಪಿಸಲಿದೆ. ರಾಷ್ಟ್ರೀಯ ಮಟ್ಟದಲ್ಲಿ ನಿಗದಿಪಡಿಸಿದ ಗುರಿಗಳಿಗಾಗಿ ಕೇರಳ ರಚಿಸಿರುವ 10 ವಿಷಯಾಧಾರಿತ ಗುರಿ ಆಧರಿಸಿ ಜಿಲ್ಲೆ ಮುಂಬರುವ ವರ್ಷಗಳಲ್ಲಿ ಯೋಜನೆ ಕಾರ್ಯಗತಗೊಳಿಸಲಿದೆ.

> **ಸ್ವಚ್ಛ ಸರ್ವೇಯಲ್ಲಿ ಉತ್ತಮ ಫಲಿತಾಂಶ**
>
> ತ್ಯಾಜ್ಯ ಮುಕ್ತ ನವ ಕೇರಳ ಯೋಜನೆಯ ಮೂಲಕ ನಗರ ಸ್ವಚ್ಛತೆಗಾಗಿ ಕೇಂದ್ರ ಸರಕಾರದ ಸ್ವಚ್ಛ ಸರ್ವೇಯಲ್ಲಿ ಕೇರಳ ಅದ್ಭುತ ಫಲಿತಾಂಶ ದಾಖಲಿಸಿದೆ. ಸ್ಥಳೀಯ ಸಂಸ್ಥೆಗಳು ರಾಜ್ಯದಲ್ಲಿ 21,57,000 ಡಿಜಿಟಲ್ ಅನಕ್ಷರಸ್ಥರನ್ನು ಗುರುತಿಸಲು ಮತ್ತು ಸಂಪೂರ್ಣ ಡಿಜಿಟಲ್ ಸಾಕ್ಷರತೆಗೆ ಕಾರಣವಾಗುವ ಯೋಜನೆ ಸಂಘಟಿ ಸಲು, ಕಾರ್ಯಗತಗೊಳಿಸಲು ಸಹ ಸಮರ್ಥವಾಗಿದೆ
>
> ● ಎಂ.ಬಿ.ರಾಜೇಶ್, ಸಚಿವರು

ಕುಂಬ್ಡಾಜೆ ಗ್ರಾ.ಪಂ.ನಲ್ಲಿ ಆರೋಗ್ಯ ಕೇರಳ ಅಭಿಯಾನ, ಪ್ರದರ್ಶನ ವಾಹನ ಜಾಥಾ



ಮುಳ್ಳೇರಿಯ: ಕೇರಳ ಸರಕಾರದ ಆರೋಗ್ಯ ಇಲಾಖೆಯ ನೇತೃತ್ವದಲ್ಲಿ ಆರೋಗ್ಯ ಕೇರಳ ಅಭಿಯಾನದ ಅಂಗವಾಗಿ ಪ್ರದರ್ಶನ ವಾಹನ ಜಾಥಾವು ಶನಿವಾರ ಕುಂಬ್ಡಾಜೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಜರಗಿತು.

ಆರೋಗ್ಯ ಕಾಪಾಡಿಕೊಳ್ಳಬೇಕು

ಗ್ರಾಮ ಪಂಚಾಯತ್ ಅಧ್ಯಕ್ಷೆ ಯಶೋಧಾ ಎನ್. ಸಮಾರಂಭವನ್ನು ಉದ್ಘಾಟಿಸಿ, ಪ್ರತಿಯೋರ್ವರೂ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಹಾಗೂ ಯಾವುದೇ ರೋಗಗಳು ಬಾರದಂತೆ ತಡೆಗಟ್ಟಬೇಕು ಎಂದರು.

ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಪಂಚಾಯತ್ ವ್ಯಾಪ್ತಿಯ ಪ್ರತೀ ಪ್ರಜೆಯ ಆರೋಗ್ಯ ಸಂರಕ್ಷಣೆ ಗ್ರಾಮ ಪಂಚಾಯತ್ ಹಾಗೂ ಆರೋಗ್ಯ ಇಲಾಖೆ ಜವಾಬ್ದಾರಿ ಎಂದು ನುಡಿದರು.

ಗ್ರಾಮ ಪಂಚಾಯತ್ ಉಪಾಧ್ಯಕ್ಷ ರವೀಂದ್ರ ರೈ ಗೋಸಾಡ, ಸ್ಥಾಯೀ ಸಮಿತಿ ಅಧ್ಯಕ್ಷರಾದ ನಯನಾ, ಅಬೂಬಕ್ಕರ್, ಪಂಚಾಯತ್ ಸದಸ್ಯರಾದ ನೂರುದ್ದೀನ್, ಕೊರಗಪ್ಪ ಬೆಳ್ಳಿಗೆ, ಗೀತಾ ಡಿ., ಸೌಭಾಗ್ಯಲಕ್ಷ್ಮೀ, ಬಿ.ಟಿ.ಅಬ್ದುಲ್ಲ ಕುಂಞಿ, ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಮುಂತಾದವರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

ಅಭಿವೃದ್ಧಿಯ ವಿಡಿಯೋ ಪ್ರದರ್ಶನ

ಜಿಲ್ಲೆಯ ವಿವಿಧ ಗ್ರಾಮ ಪಂಚಾಯತ್‌ಗಳಲ್ಲಿ ಪ್ರಚಾರ ವಾಹನವು ಪರ್ಯಾಟನೆ ನಡೆಸಿ ಆರೋಗ್ಯ ಇಲಾಖೆಯ ಸೇವೆಗಳು, ಅಭಿವೃದ್ಧಿ ಯೋಜನೆಗಳ ವಿಡಿಯೋ ಪ್ರದರ್ಶನವೂ ನಡೆಯಿತು.

ಈ ಅಭಿಯಾನವು ಫೆ.6ರಿಂದ ಆರಂಭಗೊಂಡು ಫೆ.21ರಂದು ಮುಕ್ತಾಯಗೊಂಡಿತು. ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಂಡಿದ್ದರು.

ಶಾಂತಿಗುರಿ-ಕುಬಣೂರು-ವಿದ್ಯಾನಗರ ರಸ್ತೆ ಸಂಚಾರ ದುಸ್ತರ: ದುರಸ್ತಿಗೆ ಆಗ್ರಹ



ಉಪ್ಪಳ: ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾಂತಿಗುರಿಯಿಂದ ಕುಬಣೂರು ಮೂಲಕ ವಿದ್ಯಾನಗರಕ್ಕೆ ತೆರಳುವ ಸುಮಾರು 3 ಕಿಲೋ ಮೀಟರ್ ಗ್ರಾಮೀಣ ಭಾಗದ ರಸ್ತೆಯು ಹಲವು ವರ್ಷಗಳಿಂದ ಹದಗೆಟ್ಟು ಶೋಚನೀಯಾವಸ್ಥೆಗೆ ತಲುಪಿದೆ. ಇದರಿಂದಾಗಿ ವಾಹನ ಸಂಚಾರ ದುಸ್ತರವಾಗಿರುವುದಾಗಿ ನಾಗರಿಕರು ದೂರಿದ್ದಾರೆ.

ರಸ್ತೆಯ ಅಲ್ಲಲ್ಲಿ ಬೃಹತ್ ಹೊಂಡಗಳು ಸೃಷ್ಟಿಯಾಗಿ ದ್ವಿಚಕ್ರ, ತ್ರಿಚಕ್ರ ಸಹಿತ ಶಾಲಾ ವಾಹನಗಳ ಸಂಚಾರಕ್ಕೆ ಭಾರೀ ಸಮಸ್ಯೆ ಉಂಟಾಗಿದೆ.

ಈ ರಸ್ತೆ ಮೂಲಕ ಪ್ರತಾಪನಗರ, ತಿಂಬರ, ಶಾಂತಿಗುರಿ ಸಹಿತ ವಿವಿಧ ಪ್ರದೇಶಗಳ ಜನರು ಕೆಲಸ ಕಾರ್ಯಗಳಿಗೆ ಹಾಗೂ ಇತರ ಅಗತ್ಯಗಳಿಗೆ ಕುಬಣೂರು, ಪಚ್ಚಂಬಳ, ಪಂಜತೊಟ್ಟಿ ಮೊದಲಾದ ಕಡೆಗಳಿಗೆ ಅಲ್ಲದೆ ಶಾಲಾ ಮಕ್ಕಳ ಸಹಿತ ದಿನನಿತ್ಯ ನೂರಾರು ಮಂದಿ ಪ್ರಯಾಣಿಸುತ್ತಿದ್ದಾರೆ.

ಮಳೆಗಾಲದಲ್ಲಿ ರಸ್ತೆಯ ಹೊಂಡಗುಂಡಿಗಳಲ್ಲಿ ನೀರು ಸಂಗ್ರಹವಾಗುತ್ತಿರುವುದರಿಂದ ವಾಹನ ಅಪಘಾತಗಳಿಗೂ ಕಾರಣವಾಗುತ್ತಿದೆ. ಸಂಬಂಧಪಟ್ಟ ಮಂಗಲ್ಪಾಡಿ ಗ್ರಾಮ ಪಂಚಾಯತ್‌ನ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕೂಡಲೇ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕೆಂದು ಊರವರು ಆಗ್ರಹಿಸಿದ್ದಾರೆ.

- **ಹಲವು ವರ್ಷಗಳಿಂದ ರಸ್ತೆ ಹದಗೆಟ್ಟು ಸಂಚಾರ ದುಸ್ತರ**
- **ರಸ್ತೆಯ ಹೊಂಡಗುಂಡಿಗಳ ತಪ್ಪಿಸಲು ವಾಹನ ಸವಾರರ ಸಾಹಸ**
- **ಮಳೆಗಾಲದಲ್ಲಿ ಹೆಚ್ಚುತ್ತಿದೆ ಅಪಘಾತ**

ಜಿಲ್ಲೆಯ ಎನ್‌ಜಿಒ ಸಂಘದ ಜಿಲ್ಲಾ ಕಚೇರಿ: ಕಾರ್ಯಕರ್ತರ ಸಮಾವೇಶ



ಕಾಸರಗೋಡು: ತುಟ್ಟಿಭತ್ಯೆಗೆ ಬೇಕಾಗಿ ಚುನಾವಣೆ ತನಕ ಕಾದು ನಿಲ್ಲಬೇಕಾದ ದುಃಸ್ಥಿತಿ ಇಂದು ಕೇರಳದ ಸರಕಾರಿ ನೌಕರರಿಗೆ ಬಂದೊದಗಿದೆ. ತುಟ್ಟಿಭತ್ಯೆ ಮಂಜೂರುಗೊಳಿಸಿದಾಗ ವಿಜೃಂಭಣೆಯ ಮೆರವಣಿಗೆ ನಡೆಸುವವರಿಗೆ ಆದರ ಬಾಕಿ ಮೊತ್ತಕ್ಕೆ ಬೇಕಾಗಿ ಏನೂ ಮಾತನಾಡಲು ಸಾಧ್ಯವಾಗದ ಸ್ಥಿತಿ ಉಂಟಾಗಿದೆ ಎಂದು ಎನ್‌ಜಿಒ ಸಂಘದ ಕಾಸರಗೋಡು ಜಿಲ್ಲಾಧ್ಯಕ್ಷ ಕೆ.ರಂಜಿತ್ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯ ಎನ್‌ಜಿಒ ಸಂಘದ ಕಾರ್ಯಕರ್ತರಿಗಾಗಿ ಎನ್‌ಜಿಒ ಸಂಘದ ಜಿಲ್ಲಾ ಕಚೇರಿಯಲ್ಲಿ ಏರ್ಪಡಿಸಲಾದ ಕಾರ್ಯಕರ್ತರ ಸಮಾವೇಶದಲ್ಲಿ ಪ್ರಧಾನ ಭಾಷಣ ಮಾಡಿ ಅವರು ಮಾತನಾಡಿದರು.

ಆಶಯಪರವಾಗಿ ಮತ್ತು ಆದರ್ಶಪರವಾಗಿ ಅತೀ ದೊಡ್ಡ ಸಂಘಟನೆ ಎನ್‌ಜಿಒ ಆಗಿದೆ. ಕೇರಳದ ಯಾವುದೇ ರಾಜಕೀಯ ಪಕ್ಷದ ಬೆಂಬಲವಿಲ್ಲದ, ಕೇರಳದ ಸರಕಾರಿ ನೌಕರರಿಗೆ ಬೇಕಾಗಿ ನಿರಂತರ ಮುಷ್ಕರ ಹೋರಾಟಗಳಲ್ಲಿ ಏರ್ಪಡುವ ಏಕೈಕ ಸರ್ವೀಸ್ ಸಂಘಟನೆಯಾಗಿದೆ ಕೇರಳ ಎನ್‌ಜಿಒ ಎಂದರು.

ಕೇರಳ ಎನ್‌ಜಿಒ ಸಂಘದ ಹೋರಾಟದ ಸಲುವಾಗಿ ಸರಕಾರ ಶೇಕಡಾ 10ರಷ್ಟು ತುಟ್ಟಿಭತ್ಯೆ ಮಂಜೂರುಗೊಳಿಸಲು ಮುಂದಾದುದಕ್ಕೆ ಕೇರಳ ಎನ್‌ಜಿಒ ಸಂಘ ಅಭಿನಂದಿಸುತ್ತದೆ. ಮಂಜೂರುಗೊಳಿಸಿದ ತುಟ್ಟಿಭತ್ಯೆಯ ಬಾಕಿ ಮೊತ್ತ ಕೂಡಲೇ ಮಂಜೂರುಗೊಳಿಸಬೇಕೆಂದು ಕೆ.ರಂಜಿತ್ ಸರಕಾರವನ್ನು ಒತ್ತಾಯಿಸಿದರು.

ಸಮಾವೇಶವನ್ನು ಅಕ್ಕಮ್ಮ ದೀಪ ಬೆಳಗಿಸಿ ಉದ್ಘಾಟಿಸಿದರು. ರಮ್ಯಾ, ದಿವ್ಯಶ್ರೀ ಮಾತನಾಡಿದರು. ಪಿ.ಸಿ.ಸುನೀಲ್ ಸ್ವಾಗತಿಸಿ, ರವಿಕುಮಾರ್ ವಂದಿಸಿದರು.

25 ಲಕ್ಷ ರೂ.ವೆಚ್ಚದ ಕಾಸರಗೋಡು ಗೋ ಕುಟೀರಕ್ಕೆ ಕೆ.ಶ್ರೀಕಾಂತ್ ಭೇಟಿ



ಕಾಸರಗೋಡು: ಕಾಸರಗೋಡು ಕನ್ನಡ ಗ್ರಾಮದಲ್ಲಿ ಸುಮಾರು 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಾಸರಗೋಡು ಗೋ -ಕುಟೀರಕ್ಕೆ ಬಿಜೆಪಿ ಕಲ್ಲಿಕೋಟೆ ಉತ್ತರ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಭೇಟಿ ನೀಡಿದರು.

ಕಾಸರಗೋಡು ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಶಿವರಾಮ ಕಾಸರಗೋಡು ಅವರೊಂದಿಗೆ ಕಾಸರಗೋಡು ಗೋ- ಕುಟೀರದ ನಿರ್ಮಾಣ ಕಾಮಗಾರಿ ಕುರಿತು ಚರ್ಚಿಸಿದರು.

ವಿವಿಧ ಯೋಜನೆಯ ಮಾಹಿತಿ

ಕಾಸರಗೋಡು ಗೋ-ಕುಟೀರದ ಆವರಣದಲ್ಲಿ ಸಾವಯವ ಕೃಷಿ, ಗ್ರಾಮೀಣ ಸ್ವಉದ್ಯೋಗ ಕೇಂದ್ರ ವಿದ್ಯಾರ್ಥಿಗಳು, ಯುವಜನರು, ಮಹಿಳೆಯರಿಗಾಗಿ ಹೊಲಿಗೆ, ವಸ್ತ್ರ ವಿನ್ಯಾಸ, ಡಿಸೈನಿಂಗ್, ಕಂಪ್ಯೂಟರ್, ಡಿಜಿಟಲ್ ಮಾಧ್ಯಮ ಕೇಂದ್ರ, ಗ್ರಂಥಾಲಯ, ಹಿರಿಯ ನಾಗರಿಕರಿಗಾಗಿ ಗ್ರಾಮೀಣ ವೈದ್ಯಕೀಯ ಕ್ಲಿನಿಕ್, ಗೋ-ವಿಶ್ರಾಂತಿ ಗ್ರಹ ಮುಂತಾದ ವಿವಿಧ ಕಾರ್ಯ ಯೋಜನೆಗಳ ಮಾಹಿತಿ ಪಡೆದರು.

ನಗರಸಭಾ ಸದಸ್ಯೆ ಶಾರದಾ ಬಿ., ಶಂಕರ ಕೆ., ಚಂದ್ರಶೇಖರ ಬಿ. ಮೊಗ್ರಾಲ್ ಪುತ್ತೂರು ಮೊದಲಾದವರು ಉಪಸ್ಥಿತರಿದ್ದರು.

> **ಸನ್ಮಾನ**
>
> ವಕೀಲರಾದ ಕೆ.ಶ್ರೀಕಾಂತ್ ಅವರಿಗೆ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಶಾಲು ಹೊದೆಸಿ ಹಾರವನಿತ್ತು ಗೋ-ಕುಟೀರದ ಪೋಸ್ಟರ್ ನೀಡಿ ಸನ್ಮಾನಿಸಲಾಯಿತು.

ಬಿಜೆಪಿ ಜಿಲ್ಲಾ ಪದಾಧಿಕಾರಿ, ಪಂಚಾಯತ್, ವಲಯ ಪದಾಧಿಕಾರಿಗಳ ನಾಯಕತ್ವ ಸಭೆ



ಕಾಸರಗೋಡು: ಮುಂಬರುವ ಕೇರಳ ವಿಧಾನಸಭಾ ಚುನಾವಣೆಯ ಪೂರ್ವಭಾವಿಯಾಗಿ ಕಾಸರಗೋಡು ಲೋಕಸಭಾ ಕ್ಷೇತ್ರದ ಬಿಜೆಪಿ ಜಿಲ್ಲಾ ಪದಾಧಿಕಾರಿಗಳ, ಪಂಚಾಯತ್ ಮತ್ತು ವಲಯ ಪದಾಧಿಕಾರಿಗಳ ನಾಯಕತ್ವ ಸಭೆಯು ಬಿಜೆಪಿ ಜಿಲ್ಲಾ ಕಾರ್ಯಾಲಯವಾದ ಡಾ.ಶ್ಯಾಮಪ್ರಸಾದ್ ಮುಖರ್ಜಿ ಮಂದಿರದಲ್ಲಿ ಜರಗಿತು.

ಸಭೆಯನ್ನು ಮಾಜಿ ಕರ್ನಾಟಕ ರಾಜ್ಯ ಬಿಜೆಪಿ ಅಧ್ಯಕ್ಷ, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ನಳಿನ್‌ಕುಮಾರ್ ಕಟೀಲ್ ಉದ್ಘಾಟಿಸಿದರು.

ಕೇರಳದಲ್ಲಿ ಬಿಜೆಪಿಗೆ ಸ್ಥಾನವಿಲ್ಲವೆಂದು ಪ್ರಚಾರ ನಡೆಸಿದವರಿಗೆ ತಿರುಗೇಟಾಗಿದೆ. ಇತ್ತೀಚೆಗೆ ಕೇರಳದಲ್ಲಿ ನಡೆದ ಸ್ಥಳೀಯಾಡಳಿತ ಸಂಸ್ಥೆಗಳ ಚುನಾವಣೆ ಫಲಿತಾಂಶವೆಂದೂ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಯ ಶಕ್ತಿ ಎಲ್ಲರಿಗೂ ಮನವರಿಕೆಯಾಗಲಿದೆ ಎಂದು ನಳಿನ್‌ಕುಮಾರ್ ಕಟೀಲ್ ಹೇಳಿದರು.

ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್, ಕಲ್ಲಿಕೋಟೆ ವಲಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಜಿ.ಕಾಶಿನಾಥ್, ಪ್ರಧಾನ ಕಾರ್ಯದರ್ಶಿ ಸುಧಾಮ ಗೋಸಾಡ, ರಾಜ್ಯ ಸಮಿತಿ ಸದಸ್ಯರಾದ ವಿ.ರವೀಂದ್ರನ್, ಕೋಳಾರು ಸತೀಶ್ಚಂದ್ರ ಭಂಡಾರಿ, ಎ.ವೇಲಾಯುಧನ್, ಕಾಸರಗೋಡು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ಆರ್.ಸುನೀಲ್, ಮನುಲಾಲ್ ಮೇಲತ್ತ್, ಕಣ್ಣೂರು ಉತ್ತರ ವಲಯ ಜಿಲ್ಲಾ ಕಾರ್ಯದರ್ಶಿ ಮನೋಜ್, ಕಲ್ಲಿಕೋಟೆ ವಲಯ ಉಪಾಧ್ಯಕ್ಷ ಎಂ.ವಿಜಯಕುಮಾರ್ ರೈ ಮಾತನಾಡಿದರು.

ಮಾ.3: ಕಾಳ್ಯಂಗಾಡು ಶ್ರೀ ಜಗದಂಬಾ ದೇವಿ ಕ್ಷೇತ್ರದಲ್ಲಿ ಪ್ರತಿಷ್ಠಾ ದಿನಾಚರಣೆ

ಕಾಸರಗೋಡು: ಕೂಡ್ಲು ರಾಮದಾಸನಗರ ಕಾಳ್ಯಂಗಾಡು ಶ್ರೀ ಜಗದಂಬಾ ದೇವಿ ಕ್ಷೇತ್ರದಲ್ಲಿ 57ನೇ ವಾರ್ಷಿಕ ಭಜನೆ ಹಾಗೂ ಪ್ರತಿಷ್ಠಾ ದಿನಾಚರಣೆ ಮಾರ್ಚ್ 3ರಂದು ವಿವಿಧ ಕಾರ್ಯ ಕ್ರಮಗಳೊಂದಿಗೆ ನಡೆಯಲಿದೆ. ಬೆಳಗ್ಗೆ 7ಕ್ಕೆ ಗಣಪತಿಹೋಮ, 8ಕ್ಕೆ ನಾಗ, ಗುಳಿಗನ ತಂಬಿಲ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಅನ್ನಸಂತರ್ಪಣೆ, ಸೂರ್ಯಾಸ್ತಮಾನಕ್ಕೆ ದೀಪಪ್ರತಿಷ್ಠೆ ಭಜನೆ ಪ್ರಾರಂಭ, ಮರುದಿನ ಸೂರ್ಯೋದಯಕ್ಕೆ ದೀಪ ವಿಸರ್ಜನೆ, 10 ಗಂಟೆಗೆ ಗುಳಿಗನ ಕೋಲ, ಮಧ್ಯಾಹ್ನ ಮಹಾಪೂಜೆ, ಅನ್ನಸಂತರ್ಪಣೆ, ರಾತ್ರಿ 8 ಗಂಟೆಗೆ ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದಿಂದ ಹುಲ್ಪೆ ಮೆರವಣಿಗೆ ನಡೆಯಲಿದೆ.



ಕಾಸರಗೋಡು ತೆರುವತ್ ಶ್ರೀ ಚೇರುಂಬಾ ಭಗವತೀ ಕ್ಷೇತ್ರದಲ್ಲಿ ನಡೆಯುವ ಬ್ರಹ್ಮಕಲಶ ಹಾಗೂ ನಡಾವಳಿ ಮಹೋತ್ಸವದ ಪೂರ್ವಭಾವಿಯಾಗಿರುವ ಗೊನೆ ಕಡಿಯುವ ಮುಹೂರ್ತ ಶುಕ್ರವಾರ ಜರಗಿತು. ಶ್ರೀ ಕ್ಷೇತ್ರದ ಮೂತ ಚೆಟ್ಟಿಯಾರ್‌ಚ್ಚನ್‌ರಾದ ರಾಘವ ಮೂತ ಚೆಟ್ಟಿಯಾರ್‌ಚ್ಚನ್, ಶ್ರೀ ಕ್ಷೇತ್ರದ ಕಾರ್ನವರ್‌ಗಳಾದ ಗೋಪಾಲಕೃಷ್ಣ ಕಾರ್ನವರ್, ನಿರ್ಮಲಾಕ್ಷನ್ ಕಾರ್ನವರ್ ಮತ್ತಿತರರಿದ್ದರು.

ಕರಡು ಮತದಾರರ ಪಟ್ಟಿ ಜನಜಾಗೃತಿಗೆ ಜಿಲ್ಲಾಧಿಕಾರಿ ಕಚೇರಿಗೆ ಏಕಾಂಗಿ ಪಾದಯಾತ್ರೆ

ಕಾಸರಗೋಡು: ಅತಿಸೂಕ್ಷ್ಮ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ರಮವು ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದಾದ್ಯಂತ ಹಲವಾರು ಅಡೆತಡೆಗಳು, ಗೊಂದಲಗಳು, ವಾದ ವಿವಾದಗಳ ನಡುವೆ ನಡೆದು ಅಂತಿಮ ಹಂತ ತಲುಪಿ ಶನಿವಾರ ಕರಡು ಎಸ್‌ಐಆರ್ ಮತದಾರರ ಪಟ್ಟಿಗೆ ಒಳಪಟ್ಟವರ ಹೆಸರನ್ನು ಪ್ರಕಟಿಸಲಾಗಿದೆ.

ಗಮನ ಸೆಳೆದಿದ್ದಾರೆ

ಈ ಹಿನ್ನೆಲೆಯಲ್ಲಿ ಪ್ರಜ್ಞಾವಂತ ನಾಗರಿಕರೊಬ್ಬರು ಸಮಗ್ರ ಜನಜಾಗೃತಿ ಮೂಡಿಸುವ ಸಲುವಾಗಿ ಮತ್ತು ಪ್ರತಿಯೋರ್ವರಿಗೂ ಮತದಾನದ ಹಕ್ಕಿಗಾಗಿ ಪಾದಯಾತ್ರೆ ಎಂಬ ಸಮಗ್ರ ಉದ್ದೇಶದೊಂದಿಗೆ ತಮ್ಮ ಊರಿನಿಂದ ಕಾಸರಗೋಡು ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಕಚೇರಿಗೆ ಏಕಾಂಗಿಯಾಗಿ 30 ಕಿಲೋ ಮೀಟರ್ ಪಾದಯಾತ್ರೆ ನಿರ್ವಹಿಸುವ ಮೂಲಕ ಇಡೀ ನಾಡಿನ ಗಮನ ಸೆಳೆದಿದ್ದಾರೆ.

> **ಮತದಾರರ ಪಟ್ಟಿ ಬಗ್ಗೆ ಜನರಿಗೆ ಸಮಗ್ರ ಅರಿವು**
>
> ಎಸ್‌ಐಆರ್ ಮತದಾರರ ಪಟ್ಟಿಯ ಕುರಿತು ನಾಗರಿಕರಿಗೆ ಸ್ಪಷ್ಟ ತಿಳುವಳಿಕೆ ಮೂಡಿಸುವಲ್ಲಿ ಅಧಿಕೃತರು ಹಿಂದೆ ಬಿದ್ದಿರುವುದು ಕಂಡುಬಂದಿದೆ. ಜೊತೆಗೆ ಅಧಿಕಾರಿಗಳಲ್ಲೇ ಗೊಂದಲ ಎದುರಾಗಿದೆ. ಕರಡು ಮತದಾರರ ಪಟ್ಟಿ ಪ್ರಕಟಗೊಂಡಿದ್ದು, 10 ದಿನಗಳ ಕಾಲ ಮಾತ್ರ ಪರಿಶೀಲನೆಗೆ ಸಮಯಾವಕಾಶವಿರುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೋರ್ವ ಮತದಾರನು ಜಾಗೃತನಾಗಿ ತನ್ನ ಹಕ್ಕುಗಳ ಬಗ್ಗೆ ಅರಿತುಕೊಳ್ಳಬೇಕು. ಪರಸ್ಪರ ಟೀಕೆ ಮತ್ತು ಪ್ರತಿ ಟೀಕೆಗಳಲ್ಲೇ ಕಾಲಹರಣ ಮಾಡುವ ವಿವಿಧ ರಾಜಕೀಯ ಪಕ್ಷಗಳಲ್ಲಿ ಜನಸಾಮಾನ್ಯರ ನೈಜ ಸಮಸ್ಯೆ ಪರಿಹರಿಸುವ ಕುರಿತು ನಿರ್ಲಕ್ಷ್ಯ ಎದ್ದುಕಾಣುತ್ತಿದೆ. ಮತದಾರರ ಪಟ್ಟಿಯಲ್ಲಿ ತನ್ನ ತಾಯಿಯ ಹೆಸರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಯಾವುದೇ ಕಾರಣವಿಲ್ಲದೆ ವರ್ಗಾಯಿಸಿರುವುದೇ ತನ್ನ ಈ ಏಕಾಂಗಿ ಪಾದಯಾತ್ರೆಗೆ ಮೂಲ ಪ್ರೇರಣೆಯಾಗಿದೆ.
>
> 
>
> ● ರಾಜಗೋಪಾಲ ಕೈಪಂಗಳ, ಸಮಾಜ ಸೇವಕ

ಬೆಳ್ಳೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ನೆಟ್ಟಣಿಗೆ ಸಮೀಪದ ಕೈಪಂಗಳ ನಿವಾಸಿಯಾದ ಪ್ರಗತಿಪರ ಕೃಷಿಕ ರಾಜಗೋಪಾಲ ಕೈಪಂಗಳ ಎಂಬವರೇ ಏಕಾಂಗಿ ಪಾದಯಾತ್ರೆ ನೆರವೇರಿಸಿದ ಪ್ರಜಾತಂತ್ರ ಅಭಿಮಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು.

ಜಾಗೃತಿ ಮೂಡಿಸುವಲ್ಲಿ ಯಶಸ್ವಿ

ಅವರು ಬೆಳ್ಳೂರು ಗ್ರಾಮ ಪಂಚಾಯತ್ ಕಚೇರಿಯ ಎದುರಿನಿಂದ ಬೆಳಗ್ಗೆ ಪಾದಯಾತ್ರೆ ಆರಂಭಿಸಿದರು. ಅಲ್ಲದೆ ಸಂಜೆ ಕಾಸರಗೋಡು ಕಲೆಕ್ಟರೇಟ್‌ನಲ್ಲಿ ಪಾದಯಾತ್ರೆ ಮುಕ್ತಾಯಗೊಳಿಸಿದರು. ಬೆಳ್ಳೂರು, ಕಾರಡ್ಕ, ಮುಳಿಯಾರು, ಚೆಂಗಳ ಗ್ರಾಮ ಪಂಚಾಯತ್‌ಗಳ ಮೂಲಕ ಸಾಗಿದ ಅವರ ಪಾದಯಾತ್ರೆಯು ಕಾಸರಗೋಡು ನಗರಸಭೆ ವ್ಯಾಪ್ತಿಯಲ್ಲಾಗಿ ಮುಂದುವರಿದು ಸಮಾಪ್ತಿಯಾಯಿತು. ಪಾದಯಾತ್ರೆ ಸಂದರ್ಭ ಅಲ್ಲಲ್ಲಿ ಜನರಿಗೆ ಮತದಾರರ ಪಟ್ಟಿ ಕುರಿತು ಸಮಗ್ರ ಜಾಗೃತಿ ಮೂಡಿಸುವಲ್ಲೂ ಅವರು ಯಶಸ್ವಿಯಾದರು.

ರಾಜಗೋಪಾಲ ಕೈಪಂಗಳ ಅವರ ಈ ಏಕಾಂಗಿ ಪಾದಯಾತ್ರೆಯು ಪೌರನ ಕನಿಷ್ಠ ಕರ್ತವ್ಯ, ಹಕ್ಕು ಸ್ವಾತಂತ್ರ್ಯ ಹಾಗೂ ಸವಲತ್ತುಗಳ ಪ್ರಾತಿನಿಧಿಕ ರೂಪವಾಗಿ ನಾಡಿನಾದ್ಯಂತ ಗಮನ ಸೆಳೆದಿದ್ದು ಅತ್ಯಂತ ಮಹತ್ವದ ಕಾರ್ಯ ಎಂದೆನಿಸಿದೆ.

ಸಮರ್ಥ ಕೃಷಿಕರಾಗಿದ್ದಾರೆ

ರಾಜಗೋಪಾಲ ಕೈಪಂಗಳ ಅವರು ಅಭಿವೃದ್ಧಿಪರವಾದ ಸಮರ್ಥ ಕೃಷಿಕರಾಗಿದ್ದು ಸಮಾಜ ಸೇವೆಯಲ್ಲಿ ಸಾಕಷ್ಟು ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ದಶಕಗಳ ಹಿಂದೆ ಬೆಳ್ಳೂರು ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿ ಪೂರ್ತಿಯಾಗಿ ಉದ್ಘಾಟಿಸದಿದ್ದ ಸಂದರ್ಭ ಉಪವಾಸ ಕುಳಿತು ಅವರು ಪ್ರತಿಭಟಿಸಿದ ಬಳಿಕ ಕಟ್ಟಡವನ್ನು ಲೋಕಾರ್ಪಣೆಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ಕೃಷಿ ತೋಟಗಳಿಗೆ ಹಂದಿ ಸಹಿತ ಕಾಡುಪ್ರಾಣಿಗಳ ಚಲನವಲನಕ್ಕನುಸರಿಸಿ ಬೆಳಕು ಹಾಯಿಸಿ ಬೆದರಿಸುವ ವಿಶೇಷ ಲೈಟೊಂದನ್ನು ಅವರು ಆವಿಷ್ಕರಿಸಿದ್ದರು.

ಗೋಧಾಮದಲ್ಲಿ 'ಪ್ರಕೃತಿಯಿಂದ ಪ್ರಕೃತಿಗೆ' ವಿನೂತನ ಪರಿಕಲ್ಪನೆಯಡಿ ದೊಂದಿ ಬೆಳಕಿನಲ್ಲಿ ನಡೆದ ಉತ್ಸವ
ಮುನಿಯಾಲಿನಲ್ಲಿ ಏಕಪವಿತ್ರ ಶ್ರೀ ಮನ್ನಾಗಮಂಡಲ ಸಂಪನ್ನ

ಕಾರ್ಕಳ: ಕೃಷಿಲೋಕ ಕಾರ್ಕಳ ತಾಲೂಕಿನ ಮುನಿಯಾಲಿನ ಗೋಧಾಮದಲ್ಲಿ ಪ್ರಕೃತಿಯಿಂದ ಪ್ರಕೃತಿಗೆ ಎಂಬ ವಿನೂತನ ಪರಿಕಲ್ಪನೆಯಲ್ಲಿ ಶನಿವಾರ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆದ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀಮನ್ನಾಗಮಂಡಲವು ಕೊರಂಗ್ರಪಾಡಿ ವಿದ್ವಾನ್ ಕೆಪಿ ಕುಮಾರಗುರು ತಂತ್ರಿ ನೇತೃತ್ವದಲ್ಲಿ, ವಾಸುದೇವ ಭಟ್ ಅವರ ಸಹಯೋಗದೊಂದಿಗೆ ಪಾತ್ರಿಗಳಾದ ರಾಮಚಂದ್ರ ಕುಂಜಿತ್ತಾಯ ಹಾಗೂ ಗೋಳಿಯಂಗಡಿ ಸುಬ್ರಹ್ಮಣ್ಯ ವೈದ್ಯ ಅವರ ಮೇಳದೊಂದಿಗೆ ವಿಜೃಂಭಣೆಯಿಂದ ಜರಗಿತು.

ಮುನಿಯಾಲು ಸಂಜೀವಿನಿ ಫಾರ್ಮ್ ಗೋಧಾಮದ ಪ್ರವರ್ತಕ ಜಿ. ರಾಮಕೃಷ್ಣ ಆಚಾರ್ ಕುಟುಂಬಸ್ಥರು, ಮುನಿಯಾಲು ಶ್ರೀ ಮನ್ನಾಗಮಂಡಲ ಸಮಿತಿಯ ಅಧ್ಯಕ್ಷ ದೇವಿಪ್ರಸಾದ ಶೆಟ್ಟಿ ಸಾಣೂರುಗುತ್ತು, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಶೆಟ್ಟಿ ಕಾರ್ಕಳ, ದಾಮೋದರ ಶರ್ಮಾ ಹಾಗೂ ಸಾವಿರಾರು ಮಂದಿ ಭಕ್ತರು ಉಪಸ್ಥಿತರಿದ್ದರು.

ಮಹಾ ಅನ್ನ ಸಂತರ್ಪಣೆ




ಕೃಷಿಲೋಕ ಕಾರ್ಕಳ ತಾಲೂಕಿನ ಮುನಿಯಾಲಿನ ಗೋಧಾಮದಲ್ಲಿ ಪ್ರಕೃತಿಯಿಂದ ಪ್ರಕೃತಿಗೆ ಎಂಬ ವಿನೂತನ ಪರಿಕಲ್ಪನೆಯಲ್ಲಿ ಶನಿವಾರ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆದ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀಮನ್ನಾಗಮಂಡಲದ ಪೂರ್ವಭಾವಿಯಾಗಿ ಆಶ್ಲೇಷಾ ಬಲಿದಾನ, ಪಂಚವಿಶಂತಿ ದ್ರವ್ಯಮೀಳಿತಕಲಶ, ಪ್ರಧಾನ ಯಾಗ, ಸ'ಪ'್ತ'ತ್ರ ಯಂ ಮಂತ್ರ ಯಾಗ, ಪವಮಾನಸೂಕ್ತ ಯಾಗ, ತಿಲ ಯಾಗ, ಬ್ರಹ್ಮಚಾರಿ ಆರಾಧನಾ, ಪ್ರಸನ್ನ ಪೂಜೆ, ಪಲ್ಲಪೂಜೆ,ಅನ್ನರಾಧನೆ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು.

ಶ್ರೀ ಭವಾನಿ ಭೋಜನಾಲಯದಲ್ಲಿ ಮಹಾ ಅನ್ನಸಂತರ್ಪಣೆ ನಡೆಯಿತು. ಸಂಜೆ ಶ್ರೀದುರ್ಗಾನಮಸ್ಕಾರ ಪೂಜೆ ನಡೆಯಿತು.

ವಿದ್ವಾನ್ ಕೊರಂಗ್ರಪಾಡಿ ಕುಮಾರಗುರು ತಂತ್ರಿಗಳ ನೇತ್ರತ್ವದಲ್ಲಿ ವಾಸುದೇವ ಭಟ್ ಅವರ ಸಹಯೋಗದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ಮುನಿಯಾಲು ಸಂಜೀವಿನಿ ಗೋಧಾಮದ ಸಂಸ್ಥಾಪಕ ಡಾ. ಜಿ ರಾಮಕೃಷ್ಣ ಆಚಾರ್, ಸವಿತಾ ಆರ್ ಆಚಾರ್, ಅನುಷಾ ಆಚಾರ್, ಪ್ರಜ್ವಲ್ ಆಚಾರ್, ಪೂಜಾ ಆಚಾರ್, ತೇಜಸ್ ಆಚಾರ್, ರಕ್ಷತ್ ಆಚಾರ್, ಹಾಗೂ ಕುಟುಂಬಸ್ಥರು, ಶ್ರೀಮನ್ನಾಗಮಂಡಲ ಸೇವಾ ಸಮಿತಿಯ ಅಧ್ಯಕ್ಷ ದೇವಿಪ್ರಸಾದ ಶೆಟ್ಟಿ ಸಾಣೂರುಗುತ್ತು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಾಂತ ಶೆಟ್ಟಿ ಕಾರ್ಕಳ, ದಾಮೋಧರ ಶರ್ಮ ಬಾರ್ಕೂರು, ಸಮಿತಿಯ ಸದಸ್ಯರು, ಪದಾಧಿಕಾರಿ ಭಾಗವಹಿಸಿದ್ದರು.

ಪ್ರಮುಖರು ಭಾಗಿ

ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ ಹೆಗ್ಡೆ, ಕಾರ್ಕಳ ಶಾಸಕ ಸುನೀಲ್ ಕುಮಾರ್, ಕಾಂಗ್ರೆಸ್ ನಾಯಕ ಮುನಿಯಾಲು ಉದಯ ಕುಮಾರ್ ಶೆಟ್ಟಿ, ಜೆಡಿಎಸ್ ಉಡುಪಿ ಜಿಲ್ಲಾಧ್ಯಕ್ಷ ಯೊಗೀಶ್ ಶೆಟ್ಟಿ ಕಾಪು, ಜಗದೀಶ ಅ ಕಾರಿ ಮೂಡಬಿದರೆ ಸೇರಿದಂತೆ ಉಡುಪಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಇತರ ಕಡೆಗಳ ಗಣ್ಯರು, ಭಕ್ತ ಸಮೂಹ ಶ್ರೀಮನ್ನಾಗಮಂಡಲದಲ್ಲಿ ಭಾಗಿಯಾದರು. ಸಹಸ್ರಾರು ಮಂದಿ ಮಹಾಅನ್ನದಾನ ಸ್ವೀಕರಿಸಿದರು.

ಸುತ್ತಮುತ್ತ

ಪಾರಂಪಳ್ಳಿ ವಿನ್‌ಲೈಟ್‌ಗೆ ಕೃಷ್ಣ ದೇವಾಡಿಗ ಅಧ್ಯಕ್ಷ

ಕೋಟ: ವಿನ್ ಲೈಟ್ ಸ್ಪೋರ್ಟ್ಸ್ ಕ್ಲಬ್ ಪಾರಂಪಳ್ಳಿ ಪಡುಕೆರೆ ಇದರ ನೂತನ ಅಧ್ಯಕ್ಷರಾಗಿ ಕೃಷ್ಣ ದೇವಾಡಿಗ ಆಯ್ಕೆಯಾದರು.

ಗೌರವಾಧ್ಯಕ್ಷರಾಗಿ ರಾಜೇಶ್ ಉಪಾಧ್ಯ, ಕಾರ್ಯದರ್ಶಿಯಾಗಿ ಸುಧಾಕರ ಪೂಜಾರಿ, ಕೋಶಾಧಿಕಾರಿಯಾಗಿ ರವಿ ದೇವಾಡಿಗ, ಜತೆ ಕೋಶಾಧಿಕಾರಿ ರವಿ ಪೂಜಾರಿ,ಉಪಾಧ್ಯಕ್ಷರಾಗಿ ಕೃಷ್ಣ ಪಿ. ಆಯ್ಕೆಯಾದರು.

ವಿಶೇಷ ಚೇತನರ ಕ್ರೀಡಾಕೂಟದಲ್ಲಿ ಬಹುಮಾನ

ಕುಂದಾಪುರ: ಬೆಂಗಳೂರು ದಕ್ಷಿಣ ಜಿಲ್ಲಾ ಪಂಚಾಯತ್ ಉಪ ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ದಕ್ಷಿಣ ಜಿಲ್ಲಾ ಇವರ




ಆಶ್ರಯದಲ್ಲಿ ರಾಮನಗರ ಕ್ರೀಡಾಂಗಣದಲ್ಲಿ ನಡೆದ 2025–26ನೇ ಸಾಲಿನ 17 ಮತ್ತು 14ರ ವಯೋಮಾನದ ಬಾಲಕ ಹಾಗೂ ಬಾಲಕಿಯರ ವಿಶೇಷ ಚೇತನರ ಕ್ರೀಡಾಕೂಟದಲ್ಲಿ ಕುಂದಾಪುರ ತಾಲೂಕಿನ ಅಂಪಾರು ಮೂಡುಬಗೆಯ ವಾಗ್ಜ್ಯೋತಿ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆಯ ಕ್ರೀಡಾಪಟುಗಳಾದ 14ರ ವಯೋಮಾನದ ಹುಡುಗರ ವಿಭಾಗದಲ್ಲಿ 8ನೇ ತರಗತಿ ಅಮಿತ್ ಈಟಿ ಎಸೆತದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದಾನೆ. ಹುಡುಗಿಯರ ವಿಭಾಗದಲ್ಲಿ 14ರ ವಯೋಮಾನದ 8ನೇ ತರಗತಿ ಚೈತ್ರ ಈಟಿ ಎಸೆತದಲ್ಲಿ ದ್ವಿತೀಯ ಸ್ಥಾನದ್ದಾರೆ.

ಫೆ.25: ಬಂಟಕಲ್ಲು ಕಾಲೇಜಿನಲ್ಲಿ ಆರೋಗ್ಯ ತಪಾಸಣಾ ಶಿಬಿರ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮಹಿಳಾ ಸಬಲೀಕರಣ ಘಟಕವು ಜಂಟಿಯಾಗಿ ಫೆ. 25ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿದೆ. ಶಿಬಿರದಲ್ಲಿ ಸಾಮಾನ್ಯ ವೈದ್ಯಕೀಯ ತಪಾಸಣೆ, ಹೃದಯ ರೋಗ ತಪಾಸಣೆ, ಕಣ್ಣು, ಕಿವಿ, ಮೂಗು ಮತ್ತು ಗಂಟಲು ತಪಾಸಣೆ, ಪ್ರಸೂತಿ ಮತ್ತು ಸ್ತ್ರೀರೋಗ ತಪಾಸಣೆ, ಎಲುಬು ಮತ್ತು ಸಂಧಿ ರೋಗ ತಪಾಸಣೆ, ಚರ್ಮ ರೋಗ, ತಲೆ ಮತ್ತು ಕುತ್ತಿಗೆ ಶಸ್ತ್ರಚಿಕಿತ್ಸೆ, ದಂತ ತಪಾಸಣೆ, ತಪಾಸಣೆ ಮಾತ್ರ, ಆಹಾರ ಮತ್ತು ಪೌಷ್ಟಿಕ ಸಲಹೆ ರಕ್ತದ ಒತ್ತಡ ತಪಾಸಣೆ, ರಕ್ತದ ಸಕ್ಕರೆ ತಪಾಸಣೆ ನಡೆಯಲಿದೆ. ಈ ಶಿಬಿರದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ತಜ್ಞ ವೈದ್ಯರು ಭಾಗವಹಿಸಿ ಆರೋಗ್ಯ ಸಲಹೆ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಶಿಬಿರದ ಸಂಯೋಜಕ ಸಚಿನ್ ಪ್ರಭು (ದೂರವಾಣಿ ಸಂಖ್ಯೆ 9964027565) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉಡುಪಿ, ಕಾರ್ಕಳ: ಕರ್ನಾಟಕ ಒನ್ ಕೇಂದ್ರ ತೆರೆಯಲು ಅರ್ಜಿ ಆಹ್ವಾನ

ಉಡುಪಿ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ದೊರಕುವಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಈ ಮೂಲಕ ಸರ್ಕಾರದ ಹಲವು ಸೇವೆಗಳು ನಗರ ಭಾಗದ ಸಾರ್ವಜನಿಕರ ಮನೆ ಬಾಗಿಲಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸುತ್ತಿದ್ದು, ಜಿಲ್ಲೆಯ ಕಾರ್ಕಳ ಹಾಗೂ ಕಾಪು ಪುರಸಭೆ ಮತ್ತು ಉಡುಪಿ ನಗರಸಭೆಯಲ್ಲಿ ಖಾಲಿ ಇರುವ ಕರ್ನಾಟಕ ಒನ್ ಕೇಂದ್ರಗಳನ್ನು ತೆರೆಯಲು ಆಸಕ್ತ ಅಭ್ಯರ್ಥಿಗಳಿಂದ ವೆಬ್‌ಸೈಟ್ ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮಾರ್ಚ್ 2 ಕೊನೆಯ ದಿನವಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ತಂಪೆರೆದ ಮಳೆ

ಸುಬ್ರಹ್ಮಣ್ಯ, ಐನೆಕಿದು, ಯೇನೆಕಲ್ಲು, ಕೈಕಂಬ, ಕಿದು, ಬಿಳಿನೆಲೆ, ನೆಟ್ಟಣ, ಮರ್ಧಾಳ, ಕಡಬ, ಮೊದಲಾದ ಕಡೆ ಧಾರಾಕಾರ ಮಳೆ ಸುರಿದಿದ್ದು, ಈ ಮಳೆಯು ಕೃಷಿಕರ ಮುಖದಲ್ಲಿ ಮಂದಹಾಸ ಬೀರಿತು. ಕೆಲವೆಡೆ ಮಳೆ ನೀರು ರಸ್ತೆಯಲ್ಲಿಯೇ ಹರಿದು ವಾಹನಗಳ ಸಂಚಾರಕ್ಕೆ ಹಾಗೂ ಪಾದಾಚಾರಿಗಳಿಗೆ ಅಲ್ಪ ಪ್ರಮಾಣದ ತೊಂದರೆ ನೀಡಿತು.

ಬೆಳ್ತಂಗಡಿ ತಾಲೂಕಿನ ನಾರಾವಿ, ಕಾಶಿಪಟ್ಟ, ಕಡಿರುದ್ಯಾವರ, ನಡ, ಕಕ್ಕಿಂಜೆ, ನೆರಿಯ, ನಿಡ್ಲೆ, ಅರಸಿನಮಕ್ಕಿ, ಚಾರ್ಮಾಡಿಯಲ್ಲಿ ಗುಡುಗು ಸಹಿತ ಮಳೆ ಆಗಿದೆ. ಮಿತ್ತಬಾಗಿಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಕುಕ್ಕಾವು ಮತ್ತು ಕಾಜೂರು ಧರ್ಮಸ್ಥಳ, ಬಳಂಜ, ಅಳದಂಗಡಿ ಪರಿಸರದಲ್ಲಿ ತುಂತುರು ಸಾಧಾರಣ ಮಳೆಯಾಗಿದೆ. ಗುರುವಾಯನಕೆರೆ, ಮಡಂತ್ಯಾರು, ಬೆಳ್ತಂಗಡಿ ಸಹಿತ ನಾನಾ ಭಾಗದಲ್ಲಿ ಗುಡುಗು ಸಹಿತ ಮಳೆ ಸುರಿದಿದೆ. ವೇಣೂರಿನಲ್ಲಿ ಉತ್ತಮ ಮಳೆಯಾಗಿದೆ.

ಹಲವೆಡೆ ಮನೆ ಅಂಗಳದಲ್ಲಿ ಒಣಗಲು ಹಾಕಿದ ಅಡಕೆ ಮಳೆಯಿಂದ ನೆನೆಯುವಂತಾಗಿದೆ. ದೃಶ್ಯಗಳು ಕಂಡು ಬಂದವು. ಕಕ್ಕಿಂಜೆ ಬಸ್ತಿ ಸಮಿಪ ಗಾಳಿ ಮಳೆಗೆ ಭಾರಿ ಮರವೊಂದು ವಿದ್ಯುತ್ ತಂತಿ ಮೇಲೆ ಬಿದ್ದ ಪರಿಣಾಮ ವಿದ್ಯುತ್ ಕಂಬಗಳು ಮುರಿದು ಬಿದ್ದಿದೆ. ಸ್ಥಳೀಯರು ಮರವನ್ನು ತೆರವುಗೊಳಿಸಿದ್ದಾರೆ.

ಕಾರ್ಕಳ: ಪರಿಶಿಷ್ಟ ಜಾತಿ, ಪಂಗಡ ಹಿತರಕ್ಷಣೆ, ಕುಂದುಕೊರತೆಗಳ ಸಭೆ



ಕಾರ್ಕಳ: ಅನ್ಯ ರಾಜ್ಯದಿಂದ ವಲಸೆ ಬಂದವರು ಸರಕಾರಿ ಜಾಗ ಅತಿಕ್ರಮಿಸಿ ಮನೆ ನಿರ್ಮಿಸಿಕೊಂಡು ಎಲ್ಲಾ ಮೂಲಭೂತ ಸೌಕರ್ಯ ಪಡೆಯುತ್ತಾರೆ. ನಮ್ಮ ಸಮುದಾಯದ ಜನತೆ ಸರಕಾರಿ ಭೂಮಿ ಅತಿಕ್ರಮಿಸಿ ಮನೆ ನಿರ್ಮಿಸಿದರೆ ಅದನ್ನು ತೆರವುಗೊಳಿಸುವ ಕೆಲಸ ಮಾಡುತ್ತೀರಿ. ಎಲ್ಲಾ ಗ್ರಾ.ಪಂ.ಗಳಲ್ಲೂ ಇಂತಹ ಅನ್ಯಾಯ ನಡೆದಿದೆ ಎಂದು ಕರ್ನಾಟಕ ಜೈ ಭೀಮ್ ಯುವಸೇನೆಯ ರಾಜ್ಯಾಧ್ಯಕ್ಷ ಅಶೋಕ್ ಕುಂಟಲ್ಪಾಡಿ ಹೇಳಿದ್ದಾರೆ.

ಅವರು ತಾ.ಪಂ. ಸಭಾಂಗಣದಲ್ಲಿ ಶನಿವಾರ ನಡೆದ ತಾಲೂಕು ಮಟ್ಟದ ಪ.ಜಾತಿ ಮತ್ತು ಪಂಗಡದ ಜನಾಂಗದ ಹಿತರಕ್ಷಣೆ ಮತ್ತು ಕುಂದುಕೊರತೆ ಸಭೆಯಲ್ಲಿ ಮಾತನಾಡಿದರು. ರಣವೀರ ಕಾಲನಿಯಲ್ಲಿ 25 ಮನೆಗಳಿಗೆ ಹಕ್ಕುಪತ್ರ ನೀಡುವಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಬೇಕು ಎಂದು ಪ್ರತಿಮಾ ರಾಣೆ ತಿಳಿಸಿದರು. ಗೋವರ್ಧನ ಕೆ. ಮಾತನಾಡಿ, ಈ ಹಿಂದೆ ಹಲವು ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿದೆ. ಅದೇ ಮಾದರಿಯಲ್ಲಿ ಬಾಕಿ ಉಳಿದವರಿಗೂ ನೀಡಿ ಎಂದು ಆಗ್ರಹಿಸಿದರು.

ನಮೂನೆ 9/11 ಪಡೆಯುವಲ್ಲಿ ಕಾರ್ಕಳದಿಂದ ಕಾಪುವಿಗೆ ಅಲೆದಾಟ ನಡೆಸಬೇಕಾಗಿದೆ ಎಂದು ವಿಠಲ ಗೌಡ ಮಾಳ ಹೇಳಿದ್ದಾರೆ. ಪ್ರಾಧಿಕಾರದ ತಾಂತ್ರಿಕ ಅಧಿಕಾರಿ ಮಾತನಾಡಿ, ವಾರಕ್ಕೊಂದು ದಿನ ತಾ.ಪಂ.ನಲ್ಲಿ ಕಡತ ವಿಲೇವಾರಿಗೆ ವ್ಯವಸ್ಥೆ ಕಲ್ಪಿಸುವುದಾಗಿ ತಿಳಿಸಿದರು.

ಮಲೆಕುಡಿಯ ಸಮುದಾಯದ ಜಿಲ್ಲಾಧ್ಯಕ್ಷ ಗಂಗಾಧರ ಗೌಡ ಈದು ಮಾತನಾಡಿ, ಅಕ್ರಮ ಸಕ್ರಮ ಅಡಿಯಲ್ಲಿ ಸಲ್ಲಿಸಿದ ಅರ್ಜಿ ತಿರಸ್ಕೃತಗೊಂಡಿವೆ ಎಂದರು.

ತಾಲೂಕು ಕಚೇರಿ ಬಳಿ ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ 15 ಲಕ್ಷ ರೂ. ಪುರಸಭಾ ನಿಧಿಯನ್ನು ಕಾದಿರಿಸಿದ್ದಕ್ಕಾಗಿ ಪುರಸಭೆ ಅಧ್ಯಕ್ಷೆ ಯೋಗೀಶ್ ದೇವಾಡಿಗ ಮತ್ತು ಮುಖ್ಯಾಧಿಕಾರಿ ಅವರಿಗೆ ಪ್ರತಿಮಾ ರಾಣೆ ಅಭಿನಂದನೆ ಸಲ್ಲಿಸಿದರು. ಶೀಘ್ರದಲ್ಲೇ ಪುತ್ಥಳಿ ನಿರ್ಮಿಸಿಕೊಡುವಂತೆ ರಮೇಶ್ ಪೆರ್ವಾಜೆ ಆಗ್ರಹಿಸಿದರು. ಕಾನೂನು ತೊಡಕನ್ನು ನಿವಾರಿಸಿ ಮೂರ್ತಿ ಪ್ರತಿಷ್ಠಾಪನೆಗೆ ಸಹಕರಿಸುವಂತೆ ಪುರಸಭೆ ಮುಖ್ಯಾಧಿಕಾರಿ ಬಳಿ ಅಣ್ಣಪ್ಪ ನಕ್ರೆ ಮನವಿ ಮಾಡಿದರು. ಮಲೆಕುಡಿಯ ಸಮುದಾಯದ ರಾಜ್ಯಾಧ್ಯಕ್ಷ ಶ್ರೀಧರ ಗೌಡ ಈದು ಮಾತನಾಡಿ, ನಲ್ಲೂರು ಪಾಜೆಗುಡ್ಡೆ ಬಳಿ ಅಪಘಾತಗಳಾಗುತ್ತಿದ್ದು, ರಸ್ತೆಯನ್ನು ಸರಿಪಡಿಸುವಲ್ಲಿ ಅರಣ್ಯ ಇಲಾಖೆ ಸಹಕರಿಸಬೇಕು ಮನವಿ ಮಾಡಿದರು.

ತಹಶೀಲ್ದಾರ್ ಪ್ರದೀಪ್ ಆರ್. ಅಧ್ಯಕ್ಷತೆ ವಹಿಸಿದ್ದರು. ತಾ.ಪಂ. ಇಒ ಪ್ರಶಾಂತ್ ರಾವ್, ಮುಖ್ಯಾಧಿಕಾರಿ ಲೀನಾ ಬ್ರಿಟ್ಟೊ, ನಗರ ಪಿಎಸ್ಐ ಮುರಳೀಧರ, ಸಮಾಜ ಕಲ್ಯಾಣ ಅಧಿಕಾರಿ ಕುಮಾರ್ ಇದ್ದರು.

ಅನುದಾನಿತ ಕನ್ನಡ ಶಾಲೆಗಳು ಅವಸಾನದತ್ತ : ಕೆ. ಸತ್ಯೇಂದ್ರ ಪೈ



ಶಿರ್ವ: ಅನುದಾನಿತ ಕನ್ನಡ ಶಾಲೆಗಳು ಅವಸಾನದತ್ತಸಾಗುತ್ತಿವೆ. ಸರ್ಕಾರಕ್ಕೆ ಕನ್ನಡ ಮಾಧ್ಯಮ ಶಾಲೆಗಳು ಬೇಡ. ಹಿಂದೆ ಸರಕಾರ ಅನುದಾನಿತ ಶಾಲೆಗಳ ನಿರ್ವಹಣೆಗೆ ಅನುದಾನ ಹಾಗೂ ಶಿಕ್ಷಕರನ್ನು ನೀಡುತ್ತಿತ್ತು. ಉಡುಪಿ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿ ಗುರುತಿಸುವಂತಾಗುವಲ್ಲಿ ಶತಮಾನೋತ್ತರ ಇತಿಹಾಸ ಇರುವ ಅನುದಾನಿತ ಕನ್ನಡ ಶಾಲೆಗಳ ಕೊಡುಗೆ ಅನನ್ಯ ಎಂದು ಎಸ್.ವಿ.ಎಸ್.ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಕೆ.ಸತ್ಯಂದ್ರ ಪೈ ನುಡಿದರು.

ಅವರು ಶನಿವಾರ ಎಸ್‌ವಿಎಸ್ ಪ.ಪೂ. ಕಾಲೇಜಿನ ಸಭಾಂಗಣದಲ್ಲಿ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಾಪು ತಾಲೂಕು ಘಟಕದ ವತಿಯಿಂದ "ಶ್ರೀಮತಿ ರತ್ನಾವತಿ ದತ್ತಿ ಉಪನ್ಯಾಸ–ನಿವೃತ್ತ ಶಿಕ್ಷಕರಿಗೆ ಸನ್ಮಾನ" ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು. ಕಸಾಪ ಉಡುಪಿ ಜಿಲ್ಲಾ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಆಶಯ ನುಡಿಯಲ್ಲಿ ದತ್ತಿನಿಧಿಯ ಹಿನ್ನೆಲೆ, ಪರಿಷತ್ತಿನ ಜಿಲ್ಲಾ ಕಾರ್ಯಸಾಧನೆಗಳ ಬಗ್ಗೆ ಮಾಹಿತಿ ನೀಡಿದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಮತ್ತು ಉಡುಪಿ ಜಿಲ್ಲಾ ಉಪನಿರ್ದೇಶಕ(ಅಭಿವೃದ್ಧಿ) ರಾದ ಡಾ.ಅಶೋಕ ಕಾಮತ್ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಹಿರಿಯ ನಿವೃತ್ತ ಶಿಕ್ಷಕ ದಂಪತಿಗಳಾದ ಕೆ.ಸುಬ್ರಾಯ ಹೆಬ್ಬಾರ್ ಅಲೆವೂರು ಸುಬೋಧಿನಿ ಶಾಲೆ, ರತಿ ಎಸ್. ಹೆಬ್ಬಾರ್, ವೆರೋನಿಕಾ ಎಂ.ಅಂಚನ್, ಬಿ.ಎಂ.ಬೈಲೂರು, ಭಾಸ್ಕರ ಕಾಮತ್ ಎಸ್.ವಿ.ಎಸ್.ಕಟಪಾಡಿ ಇವರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಎಸ್‌ವಿಎಸ್ ಪ.ಪೂ. ಕಾಲೇಜಿನ ಪ್ರಾಂಶುಪಾಲ ಡಾ.ದಯಾನಂದ ಪೈ, ಪ್ರೌಢ ಶಾಲಾ ವಿಭಾಗದ ಮುಖ್ಯ ಶಿಕ್ಷಕಿ ಜಯಲಕ್ಷ್ಮೀ ಶುಭ ಹಾರೈಸಿದರು. ಶಂಕರ ಶ್ರೀಯಾನ್, ಗಣೇಶ್ ಕಿಣಿ ಕಟಪಾಡಿ ವೇದಿಕೆಯಲ್ಲಿದ್ದರು. ಸನ್ಮಾನಿತರ ಪರವಾಗಿ ಭಾಸ್ಕರ ಕಾಮತ್ ಮಾತನಾಡಿದರು. ಅಧ್ಯಕ್ಷತೆಯನ್ನು ಕಸಾಪ ಕಾಪು ತಾಲೂಕು ಅಧ್ಯಕ್ಷಬಿ.ಪುಂಡಲೀಕಮರಾತೆವಹಿಸಿದ್ದರು. ಸಮಿತಿ ಸದಸ್ಯ ಹಾಗೂ ಸಂಯೋಜಕ ಎಸ್.ಎಸ್.ಪ್ರಸಾದ್ ನಿರೂಪಿಸಿದರು. ಸಹಸಂಯೋಜಕ ಡೋಮಿಯನ್ ಆರ್ ನೋರೋನ್ಹಾ ಸ್ವಾಗತಿಸಿದರು. ಮಧುಕರ್ ಎಸ್ ಕಲ್ಯಾ ಧನ್ಯವಾದವಿತ್ತರು.

ಆನೆಗುಡ್ಡೆ ಶ್ರೀ ವಿನಾಯಕ ದೇಗುಲದಲ್ಲಿ ಬ್ರಹ್ಮಕಲಶ ವರ್ಧಂತಿ



ಕೋಟ: ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನದಲ್ಲಿ ಬ್ರಹ್ಮ ಕಲಶ ವರ್ಧಂತಿ ಉತ್ಸವ ಸಂಪನ್ನಗೊಂಡಿತು.

ಧಾರ್ಮಿಕ ವಿಧಿವಿಧಾನಗಳನ್ನು ವೇದಮೂರ್ತಿ ಶಿಬರೂರು ವೇದವ್ಯಾಸ ತಂತ್ರಿ, ಶಿಬರೂರು ಕೃಷ್ಣರಾಜ ತಂತ್ರಿ ವರ್ಗ ನೆರವೇರಿಸಿದರು.

ಶುಕ್ರವಾರ ಬೆಳಿಗ್ಗೆ ಶ್ರೀ ದೇವತಾ ಪ್ರಾರ್ಥನೆ ಸ್ವಸ್ತಿವಾಚನ, ಪುಣ್ಯಾಹ, ಗಣ ಹೋಮ, ಶಾಂತಿ ಪ್ರಾಯಶ್ಚಿತ್ತ ಹೋಮ, ತತ್ವ ಹೋಮ, ಕಲಾ ಹೋಮ, ಬೆಳಿಗ್ಗೆ 108 ರಜತ ಕಲಶಾಭಿಷೇಕದೊಂದಿಗೆ ಪ್ರಧಾನ ಸುವರ್ಣಕಲಶಾಭಿಷೇಕ, ಮಂಗಳಾರತಿ ಪ್ರಸಾದ ವಿತರಣೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಭಕ್ತಾರ ಸಮ್ಮುಖದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಆಡಳಿತ ಧರ್ಮದರ್ಶಿ ಕೆ. ಣ ಉಪಾಧ್ಯಾಯರು ಊರಿನ ವಿವಿಧ ಗಣ್ಯರಿಗೆ ಹಾಗೂ ಸಮಾಜ ಸೇವಕರಿಗೆ ಶ್ರೀ ದೇವರ ವಿಶೇಷ ಪ್ರಸಾದ ನೀಡುವ ಮುಖೇನ ಸನ್ಮಾನಿಸಲಾಯಿತು. ಧರ್ಮದರ್ಶಿಗಳಾದ ನಿರಂಜನ ಉಪಾಧ್ಯಾಯ ಪದ್ಮನಾಭ ಉಪಾಧ್ಯಾಯ, ಪರ್ಯಾಯ ಅರ್ಚಕರಾದ ಕೆ. ವ್ಯಾಸ ಉಪಾಧ್ಯಾಯ ಮತ್ತು ಸಹೋದರರು ದೇಗುಲದ ಪ್ರಬಂಧಕ ನಟೇಶ್ ಕಾರಂತ್ ಆಡಳಿತ ಸಿಬ್ಬಂದಿ, ಅರ್ಚಕ ಮಂಡಳಿ ಸದಸ್ಯರು ಇದ್ದರು.

'ಸಾಸ್ತಾನ ಚಡಗರ ಮಠ ಪಾಂಡೇಶ್ವರ' ಪುಸ್ತಕ ಬಿಡುಗಡೆ



ಕೋಟ: ಸಾಸ್ತಾನ ಚಡಗರ ಮಠ ಪಾಂಡೇಶ್ವರ(ಮೂಲವನ್ನುಅರಸುತ್ತಾ) ಪುಸ್ತಕ ಬಿಡುಗಡೆ ಸಮಾರಂಭ ಇತ್ತಿಚೇಗೆ ಪಾಂಡೇಶ್ವರ ಸಾಸ್ತಾನದ ರಮಾದೇವಿ ಕಲ್ಯಾಣ ಮಂಟಪದಲ್ಲಿ ಜರಗಿತು.

ಬಾಳ್ಕುದ್ರು ಐರೋಡಿ ವಿಪ್ರ ವೇದಿಕೆ, ಸಾಮಾಜಿಕ ಸಾಂಸ್ಕೃತಿಕ ಸೇವಾಸಂಘ ಶ್ರೀವಿನಾಯಕ ದೇವಸ್ಥಾನ ಚಡಗರ ಮಠ ಸಹಭಾಗಿತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಪ್ರವೇದಿಕೆ ಅಧ್ಯಕ್ಷ ಎ. ರಮೇಶ ಕಾರಂತ ಅಧ್ಯಕ್ಷತೆ ವಹಿಸಿದರು. ಕಸಾಪ ಜಿಲ್ಲಾಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಕೃತಿ ಅನಾವರಣಗೈದು ಮಾತನಾಡಿ ಇಂತಹ ಐತಿಹಾಸಿಕ ದಾಖಲೆಗಳು ಗ್ರಾಮಗ್ರಾಮಗಳಲ್ಲಿವೆ, ಆಸಕ್ತರು ಈಬಗ್ಗೆ ಬೆಳಕು ಚೆಲ್ಲಿ ಮುಂದಿನ ಜನಾಂಗಕ್ಕೆ ದಾಖಲಿಸಲು ಸೂಚಿಸಿದರು.

ಇತಿಹಾಸತಜ್ಞ ಶಿವಮೊಗ್ಗ ಮಲೆನಾಡು ಇತಿಹಾಸ ಸಂಶೋಧನಾ ಅಧ್ಯಯನ ವೇದಿಕೆಯ ಅಧ್ಯಕ್ಷ ಡಾ.ಶಾಂತಾರಾಮ ಸಾಮಕ್ ಮಾತನಾಡಿ, ಹಿಂದೆ ಭೂದಾನ ನೀಡುವ ಸಂದರ್ಭಗಳಲ್ಲಿ ಲಿಂಗಮುದ್ರೆ ಅಥವಾ ವಾಮನಕಲ್ಲು ನಿಲ್ಲಿಸುವ ಪರಿಪಾಠವಿತ್ತು. ಕರ್ನಾಟಕದಲ್ಲಿ ಈ ರೀತಿಯ ನೂರಾರು ಕಲ್ಲುಗಳು ದೊರೆತ್ತಿದ್ದರೂ ಆಳತೆ ಕೋಲಿನ ಸಹಿತ ಇರುವ ಲಿಂಗಮುದ್ರೆ ಕಲ್ಲು ಇಲ್ಲಿ ದೊರೆತಿರುವುದು ರಾಜ್ಯದಲ್ಲೇ ಪ್ರಥಮ ಎಂಬುದಾಗಿ ತಿಳಿಸಿದರು.

ಹಿರಿಯ ಸಾಹಿತಿ ಪ್ರೊ.ಉಪೇಂದ್ರ ಸೋಮಯಾಜಿ, ಸಾ.ಸಾಂ.ಧಾ.ಸೇವಾ ಸಂಘದ ಪೂರ್ವಾಧ್ಯಕ್ಷ ಪ್ರೊ.ಪಿ. ರಾಮಕೃಷ್ಣ ಚಡಗ ಶುಭ ಹಾರೈಸಿದರು. ಯಕ್ಷಗಾನ ಕಲಾಕೇಂದ್ರದ ಟ್ರಸ್ಟಿ ಮಂಜುನಾಥ ಮಯ್ಯ ಯಕ್ಷಗಾನ ಶೈಲಿಯಲ್ಲಿ ಪ್ರಾರ್ಥಿಸಿದರು. ಕೃತಿ ಲೇಖಕ ರಾಮಕೃಷ್ಣ ಚಡಗ ಸ್ವಾಗತಿಸಿದರು. ಪಾ.ಚಂದ್ರಶೇಖರ ಚಡಗ ನಿರ್ವಹಿಸಿದರು.ವಿಪ್ರವೇದಿಕೆ ವಿಘ್ನೇಶ್ವರ ಅಡಿಗ ವಂದಿಸಿದರು. ಶ್ರೀಕಾಂತ ಚಡಗ ನಿರೂಪಿಸಿದರು.

ಸಾಹಿತ್ಯ ಕೃಷಿಯಲ್ಲಿ ನಲಿದಾಡಿದ ಕಾಯಕ ಯೋಗಿ ಅಂಬಾತನಯರು



ಹೆಬ್ರಿ: ಮುದ್ರಾಡಿಯಂತಹ ಚಿಕ್ಕ ಊರಿನ ಹೆಸರನ್ನು ನಾಡಿನ ಜಗದಗಲ ಪಸರಿಸಿದ ಹಿರಿಮೆ ಅಂಬಾತನಯ ಮುದ್ರಾಡಿರದ್ದು. ನಿವೃತ್ತಿಯ ನಂತರವೂ ವೃತ್ತಿಯಲ್ಲಿ ತೊಡಗಿಕೊಂಡು ಅಪಾರ ಸಾಹಿತ್ಯ ಕೃಷಿಯಲ್ಲಿ ನಲಿದಾಡಿದ ಕಾಯಕ ಯೋಗಿ ಎಂದು ಮುದ್ರಾಡಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಲ್ಲಾಡಿ ಚಂದ್ರಶೇಖರ್ ಭಟ್ ಹೇಳಿದರು.

ಅವರು ಮುದ್ರಾಡಿಯ ಎಂ.ಎನ್. ಡಿ. ಎಸ್.ಎಂ. ಅನುದಾನಿತ ಪ್ರೌಢಶಾಲೆಯ ಸಭಾಂಗಣದಲ್ಲಿ ನಡೆದ ಊರಿನ ಹಿರಿಯ ಸಾಹಿತಿ ಮತ್ತು ಶಾಲೆಯ ಟ್ರಸ್ಟಿಯೂ ಆಗಿದ್ದ ಅಂಬಾತನಯ ಮುದ್ರಾಡಿಯವರ ಮೂರನೇ ವರ್ಷದ ಸಂಸ್ಮರಣೆಯಲ್ಲಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಸಾಹಿತ್ಯದ ಹತ್ತು– ಹಲವಾರು ಪ್ರಕಾರಗಳಲ್ಲಿ ಕೈಯಾಡಿಸಿ ಸೈ ಎನಿಸಿಕೊಂಡ ಧೀಮಂತರು. ಕಡಿಮೆ ಶಿಕ್ಷಣ ಪಡೆದಿದ್ದರೂ, ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಪಠ್ಯ ರಚಿಸಿದ ಸಾಧಕ ಅಂಬಾತನಯರು. ಕನ್ನಡ ಸಾಹಿತ್ಯ ಪರಿಷತ್ತು ಉಡುಪಿ ಜಿಲ್ಲೆ ಇದರ ಅಧ್ಯಕ್ಷರಾಗಿ, ಸಾಹಿತ್ಯ ರಥದ ಚುಕ್ಕಾಣಿಯನ್ನು ಸರಿಯಾದ ದಿಶೆಯಲ್ಲಿ ಜಿಲ್ಲೆಯಾದ್ಯಂತ ವಿನೂತನ ಕಾರ್ಯಕ್ರಮಗಳ ಮೂಲಕ ಜನಮನಕ್ಕೆ ಕೊಂಡು ಹೋದವರು ಎಂದರು.

ಮಹೇಶ್ ನಾಯ್ಕ ಕೆ., ಪ್ರತೀಕ್ ಅಂಬಾತನಯರ ಬಗ್ಗೆ ವಿಚಾರ ಹಂಚಿಕೊಂಡರು. ರಘುಪತಿ ಹೆಬ್ಬಾರ್, ಚಂದ್ರಕಾಂತಿ ಹೆಗ್ಡೆ, ಮಹೇಶ್ ಎಂ., ಕಾರ್ತಿಕ್ ಇದ್ದರು. ಆನಂದ ನಿರೂಪಿಸಿ ಶ್ಯಾಮಲಾ ವಂದಿಸಿದರು.

ಕುಷ್ಠಮುಕ್ತ ಭಾರತ ನಿರ್ಮಿಸಲು ಎನ್ನೆಸ್ಸೆಸ್ ಸದಸ್ಯರು ಮುಂದಾಗಲಿ



ಉಡುಪಿ: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ವಿಭಾಗ ಉಡುಪಿ ಜಿಲ್ಲೆ ಮತ್ತು ಜಿ ಶಂಕರ್ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನಾ ಘಟಕ ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಕುಷ್ಠರೋಗ ಕುರಿತಾದ ಜಾಗೃತಿ ಆಂದೋಲನ ಕಾರ್ಯಕ್ರಮವನ್ನು 'ತಾರತಮ್ಯವನ್ನು ಕೊನೆಗೊಳಿಸುವುದು, ಘನತೆಯನ್ನು ಕಾಪಾಡುವುದು' ಎಂಬ ಘೋಷಣೆ ವಾಕ್ಯದೊಂದಿಗೆ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಜಿ.ಶಂಕರ್ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯದ ಪ್ರಭಾರ ಪ್ರಾಂಶುಪಾಲೆ ಡಾ.ನಿಕೇತನ ಮಾತನಾಡಿ, ಯುವಜನತೆ ಕುಷ್ಠರೋಗದ ಕುರಿತಾಗಿ ಸಮಗ್ರ ಮಾಹಿತಿಯನ್ನು ತಿಳಿದುಕೊಂಡು ಸಮುದಾಯದಲ್ಲಿ ಜಾಗೃತಿ ಮೂಡಿಸಿ ಕುಷ್ಠರೋಗ ಮುಕ್ತ ಸಮುದಾಯ ತನ್ಮೂಲಕ ಕುಷ್ಠಮುಕ್ತ ಭಾರತ ನಿರ್ಮಿಸಲು ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳು ಆರೋಗ್ಯ ರಾಯಭಾರಿಗಳಾಗಿ ಕೆಲಸ ನಿರ್ವಹಿಸಲು ಕರೆ ನೀಡಿದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಶಿಧರ್ ಎಚ್ ಸಂಪನ್ಮೂಲ ವ್ಯಕ್ತಿಯಾಗಿದ್ದರು.

ಆರೋಗ್ಯ ನಿರೀಕ್ಷಣಾಧಿಕಾರಿ ಭರತ್ ಕುಷ್ಠರೋಗ ಕುರಿತಾದ ಪ್ರತಿಜ್ಞಾವಿಧಿ ಭೋದಿಸಿದರು. ಎಲ್ಲಾ ಎನ್.ಎಸ್.ಎಸ್ ವಿದ್ಯಾರ್ಥಿಗಳು, ಮಾರ್ಗದರ್ಶಕರು, ಉಪನ್ಯಾಸಕರು ಉಪಸ್ಥಿತರಿದ್ದರು.

ಕಾಲೇಜಿನ ಎನ್.ಎಸ್.ಎಸ್ ಸಂಯೋಜಕ ಡಾ.ರವೀಶ್ ಬಿ ನಿರೂಪಿಸಿದರು. ಪ್ಯಾರಾ ಮೆಡಿಕಲ್ ವರ್ಕರ್ ರಾಜು ವಂದಿಸಿದರು.

ಕುಂದಾಪುರ ತಾಲೂಕು ಪಂಚಾಯತ್‌ನಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆ | ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಕಾನ್ಕಿ ಹೇಳಿಕೆ
ಗ್ಯಾರಂಟಿ ಯೋಜನೆಯಡಿ ಕುಂದಾಪುರ ಗರಿಷ್ಠ ಪ್ರಯೋಜನ ಪಡೆದ ತಾಲೂಕು

ಕುಂದಾಪುರ: ಉಡುಪಿ ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರಯೋಜನ ಮತ್ತು ಅತಿ ಹೆಚ್ಚು ಅನುದಾನವನ್ನು ಕುಂದಾಪುರ ತಾಲೂಕು ಪಡೆದಿದೆ. ಗ್ಯಾರಂಟಿಯಿಂದ ತಲಾ ಆದಾಯ ಹೆಚ್ಚಾಗಿದೆ. ಬಡವರು, ದೀನದಲಿತರನ್ನು ಮೇಲಕ್ಕೆತ್ತುವಲ್ಲಿ ಯೋಜನೆ ಸಫಲವಾಗಿದೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಕಾನ್ಕಿ ಹೇಳಿದರು.

ಕುಂದಾಪುರದ ತಾಲೂಕು ಪಂಚಾಯತ್‌ನಲ್ಲಿ ಶನಿವಾರ ನಡೆದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶೆಟ್ರಕಟ್ಟೆ ಸಮೀಪ ನಡೆದ ಕೆಎಸ್‌ಆರ್‌ಟಿಸಿ–ಟಿಪ್ಪರ್ ಅಪಘಾತದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಿದ ಬಗ್ಗೆ ಮಣಿಪಾಲ ಕೆಎಂಸಿ ಆಸ್ಪತ್ರೆಗೆ 21 ಲಕ್ಷ ಮತ್ತು ಕುಂದಾಪುರ ಆದರ್ಶ ಆಸ್ಪತ್ರೆಗೆ 80 ಸಾವಿರ ರೂ.



ನೀಡಲಾಗಿದೆ. ಗಾಯಾಳುಗಳಿಗೆ ಪರಿಹಾರದ ನ್ಯಾಯಾಲಯದಲ್ಲಿ ತೀರ್ಮಾನಗೊಳ್ಳಲಿದೆ ಎಂದು ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಉದಯ ಶೆಟ್ಟಿ ಮಾಹಿತಿ ನೀಡಿದರು.

ಕೆಎಸ್ಸಾರ್ಟಿಸಿಗೆ ಬಸ್, ಸಿಬ್ಬಂದಿ ಕೊರತೆ

ಉಡುಪಿಯಿಂದ ಜಡ್ಡಿನಗದ್ದೆ ಕಳೆಸಂಕದವರೆಗೆ ಒಂದು ಸರಕಾರಿ ಬಸ್ ಮಾತ್ರ ಸಂಚರಿಸುತ್ತಿದೆ ಎಂದು ವಸುಂಧರ ಹೆಗ್ಡೆ ಹೇಳಿದರೆ, ಸರಕಾರಿ ಬಸ್ ವ್ಯವಸ್ಥೆ ಸರಿಪಡಿಸುವಂತೆ ಅನೇಕ ಮನವಿ ಯಾವುದೇ ಪ್ರಯೋಜನವಾಗಿಲ್ಲ ಎಂದು ಆರೋಪಿಸಿದ ಸದಸ್ಯ ಜಹೀದ್ ನಾಕುದಾ, ಗಂಗೊಳ್ಳಿ–ಬೈಂದೂರು ನಡುವೆ ಸರಕಾರಿ ಬಸ್ ಸಂಚಾರ ಪ್ರಾರಂಭಿಸುವಂತೆ ಮನವಿ ಮಾಡಿದರು. ಬೈಂದೂರಿನಲ್ಲಿ 9 ಕೋಟಿ ರೂ. ವೆಚ್ಚದಲ್ಲಿ ನಿಮಾಣಗೊಂಡ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರುಪಯುಕ್ತವಾಗಿದೆ ಎಂದು ಸದಸ್ಯ ನಾರಾಯಣ ಆಚಾರ್ ಆರೋಪಿಸಿದರು. ಚಾಲಕ, ನಿರ್ವಾಹಕ, ಮೆಕಾನಿಕ್ ಹಾಗೂ ಬಸ್‌ಗಳ ಕೊರತೆಯಿಂದ ಹೊಸ ಮಾರ್ಗದಲ್ಲಿ ಬಸ್ ಓಡಾಟ ಪ್ರಾರಂಭಿಸುವುದು ಸಾಧ್ಯವಿಲ್ಲ ಎಂದುತಿಳಿಸಿದರು.

ವಿದ್ಯುತ್ ಸಮಸ್ಯೆ

ತಾಲೂಕಿನಲ್ಲಿ ಅನಿಯಮಿತ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಅನಧಿಕೃತವಾಗಿ ವಿದ್ಯುತ್ ಕಡಿತ ಮಾಡುತ್ತಿರುವುದರಿಂದ ಮಕ್ಕಳಿಗೆ ಹಾಗೂ ಜನರಿಗೆ ತೊಂದರೆಯಾಗುತ್ತಿದೆ ಎಂದು ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಹೇಳಿದರು.

ವಿದ್ಯುತ್ ಮಾರ್ಗದಲ್ಲಿ ದೋಷ ಕಂಡು ಬಂದಾಗ ಲೈನ್‌ಮ್ಯಾನ್‌ಗಳು ಸಿಗುತ್ತಿಲ್ಲ, ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯದೆ ರಸ್ತೆ ಬದಿಯಲ್ಲಿ ಮನೆಗಳು ನಿರ್ಮಾಣವಾಗುತ್ತಿದ್ದರೂ ಮೆಸ್ಕಾಂ ಈ ಬಗ್ಗೆ ಮೌನ ವಹಿಸಿದೆ ಎಂದು ಸದಸ್ಯ ವಸುಂಧರ ಹೆಗ್ಡೆ ಆರೋಪಿಸಿದರೆ, ಗಂಗೊಳ್ಳಿಯಲ್ಲಿ ರಾತ್ರಿ ವೇಳೆ ಲೈನ್ ಮ್ಯಾನ್‌ಗಳನ್ನು ನಿಯೋಜನೆ ಮಾಡಬೇಕೆಂದು ಜಹೀರ್ ನಾಕುದಾ ಒತ್ತಾಯಿಸಿದರು.

ನ್ಯಾಯಬೆಲೆ ಅಂಗಡಿಗಳಲ್ಲಿ ಭಾನುವಾರ ಕೂಡ ಪಡಿತರ ವಿತರಣೆ ಮಾಡಬೇಕೆಂದು ವಸುಂಧರ ಹೆಗ್ಡೆ, ಮಂಜು ಕೊಠಾರಿ ಆಗ್ರಹಿಸಿದರು. 200 ಪಡಿತರ ಚೀಟಿ ಇದ್ದರೆ, ಆ ಪೈಕಿ ಶೇ.40ರಷ್ಟು ಪ.ಜಾತಿ, ಪ.ಪಂಗಡದವರು ಇದ್ದರೆ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶ ಇದೆ ಎಂದು ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಹೇಳಿದರು. ಸದಸ್ಯರಾದ ಅಭಿಜಿತ್ ಪೂಜಾರಿ, ಚಂದ್ರ ಕಾಂಚನ್, ವಾಣಿ ಆರ್. ಶೆಟ್ಟಿ, ಆಶಾ ಕರ್ವಾಲೋ, ನಾರಾಯಣ ಆಚಾರ್, ಗಣೇಶ್, ಸವಿತಾ ಪೂಜಾರಿ, ಅರುಣ್, ತಾಲೂಕು ಪಂಚಾಯತ್ ಇಒ ಮಹೇಶ್ ಉಪಸ್ಥಿತರಿದ್ದರು.